॥ ಶ್ರೀಃ ಹರಿಃ ಓಂ ॥

॥ ಶ್ರೀ ಗರುಡವಾಹನ ಲಕ್ಷ್ಮೀನಾರಸಿಂಹಾಭಿನ್ನ
ಶ್ರೀಜಗನ್ನಾಥವಿಠ್ಠಲಾಯನಮಃ ॥

# ಸರ್ವಸ್ವಾತಂತ್ರ್ಯಸಂಧಿ

## ಸಂಧಿ-೧೮

**ಪಲ್ಲವಿ :**

ಹರಿಕಥಾಮೃತಸಾರ ಗುರುಗಳ ।
ಕರುಣದಿಂದಾಪನಿತು ಪೇಳುವೆ ।
ಪರಮ ಭಗವದ್ಭಕ್ತರಿದನಾದರದಿ ಕೇಳುವುದು ॥ ॥ಪ॥

**ಸಂಧಿ ಸೂಚನೆ :**

ಶ್ರೀನಿವಾಸನ ಚರಿತೆಗಳ ಪರ ।
ಮಾನುರಾಗದಿ ಬೆಸಗೊಳಲು ಮುನಿ ।
ಶೌನಕಾದ್ಯರಿಗರುಪಿದನು ಸೂತಾರ್ಯ ದಯದಿಂದ ॥

**ಅವತರಣಿಕೆ :–**

ನೈಮಿಷಾರಣ್ಯವಾಸಿಗಳಾದ ಶೌನಕಾದಿಋಷಿಗಳು ಶ್ರೀಹರಿಯ ಚರಿತ್ರೆ, ಮಹಾಮಹಿಮೆಗಳನ್ನು ಕೇಳಬೇಕೆಂದು ಸೂತಪುರಾಣಿಕರಿಗೆ ಬಿನ್ನವಿಸಿಕೊಳ್ಳಲು, ಸೂತರು ಅಂತಃಕರಣಪೂರ್ವಕ ತಿಳಿಸುತ್ತಾರೆ.

## ಪದ್ಯ–೧

**ಮೂಲ :–**

**ಪಚನ ಭಕ್ಷಣ ಗಮನ ಭೋಜನ ।**
**ವಚನ ಮೈಥುನ ಶಯನ ವೀಕ್ಷಣ ।**
**ಅಚಲನ ಚಲನ ಪ್ರಯತ್ನವು ಸಾಧ್ಯವೇ ಜನಕೆ ॥**
**ಶುಚಿಸದನ ದಯದಿಂದ ಜೀವರ ।**
**ನಿಚಯದೊಳು ತಾನಿಂತು ಮಾಡುವ ।**
**ಉಚಿತಾನುಚಿತ ಕರ್ಮಗಳನೆಂದರಿದು ಕೊಂಡಾಡು ॥ ॥೧॥**

**ಅವತರಣಿಕೆ :–**

ಆಹಾರ ಸೇವನೆ, ಜೀರ್ಣವಾಗುವಿಕೆ ಇತ್ಯಾದಿ ಸಕಲ ಕಾರ್ಯಗಳೂ ಜೀವರಿಂದ ಸ್ವತಂತ್ರವಾಗಿ ನಡೆಯಲು ಸಾಧ್ಯವೇ ? ಶುಚಿನಾಮಕರಾದ ರಮಾ ವಾಯ್ವಂತರ್ಗತನಾಗಿ, ಬಿಂಬರೂಪಿಯಾದ ಶ್ರೀಹರಿಯೇ ಜೀವರಲ್ಲಿ ನಿಂತು, ಸಕಲ ವ್ಯಾಪಾರಗಳನ್ನು ಮಾಡಿ ಮಾಡಿಸುತ್ತಾನೆಂದು ತಿಳಿಸುತ್ತಾರೆ. **ಪಚನ** – ಎಂಬ ಪ್ರಪ್ರಥಮ ಪದ್ಯದಿಂದ ॥೧॥

**ಪ್ರತಿಪದಾರ್ಥ :–**

**ಪಚನ** = ಭೋಜನ ಮಾಡಿದ ಪದಾರ್ಥಗಳು ಜೀರ್ಣವಾಗುವ ಕ್ರಿಯೆ, **ಭಕ್ಷಣ** = ಆಹಾರ ಸೇವನಾರೂಪವಾದ ಕಾರ್ಯ, **ಗಮನ** = ಪಾದೇಂದ್ರಿಯಗಳ ದ್ವಾರಾ ಸಂಚಾರ ಕ್ರಿಯೆ. **ಭೋಜನ** = ಸಕಲ ವಿಷಯೋಪ ಭೋಗರೂಪವಾದ ಇಂದ್ರಿಯಗತ ವ್ಯಾಪಾರಗಳು. **ವಚನ** = ವಾಗ್ರೂಪವಾದ ಕ್ರಿಯೆ, **ಮೈಥುನ** = ಸ್ತ್ರೀಭೋಗಾದಿ ಕಾರ್ಯಗಳು, **ಶಯನ** = ಮಲಗುವಿಕೆ, **ವೀಕ್ಷಣ** = ನೇತ್ರೇಂದ್ರಿಯಗಳ

ದ್ವಾರಾ ನೋಡುವ ಕಾರ್ಯ, **ಅಚಲನ** = ಚಲಿಸದೇ ಇದ್ದಲ್ಲಿಯೇ ಇರುವಿಕೆ, **ಚಲನ** = ದೇಹೇಂದ್ರಿಯಗಳ ಸಂಚಾರರೂಪವಾದ ಕ್ರಿಯಾ ವಿಶೇಷಗಳು, **ಪ್ರಯತ್ನವು** = ಕಾರ್ಯಸಾಧನೆಗೆ ಮಾಡುವ ಯತ್ನ, **ಜನಕೆ** = ಸಕಲಜೀವರಿಗೆ, **ಸಾಧ್ಯವೇ** = ಪರಮಾತ್ಮನ ವ್ಯತಿರಿಕ್ತ ಸ್ವತಂತ್ರವಾಗಿ ನಡೆಯಲು ಸಾಧ್ಯವಾಗುವುವೇ ? **ಶುಚಿಸದನ** = ಶುಚಿ ನಾಮಕರಾದ ರಮಾ ಮತ್ತು ವಾಯುದೇವರಲ್ಲಿ ಅಂತರ್ಯಾಮಿಯಾದ ಶ್ರೀಹರಿಯು, **ದಯದಿಂದ** = ತನ್ನ ಕಾರುಣ್ಯವಿಶೇಷದಿಂದ, **ಜೀವರ ನಿಚಯದೊಳು** = ಸಮಸ್ತ ಪ್ರಾಣಿಗಳ ಸಮೂಹದಲ್ಲಿ, **ತಾ ನಿಂತು ಮಾಡುವ** = ಬಿಂಬರೂಪನಾಗಿದ್ದು, ತಾನೇ ಜೀವರ ಸ್ವರೂಪದೇಹಾಂತ ಸ್ಥಿತನಾಗಿ, ಬಿಂಬಕ್ರಿಯಾ ದ್ವಾರ ಮಾಡಿ ಮಾಡಿಸುವ, **ಉಚಿತ** = ವಿಧಿ ಪೂರ್ವಕ ಪುಣ್ಯ ಕರ್ಮಗಳೇನು, **ಅನುಚಿತ** = ನಿಷೇಧರೂಪವಾದ ಪಾಪ ಮತ್ತು ಮಿಶ್ರಕರ್ಮಗಳೇನು, **ಕರ್ಮಗಳನು** = ಸಕಲ ದ್ವಂದ್ವಾತ್ಮಕವಾದ ಕರ್ಮಗಳನ್ನು, **ಎಂದರಿತು** = ಶ್ರೀಹರಿಯೇ ಮಾಡಿ, ಇಂದ್ರಿಯಾಭಿಮಾನಿ ದೇವ ದೈತ್ಯರ ದ್ವಾರಾ ಮಾಡಿಸಿ, ಜೀವನ ದ್ವಾರಾ ಮಾಡಿ ಮಾಡಿಸುವವನು- ಎಂದು ಜ್ಞಾನಾನುಸಂಧಾನಪೂರ್ವಕ ತಿಳಿದು, **ಕೊಂಡಾಡು** = ಅವನ ಮಹಾಮಹಿಮೆಗಳನ್ನು ಸ್ತೋತ್ರ ಮಾಡುವವನಾಗು. ॥೧॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ಈ ಸಂಧಿಯಲ್ಲಿ ಶ್ರೀಪರಮಾತ್ಮ ಸರ್ವಸ್ವತಂತ್ರ. ಜೀವ ಪರಾಧೀನ ಎಂತಲೂ ವಿಚಾರವನ್ನ ಹೇಳುತಾರೆ.

ಶ್ರೀಪರಮಾತ್ಮನ ಮಹಾಮಹಾತ್ಮ್ಯವನ್ನು ಕೇಳಬೇಕು- ಎಂತ ಕುತೂಹಲಯುಕ್ತರಾದ, ನೈಮಿಷಾರಣ್ಯ ನಿವಾಸಿಗಳಾದ ಶೌನಕಾದಿಗಳಿಗೆ ಸೂತಪುರಾಣಿಕರು ಅಂತಃಕರಣದಿಂದ ಉಪದೇಶ ಮಾಡುತಾರೆ.

**ತೇನ ವಿನಾ ತೃಣಮಪಿ ನ ಚಲತಿ**-ಎಂಬ ವಚನಾನುಸಾರ ಶ್ರೀಪರಮಾತ್ಮನ ವ್ಯತಿರಿಕ್ತ ಚರಾಚರಗಳು ಚಲಿಸಲಾರವು- ಎಂತ ಹೇಳತಾರೆ.

ಭೋಜನೋಪಯೋಗವಾದ ವ್ರೀಹ್ಯಾದಿ ದ್ರವ್ಯಗಳ ಪಾಕ ಮಾಡೋಣ (ಭೋಜನ ಮಾಡಿದ ಪದಾರ್ಥ ಜೀರ್ಣಕ್ಕೆ ಬರುವುದಕ್ಕೂ ಪಚನ ಎಂತ ಹೇಳಬಹುದು.) ಆ ಪದಾರ್ಥಗಳ ಹಸ್ತದ್ವಾರಾ ವದನದಲ್ಲಿ ಸೋರಿಸೋಣ, ಆ ಸೇರಿದ ಪದಾರ್ಥಗಳ ದಂತದಿಂದ ಅಗಿದು, ಉದರದಲ್ಲಿ ಸೇರುವಂತೆ ನುಂಗೋಣ, ಪಾದಗಳಿಂದ ನಡಿಯೋಣ, ವಾಗಿಂದ್ರಿಯದಿಂದ ಮಾತನಾಡೋಣ, ಮಲಗೋಣ, ಸ್ತ್ರೀ ಸಂಭೋಗ ಮಾಡೋಣ, ನೇತ್ರಗಳಿಂದ ನೋಡೋಣ, ದೇಹೇಂದ್ರಿಯಾದಿಗಳ ಕದಲಿಸದೆ ಇರೋಣ, ದೇಹೇಂದ್ರಿಯಾದಿಗಳ ಅಲ್ಲಾಡಿಸೋಣ– ಇತ್ಯಾದಿ ಅನೇಕ ವಿಷಯುಗಳ ಕುರಿತು ಪ್ರಯತ್ನ ಮಾಡೋಣ,ಈ ವ್ಯಾಪಾರಗಳು ಜೀವರಿಗೆ ಪರಮಾತ್ಮನ ವ್ಯತಿರಿಕ್ತ ಸಾಧ್ಯವಾಗೋದೆ ? ಅಂದರೆ ಸಾಧ್ಯವಾಗಲಾರದು. ದರ್ಪಣದಲ್ಲಿ ಪ್ರತಿಫಲಿಸುವ ಪ್ರತಿಬಿಂಬ, ದರ್ಪಣವನ್ನು ನೋಡುವ ಬಿಂಬಾಧೀನ ಹ್ಯಾಂಗೋ ತದ್ವತ್, ಬಿಂಬ ಪರಮಾತ್ಮ, ಪ್ರತಿಬಿಂಬ ಜೀವರು. ಆದ್ದರಿಂದ ಈ ದೃಷ್ಟಾಂತಾನುಸಾರ ಜೀವರು ಈಶಾಧೀನರಾದ ಪ್ರಯುಕ್ತ, ಶ್ರೀಪರಮಾತ್ಮನ ವ್ಯತಿರಿಕ್ತ ಪೂರ್ವೋಕ್ತ ವ್ಯಾಪಾರಗಳು ಮಾಡೋದಕ್ಕೆ ಸಾಧ್ಯವಿಲ್ಲ. ಬಿಂಬ ಕ್ರಿಯಾದ್ವಾರಾ ಪ್ರತಿಬಿಂಬಕ್ರಿಯಾ ಆಗಬೇಕು, ತದ್ವ್ಯತಿರಿಕ್ತ ಜೀವರಿಗೆ ಪೃಥಕ್ ವ್ಯಾಪಾರವಿಲ್ಲ. ಪ್ರಕೃತಿ ಸಂಬಂಧವಿಲ್ಲದೆ ಶುಚಿರ್ಭೂತರಾಗಿ ಇರತಕ್ಕ ರಮಾದೇವೇರೇ ಮನಿಯಾಗಿ ಉಳ್ಳವ ಜೀವಾಂತರ್ಗತನಾದ ಪರಮಾತ್ಮ. ಜೀವಾಂತರ್ಗತದಲ್ಲಿ ರಮಾದೇವೇರು, ಈ ರಮಾಂತರ್ಗತ ಶ್ರೀಪರಮಾತ್ಮ ಎಂದರ್ಥ. ಅನಂತರ ಸ್ಥೂಲದೇಹದಲ್ಲಿ ಶುಚಿನಾಮಕ ವಾಯ್ವಂತರ್ಗತ ಪರಮಾತ್ಮ ಇರೋವನಾಗಿದ್ದಾನೆ. ಈ ಪರಮಾತ್ಮ ಥಯುದಿಂದ ಪ್ರಾಣಿಗಳ ಸ್ವರೂಪದಲ್ಲಿ, ಬಾಹ್ಯ–ಸ್ಥೂಲದೇಹದಲ್ಲಿ ಈ ಉಭಯುವಿಧವಾದ ಅನೇಕ ಸಮೂಹದಲ್ಲಿ, ಉಭಯರೂಪಗಳಿಂದ ತಾನು ಇದ್ದವನಾಗಿ,ಜೀವರ ಸ್ವರೂಪದಲ್ಲಿ ಇಚ್ಛಾರೂಪವಾದ ಪ್ರೇರಣೆಗಳ ಜೀವೇಂದ್ರಿಯುಗಳಿಗೆ ಮಾಡುವ. ಆ ಪ್ರೇರಣೆಯನ್ನೂ, ಅನಾದಿಕರ್ಮವನ್ನೂ ಅನುಸರಿಸಿ

ಪುಣ್ಯ ಕರ್ಮಗಳ, ಪಾಪ ಕರ್ಮಗಳ ಸ್ಥೂಲದೇಹೇಂದ್ರಿಯಗಳ ದ್ವಾರಾ ಈ ಉಭಯವಿಧ ಕರ್ಮಗಳನ್ನೂ ಬಿಂಬಕ್ರಿಯಾ ದ್ವಾರಾ ತಾನು ಮಾಡಿ, ತದ್ವಾರಾ ಜೀವದೇಹದಿಂದ ಮಾಡಿಸೋವನಾಗತಾನೆ. ಜೀವ ಅಸ್ವತಂತ್ರ್ಯ, ಪರಮಾತ್ಮ ಸ್ವತಂತ್ರ ಎಂತ ತಿಳಿದು ಪೂರ್ವೋಕ್ತ ಅನುಸಂಧಾನದಿಂದ ಕರ್ಮಗಳ ಮಾಡತಾ ಮಹಾತ್ಮ್ಯೆಯನ್ನು ಹೊಗಳತಾ ಇರೋವನಾಗು ಎಂತ ಭಾವ.

**ತಾತ್ಪರ್ಯ :–** ಜೀವರ ಅಂತರ್ಗತದಲ್ಲಿ ರಮಾ ಮಧುಸೂದನರು ಇರತಾರೆ. ರಮಾದೇವೇರಿಂದ ಉಪಾಸ್ಯಮಾನನಾದ ಶ್ರೀಪರಮಾತ್ಮ ತಥಾ ರಮಾದೇವೇರು ಇವರಿಬ್ಬರ ಪ್ರೇರಣಾದಿಂದ ಜೀವರಲ್ಲಿ ಇಚ್ಛಾ ಉತ್ಪತ್ತಿಯಾಗಿ,ತದನಂತರ-ಸ್ಥೂಲದೇಹದಲ್ಲಿ ಶ್ರೀವಾಯುದೇವರ ಅಂತರ್ಗತ ಪ್ರೇರಣೆ. ಈ ವಾಯುದೇವರಿಂದ ಪ್ರೇರಣೆಯಾಗಿ ಪೂರ್ವೋಕ್ತಕಾರ್ಯಗಳು ನಡೆಯುತವೆ-ಎಂತ ಅರ್ಥ.

**ಪ್ರಮಾಣ :–**

**ಪಚನಂ ಗಮನಂ ಭಕ್ಷಂ ಭುಕ್ತಿರಿತ್ಯಾದಿ ಕರ್ಮಸು ।**
**ದೃಶ್ಯತೇ ಯತ್ನ ಸಾಧ್ಯಸ್ತು ದೇವಂತತ್ರಾಪಿ ಚಿಂತಯೇತ್ ॥**
**ಕರ್ತುರ್ವಿಂಚ್ಛಾ ವಿಘಾತಾದ್ಯೈರ್ಲಿಂಗೈಸ್ಸಮ್ಯಕ್ ವಿವೇಕಿಭಿಃ ।**

ಎಂಬ ಪ್ರಮಾಣಾರ್ಥ ವಿವರಿಸಿತು.

**ವಿಶೇಷಾರ್ಥ :–** ನೈಮಿಷಾರಣ್ಯ ಎಂದರೆ, **ನಿಮಿಷನಾಮ್ನಾ ಋಷಿಣಾ ಯತ್ರ ತಪಶ್ಚರಣಂ, ತತ್ಸಂಬಂಧಾತ್ ನೈಮಿಷೇ, ತಸ್ಮಿನ್ ನೈಮಿಷಾರಣ್ಯೇ । ಶುನಕಸ್ಯಾಪತ್ಯಂ ಪುಮಾನ್ ಶೌನಕಃ, ರೋಮ ಹರ್ಷಣಾಪತ್ಯಂ ಪುಮಾನ್ ರೋಮಹರ್ಷಿಣಿ- ಸೂತಃ ಋಷಿಃ ತ್ರಿಕಾಲಜ್ಞಾನದರ್ಶನಃ ಅಥವಾ ಮಂತ್ರದ್ರಷ್ಟಾ ವಾ ॥೧॥**

## ೨. ಭಾವಪ್ರಕಾಶಿಕೆ

ಶೌನಕಾದಿ ಋಷಿಗಳಿಗೆ ಸೂತ ಪುರಾಣಿಕರು ಹೇಳಿರುವ ವಿಷ್ಣುರಹಸ್ಯದಲ್ಲಿರುವ ವಿಷಯಗಳನ್ನೇ ಸಂಧಿ ಸೂಚನೆಯ ಅರ್ಧ ಪದ್ಯದಲ್ಲಿ ಸೂಚಿಸಿರುತ್ತಾರೆ.

ಪರಮಾತ್ಮನ ಅನುಗ್ರಹ ಹೊರತು,ಜೀವನಿಗೆ ಒಂದು ತೃಣವನ್ನಾದರೂ ಅಲ್ಲಾಡಿಸುವ ಶಕ್ತಿಯು ಇರುವುದಿಲ್ಲ. ವಿಷ್ಣುರಹಸ್ಯ ೨೧ ನೆಯ ಅಧ್ಯಾಯದಲ್ಲಿ "ಪದಾರ್ಥಗಳನ್ನು ಪಕ್ವ ಮಾಡುವುದು, ಓಡಾಡುವುದು, ತಿನ್ನುವುದು, ಭೋಗಿಸುವುದು, ಮೊದಲಾದ ಕರ್ಮಗಳಲ್ಲಿ ಪ್ರಾಣಿಗಳ ಪ್ರಯತ್ನವು ಕಾಣುವುದು. ಆದರೆ ಅದು ನಿಜವಲ್ಲ. ಅವೆಲ್ಲವೂ ದೈವ ಪ್ರೇರಣೆಯಿಂದಲೇ ಆಗುವದೆಂದು ತಿಳಿಯಬೇಕು" ಎಂದು ಹೇಳಿರುವರು. ಮತ್ತು ೧೨ನೆಯ ಅಧ್ಯಾಯದಲ್ಲಿ ಹಯಗ್ರೀವದೇವರು ಬ್ರಹ್ಮದೇವರನ್ನು ಕುರಿತು "ಎಲೈ ಬ್ರಹ್ಮ ! ಸರ್ವಪ್ರಾಣಿಗಳಲ್ಲಿ ಯಾವ ಶಕ್ತಿಗಳು ಇರುವವೋ,ಅವೆಲ್ಲವೂ ನನ್ನ ಶಕ್ತಿಯೆಂದು ತಿಳಿ. ಯಾವ ಕೆಲಸಕ್ಕೂ ಕೈಲಾಗದ ಸಾಮಾನ್ಯ ಪ್ರಾಣಿಗಳಿಗೂ ಕೂಡ ನಾನು ಸ್ವಾತಂತ್ರ್ಯವನ್ನು ಕೊಟ್ಟು, ಕರ್ಮಗಳನ್ನು ಮಾಡಿಸುವೆನು. ಜನರು ಅದನ್ನರಿಯದೆ ಮೋಹದಿಂದ ತಾವೇ ಸ್ವತಂತ್ರವಾಗಿ ಕಾರ್ಯಗಳನ್ನು ಮಾಡುವುದಾಗಿ ತಿಳಿದುಕೊಳ್ಳುವರು. ತಾವು ಸ್ವತಂತ್ರವಾಗಿ ಕಾರ್ಯಕ್ಕೆ ಪ್ರಾರಂಭಿಸಿ ಕಾರ್ಯವು ಸಾಗದಿದ್ದರೆ, ಆಗ ತಾವು ಪರತಂತ್ರರೆಂದು ತಿಳಿದುಕೊಳ್ಳುತ್ತಾರೆ. ಎಂತಹಾ ಜ್ಞಾನಿಗಳೂ ಕೂಡ ಕಾರ್ಯಗಳನ್ನು ಮಾಡುವಾಗ, ನನ್ನ ಮಾಯೆಯಿಂದ ಮೋಹಿತರಾಗಿ, ತಾವು ಸ್ವತಂತ್ರರೆಂದು ತಿಳಿಯುತ್ತಾರೆ. ಹೀಗಿರಲು ಇನ್ನು ಅಜ್ಞಾನಿಗಳ ಪಾಡೇನು, ಬ್ರಹ್ಮ ! ನೀನು ಮೊದಲು ತೃಣದೇವರ ಪರ್ಯಂತ ಸ್ಥಾವರ ಜಂಗಮಾತ್ಮಕವಾದ ಈ ಜಗತ್ತಿಗೆ ನನ್ನ ಶಕ್ತಿ ಹೊರತು ಚಲಿಸುವ ಶಕ್ತಿಕೂಡ ಇಲ್ಲವೆಂದು ತಿಳಿ". ಎಂದು ಹೇಳಿರುವರು. ಆ ಅಭಿಪ್ರಾಯವನ್ನೇ ಈ ಪದ್ಯದಲ್ಲಿ ಹೇಳುತ್ತಾರೆ. ಪದಾರ್ಥಗಳನ್ನು ಪಕ್ವಮಾಡುವಾಗ, ಅಗಿದು ತಿನ್ನುವಾಗ, ಓಡಾಡುವಾಗ, ಭೋಜನ ಮಾಡುವಾಗ, ಮಾತಾಡುವಾಗ, ಸ್ತ್ರೀಯಾದಿ ಭೋಗಗಳನ್ನ

ನುಭವಿಸುವಾಗ, ನೋಡುವಾಗ, ಚಲನಾಚಲನಾದಿ ಒಂದೊಂದು ವಿಷಯದಲ್ಲೂ ನಾನು ತಿಂದೆನು, ನಾನು ನಡೆದೆನು, ನಾನು ಮಲಗಿದೆನು, ಎಂದು ಸ್ವತಂತ್ರ ಬುದ್ಧಿಯನ್ನು ಜನರು ಮಾಡುತ್ತಾರೆ. ಅಲ್ಪರಾದ ಜೀವರಿಗೆ ಈ ಪ್ರಯತ್ನವು ಸಾಧ್ಯವೆ ? ಪರಮಾತ್ಮನಾದ ನಾನು ತಮ್ಮೊಳಗಿದ್ದು ಮಾಡುವುದನ್ನರಿಯದೇ ತಾವೇ ಮಾಡುತ್ತೇವೆಂದು ಭ್ರಾಂತಿಯಿಂದ ತಿಳಿದುಕೊಳ್ಳುವರು. ಶುಚಿಸದನನೆಂದರೆ, ಶುಚಿಯೆಂದು ವಾಯುದೇವರಿಗೆ ಹೆಸರು. ಅವರೇ ಮನೆ ಎಂದರೆ, ವಾಯುದೇವರ ಅಂತರ್ಯಾಮಿಯಾಗಿರುವನೆಂದು ತಾತ್ಪರ್ಯ. ಇಂತಹ ಪರಮಾತ್ಮನು ಕರುಣದಿಂದ ಎಲ್ಲರಲ್ಲೂ ಇದ್ದು, ಸಕಲ ಪುಣ್ಯ ಪಾಪಾದಿ ಕರ್ಮಗಳನ್ನು ಮಾಡಿಸುತ್ತಾನೆಂದು ತಿಳಿದು, ಪರಮಾತ್ಮನನ್ನು ಸ್ತುತಿಸಬೇಕೆಂದು ತಾತ್ಪರ್ಯ. ॥೧॥

## ೩. ಭಾವದರ್ಪಣ :-

ಈಗ್ಗೆ ಮೋಕ್ಷದಾಯಕನಾದ ಮುಕುಂದ ದೇವನು ಜೀವರ ಕರ್ಮ ಕಳೆಯಲಿಕ್ಕೆ ಸ್ವಾತಂತ್ರ್ಯರೂಪದಿಂದ ಜೀವರಲ್ಲಿ ನಿಂತು, ತಾನೇ ಕರ್ಮಮಾಡಿ ಮಾಡಿಸುತ್ತಾನೆಂದು ಹೇಳಲಿಕ್ಕೆ ಕ್ರೀಡಾವಿಲಾಸ ಸಂಧಿ ಉಪಕ್ರಮಿಸುತ್ತಾರೆ. ॥ ಶ್ರೀನಿವಾಸ ॥ ಜೀವರ ಅವಯವ ಚಲನಾದಿ ಸಮಸ್ತ ಕಾರ್ಯಗಳು, ಶ್ರೀಶನಿಂದಲೇ ಆಗುತ್ತವೇ ಹೊರ್ತು ಇತರರ ಪ್ರಯತ್ನದಿಂದ ಸಾಧ್ಯ ಎಷ್ಟುಮಾತ್ರಕ್ಕೂ ಇಲ್ಲವೆಂದು ಹೇಳುತ್ತಾರೆ. ॥ ಪಚನ ॥ ತದುಕ್ತಂ **ವಿಷ್ಣುರಹಸ್ಯೇ** । "ಪಚನಂ ಗಮನಂ ಭಕ್ಷ್ಯಂ ಭಕ್ತ್ರಿತ್ಯಾದಿ ಕರ್ಮಸು । ದೃಶ್ಯತೇ ಯತ್ನಸಾಧ್ಯತ್ವಂ ದೈವಂ ತತ್ರಾಪಿ ಚಿಂತಯೇತ್ । ಕರ್ತುಂ ಚೇಷ್ಟಯಿತುಂ ವಾಪಿ ಕಥಂವಾಪಿ ಮಯಾಕೃತಂ । ಜಾನಂತಿನೈವ ಮೂಢಾ ಯೇ ವೃಥಾ ಪಂಡಿತ ಮಾನಿನಃ। ತ್ವಾಮಾರಭ್ಯ ತೃಣಂ ಜಾವಜ್ಜಗತ್ ಸ್ಥಾವರ ಜಂಗಮಂ। ಮಮ ಶಕ್ತಿಂ ವಿನಾ ಬ್ರಹ್ಮನ್ ಸ್ಪಂದಿತುಂ ನೈವ ಶಕ್ನುತೇ"- ಇತಿ. ಪಚನ = ಅಡಗಿ ಮಾಡೋಣ, ಭಕ್ಷಣ = ತಿಂಬೋಣ, ಗಮನ = ನಡಿಯೋಣ, ಭೋಜನ = ಊಟ ಮಾಡೋಣ, ವಚನ = ಮಾತನಾಡೋಣ, ಮೈಥುನ = ವ್ಯವಾಯ, ಶಯನ = ಮಲಗೋಣ, ವೀಕ್ಷಣ = ನೋಡೋಣ,

ಅಚಲನ = ಚಲಿಸದೇ ಇರೋಣ, ಚಲನ = ಚಲಿಸೋಣ, ಪ್ರಯತ್ನ = ಏವಮಾದಿ ಕಾರ್ಯಗಳು, ಶುಚಿಸದನ = ವೈಕುಂಠವೇ ಮನೆಯಾಗಿ ಉಳ್ಳ ಶ್ರೀಹರಿಯಿಂದಲೇ ಎಂದು ದಾರ್ಢ್ಯ ಮಾಡತಕ್ಕದ್ದು. ॥೧॥

## ೪. ಶ್ರೀವ್ಯಾಸದಾಸ ಸಿದ್ಧಾಂತ ಕೌಮುದೀ :-

ಅಪರೋಕ್ಷೋತ್ತರಂ ಕ್ರೀಡಾವಿಲಾಸಃ ಜ್ಞಾಯತೇ ಹರೇ ॥ ಏಕವಿಂಶಾಧ್ಯಾಯ ವಿಷ್ಣುರಹಸ್ಯೇ ಪರಮಾದರಾತ್ ॥ ಪ್ರಪ್ರಚ್ಛುಃ ಶೌನಕಾದಯಃ ಸೂತಂ ಸೂತಾರ್ಯೋऽಕಥಯತ್ ಕಥಾಃ ॥೨॥ ಇತಿ ಕಥಾಂ ಪ್ರಸಂಜಯತಿ- "ಶ್ರೀನಿವಾಸ" ಇತಿ ॥ "ಪಚನ" ಇತಿ ॥ "ಶುಚಿಸದನ" ವಾಯುಹೃದ್ಗತಃ ॥೧॥

### ಕನ್ನಡಾರ್ಥ

ಶ್ರೀಹರಿಯ ಕ್ರೀಡಾವಿಲಾಸವು ಅಪರೋಕ್ಷಜ್ಞಾನದ ಅನಂತರ ತಿಳಿಯುತ್ತದೆ. ಆದುದರಿಂದ ಕಮಲೇಶನ ಕ್ರೀಡೆಯನ್ನು ತಿಳಿಸುವುದಕ್ಕೆ ಉಪಕ್ರಮಿಸುತ್ತಾರೆ. ವಿಷ್ಣುರಹಸ್ಯದ ೨೧ ನೆಯ ಅಧ್ಯಾಯದಲ್ಲಿ ಬರುವ ಕಥೆ ಪರಮಾದರದಿಂದ ಶೌನಕರು ಸೂತರನ್ನು ಪ್ರಶ್ನಿಸಿದರು. ಸೂತಾಚಾರ್ಯನು ಕಥೆಯನ್ನು ಹೇಳಿದನು. ಹೀಗೆ ಅಲ್ಲಿ ಪ್ರಸಕ್ತವಾದ ಕಥೆಯನ್ನು ಪ್ರಸಕ್ತಿಯಿಂದ ತೋರಿಸುತ್ತಾರೆ. ॥ಪಲ್ಲ॥

ಪಚನ ಗೊಳಿಸುವುದು, ಗಮನ ಮಾಡುವುದು, ತಿನ್ನುವುದು, ಈ ಮುಂತಾದ ಕರ್ಮಗಳು ಯತ್ನಸಾಧ್ಯವೆಂದು ಕಂಡು ಬಂದಿದೆ. ಮನುಷ್ಯ ಯತ್ನ ಸಾಧ್ಯವಾದ ವ್ಯಾಪಾರಗಳಲ್ಲಿಯೂ ಸಹ ದೈವದ ಅಧೀನತೆಯನ್ನು ತಿಳಿಯಲೇಬೇಕು. ಯಾಕೆಂದರೆ, ಪುರುಷನ ಇಚ್ಛಾಭಂಗ ಮುಂತಾದ ಯುಕ್ತಿಗಳಿಂದ ಜ್ಞಾನಿಗಳು ಸದಸದ್ವಿವೇಕದಿಂದ ಹೀಗೆ ತಿಳಿಯುತ್ತಾರೆ. ಪೂರ್ವದ ದೇಹವು ನಾಶವಾಗಿ ಹೋಗಿದ್ದರೂ, ಆಯಾಕರ್ಮಗಳ ಫಲವನ್ನು ಜೀವನು ಅನುಭವಿಸಿಯೇ ತೀರುತ್ತಾನೆ, ಆದುದರಿಂದ ಜೀವನು ದೇಹದಿಂದ ಭಿನ್ನನೇ

ಇರುತ್ತಾನೆ. ಅದರಂತೆ ಯಥಾಸ್ಥಿತವಾದ ದೇಹದ ವ್ಯಾಪಾರವು ನಿಂತು ಹೋಗುವುದನ್ನು ನೋಡಿ, ಮೃತನೆಂಬ ವ್ಯವಹಾರವು ಉಂಟಾಗುತ್ತದೆ. ದೇಹದಿಂದ ಯಾವನ ಪ್ರಯಾಣವಾಗುವುದರಿಂದ ಈ ವ್ಯವಹಾರವಾಗುವುದೋ, ಯಾವನು ದೇಹದಲ್ಲಿರುವುದರಿಂದ ಸ್ನಾನ, ಪಾನ, ಮುಂತಾದ ವಿವಿಧ ವ್ಯಾಪಾರಗಳಾಗುವುವೋ ಅವನಿಗೆ "ಜೀವ"ವೆಂಬ ಹೆಸರು. ಆ ಜೀವನೂ ಸಹ ಈ ಶರೀರದಲ್ಲಿ ತನ್ನ ಇಚ್ಛೆಯಿಂದಲೇ ಇರಲಾರ. ಮತ್ತು ತನ್ನ ಇಚ್ಛೆಯಿಂದಲೇ ಈ ಶರೀರವನ್ನು ತ್ಯಜಿಸಲಾರನು ಆದುದರಿಂದ ದೇಹ ವಿಲಕ್ಷಣನಾದ ಜೀವನಿಂದ ಭಿನ್ನನಾದ ಪರಮಾತ್ಮನೆಂಬ ವಸ್ತು ಭಿನ್ನ. ಅವನ ಅಧೀನದಲ್ಲಿ ಜೀವನು ಇರುತ್ತಾನೆ. ಹೀಗೆ ಜ್ಞಾನಿಗಳು ಜೀವನ ಪಾರತಂತ್ರ್ಯವನ್ನೂ ಈಶನ ಸ್ವಾತಂತ್ರ್ಯವನ್ನೂ ತಿಳಿಯುತ್ತಾರೆ. ಈ ಎಲ್ಲ ವಿಷಯಗಳನ್ನು ತಮ್ಮ ಎರಡು ಪದ್ಯಗಳಿಂದ ಸಂಗ್ರಹಿಸಿ ತಿಳಿಸುತ್ತಾರೆ. ಅದಕ್ಕಾಗಿ ೧ ನೇ ಪದ್ಯ "ವಚನ"ವೆಂಬುದಾಗಿ ಹೊರಟಿರುತ್ತದೆ.

'ಶುಚಿಸದನ' – 'ಶುಚಿ' ನಾಮಕ ವಾಯುದೇವರ ಹೃದಯದಲ್ಲಿ ವಾಸಿಸುವ ಶ್ರೀಹರಿ. ॥೧॥

## ೫. ಶ್ರೀ ಗುರುಹೃದಯ ಪ್ರಕಾಶಿಕೆ :–

ಜೀವರು ಸಾಧನೆಗಳನ್ನು ಮಾಡುವುದು ದೇವರ ಪ್ರೇರಣೆಯಿಂದಲೇ. ಆ ಸ್ವಾಮಿ ಕೊಟ್ಟ ಸ್ವಾತಂತ್ರ್ಯದಿಂದ ಎಂದು ವಿಷ್ಣುರಹಸ್ಯವೆಂಬ ಉಪಪುರಾಣರೀತ್ಯಾ ತಿಳಿಸುತ್ತಾರೆ. ಜೀವಕ್ರಿಯಾ ದೇವರು ವ್ಯಕ್ತಮಾಡದೇ ನಡೆಯಲಾರದು. ಆದ್ದರಿಂದ ದೇವರು ತನ್ನ ಸ್ವಾತಂತ್ರ್ಯವನ್ನು ತಾರತಮ್ಯಾನುಸಾರವಾಗಿ ಆಯಾಯಾ ಜೀವರಲ್ಲಿಟ್ಟು ಅವರವರ ಸಾಧನೆ ಮಾಡಿಸುವನೆಂಬ ಹರಿಕಥಾಮೃತಸಾರವನ್ನು ಅತ್ಯಂತ ಹರಿಭಕ್ತರು ಕೇಳತಕ್ಕದ್ದನ್ನ ಗುರುಕೃಪೆಯಿಂದ ಯಥಾಶಕ್ತಿ ಹೇಳುವೆನು.

ಶ್ರೀನಿವಾಸನ ಸ್ವಾತಂತ್ರ್ಯಾದಿ ಚರಿತ್ರೆಯನ್ನು ತಿಳಿಸಬೇಕೆನು ಶೌನಕಾದಿ ಋಷಿಗಳು ಸೂತಪೌರಾಣಿಕರನ್ನು ಪ್ರಾರ್ಥಿಸಿಕೊಳ್ಳಲು, ವಿಷ್ಣು

ರಹಸ್ಯವೆಂಬ ಉಪಪುರಾಣದಲ್ಲಿ ಅದನ್ನು ದಯದಿಂದ ಸೂತರು ಹೇಳುತ್ತಾರೆಂದು ಅಧ್ಯಾಯಾರ್ಥ. ಸಂ॥ ಸೂ॥

ಪಚನವೆಂಬ ತಿಂದದ್ದು ಜೀರ್ಣಕ್ಕೆ ಬರುವಿಕೆ, ಭಕ್ಷಣವೆಂಬ ಆಹಾರ ತಿನ್ನುವಿಕೆ, ಗಮನವೆಂಬ ನಡಿಗೆ, ಭೋಜನವೆಂಬ ಸೌಖ್ಯಾನುಭವಶಕ್ತಿ, ವಚನವೆಂಬ ಮಾತನಾಡುವುದು, ಮೈಥುನವೆಂಬ ಸ್ತ್ರೀಭೋಗ, ಶಯನವೆಂಬ ನಿದ್ರೆ, ವೀಕ್ಷಣವೆಂಬ ನೋಟ, ಅಚಲನವೆಂಬ ರೆಪ್ಪೆ ಹಾಕದೆ ಸುಮ್ಮನಿರುವುದು, ಚಲನವೆಂಬ ಅಲ್ಲಾಡುವುದು ಸಹ ಜೀವನ ಪ್ರಯತ್ನ ಮಾತ್ರದಿಂದ ಸಾಧ್ಯವಲ್ಲ. ಶುಚಿಸದನವೆಂಬ ಪ್ರಾಣಾಂತರ್ಯಾಮಿದೇವರು ಜೀವ ಸಮೂಹದಲ್ಲಿದ್ದು, ದಯದಿಂದ ಅವರವರ ಉಚಿತವೆಂಬ ಪುಣ್ಯವನ್ನು, ಅನುಚಿತವೆಂಬ ಪಾಪಾದಿಕ್ರಿಯವನ್ನೂ ಸಹ ವ್ಯಕ್ತಿಮಾಡುತ್ತಾನೆಂದು, ತಿಳಿದು ದೇವರನ್ನು ಸ್ತುತಿಸು. ॥೧॥

## ಸರ್ವವ್ಯಾಖ್ಯಾನಸಾರಸಂಗ್ರಹ

ನೈಮಿಷಾರಣ್ಯದಲ್ಲಿ ಶೌನಕಾದಿಗಳು ಸೂತಪುರಾಣಿಕರನ್ನು ಕುರಿತು– ಹೇ ಮಹಾತ್ಮರೇ ! ಶ್ರೀಹರಿಯ ಸರ್ವ ಸ್ವಾತಂತ್ರ್ಯ ವಿಷಯ ಮತ್ತು ಜೀವರಲ್ಲಿ ನಡೆಯುತ್ತಿರುವ ನಾನಾ ಪ್ರಕಾರವಾದ ಕ್ರಿಯಾ ವಿಶೇಷಗಳು, ಅವುಗಳಿಗೆ ಉದ್ಬೋಧಕವಾದ ಕ್ರಿಯಾಶಕ್ತಿ ಈ ವಿವರಗಳನ್ನು ನಮಗೆ ಸಮಗ್ರವಾಗಿ ತಿಳಿಸಿ, ಉದ್ಧರಿಸಬೇಕು–ಎಂದು ಪ್ರಾರ್ಥಿಸಿದರು. ಅವರ ಕೋರಿಕೆಯನ್ನು ಮನ್ನಿಸಿ, ಸೂತಪುರಾಣಿಕರು, **ವಿಷ್ಣುರಹಸ್ಯದ** ೨೧ ನೆಯ ಅಧ್ಯಾಯಗತ ತತ್ತ್ವಾರ್ಥಗಳನ್ನು ವಿವರಿಸಿದರು. ಅದರಂತೆ, ಜ್ಞಾನಿವರ್ಯರಾದ ಶ್ರೀಮಜ್ಜಗನ್ನಾಥದಾಸವರೇಣ್ಯರು ಆ ಉಪಪುರಾಣೋಕ್ತ ತತ್ತ್ವಪ್ರಮೇಯಗಳನ್ನು **ಸರ್ವಸ್ವಾತಂತ್ರ್ಯಸಂಧಿ**–ಎಂಬ ಪ್ರಸಕ್ತ ಸಂಧಿಗತ ಪ್ರಥಮ ಪದ್ಯಗಳಿಂದ ಆರಂಭಿಸಿ ತಿಳಿಸುತ್ತಾರೆ.

ಭೋಜ್ಯವಸ್ತುಗಳನ್ನು ನೀರಿನಲ್ಲಿ ಚೆನ್ನಾಗಿ ಬೇಯಿಸಿ, ಭೋಜನಕ್ಕೆ ಅನುಕೂಲವಾಗುವಂತೆ ಪಕ್ವಮಾಡುವ ಕ್ರಿಯೆಗೆ-ಪಚನ ಎಂದು ಹೆಸರು. ತಿಂದ ಆಹಾರವು ಜೀರ್ಣಾಂಗಗಳ ಸಹಾಯದಿಂದ ಜೀರ್ಣವಾಗುವ ಕಾರ್ಯಕ್ಕೂ "ಪಚನ" - ವೆನ್ನುವರು.

ಪಕ್ವವಾಗಿ ಸಿದ್ಧವಾಗಿರುವ ಆಹಾರ ವಸ್ತುಗಳನ್ನು ದಂತದಿಂದ ಚೆನ್ನಾಗಿ ಅಗಿದು, ನಾಲಿಗೆಯಿಂದ ಹೊರಳಿಸಿ, ತಿನ್ನುವ ಕ್ರಿಯೆಗೆ-ಭಕ್ಷಣ ಎಂದು ಹೆಸರು.

ಪಾದೇಂದ್ರಿಯಗಳಿಂದ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಸಂಚಾರ ಮಾಡುವ ವ್ಯಾಪಾರವನ್ನು-ಗಮನ ಎನ್ನುವರು. ದೇಹದಲ್ಲಿ ನಡೆ ಯುತ್ತಿರುವ ರಕ್ತ ಪರಿಚಲನೆ, ನಾಡೀಗತ ಕ್ರಿಯೆಗಳು, ಶ್ವಾಸಕಾರ್ಯ, ಪಂಚಕೋಶಗಳ ಕ್ರಿಯೆ ಇವುಗಳಲ್ಲಿಯೂ ಸಹ ಗಮನ-ವೆಂಬ ಕ್ರಿಯೆಯು ಅಭಿವ್ಯಕ್ತವಾಗುವುದು.

ನೇತ್ರಗಳಿಂದ ನೋಡುವ ರೂಪ, ಕಿವಿಯಿಂದ ಕೇಳುವ ಶಬ್ದ, ರಸ ನೇಂದ್ರಿಯಕ್ಕೆ ವಿಷಯವಾದ ರುಚಿ, ನಾಸಿಕೇಂದ್ರಿಯಕ್ಕೆ ವಿಷಯವಾಗಿರುವ ವಾಸನೆ (ಗಂಧ), ತ್ವಗಿಂದ್ರಿಯ ದ್ವಾರಾ ಅನುಭವಿಸುವ ಸ್ಪರ್ಶವಿಷಯ ಗಳು-ಇತ್ಯಾದಿ ವಿಷಯಾನುಭವರೂಪವಾದ ಸಕಲ ಕ್ರಿಯೆಗಳಿಗೂ ಭೋಜನ-ವೆಂದು ಹೆಸರು.

ವಾಗಿಂದ್ರಿಯದ ಸಹಾಯದಿಂದ. ಮಾತನಾಡುವುದು, ಶಾಸ್ತ್ರ ಜಿಜ್ಞಾಸೆ, ಅಧ್ಯಾಪನ, ಪಠಣ-ಇತ್ಯಾದಿ ವಾಗ್ರೂಪವಾದ ವ್ಯಾಪಾರಗಳು- ವಚನಗಳೆನಿಸುವುವು.

ಸ್ತ್ರೀಯರೊಡನೆ ಭೋಗಿಸುವ ಕ್ರಿಯಾದಿಗಳಿಗೆ ಮೈಥುನ ಎಂದು ಹೆಸರು.

ಮಲಗುವುದು, ವಿಶ್ರಾಂತಿ ಹೊಂದುವುದು. ಇತ್ಯಾದಿ ಕ್ರಿಯೆಗಳು **ಶಯನ**ವೆನಿಸುವುವು.

ಕಣ್ಣುಗಳಿಂದ ವಸ್ತುಗಳನ್ನು ನೋಡುವುದು, ಅವುಗಳ ಆಕಾರ ರೂಪ ಲಕ್ಷಣಗಳನ್ನು ತಿಳಿಯುವುದು. ಸಚ್ಛಾಸ್ತ್ರಾವಲೋಕನ. ಇತ್ಯಾದಿ ಕಾರ್ಯಗಳು **ವೀಕ್ಷಣವೆನಿಸುವುವು.**

ದೇಹವನ್ನು ಅಲ್ಲಾಡಿಸದಿರುವುದು, ರೆಪ್ಪೆ ಬಡಿಯದೆ ಹಾಗೆಯೇ ಇರುವುದು, ಇತ್ಯಾದಿ ಚಲನರಹಿತ ಕ್ರಿಯೆಗಳಿಗೆ **ಅಚಲನ** ಎಂದು ಹೆಸರು. ಗಮನಾಗಮನ ಮಾಡದೇ ಇದ್ದ ಸ್ಥಳದಲ್ಲಿಯೇ ಇದ್ದರೂ, ಅದು ಅಚಲನ ವೆನಿಸುವುದು.

ದೇಹಗತ ಅಂಗಾಂಗಗಳನ್ನು ಅಲ್ಲಾಡಿಸುವುದು. ಸ್ನಾಯುಗಳ ಚಲನಾದಿ ಕ್ರಿಯೆಗಳು. ಇವೆಲ್ಲವೂ **ಚಲನ ಕಾರ್ಯಗಳು.**

ಹಿಡಿದ ಕೆಲಸವನ್ನು ಸಾಧಿಸುವುದರಲ್ಲಿ ತೊಡಗಿಸುವ ಯತ್ನರೂಪವಾದ ಕ್ರಿಯೆಯು **ಪ್ರಯತ್ನವು.**

ಇಂತು, ವಚನಾದಿ ಸಕಲ ಕ್ರಿಯೆಗಳನ್ನು ಜೀವರು ಸ್ವತಂತ್ರವಾಗಿ ಮಾಡಲು ಸಾಧ್ಯವೇ ?

**"ತೇನ ವಿನಾ ತೃಣಮಪಿ ನ ಚಲತಿ"**–ಎಂಬ **ಶ್ರುತಿ ವಚನಾನುಸಾರ. "ಸ್ವತಂತ್ರೋ ಭಗವಾನ್ ವಿಷ್ಣುಃ"** –ಎಂಬ **ಶ್ರೀಮನ್ಮಧ್ವೋಕ್ತಿಯಂತೆಯೂ.**

ಜೀವರಿಗೆ ಯಾವ ಕ್ರಿಯೆಯನ್ನೂ ಮಾಡಲು ಸ್ವಾತಂತ್ರ್ಯವಿಲ್ಲ. ಜೀವರ ಕರ್ತೃತ್ವಶಕ್ತಿ ಭಗವದಧೀನವಾಗಿದೆ. ಆ ಕರ್ತೃತ್ವಸಾಮರ್ಥ್ಯವು ಕೇವಲ ಶಕ್ತ್ಯಾತ್ಮಕವಾಗಿದೆ. ಅದು ಕ್ರಿಯಾತ್ಮಕವಾಗಿ ಅಭಿವ್ಯಕ್ತಿಯಾಗಲು ಶ್ರೀಪರಮಾತ್ಮನ ಪ್ರೇರಣೆ ಅತ್ಯಗತ್ಯ. ಶ್ರೀಶನ ಪ್ರಚೋದನೆ ಇಲ್ಲದೆ, ಜೀವರಲ್ಲಿ ಯಾವ ಕ್ರಿಯಾಭಿವ್ಯಕ್ತಿಯೂ ಆಗಲಾರದು. ಇದೇ ಆ ಸರ್ವೇಶನ **ಬಿಂಬ ಕ್ರಿಯಾ** ಎನಿಸುವುದು. ಬಿಂಬಗತ ಜೀವನ ಸಮಸ್ತ ಕ್ರಿಯಾಭಿವ್ಯಕ್ತಿಗೂ ಆ ಜಗದಾಧಾರಮಣನಾದ ಬಿಂಬನ ಕ್ರಿಯೆಯೇ ಮುಖ್ಯ ಕಾರಣ.

ಪ್ರಕೃತಿಗುಣಗಳ ಸಂಬಂಧವಿಲ್ಲದೇ, ಸದಾಶುಚಿಭೂರ್ತರಾಗಿ, ನಿರ್ವಿಕಾರರಾಗಿರುವ ಶ್ರೀಲಕ್ಷ್ಮೀದೇವಿಗೆ **ಶುಚಿ** ಎಂದು ಹೆಸರು. (**ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನಾನುಸಾರ**) ಲಿಂಗದೇಹವು ಕೇವಲ ಔಪಚಾರಿಕವಾಗಿ ದಗ್ಧಪಟದಂತೆ ಇರುವ, ಸತ್ವಗುಣ ಪ್ರಾಚುರ್ಯ ದೇಹವುಳ್ಳ ಶ್ರೀ ವಾಯುದೇವರಿಗೆ **ಶುಚಿ** ಎಂದು ಹೆಸರು (**ಇತರ ವ್ಯಾಖ್ಯಾನಕಾರರ ವಿವರಣೆಯಂತೆ**).

ಲಕ್ಷ್ಮ್ಯಂತರ್ಗತ, ಶ್ರೀ ಭಾರತೀರಮಣ ಮುಖ್ಯಪ್ರಾಣಾಂತರ್ಯಾಮಿಯಾದ ಶ್ರೀಪರಮಾತ್ಮನು **ಶುಚಿಸದನನು.**

ಶುಚಿಸದನನು ಸಕಲ ತ್ರಿವಿಧ ಜೀವರ ಸಮೂಹದಲ್ಲಿ, ಅವರ ಅಂತರ್ಯಾಮಿಯಾಗಿ, ಬಿಂಬರೂಪದಿಂದ ಇರುವನು. ಜೀವಾಕಾರವಾದ, ಜೀವನಿಯಾಮಕವಾದ, ಜೀವನಾಮಕವಾದ ಆ ಭಗವದ್ರೂಪವೇ ಆಯಾಯಾ ಬಿಂಬರೂಪವು.

ಸಕಲಜೀವರಲ್ಲಿ ಬಿಂಬನಾಗಿ ತಾನೇ **ಉಚಿತ ಹಾಗೂ ಅನುಚಿತವಾದ** ಸಕಲಕರ್ಮಗಳನ್ನು ಜೀವರ ಹೆಸರಿನಲ್ಲಿಯೇ ಬಿಂಬಕ್ರಿಯಾ ದ್ವಾರಾ ಮಾಡುವನು.

"**ಬಿಂಬ ಚಲಿಸಿದರೆ ಪ್ರತಿಬಿಂಬ ಚಲಿಸುವುದು**" ಎಂಬ ನಿಯಮದಂತೆ, ಬಿಂಬನೇ ಜೀವರಲ್ಲಿ ನಿಂತು, ಸಕಲಕರ್ಮಗಳಿಗೂ ತಾನೇ ಮುಖ್ಯ ಪ್ರೇರಕನಾಗಿ, ಆ ಕರ್ಮಗಳನ್ನು ಮಾಡುವನು. ಇಂದ್ರಿಯಾಭಿಮಾನಿ ದೇವತೆಗಳು, ದೈತ್ಯರ ದ್ವಾರಾ **ಮಾಡಿಸುವನು.** ದೇಹಗತ ಸಕಲೇಂದ್ರಿಯಗಳಲ್ಲಿ ಪ್ರಕಾಶತೋವ್ಯಾಪ್ತನಾದ ಜೀವನ ದ್ವಾರಾ ಮಾಡಿ ಮಾಡಿಸುವನು. ಬಿಂಬನಿಂದ ಪ್ರತಿಬಿಂಬನಲ್ಲಿ ಕ್ರಿಯಾಭಿವ್ಯಕ್ತಿ. ವಿಧಿಪೂರ್ವಕ ಮಾಡುವ ಪುಣ್ಯ ಕರ್ಮಗಳು **ಉಚಿತ ಕರ್ಮಗಳು.** ನಿಷೇಧರೂಪವಾದ ಪಾಪ ಹಾಗೂ ಮಿಶ್ರ ಕರ್ಮಗಳು **ಅನುಚಿತ ಕರ್ಮಗಳು.** ಇಂತು, **ಉಚಿತಾನುಚಿತ ಸಕಲ ಕರ್ಮಗಳನ್ನು ಬಿಂಬನಾದ ಶ್ರೀಹರಿಯೇ** ಮಾಡಿ

ಮಾಡಿಸುತ್ತಿರುವನು. ನಿರ್ದೋಷನಾದ, ಜೀವಜಡರುಗಳಿಂದ ಅತ್ಯಂತ ಭಿನ್ನನಾದ ಬಿಂಬನಿಗೆ ಈ ಕರ್ಮಗಳ ಲೇಪವಿಲ್ಲ. ಈ ರೀತಿ ಸಮಸ್ತಕರ್ಮಗಳ ಮರ್ಮವನ್ನರಿತು, ಅವುಗಳಿಗೆ ಮುಖ್ಯಪ್ರೇರಕನೂ, ಕಾರಕನೂ, ಕರ್ತೃವ್ಯ ಆದ ಆ ಶ್ರೀ ಹರಿಯನ್ನು ಸದಾ ಭಕ್ತ್ಯುದ್ರೇಕದಿಂದ ಕೊಂಡಾಡುತಿರು-ಎಂದು ಆ ಸರ್ವೇಶನ ಸರ್ವಸ್ವಾತಂತ್ರ್ಯದ ವಿಷಯವನ್ನು ತಿಳಿಸುತ್ತಾರೆ. ॥೧॥

## ಪದ್ಯ-೨

**ಮೂಲ :–**

**ವಿಷ್ಟರಶ್ರವ ದೇಹದೊಳಗೆ ಪ್ರ ।**
**ವಿಷ್ಟನಾಗಿ ನಿರಂತರದಿ ಬಹು ।**
**ಚೇಷ್ಟಗಳ ಮಾಡುತಿರೆ ಕಂಡು ಸಜೀವಿ ಎನುತಿಹರು ॥**
**ಹೃಷ್ಟರಾಗುವರವನ ನೋಡಿ ಕ ।**
**ನಿಷ್ಠರೆಲ್ಲರು ಸೇವೆಮಾಳ್ಪರು ।**
**ಬಿಟ್ಟ ಕ್ಷಣದಲಿ ಕುಣಪವೆಂದರಿದದನುಪೇಕ್ಷಿಪರು ॥ ॥೨॥**

**ಅವತರಣಿಕೆ :–**

ಸರ್ವಚೇಷ್ಟಾಪ್ರವರ್ತಕನಾದ ಬಿಂಬನು ಜೀವರಲ್ಲಿ, ಸ್ಥೂಲದೇಹಗತನಾಗಿದ್ದು, ದೇಹೇಂದ್ರಿಯಗಳ ದ್ವಾರಾ ಸಕಲವ್ಯಾಪಾರಗಳನ್ನು ಮಾಡಿ ಮಾಡಿಸುತ್ತಿರುವುದರಿಂದ, ಜೀವನ ಕ್ರಿಯೆಗಳ ಅಭಿವ್ಯಕ್ತಿ. ಅವನ ಸನ್ನಿಧಾನ ವಿಶೇಷವಿಲ್ಲದಿದ್ದರೆ, ಆ ಸ್ಥೂಲಶರೀರವನ್ನು ಮೃತದೇಹವೆಂದು ಕರೆಯುವರೆಂದು ತಿಳಿಸುತ್ತಾರೆ-**ವಿಷ್ಟರಶ್ರವ** ಎಂಬ ೨ ನೆಯ ಪದ್ಯದಿಂದ. ॥೨॥

**ಪ್ರತಿಪದಾರ್ಥ :-**

**ವಿಷ್ಟರಶ್ರವ** = ಸರ್ವತ್ರವ್ಯಾಪ್ತನಾಗಿರುವ ಕೀರ್ತಿಪ್ರದನಾದ ಶ್ರೀ ಹರಿಗೆ "ವಿಷ್ಟರಶ್ರವ"- ನೆಂದು ಹೆಸರು (ವಿಷ್ಟರವೆಂಬ ಸಿಂಹಾಸನಾದಿ ಪದವಿಗಳನ್ನು ಮಾಡಿಕೊಡುವ ಕೀರ್ತಿವಂತನು) **ದೇಹದೊಳಗೆ** = ಲಿಂಗಾ ನಿರುದ್ಧ ಶರೀರ ಸಹಿತನಾದ ಜೀವನು ಪ್ರಕಾಶತೋವ್ಯಾಪ್ತನಾಗಿರುವ ಜೀವನ ಸ್ಥೂಲದೇಹದಲ್ಲಿ, **ಪ್ರವಿಷ್ಟನಾಗಿ** = ಪ್ರವೇಶ ಮಾಡಿದವನಾಗಿ, **ನಿರಂತರದಿ** = ಪ್ರತಿಕ್ಷಣದಲ್ಲಿಯೂ, **ಬಹು ಚೇಷ್ಟೆಗಳ** = ನಾನಾ ಪ್ರಕಾರವಾದ ವ್ಯಾಪಾರಗಳನ್ನು, **ಮಾಡುತಿರೆ** = ಬಿಂಬಕ್ರಿಯಾ ದ್ವಾರಾ ತಾನು ಮಾಡಿ ಮಾಡಿಸುತ್ತಿರಲು, **ಕಂಡು** = ಪರಿದೃಶ್ಯಮಾನವಾದ ಜೀವನ ಸ್ಥೂಲದೇಹವನ್ನು ನೋಡಿ, **ಸಜೀವಿ** = ಜೀವನಿದ್ದಾನೆ. ಈ ದೇಹ ಬದುಕಿದೆ- **ಎನುತಿಹರು** = ಎಂದು ಜನರು ಹೇಳುತ್ತಾರೆ. **ಅವನ**= ದೇಹಧಾರಿಯಾದ ಜೀವನನ್ನು, **ನೋಡಿ** = ಕಂಡು, **ಹೃಷ್ಟರಾಗುವರು** = ಸಂತೋಷಪಡುವರು. **ಕನಿಷ್ಠರೆಲ್ಲರು** = ವಯಸ್ಸಿನಿಂದಲೂ, ಜಾತಿ ಭೇದದಿಂದಲೂ ಆ ದೇಹಧಾರಿಯಾದ ಜೀವನಿಗಿಂತ ಅವರರಾದವರೆಲ್ಲರೂ (ಕೆಳಗಿನವರು), **ಸೇವೆಮಾಳ್ಪರು** = ಜೀವನಿಗೆ ಸೇವೆ ಮಾಡುತ್ತಾರೆ. (ಸ್ಥೂಲಶರೀರಕ್ಕೆ ಸೇವಾ). **ಬಿಟ್ಟಕ್ಷಣದಲಿ** = ಬಿಂಬನಾದ ಶ್ರೀಪರಮಾತ್ಮನು ದೇಹದಿಂದ ಜೀವಸಹಿತನಾಗಿ ಹೊರ ಬಿದ್ದ ತಕ್ಷಣ, **ಕುಣಪವೆಂದರಿತು** = ಮೃತಶರೀರವೆಂದು ತಿಳಿದು, **ಅದನು**= ಆ ಶವವನ್ನು, **ಉಪೇಕ್ಷಿಪರು** = ತಿರಸ್ಕರಿಸುವರು. ॥೨॥

# ವ್ಯಾಖ್ಯಾನಗಳು

## ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ:-

ಶ್ರೀಪರಮಾತ್ಮ ಸರ್ವಚೇಷ್ಟಕನೆಂತ ಹೇಳತಾರೆ

ವಿಷ್ಟರವೆಂಬ ಸಿಂಹಾಸನಾದಿ ಪದವಿಗಳನ್ನು ಕೊಡುವ (ಕೀರ್ತಿಉಳ್ಳ ದೇವರು) ಲಿಂಗ, ಅನಿರುದ್ಧ ದೇಹದಿಂದ ವಿಶಿಷ್ಟನಾಗಿ ಜೀವನಿಂದ ಸಹಿತನಾಗಿ,ಸ್ಥೂಲದೇಹದೊಳಗೆ ಪ್ರವೇಶ ಮಾಡಿದವನಾಗಿ,ಪ್ರತಿ ಕ್ಷಣ ಕಾಲದಲ್ಲೂ, ಅಸ್ವತಂತ್ರನಾದ ಪ್ರಕಾಶತೋವ್ಯಾಪ್ತನಾದ ಜೀವಾಧಿಷ್ಟಿತನಾಗಿ, ತದ್ದ್ವಾರಾ ಜಡಪ್ರಕೃತಿಯಿಂದ ನಿರ್ಮಿತವಾದ ಸ್ಥೂಲದೇಹೇಂದ್ರಿಯಾದಿಗಳಿಂದ ಒಂದೊಂದೂ ಇಂದ್ರಿಯ ದ್ವಾರಾ ಅನೇಕ ಪ್ರಕಾರವಾದ ಕಾರ್ಯಗಳು ಬಿಂಬ ಕ್ರಿಯಾದ್ವಾರಾ ಜೀವನು ಮಾಡುತ್ತಿರಲಾಗಿ, ದೇಹಾಂತರ್ಗತ ಜೀವನನ್ನೂ ಪರಮಾತ್ಮನನ್ನೂ ಕಾಣದೆ, ಪರಿದೃಶ್ಯಮಾನವಾದ ದೇಹವನ್ನು ನೋಡಿ, ಜೀವನಿಂದಲೂ, ಜೀವಶಬ್ದವಾಚ್ಯ ಪರಮಾತ್ಮನಿಂದಲೂ ಸಹಿತವಾಗಿ ದೇಹ ಬದುಕಿದೆ-ಎಂತ ಅನುತಿಹರು. ಈ ಪ್ರಕಾರ ದೇಹಧಾರಿಯಯದವನ ಸ್ಥೂಲ ದೇಹವ ನೋಡಿ ಸಂತೋಷ ಹೊಂದುವರು. ವಯಸ್ಸಿನಿಂದಲೂ, ಜ್ಞಾನದಿಂದಲೂ, ಜಾತಿ ಭೇದದಿಂದಲೂ ಅವರರಾದವರೆಲ್ಲರೂ ತಾರತಮ್ಯಾನುಸಾರ ಆ ಸ್ಥೂಲದೇಹಕ್ಕೆ ಸೇವಾ ಮಾಡುವರು. ದೇಹಗತವಾದ ಪರಮಾತ್ಮ ಜೀವನ್ನ ತೆಗೆದುಕೊಂಡು ದೇಹವನ್ನ ಬಿಟ್ಟು ಹೊರಗೆ ಬಂದ ಕ್ಷಣದಲ್ಲಿ, ಪೂರ್ವೋಕ್ತ ಸೇವಾ ಮಾಡತಕ್ಕ ಎಲ್ಲರೂ ಈ ಶರೀರ ಶವ, ಪ್ರಯೋಜನ ವಿಲ್ಲ- ಎಂತ ಅಂದವರಾಗಿ, ಆ ಶವಶರೀರವನ್ನು ಸಮೀಪದಲ್ಲಿ ಇದ್ದು ನೋಡೋವರಾಗತಾರೆ. ಅಷ್ಟೇ ಹೊರ್ತು, ಪೂರ್ವೋಪಾದಿಯಲ್ಲಿ ಸಂತೋಷಪಡೋಣವೂ, ಸೇವಾದಿಗಳು ಮಾಡೋಣವೂ ಇಲ್ಲಧೆ ಉಪೇಕ್ಷಾ ಮಾಡಿಬಿಡತಾರೆ.

**ತಾತ್ಪರ್ಯ :-** ಅಂತರ್ಗತನಾದ ಪರಮಾತ್ಮ ಇರೋವರಿಗೂ ಆ ದೇಹಕ್ಕೆ ಮರ್ಯಾದಾ. ಅನಂತರ ಇಲ್ಲ ಎಂಬುದು ಪ್ರಸಿದ್ಧವಾಯಿತು. ಆದ್ದರಿಂದ ಸರ್ವಮರ್ಯಾದಾ ಅಂತರ್ಗತನಾದ ಪರಮಾತ್ಮಗೆ ಸರ್ವರೂ ಮಾಡಿದ್ದಾಯಿತು, ದೇಹಕ್ಕೆ ಮಾಡಿದ್ದಾಗಲಿಲ್ಲ. ಇದರನ್ನ ಜ್ಞಾಪಕದಲ್ಲಿಟ್ಟುಕೊಂಡು ಅಂತರ್ಗತ ಪರಮಾತ್ಮನ ಸೇವಾ- ಎಂತ ಅನುಸಂಧಾನ ಮಾಡಿದರೆ, ಸರ್ವವೂ ಸಾರ್ಥಕವಾಗಿ ಫಲಪ್ರದವಾಗತದೆ- ಎಂತ ತಾತ್ಪರ್ಯ. ॥೨॥

**೨. ಭಾವಪ್ರಕಾಶಿಕೆ :-**

ಶ್ರೀಪರಮಾತ್ಮನು ದೇಹದೊಳಗಿದ್ದು, ನಾನಾವಿಧಕರ್ಮಗಳನ್ನು ಮಾಡಿಸುತ್ತಿದ್ದರೆ, ಇವನು ಭಾಗ್ಯವಂತನು, ವಿದ್ಯಾವಂತನೆಂದು ಆದರದಿಂದ ಹೆಂಡಿರು, ಮಕ್ಕಳು, ಸೇವಕ ಜನರು ಮೊದಲಾದವರು ಉಪಚರಿಸುತ್ತಿರುವರು. ಯಾವಾಗ ಪರಮಾತ್ಮನು ದೇಹವನ್ನು ಬಿಡುವನೋ,ಆಗಲೇ ಇವನು ಮೃತನಾದನೆಂದು ತಿಳಿದು ಹೆಂಡಿರು ಮಕ್ಕಳು ಸಹ ಇವನನ್ನು ನೋಡಲು ಹೆದರುವರು. ಆದ್ದರಿಂದ ಸ್ವತಂತ್ರನು ಪರಮಾತ್ಮನೇ ಹೊರತು ಜೀವನಲ್ಲವೆಂಬ ತಾತ್ಪರ್ಯ. ॥೨॥

**೩. ಭಾವದರ್ಪಣ :-**

ವಿಷ್ಟರಶ್ರವ ಇತಿ ॥ ವಿಷ್ಟರಶ್ರವಾಃ । ವಿಷ್ಟರೇ ಇವ ಶ್ರವಸಿ ಕರ್ಣೌ ಯಸ್ಯಸಃ । ವಿಷ್ಟರಸ್ರವಾಃ ದರ್ಭೆಮುಡೀ ಹಾಗೆ ಕಿವಿಗಳ ಉಳ್ಳವ ಎಂಬರ್ಥ. ಅಥವಾ ವಿಷ್ಟರಂ ವ್ಯಾಪನ ಶೀಲಂ ಶ್ರವಃ ಕೀರ್ತಿರ್ಯಸ್ಯ ಸಃ ಇತಿವಾ । ವ್ಯಾಪ್ತಶೀಲವಾದ ಕೀರ್ತಿಉಳ್ಳವ ಎಂಬರ್ಥ. ॥೨॥

**೪. ಶ್ರೀವ್ಯಾಸದಾಸ ಸ್ಥಿಂತ ಕೌಮುದೀ :-**

"ವಿಷ್ಟರಶ್ರವಾಃ" – ಸರ್ವವ್ಯಾಪೀ ಕೀರ್ತಿಮಾಂಶ್ಚ ॥೨॥

**ಕನ್ನಡಾರ್ಥ**

'ವಿಷ್ಟರಶ್ರವಾಃ' – ಸರ್ವತ್ರ ವ್ಯಾಪಿಸಿದವನು ಮತ್ತು ಸರ್ವತ್ರ ವ್ಯಾಪಿಸಿರುವ ಕೀರ್ತಿಯುಳ್ಳವನು. ॥೨॥

**೫. ಗುರುಹೃದಯಪ್ರಕಾಶಿಕೆ :-**

ವಿಷ್ಟರಶ್ರವನೆಂದರೆ, ವಿಷ್ಟರವೆಂಬ ಸಿಂಹಾಸನಾದಿ ಪದವಿಗಳನ್ನು ಕೊಡುವಂಥಾವನೆಂದು ಕೀರ್ತಿಯುಳ್ಳ ದೇವರು, ದೇಹದೊಳಗೆ ಪ್ರವಿಷ್ಟನಾಗಿ ಸದಾ ಬಹು ಚೇಷ್ಟೆಗಳೆಂಬ ಜೀವಕ್ರಿಯಾ ವ್ಯಕ್ತಿ ಮಾಡುತ್ತಾ ಇದ್ದರೆ, ನೋಡಿ ಈ ದೇಹವು ಸಜೀವವು ಎಂಬುವರು. ಆ ಜೀವನನ್ನು ನೋಡಿ ಸಂತೋಷಪಡುವರು. ಕನಿಷ್ಠರಾದವರೆಲ್ಲಾ ಅವನಿಗೆ ಸೇವೆ ಮಾಡುವರು. ದೇವರ ಸನ್ನಿಧಿ ತಪ್ಪಿದ ತಕ್ಷಣವೇ ಕುಣಪ-ಅಂದರೆ,ಶವವೆಂದು ಆ ದೇಹವನ್ನು ಉದಾಸೀನ ಮಾಡುವರು.

**ಪಚನಂ ಗಮನಂ ಭಕ್ಷ್ಯಂ ಭುಕ್ತಿರಿತ್ಯಾದಿ ಕರ್ಮಸು ।**
**ದೃಶ್ಯತೇ ಯತ್ನ ಸಾಧ್ಯತ್ವಂ ದೈವಂ ತತ್ರಾಪಿ ಚಿಂತಯೇತ್ ॥**
**ಕರ್ತುರಿತ್ಯಾ ವಿಖ್ಯಾತ್ಯಾದ್ಯೈರ್ಲಿಂಗೈ ಸಮ್ಯಗ್ವಿವೇಕಿನಾ ।**
**ಸ ಏವ ಜೀವಸ್ಸೋऽಪ್ಯತ್ರ ಸ್ವೇಚ್ಛಯಾನಾಪತಿಷ್ಠತೇ ॥**
**ಸ್ವೇಚ್ಛಯಾನ ಪ್ರಯಾತ್ಯಸ್ಮಾಜ್ಜೀವತೋऽಪಿ ಪರಾತ್ಮತಾಂ ।**
**ದೃಷ್ಟ್ವೈವಂ ಪರತಂತ್ರತ್ವ ಮಸ್ಯಜ್ಞೇಯಂ ವಿಪಶ್ಚಿತಾಂ ॥**
**ಸ ಏವ ಕ್ರೀಡನಾರ್ಥಾಯ ಜೀವಾನಾಂ ಗತಿ ಹೇತವೇ ।**
**ದೇಹಯೋಗೇನ ಸಂಸೃಜ್ಯ ತೇಷು ಚಾಪ್ಯವಿಶತ್ಸ್ವಯಂ ॥**

ಎಂಬುದರ ಅರ್ಥವಿವರಿಸಿತು. ॥೨॥

# ಸರ್ವವ್ಯಾಖ್ಯಾನಸಾರಸಂಗ್ರಹ

ವ್ಯಾಪ್ತಶೀಲನಾದ ಕೀರ್ತಿವಂತನಾದ ಶ್ರೀಪರಮಾತ್ಮಗೆ-ವಿಷ್ಟರವಶ್ರವ-ಎಂದು ಹೆಸರು. ದರ್ಭಿಮುಡೀ ಹಾಗೆ ಕಿವಿಗಳುಳ್ಳವನೆಂದರ್ಥ.

**"ವಿಷ್ಟರಂ ವ್ಯಾಪನಶೀಲಂ ಶ್ರವಃ ಕೀರ್ತಿರ್ಯಸ್ಯ ಸಃ ವಿಷ್ಟರವಶ್ರವಃ-** ಎಂಬ ಪದಪರಿಷ್ಕಾರದಂತೆ, ಸರ್ವತ್ರ ವ್ಯಾಪಿಸಿರುವ ಕೀರ್ತಿಯುಳ್ಳವನೆಂದರ್ಥ.

ಅಂತಹ ಕೀರ್ತಿವಂತನಾದ ಶ್ರೀಪರಮಾತ್ಮನು ಜೀವರ ಸ್ಥೂಲದೇಹದಲ್ಲಿ ಪ್ರವೇಶಿಸಿ, ಸ್ಥೂಲಶರೀರಾಂತರ್ಗತನಾಗಿ, ದೇಹಗತ ಸಕಲೇಂದ್ರಿಯಗಳ ದ್ವಾರಾ, ತತ್ತ್ವವ್ಯಾಪಾರಗಳನ್ನು ಬಿಂಬಕ್ರಿಯಾದ್ವಾರಾ ಮಾಡಿ ಮಾಡಿಸುತ್ತಿರುವನು.

ಲಿಂಗಾನಿರುದ್ಧಶರೀರ ಸಹಿತನಾದ ಜೀವನು ತನ್ನ ಸ್ಥೂಲದೇಹದಲ್ಲಿ ಆಪಾದ ಮೌಳಿ ಪರ್ಯಂತ ದೇಹಗತ ಸಕಲೇಂದ್ರಿಯಗಳಲ್ಲಿ ಪ್ರಕಾಶತೋ ವ್ಯಾಪ್ತನಾಗಿದ್ದಾನೆ. ಬಿಂಬರೂಪಿಯಾದ ಶ್ರೀಹರಿಯೇ ಸಮಸ್ತಇಂದ್ರಿಯ ವ್ಯಾಪಾರಗಳನ್ನು ಬಿಂಬಕ್ರಿಯಾ ದ್ವಾರಾ ತಾನೇ ಮಾಡಿ, ಇಂದ್ರಿಯಾಭಿಮಾನಿ ದೇವತೆಗಳ ದ್ವಾರಾ ಮಾಡಿಸುತ್ತಾ, ಸ್ಥೂಲಶರೀರದಲ್ಲಿ ಪ್ರಕಾಶತೋ ವ್ಯಾಪ್ತನಾದ ಜೀವನ ದ್ವಾರಾ ಮಾಡಿ ಮಾಡಿಸುವನು. ಈ ಕಾರಣದಿಂದ ದೇಹಧಾರಿಯಾದ ಆ ಜೀವನು **ಸಜೀವಿ ಎನಿಸುತಿಹನು.**

ಜೀವನ ಸ್ಥೂಲದೇಹದ ಚಲನವಲನಾದಿ ಕ್ರಿಯೆಗಳನ್ನು ನೋಡಿ, ಜನರು ಇವನು ಜೀವಂತನಾಗಿದ್ದಾನೆಂದು ತಿಳಿದು, ಸಂತೋಷಪಡುವರು ಆ ಜೀವನಿಗೆ ಆಪರರಾದ ಜನರು ನಾನಾ ಪ್ರಕಾರಗಳಲ್ಲಿ ಅವನ ಸೇವೆಯನ್ನು ಮಾಡುವರು. ದೇಹದಲ್ಲಿನ ಪ್ರಾಣಸಂಚಾರಕ್ಕೆ ಶ್ರೀಪರಮಾತ್ಮನ ಬಿಂಬ **ಕ್ರಿಯಾರೂಪವಾದ ವ್ಯಾಪಾರಾಭಿವ್ಯಕ್ತಿಯೇ ಮುಖ್ಯ ಕಾರಣವು.**

ಸರ್ವಚೇಷ್ಟಾಪ್ರವರ್ತಕನಾದ ಆ ಸರ್ವೇಶನು ಜೀವಸಹಿತನಾಗಿ ಸ್ಥೂಲಶರೀರವನ್ನು ಬಿಟ್ಟು ತೊಲಗಿದಾಕ್ಷಣ, ದೇಹಪತನವಾಗಿ, ಶವ ವೆನಿಸುವುದು. ಅಂತಹ ಮೃತದೇಹವನ್ನು ಕಂಡು, ಅದೇ ಬಂಧು ಬಾಂಧವ ಮಿತ್ರರು ಅದಕ್ಕೆ ಬೆಲೆಯನ್ನು ಕೊಡದೆ, ಉಪೇಕ್ಷಿಸಿ, ಶವಸಂಸ್ಕಾರಕ್ಕೆ ಅಣಿಯಾಗುವರು. ದೇಹಗತ ಜೀವನ ವ್ಯಾಪಾರಕ್ಕೆ ಸರ್ವಚೇಷ್ಟಾಪ್ರವರ್ತಕನಾದ ಶ್ರೀಪರಮಾತ್ಮನೇ ಮುಖ್ಯ ಕಾರಣನೆಂಬುದೇ ಪ್ರಸಕ್ತಪದ್ಯದ ತಾತ್ಪರ್ಯಾರ್ಥ. ॥೨॥

## ಪದ-೩

ಮೂಲ :–

ಕ್ರೀಡೆಗೋಸುಗ ಅವರಿವರ ಗತಿ ।
ನೀಡಲೋಸುಗ ದೇಹಗಳ ಕೊ ।
ಟ್ಟಾಡುವನು ಸ್ವೇಚ್ಛೆಯಲಿ ಬ್ರಹ್ಮಶಾದ್ಯರೊಳು ಪೊಕ್ಕು ॥
ಮಾಡುವನು ವ್ಯಾಪಾರ ಬಹುವಿಧ ।
ಮೂಢ ದೈತ್ಯರೊಳಿದ್ದು ಪ್ರತಿದಿನ ।
ಕೇಡುಲಾಭಗಳಿಲ್ಲವಿದನರಿ ಆವಕಾಲದಲಿ ॥ ॥೩॥

**ಅವತರಣಿಕೆ :**

ತ್ರಿವಿಧ ಜೀವರ ಗತಿಗಳನ್ನು ನೀಡುವುದೇ ಶ್ರೀಪರಮಾತ್ಮನ ಲೀಲಾ ರೂಪವಾದ ಜಗತ್ತಿನ ಸೃಷ್ಟ್ಯಾದಿ ಕ್ರೀಡೆಗಳ ಮುಖ್ಯೋದ್ದೇಶ. ನಿರಾ

ಯಾಸವಾಗಿ ಜಗದ್ವ್ಯಾಪಾರಗಳನ್ನು ಮಾಡುವ ಶ್ರೀಹರಿಯು ಸರ್ವಕರ್ಮ ಗಳಿಂದಲೂ ನಿರ್ಲಿಪ್ತನೆಂದು ತಿಳಿಸುತ್ತಾರೆ–**ಕ್ರೀಡೆಗೋಸುಗ**– ಎಂಬ ಪದ್ಯ ದಿಂದ. ॥೩॥

**ಪ್ರತಿಪದಾರ್ಥ :–**

**ಕ್ರೀಡೆಗೋಸುಗ** = ಜಗದ್ವ್ಯಾಪಾರರೂಪವಾದ ಕ್ರೀಡೆಗಳ ಉದ್ದೇಶ್ಯಾರ್ಥವಾಗಿ, **ಅವರವರ** = ತ್ರಿವಿಧಜೀವರ, **ಗತಿ** = ಸ್ವರೂಪ ಯೋಗ್ಯತಾನುಸಾರ ಗತಿಗಳನ್ನು, **ನೀಡಲೋಸುಗ** = ಕೊಡುವುದಕ್ಕೋ ಸ್ಕರ, **ದೇಹಗಳ** = ಲಿಂಗೋಪದಾನದಿಂದ ಅನಿರುದ್ಧ ಶರೀರಗಳೇನು,ಸಾಧನ ಶರೀರವಾದ ಸ್ಥೂಲದೇಹಗಳೇನು, **ಕೊಟ್ಟು** = ಸಕಲ ತ್ರಿವಿಧಜೀವರಿಗೆ ನೀಡಿ, **ಬ್ರಹ್ಮ** = ಚತುರ್ಮುಖಬ್ರಹ್ಮದೇವರು, **ಈಶಾದ್ಯರೊಳು** = ರುದ್ರಾದಿಗಳ ಸ್ಥೂಲಶರೀರಗಳಲ್ಲಿ, **ಪೊಕ್ಕು** = ಪ್ರವೇಶಮಾಡಿ, **ಸ್ವೇಚ್ಛೆಯಲಿ** = ತನ್ನ ಇಚ್ಛಾನುಸಾರ, **ಆಡುವನು** = ದೇಹಗತ ಇಂದ್ರಿಯ ಗಳ ದ್ವಾರಾ ಕರ್ಮರೂಪವಾದ ವ್ಯಾಪಾರಗಳನ್ನು ಮಾಡಿ ಮಾಡಿಸುತ್ತಾ ಸಂಚಾರ ಮಾಡುವನು. **ಬಹುವಿಧ** = ನಾನಾ ಪ್ರಕಾರವಾದ, **ವ್ಯಾಪಾರ** = ಜೀವರ ಸ್ವರೂಪಯೋಗ್ಯತೆ ಮತ್ತು ಅನಾದಿಕರ್ಮವನ್ನನ್ನುಸರಿಸಿ ಕ್ರಿಯಾವಿಶೇಷಗಳನ್ನು, **ಮಾಡುವನು** = ಬಿಂಬಕ್ರಿಯಾ ದ್ವಾರಾ ಮಾಡು ವನು. **ಮೂಢದೈತ್ಯರೊಳು** = ಅಜ್ಞಾನಸ್ವರೂಪರಾದ ದೈತ್ಯರಲ್ಲಿ (ಹಾಗೂ ನಿತ್ಯಸಂಸಾರಿಗಳಲ್ಲೂ), **ಇದ್ದು** = ಸ್ಥೂಲದೇಹಗತನಾಗಿದ್ದು, **ಪ್ರತಿದಿನ** = ಪ್ರತಿದಿನದಲ್ಲೂ **ಕಾರ್ಯಗಳನ್ನು** ಮಾಡಿ ಮಾಡಿಸುತ್ತಿರುವನು. **ಕೇಡು** = ತಮೋಯೋಗ್ಯರಿಗೆ ಆಗುವ ದುಃಖಾದಿಗಳಾಗಲೀ, **ಲಾಭಗಳು** = ಮುಕ್ತಿಯೋಗ್ಯರಿಗೆ ಆಗುವ ಆನಂದಾದಿ ಸುಖಗಳಾಗಲೀ, **ಇಲ್ಲ** = ಬಿಂಬನಾದ ಶ್ರೀಹರಿಗೆ ಸಂಬಂಧವಿಲ್ಲ (ನಿರ್ಲಿಪ್ತನು), **ಆವಕಾಲದಲಿ** = ಸದಾ ಸರ್ವಕಾಲಗಳಲ್ಲಿಯೂ, **ಇದನು ಅರಿ** = ಈ ತತ್ತ್ವವನ್ನು ತಿಳಿದುಕೋ. ॥೩॥

# ವ್ಯಾಖ್ಯಾನಗಳು

## ೧. ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ :-

ಜೀವರಿಗೆ ಸ್ಥೂಲದೇಹ ಕೊಡುವುದಕ್ಕೆ ಕಾರಣ ಹೇಳತಾರೆ.

ಅಸೃಜ್ಯರಾಶಿಗತರಾದ ಜೀವರಿಗೆ ಅವರವರ ಸ್ವರೂಪಗತಿಯನ್ನು ಕೊಡುವುದಕ್ಕೋಸ್ಕರವಾಗಿ, ಸ್ವರೂಪಗತಿಯನ್ನು ಐದಬೇಕಾದರೆ, ಅವರವರಿಗೆ ಅನಾದಿಯಿಂದ ಇರತಕ್ಕ, ಭೋಗದಿಂದ ನಾಶವಾಗತಕ್ಕ, ಅನಾದಿ ಪ್ರಾರಬ್ಧ ಕರ್ಮಭೋಗ ರೂಪವಾದ ಆಟಗಳ ಆಡೋದಕ್ಕೋಸ್ಕರ, ಅನಾದಿ ಲಿಂಗೋಪಾದಾನಂದಿಂದ ಅನಿರುದ್ಧ ಶರೀರವೇನು, ತದನ್ಯ ಮೂಲ ಜಡ ಪ್ರಕೃತಿಯಿಂದ ಸಂಸೃಷ್ಟ ಸ್ಥೂಲದೇಹವೇನು-ಈ ಪ್ರಕಾರ ಸರ್ವ ಪ್ರಾಣಿಗಳಿಗೆ ದೇಹಗಳ ಕೊಟ್ಟು, ಬ್ರಹ್ಮ ರುದ್ರ ಮೊದಲಾದ ತೃಣಾಂತ ತ್ರಿವಿಧಜೀವರ ಸ್ಥೂಲದೇಹದಲ್ಲಿ ಪ್ರವೇಶಮಾಡಿ, ಆಯಾ ಪ್ರಾಣಿಗಳ ದೇಹದಲ್ಲಿ ಅನ್ಯ ಪ್ರೇರಣೆ ಇಲ್ಲದೇನೆ ಪರಮಾತ್ಮ ತನ್ನ ಇಚ್ಛಾನುಸಾರ ತಾನು, ದೇಹೇಂದ್ರಿಯಾದಿಗಳಿಂದ ಕರ್ಮರೂಪವಾದ ವ್ಯಾಪಾರಗಳ ಮಾಡಿಸತಾ ದೇಹದಲ್ಲಿ ಸಂಚಾರ ಮಾಡುವನು. ಜೀವರು ಅನೇಕ ವಿಧರು. ಅವರವರ ಸ್ವರೂಪ ಯೋಗ್ಯತಾ ಅನೇಕ ವಿಧವಾದ್ದರಿಂದ ಆದರಂತೆ ಕರ್ಮವ್ಯಾಪಾರಗಳ ಬಹು ವಿಧವಾಗಿ ಇದ್ದದ್ದರನ್ನ ತನ್ನ ಕ್ರಿಯಾ ದ್ವಾರಾ, ವ್ಯಾಪ್ತನಾದ ಜೀವನ ದ್ವಾರಾ ಸ್ಥೂಲದೇಹೇಂದ್ರಿಯಾದಿಗಳಲ್ಲಿ ವ್ಯಕ್ತಮಾಡುವನು. ಇದು ಮುಕ್ತಿ ಯೋಗ್ಯರ ವಿಚಾರ. ಸ್ವರೂಪ ಸ್ವಭಾವವೇ ಅಜ್ಞಾನರೂಪವಾದ ದೈತ್ಯರಲ್ಲೂ ಪೂರ್ವೋಕ್ತ ಪ್ರಕಾರ ಬಹು ವಿಧ ಇರೋದಾಗಿ ಅದೆ. ಇದರಲ್ಲಿ ನಿತ್ಯ ಸಂಸಾರಿಗಳೂ ಅಂತರ್ಭೂತರು. ಇವರಲ್ಲೂ ಅದೇ ಪ್ರಕಾರ ಇರೋದಾಗಿ ಅದೆ. ಉಭಯವಿಧ ದೈತ್ಯಸಾಂಕೇತರಾದವರ ಸ್ಥೂಲದೇಹಗಳಲ್ಲಿ ಇದ್ದು ನಾನಾ ವಿಧ ಕರ್ಮಗಳ ಪ್ರತಿದಿನದಲ್ಲೂ ಮಾಡುವನು. ತಮೋಯೋಗ್ಯರಲ್ಲಿ ಇರತಕ್ಕ ಪರಮಾತ್ಮಗೆ ಆ ತಮೋಯೋಗ್ಯರಿಗೆ ಆಗತಕ್ಕ ದುಃಖಾದಿಗಳು ಏನು, ಮುಕ್ತಿಯೋಗ್ಯರಲ್ಲಿ ಇರತಕ್ಕ ಪರಮಾತ್ಮಗೆ ಆ ಮುಕ್ತಿಯೋಗ್ಯರಿಗೆ

ಆಗತಕ್ಕ ಸಂತೋಷಾದಿಗಳು ಏನು, ಇವೆರಡೂ ಅಲ್ಲಲ್ಲೇ ಇರತಕ್ಕ ಪರಮಾತ್ಮಗೆ ಸಂಬಂಧಿಸೋದಿಲ್ಲ. ಸ್ವಾನಂದಪೂರ್ಣನಾಗಿ ಇರತಕ್ಕಾದ್ದರಿಂದ ಸದಾ ಸರ್ವಕಾಲದಲ್ಲಿ ಇವನನ್ನ ತಿಳಿ. ಈ ಪ್ರಕಾರ ಅನುಸಂಧಾನ ಮಾಡಿ, ಭಗವದುಪಾಸನಾ ಮಾಡಬೇಕು ಎಂತ ತಾತ್ಪರ್ಯ.

ಪ್ರಮಾಣ :-

**ಸ ಏವ ಕ್ರೀಡನಾರ್ಥಾಯ ಜೀವಾನಾಂ ಗತಿ ಹೇತವೇ ।**

**ದೇಹಯೋಗೇನ ಸಂಸೃಜ್ಯ ತೇಷು ಚಾಪ್ಯವಿಶತ್ಸ್ವಯಂ ॥**

ಎಂತಲೂ, **ಸೋಽಯಂ ವಿಹಾರ ಇಹ ಮೇ ತನುಭೃತ್ಸ್ವಭಾವ ಸಂಭೂತಯೇ ಭವತಿ ಭೂತಿಕೃದೇವ ಭೂತ್ಯಾ** :- ಎಂಬುವ ತಾತ್ಪರ್ಯಾರ್ಥ ವಿವರಿಸಿತು. ॥೩॥

೨. **ಭಾವಪ್ರಕಾಶಿಕೆ :-**

ಜೀವರಿಗೆ ಸ್ಥೂಲದೇಹವನ್ನು ಕೊಡುವುದಕ್ಕೆ **ಸೃಷ್ಟಿ** ಎಂದು ಹೆಸರು. ಪೂರ್ಣಕಾಮನಾದ ಸ್ವಾಮಿಗೆ ಈ ಸೃಷ್ಟಿಯಿಂದೇನೂ ಪ್ರಯೋಜನವಿಲ್ಲ. ಇದೊಂದು ಲೀಲೆಯು. ಕರುಣಾಳುವಾದ ಶ್ರೀಹರಿಯು ಜೀವರ **ಯೋಗ್ಯ**ತಾನುಸಾರ ಗತಿಯನ್ನು ಕೊಡುವುದಕ್ಕಾಗಿಯೇ ಅವರಿಗೆ ಸ್ಥೂಲದೇಹವನ್ನು ಕೊಟ್ಟು, ತತ್ವೇಶರಾದ ಬ್ರಹ್ಮಾದಿದೇವತೆಗಳು, ಕಲಿ ಮೊದಲಾದ ದೈತ್ಯರು ಇವರುಗಳಲ್ಲಿದ್ದು, ಜೀವರು ಮಾಡಬೇಕಾದ ಪುಣ್ಯ ಪಾಪಾದಿ ಕರ್ಮಗಳ ಮಾಡಿಸಿ,ಅವರವರಿಗೆ ತಕ್ಕ ಗತಿಯನ್ನು ಕೊಡುವನು. ಇದರಿಂದ ಪರಮಾತ್ಮನಿಗೆ ಲಾಭವೂ ಇಲ್ಲ. ನಷ್ಟವೂ ಇಲ್ಲ, ॥೩॥

೩. **ಭಾವದರ್ಪಣ :-**

ಜೀವರಿಂದ ಏನೂ ಪ್ರಯೋಜನವಿಲ್ಲದಿದ್ದರೂ, ಅವರ ಉದ್ಧಾರಾರ್ಥ ದೇಹಗಳ ಕೊಟ್ಟು ಸಾಧನಮಾಡಿಸುವನೆಂದು ಹೇಳುತ್ತಾರೆ– ಕ್ರೀಡೆ ಗೋಸುಗ. ॥೩॥

**೪. ವ್ಯಾಸದಾಸ ಸಿದ್ಧಾಂತ ಕೌಮುದೀ :–**

ಸ ಏವ ಕ್ರೀಡನಾರ್ಥಾಯ ಜೀವಾನಾಂ ಗತಿ ಹೇತವೇ ॥ ದೇಹ ಯೋಗೇನ ಸಂಸೃಜ್ಯ ತೇಷು ಚಾಪ್ಯಾವಿಶತ್ ಸ್ವಯಂ ॥೨॥ ಇತ್ಯುಕ್ತ ಮಾಹ–"ಕ್ರೀಡೆ" ಇತಿ. ॥೩॥

## ಕನ್ನಡಾರ್ಥ

ಆ ಪರಮಾತ್ಮನೇ ಕ್ರೀಡೆಗೋಸುಗವಾಗಿಯೂ, ಜೀವರ ಗತಿಯಾಗುವುದಕ್ಕಾಗಿಯೂ, ಜೀವರನ್ನು ದೇಹವಿಂದ ಬಂಧನಗೊಳಿಸಿ, ಅವರಲ್ಲಿ ಹಾಗೂ ಅವರ ದೇಹಗಳಲ್ಲಿ ತಾನು ಸ್ವತಃ ಪ್ರವೇಶಿಸಿ ಇರಹತ್ತಿದನು. ಹೀಗೆ ಹೇಳಿದ ವಿಷಯವನ್ನು "ಕ್ರೀಡೆಗೋಸುಗ" ಈ ಪದ್ಯದಿಂದ ಹೇಳುತ್ತಾರೆ. ॥೩॥

**೫. ಶ್ರೀ ಗುರುಹೃದಯ ಪ್ರಕಾಶಿಕೆ :–**

ಕ್ರೀಡೆ-ಎಂಬ ಜಗಜ್ಜನ್ಮಾದಿ ವ್ಯಾಪಾರ ಮಾಡುವುದಕ್ಕೂ, ಜೀವರಿಗೆ ಅವರವರ ಸ್ವಯೋಗ್ಯತೆ ಕೊಡುವುದಕ್ಕೂ ಸಹ ದೇವರು ಸರ್ವಜೀವರಿಗೂ ದೇಹಗಳನ್ನು ಕೊಟ್ಟು, ಬ್ರಹ್ಮೇಶಾದಿ ತತ್ವಾಭಿಮಾನಿಗಳೊಳಗೂ ಪ್ರವಿಷ್ಟನಾಗಿ, ಮೂಢ ದೈತ್ಯರಲ್ಲಿಯೂ ಇದ್ದು, ಬಹುವಿಧ ಜೀವವ್ಯಾಪಾರವನ್ನು ಇದರಿಂದ ಅಂದರೆ, ಈ ಸರ್ವಜೀವಕ್ರಿಯಾ ವ್ಯಕ್ತಿಮಾಡುವುದರಿಂದ ದೇವರಿಗೆ ಕೇಡು ಲಾಭವೆಂಬ ಸುಖ ದುಃಖಗಳು ಎಂದಿಗೂ ಇಲ್ಲ.

**ಸೋಽಯಂ ವಿಹಾರ** ಇಹ **ಮೇ ತನುಭೃತ್ಸ್ವಭಾವಸ್ಸಂತಭೂತಯೋ ಭವತಿ ಭೂತಿಕೃದೇವಭೂತ್ಯಾಃ** ॥-ಎಂಬ **ನಿರ್ಣಯಾರ್ಥ** ವಿವರಿಸಿತು. ॥೩॥

# ಸರ್ವವ್ಯಾಖ್ಯಾನಸಾರಸಂಗ್ರಹ

ಶ್ರೀಹರಿಯು ಸ್ವಾನಂದಪೂರ್ಣನು. ಆದರೆ ಸಕಲಜೀವರೂ ಅವನ ಅಧೀನರು. ಅವರವರ ನಿಜಗತಿ ಪ್ರಾಪ್ತಿಯು ಶ್ರೀಹರಿಯ ಕಾರುಣ್ಯ ವಿಶೇಷದಿಂದಲೇ ಸಾಧ್ಯ. ಜಗದ್ವ್ಯಾಪಾರರೂಪವಾದ ಸೃಷ್ಟ್ಯಾದಿ ಕಾರ್ಯಗಳೇ **ಶ್ರೀಹರಿಯ ಲೀಲೆಯು.** ಇದರಿಂದ **ಕ್ರೀಡೆಗೋಸುಗ ಅವರವರ ಕತಿ ನೀಡಲೋಸುಗ** – ಎಂದಿದ್ದಾರೆ.

ಲಿಂಗಶರೀರವು ಕರ್ಮಶರೀರವು. ಅದರ ಮೇಲೆ ಅನಿರುದ್ಧಶರೀರವನ್ನು ಸೃಷ್ಟಿಸುವನು. ಇದು ಕಾರಣ ಶರೀರವು. ಜೀವನು ಹೊಂದುವ ನಾನಾಜನ್ಮಗಳ ಮೂಲವು ಅಂಕುರರೂಪದಲ್ಲಿ ಈ ದೇಹದಲ್ಲಿರುವುದು. ಸಾಧನೆಗಾಗಿ ಅದರ ಮೇಲೆ ಪ್ರತ್ಯಕ್ಷರೂಪವಾಗಿ ಕಾಣಿಸುವ ಸ್ಥೂಲಶರೀರವನ್ನು ಸೃಷ್ಟಿಸುವನು. ಇದನ್ನೇ ಜೀವರ ಸೃಷ್ಟಿ ಎನ್ನುತ್ತೇವೆ.

**ಪ್ರಮಾಣ :–**

**೧. "ಸ ಏವ ಕ್ರೀಡನಾರ್ಥಾಯ ಜೀವಾನಾಂ ಗತಿ ಹೇತವೇ ।"**
**ದೇಹಯೋಗೇನ ಸಂಸೃಜ್ಯ ತೇಷು ಚಾಪ್ಯಾವಿಶತ್ ಸ್ವಯಮ್ ॥**

**"ಸೋಽಯಂ ವಿಹಾರ ಇಹ ಮೇ ತನುಭೃತ್ಸ್ವಭಾವ ಸಂಭೂತಯೇ ಭವತಿ ಭೂತಿಕೃದೇವ ಭೂತ್ಯಾಃ ॥"**

**–ಎಂಬ ನಿರ್ಣಯ ವಚನ.**

ಜೀವರನ್ನು ಇಂತು ಸೃಷ್ಟಿಸಿ, ಜಗತ್ತೆಂಬ ವಿಶಾಲವಾದ ಕ್ರೀಡಾ ಕ್ಷೇತ್ರದಲ್ಲಿ ಬಿಡುವನು. ಸಕಲ ಜೀವರಲ್ಲಿ ಅಂತರ್ಯಾಮಿಯಾಗಿ, ಬಿಂಬ ರೂಪದಿಂದ ಇದ್ದು, ಬ್ರಹ್ಮ, ರುದ್ರಾದಿ ತತ್ತ್ವಾಭಿಮಾನಿದೇವತೆಗಳಲ್ಲಿ ಪ್ರವಿಷ್ಟನಾಗಿ, ಸಕಲತತ್ತ್ವ ವ್ಯಾಪಾರಗಳನ್ನು ತಾನೇ ಬಿಂಬಕ್ರಿಯಾ ದ್ವಾರಾ ಮಾಡುವನು. ಇಂದ್ರಿಯಾಭಿಮಾನಿ ದೇವತೆಗಳ ದ್ವಾರಾ ಮಾಡಿಸು ವನು. ಜೀವನು ಲಿಂಗಾನಿರುದ್ಧ ದೇಹಸ್ಥನಾಗಿ, ಸ್ಥೂಲಶರೀರಗತ ಸಕಲ ಇಂದ್ರಿಯಗಳಲ್ಲಿಯೂ ಪ್ರಕಾಶತೋವ್ಯಾಪ್ತನಾಗಿರುವನು. ಆ ಜೀವನ ದ್ವಾರಾ ಕರ್ಮಗಳನ್ನು ಮಾಡಿ ಮಾಡಿಸಿ, ತಜ್ಜನ್ಯಫಲವಿಶೇಷಗಳನ್ನು ಜೀವನ ಅನುಭವಕ್ಕೆ ತಂದೀಯುವನು. ಇದರಿಂದ ಕರ್ಮಫಲಾನುಭವ. ತದ್ವಾರಾ ಹಂತ ಹಂತವಾಗಿ ಅನಾದಿಕರ್ಮದ ಅಪಕರ್ಷ. ಇದೇ ಲೀಲಾ ವಿನೋದನಾದ ಶ್ರೀಹರಿಯ ಕ್ರೀಡೆಯು. ಇದರಿಂದ ಜೀವರ ಉದ್ಧಾರ.

ಬ್ರಹ್ಮಾದಿ ಮುಕ್ತಿಯೋಗ್ಯರಲ್ಲಿದ್ದಂತೆ, ಕಲ್ಯಾದಿ ತತ್ತ್ವಾಭಿಮಾನಿ ದೈತ್ಯರಲ್ಲಿಯೂ ಇದ್ದು, ದೇವತೆಗಳ ಸಾನ್ನಿಧ್ಯ ದ್ವಾರಾ, ಅವರ ಮೂಲಕ ದುಷ್ಟವ್ಯಾಪಾರಗಳನ್ನು ಮಾಡಿ ಮಾಡಿಸುವನು. ತಜ್ಜನ್ಯವಾದ ಪಾಪ ಫಲಾನುಭೋಗ ಜೀವನಿಗೆ. ಇದೇ ಕರ್ಮದ ಮರ್ಮವು. ನಿತ್ಯಸಂಸಾರಿ ಗಳೂ ಇದರಲ್ಲಿ ಅಂತರ್ಭೂತರು.

ಬ್ರಹ್ಮಾದಿ ತೃಣಾಂತ ಸಕಲ ಮುಕ್ತಿಯೋಗ್ಯಚೇತನರಲ್ಲಿದ್ದು, ಕರ್ಮಾ ಭಿವ್ಯಕ್ತಿ ಮಾಡಿಸಿದರೂ, ಅವರಿಗೆ ಪ್ರಾಪ್ತವಾಗುವ ಆನಂದಾನುಭವ ಶ್ರೀ ಹರಿಗಿಲ್ಲ. ಆ ಕರ್ಮಫಲಗಳಿಂದ ನಿರ್ಲಿಪ್ತನು. ಲಾಭಗಳಿಲ್ಲ.

ದೈತ್ಯರು ಅಜ್ಞಾನಸ್ವರೂಪರು. ಇದರಿಂದ **ಮೂಢ ದೈತ್ಯರೊಳಿದ್ದು** ಎಂದಿದ್ದಾರೆ. ಅವರ ದ್ವಾರಾ ಪಾಪಕಾರ್ಯಗಳನ್ನು ಮಾಡಿಸಿದ್ದಾಗ್ಯೂ,

ಜಗದ್ವಿಲಕ್ಷಣನಾದ ಜಗದೀಶನಿಗೆ ಪಾಪ ಫಲಗಳ ಸಂಪರ್ಕವಿಲ್ಲ. **ಕೇಡು ಇಲ್ಲ** ಈ ರೀತಿಯಾದ ಆತನ ಮಹಾಮಹಿಮೆಗಳನ್ನು ಸದಾ ಸರ್ವಕಾಲಕ್ಕೂ ಜ್ಞಾನಾನುಸಂಧಾನ ಪೂರ್ವಕ ತಿಳಿದು, ಅವನನ್ನು ಭಜಿಸಬೇಕೆಂದು ತಿಳಿಸುತ್ತಾರೆ. ॥೩॥

## ಪದ್ಯ—೪

**ಮೂಲ:–**

**ಅಕ್ಷರೇಡ್ಯನು ಬ್ರಹ್ಮ ವಾಯು ।**
**ತ್ರ್ಯಕ್ಷ ಸುರಪ ಸುರಾಸುರರೊಳ ।**
**ಅಧ್ಯಕ್ಷನಾಗಿದ್ದೆಲ್ಲರೊಳು ವ್ಯಾಪಾರ ಮಾಡುತಿಹ ॥**
**ಅಕ್ಷಯನು ಸತ್ಯಾತ್ಮಕ ಪರಾ ।**
**ಪೇಕ್ಷೆಯಿಲ್ಲದೆ ಸರ್ವರೊಳಗೆ ವಿ ।**
**ಲಕ್ಷಣನು ತಾನಾಗಿ ಲೋಕವ ರಕ್ಷಿಸುತಲಿಪ್ಪ ॥ ॥೪॥**

**ಅವತರಣಿಕೆ :–**

ಚತುರ್ವಿಧನಾಶರಹಿತನಾದ, ಶಾಶ್ವತರೂಪೀ ಶ್ರೀಪರಮಾತ್ಮನು ಬ್ರಹ್ಮಾದಿ ಸಕಲ ದೇವತಾಂತರ್ಗತನಾಗಿದ್ದುಕೊಂಡು, ದೈತ್ಯರಲ್ಲೂ ಅಂತಸ್ಥಿತನಾಗಿ, ಸರ್ವವ್ಯಾಪಾರಗಳನ್ನು ಪರಾಪೇಕ್ಷರಹಿತನಾಗಿ ಮಾಡುತ್ತಾ, ಸಕಲ ಲೋಕಗಳನ್ನು ಸ್ವಯಂ ಸಂರಕ್ಷಿಸುತ್ತಾನೆಂದು ತಿಳಿಸುತ್ತಾರೆ–ಅಕ್ಷರೇಡ್ಯನು–ಎಂಬ ೪ ನೆಯ ಈ ಪದ್ಯದಿಂದ. ॥೪॥

**ಪ್ರತಿಪದಾರ್ಥ :-**

**ಅಕ್ಷರ** = ಅಕ್ಷರನಾಮಕಳಾದ ಶ್ರೀಲಕ್ಷ್ಮೀದೇವಿಯಿಂದ, **ಈಡ್ಯನು** = ಸಂಸ್ತುತ್ಯಮಾನನಾದ ಶ್ರೀಪರಮಾತ್ಮನು, **ಬ್ರಹ್ಮ** = ಬ್ರಹ್ಮದೇವರು, **ವಾಯು** = ವಾಯುದೇವರು, **ತ್ರ್ಯಕ್ಷ** = ತ್ರಿನೇತ್ರರಾದ ಶ್ರೀರುದ್ರದೇವರು, **ಸುರಪ** = ದೇವಾಧಿಪನಾದ ಇಂದ್ರದೇವರು, **ಸುರ** = ಇವರೇ ಆದಿಯಾಗಿ ಸಮಸ್ತತೃಣಾಂತ ದೇವತೆಗಳಲ್ಲಿ, **ಅಸುರರೊಳು** = ಕಲ್ಯಾದಿ ತೃಣಾಂತ ಸಮಸ್ತದೈತ್ಯರಲ್ಲಿ (ನಿತ್ಯಸಂಸಾರಿಗಳೂ ಗ್ರಾಹ್ಯ), **ಅಧ್ಯಕ್ಷನಾಗಿ** = ಯಜಮಾನನಾಗಿ (ತ್ರಿವಿಧಜೀವರಿಗೂ ನಿಯಾಮಕನಾಗಿ), **ಇದ್ದು** = ಬಿಂಬನಾಗಿದ್ದು, **ಎಲ್ಲರೊಳು** = ಸಕಲ ತ್ರಿವಿಧ ಜೀವರಲ್ಲಿಯೂ, **ವ್ಯಾಪಾರ ಮಾಡುತಿಹ** = ಸ್ಥೂಲದೇಹಗತ ಸಕಲ ಇಂದ್ರಿಯಗಳ ದ್ವಾರಾ ಕ್ರಿಯಾದಿಗಳನ್ನು ಮಾಡಿ ಮಾಡಿಸುತ್ತಿರುವನು, **ಅಕ್ಷಯನು** = ಚತುರ್ವಿಧನಾಶರಹಿತನಾದ ಶಶ್ವದೇಶಪ್ರಕಾರನಾದ ಶ್ರೀಹರಿಯು, **ಸತ್ಯಾತ್ಮಕ** = ಸತ್ಯಸಂಕಲ್ಪನು, **ಪರಾಪೇಕ್ಷೆ ಇಲ್ಲದೆಲೆ** = ಅನ್ಯರಾದ ರಮಾ ಬ್ರಹ್ಮಾದಿಗಳಾದ ಯಾವ ಸಹಾಯವನ್ನು ಅಪೇಕ್ಷಿಸದೆ, ಸರ್ವತಂತ್ರಸ್ವತಂತ್ರನಾಗಿ, **ಸರ್ವರೊಳಗೆ** = ಸಕಲಜೀವರಲ್ಲಿ, **ವಿಲಕ್ಷಣನು ತಾನಾಗಿ** = ಜೀವ ಜಡರಿಂದ ಅತ್ಯಂತ ಭಿನ್ನನಾಗಿ, **ಲೋಕವ ರಕ್ಷಿಸುತಲಿಪ್ಪ** = ಲೋಕಗತ ಜೀವರನ್ನು ಸಂರಕ್ಷಿಸುತ್ತಾನೆ. ॥೪॥

## ವ್ಯಾಖ್ಯಾನಗಳು

### ೧. ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ

ಶ್ರೀಪರಮಾತ್ಮ ಲೋಕ ರಕ್ಷಿಸತಾನೆ-ಅಂತ ಹೇಳತಾರೆ.

ಮೂಲ ಜಡಪ್ರಕೃತ್ಯಾತ್ಮಕ ತ್ರಿಗುಣಜನ್ಯ ಸ್ಥೂಲದೇಹದಿಂದ ನಾಶವಿಲ್ಲದಂಥ, ಇನ್ನೂ ಅನಾದ್ಯನಂತಕಾಲಕ್ಕೂ ಶಶ್ವದೇಕಪ್ರಕಾರವಾಗಿ ನಿತ್ಯ

ಯಹೌವನೆಯುರಾದ ಶ್ರೀಲಕ್ಷ್ಮೀದೇವೇರಿಂದ ಸ್ತುತ್ಯನಾದ ಶ್ರೀಪರಮಾತ್ಮನು, ಬ್ರಹ್ಮದೇವರು, ವಾಯುದೇವರು, ತ್ರಿನೇತ್ರವುಳ್ಳವರು ರುದ್ರದೇವರು, ಇಂದ್ರದೇವರು, ದೇವತೆಗಳು (ಸುರ-ಶಬ್ದದಿಂದ ತೃಣಾಂತ ಮುಕ್ತಿಯೋಗ್ಯ ಜೀವರೂನೂ), ಅಸುರ ಶಬ್ದದಿಂದ ತೃಣಾಂತ ದೈತ್ಯರು, ನಿತ್ಯಸಂಸಾರಿಗಳು, ಈ ತ್ರಿವಿಧ ಸಮೂಹಗಳಲ್ಲಿ ಯಜಮಾನನಾಗಿ, ಎಲ್ಲಾ ಜೀವರ ಸ್ವರೂಪದೊಳಗೆ ಅವರ ಸ್ಥೂಲದೇಹದೊಳಿಗೂ ಬಿಂಬನಾಗಿ ಇದ್ದು, ಸ್ವರೂಪದಲ್ಲಿ ಜೀವರಿಗೆ ಇಚ್ಛಾರೂಪವಾದ ವ್ಯಾಪಾರ, ಸ್ಥೂಲದೇಹದಲ್ಲಿ ಇಂದ್ರಿಯಾದಿಗಳಲ್ಲಿ ಕ್ರಿಯಾರೂಪ ವ್ಯಾಪಾರ. ಜೀವರ ಕಡಿಯಿಂದ ಮಾಡಿಸೋ ನಿಮಿತ್ತ ಆದಿಯಲ್ಲಿ ತಾನು ಕ್ರಿಯಾ ಮಾಡಿ ತದ್ವಾರಾ, ಜೀವರ ದ್ವಾರಾ, ದೇಹೇಂದ್ರಿಯಾದಿಗಳಿಂದ ಮಾಡಸತಾ ಇರೋವನಾಗಿದ್ದಾನೆ. ಮೂಲ ಜಡಪ್ರಕೃತ್ಯಾತ್ಮಕ ತ್ರಿಗುಣಜನಿತ ಸ್ಥೂಲದೇಹದಿಂದ ನಾಶವಿಲ್ಲದಂಥ, ಇನ್ನೂ ಅನಾದ್ಯನಂತಕಾಲಕ್ಕೂ ಶಶ್ವದೇಕಪ್ರಕಾರನಾಗಿ ಇರುವ (ಸೂರ್ಯನ ಪ್ರಭಾವದಿಂದ ಚಂದ್ರನ ಪ್ರಭಾ ನಾಶ ಎನಿಸಿದಂತೆ, ನಾಶ ರಹಿತವಾದ ಪ್ರಭಾ ಉಳ್ಳವನು), ಸತ್ಯವಾದ ವ್ಯವಸ್ಥೆಯುಳ್ಳವನು. ಅನ್ಯರಾದ ಬ್ರಹ್ಮಾದಿಗಳ ಸಹಾಯ ಇಲ್ಲದೆ ಸ್ವತಂತ್ರನಾಗಿ ಸರ್ವವ್ಯಾಪಾರಗಳ ಸಮಸ್ತರಲ್ಲಿ, ಸರ್ವಜೀವ ಸ್ವರೂಪದಲ್ಲಿ ಜೀವಾಪೇಕ್ಷಯಾದ ವಿಲಕ್ಷಣನು. ವಿಶೇಶಾಕಾರ ಎಂದರೆ ತತ್ತ್ವೇಶರ ಲಕ್ಷಣನು ತನಗೆ ತಾನೇ ಆಗಿ, ಜೀವರ ಸಮುದಾಯುವ, ಅವರವರ ಅನಾದಿ ಸ್ವರೂಪಯೋಗ್ಯತಾನುಸಾರ, ಅನಾದಿಕರ್ಮಾನುಸಾರ ರಕ್ಷಿಸತ, ಜೀವ ದೇಹಗಳಿಗೆ ಬಿಂಬನಾಗಿ ಇದ್ದಾನೆ-ಎಂತ ತಾತ್ಪರ್ಯ. ॥೪॥

## ೨. ಭಾವಪ್ರಕಾಶಿಕೆ :–

ಅಕ್ಷರನಾಮಕರಾದ ಲಕ್ಷ್ಮೀದೇವಿಯರಿಂದ ಸ್ತುತ್ಯನಾದ, ನಾಶರಹಿತನಾದ, ಉತ್ತಮಾನಂದ ಜ್ಞಾನಾತ್ಮಕನಾದ ಶ್ರೀಹರಿಯು ಪರಾಪೇಕ್ಷೆಯಿಲ್ಲದೆ ಬ್ರಹ್ಮ ರುದ್ರಾದಿ ಸಮಸ್ತದೇವತೆಗಳಲ್ಲೂ ಇದ್ದು, ಸಕಲಕರ್ಮಗಳನ್ನೂ ಮಾಡುವನು. ಅಂದರೆ, ಬ್ರಹ್ಮದೇವರೊಳಗಿದ್ದು ಸೃಷ್ಟಿಮಾಡುವನು.

ರುದ್ರದೇವರಲ್ಲಿದ್ದು ಸಂಹಾರ ಮಾಡುವನು. ಇಂದ್ರನೊಳಗಿದ್ದು ಸ್ವರ್ಗ ವನ್ನು ಪಾಲಿಸುವನು. ಹೀಗೆ ಸ್ವತಂತ್ರನಾಗಿ ಎಲ್ಲರಲ್ಲಿ ಇದ್ದರೂ, ಜಗದ್ವಿಲಕ್ಷಣನಾಗಿ ಸರ್ವಜಗತ್ತನ್ನೂ ರಕ್ಷಿಸುವನು. ॥೪॥

**೩. ಭಾವದರ್ಪಣ :**

ಅಕ್ಷರೇತಿ । ಅಕ್ಷರೇಡ್ಯ–ಲಕ್ಷ್ಮೀಯಿಂದ ಸ್ತುತ್ಯನಾದ, ತ್ರ್ಯಕ್ಷ– ರುದ್ರ ಅಕ್ಷಯ–ನಾಶರಹಿತ, ॥೪॥

**೪. ಶ್ರೀವ್ಯಾಸದಾಸ ಸಿದ್ಧಾಂತ ಕೌಮುದೀ :–**

"ಅಕ್ಷರ" ಇತಿ ॥ ರಮಾಸ್ತುತ್ಯ ॥ "ಸುಸತ್ವ" – "ಬಲಜ್ಞಾನ ಸಮಾಹಾರಃ" ಸತ್ವಮ್. ॥೪॥

**ಕನ್ನಡಾರ್ಥ**

"ಅಕ್ಷರೇಡ್ಯ" –ರಮಾದೇವಿಯರಿಂದ ಸ್ತೋತ್ರಮಾಡಿಸಿಕೊಳ್ಳುವವ. "ಸುಸತ್ವ" – ಬಲ ಜ್ಞಾನಗಳ ಸಮಾವೇಶವೇ ಸತ್ವ. ಒಳ್ಳೆಯ ಸತ್ವ ಉಳ್ಳವನು. ॥೪॥

**೫. ಶ್ರೀಗುರುಹೃದಯಪ್ರಕಾಶಿಕೆ :–**

ಅಕ್ಷರಳೆಂಬ ರಮಾಸಂಸ್ತುತ ದೇವರು. ಬ್ರಹ್ಮ ವಾಯು ತ್ರ್ಯಕ್ಷನೆಂಬ ರುದ್ರ, ಸುರಪನೆಂಬ ಇಂದ್ರ ಮೊದಲಾದ ದೇವತೆಗಳಲ್ಲಿಯೂ, ಅಸುರರಲ್ಲಿಯೂ ಸಹ ಅಧ್ಯಕ್ಷನೆಂಬ ನಿಯಾಮಕನಾಗಿದ್ದು, ಎಲ್ಲಾ ವ್ಯಾಪಾರವ್ಯಕ್ತಿ ಮಾಡುವನು. ಅಕ್ಷರನೆಂಬ ನಾಶರಹಿತನು. ಸತ್ಯಾತ್ಮಕನೆಂಬ ಜಗದ್ವ್ಯಾಪ್ತನು. ಇತರರ ಸಹಾಯ ಅಪೇಕ್ಷಿಸದೆ, ಸರ್ವರಲ್ಲಿಯೂ ವಿಲಕ್ಷಣನೆಂಬ ಭೇದವುಳ್ಳವನಾಗಿದ್ದು, ಜಗತ್ತನ್ನು ರಕ್ಷಿಸುವನು. ॥೪॥

# ಸರ್ವವ್ಯಾಖ್ಯಾನಸಾರಸಂಗ್ರಹ

ದೇಹನಾಶವಿಲ್ಲದಿರುವ ಶ್ರೀಲಕ್ಷ್ಮೀದೇವಿಗೆ **ಅಕ್ಷರಳೆಂದು** ಹೆಸರು. ಮೂಲ ಜಡಪ್ರಾಕೃತ್ಯಾತ್ಮಕ ತ್ರಿಗುಣಜನ್ಯ ಸ್ಥೂಲದೇಹವು ಲಕ್ಷ್ಮೀದೇವಿಗಿಲ್ಲ. ಆ ದೇಹವು ನಾಶ ಉಳ್ಳದ್ದು. "ಕ್ಷರ" – ಎಂದರೆ ನಾಶವನ್ನು ಹೊಂದುವ ಗುಣವುಳ್ಳವನೆಂದರ್ಥ. ಅನಾದ್ಯನಂತಕಾಲಕ್ಕೂ ಶಶ್ವದೇಕ ಪ್ರಕಾರಳಾಗಿ, ನಿತ್ಯ ಯೌವ್ವನೆಯಾಗಿರುವ, ನಿತ್ಯಮುಕ್ತಳು ನಿರ್ವಾಕಾರಳೂ ಆದ ಶ್ರೀ ರಮಾ ಅಕ್ಷರನಾಮಕಗಳು. ಅಂತಹ ಲಕ್ಷ್ಮೀದೇವಿಯಿಂದ ಸದಾ ಸಂಸ್ತುತ್ಯನಾದ ಶ್ರೀಹರಿಯು **ಅಕ್ಷರೇಡ್ಯನು.** (ಅಕ್ಷರ = ಅಕ್ಷರನಾಮಕಳಾದ ಲಕ್ಷ್ಮೀಯಿಂದ. **ಈಡ್ಯ** = ಸಂಸ್ತುತ್ಯಮಾನನಾದವನು.)

ಇನ್ನು ಜೀವಕೋಟಿಪ್ರವಿಷ್ಟರಾದ ಚತುರ್ಮುಖ ಬ್ರಹ್ಮದೇವರು, ಶ್ರೀ ವಾಯುದೇವರು, ತ್ರಿನೇತ್ರರಾದ ಶ್ರೀ ರುದ್ರದೇವರು, **ತ್ರ್ಯಕ್ಷ**– ತ್ರಿ + ಅಕ್ಷ = ಮೂರು ಕಣ್ಣುಳ್ಳ ಮುಕ್ಕಣ್ಣ, ದೇವಾಧಿಪತಿಯಾದ ಶ್ರೀ ಇಂದ್ರದೇವರು **ಸುರಪ**– ಇವರೇ ಮೊದಲಾಗಿ ತೃಣಾಂತ ಸಕಲಮುಕ್ತಿಯೋಗ್ಯಚೇತನರಲ್ಲಿ ಶ್ರೀಹರಿಯು ಬಿಂಬನಾಗಿ ವಿರಾಜಮಾನನಾಗಿದ್ದಾನೆ.

ಅಂತೆಯೇ ಕಲ್ಯಾದಿ ತೃಣಾಂತ ಸಮಸ್ತದೈತ್ಯರಲ್ಲಿ ಅಂತಸ್ಥಿತನಾಗಿದ್ದಾನೆ. ಇದರಿಂದ ಪುರಂಜನಾದಿ ತೃಣಾಂತ ಸಕಲ ನಿತ್ಯಸಂಸಾರಿಜೀವರೂ ಗ್ರಾಹ್ಯ.

ಇಂತು ದೇವ, ದಾನವ, ಮಾನವರೆಂಬ ಸಮಸ್ತ ವಿಧವಾದ ತ್ರಿವಿಧ ಜೀವರಲ್ಲಿ ಅಂತರ್ಯಾಮಿಯಾಗಿದ್ದು, ಅವರವರ ಸ್ಥೂಲದೇಹಗತ ಇಂದ್ರಿಯಾಗಳ ದ್ವಾರಾ, ಶ್ರೀ ಭಾರತೀರಮಣರ ಸಹಿತ, ತತ್ತ್ವದೇವ ದೈತ್ಯರ ದ್ವಾರಾ ಸಕಲ ಶುಭ, ಮಿಶ್ರ, ಅಶುಭ ಕರ್ಮರೂಪವಾದ ಸಕಲ **ವ್ಯಾಪಾರಗಳನ್ನು ಮಾಡುತ್ತಿದ್ದಾನೆ.**

ಸರ್ವಜೀವರಿಗೂ ಪ್ರಭುವಾಗಿ ಸಕಲಕ್ರಿಯಾನಿರ್ವಾಹಕನಾಗಿ, ನಿಯಾಮಕನಾಗಿರುವುದರಿಂದ ಸಮಸ್ತ ಜೀವರಾಶಿಗಳಿಗೆ ಅವನೇ **ಅಧ್ಯಕ್ಷನು.** ಇಂತ ಪರಮಾತ್ಮನು ಕ್ಷಯರಹಿತನು.

ಚತುರ್ವಿಧನಾಶರಹಿತನು. ಶಶ್ವದೇಕಪ್ರಕಾಶನು. ಅನಾದ್ಯನಂತ ಕಾಲದಿಂದಲೂ ನಿತ್ಯನು. ಇಂತಹ ಶಾಶ್ವತರೂಪೀ ಶ್ರೀಪರಮಾತ್ಮನು **ಅಕ್ಷಯನು** (ಕ್ಷಯರಹಿತನು).

ಅವನಿಂದ ಸೃಷ್ಟವಾದ ಜಗತ್ತು ಸತ್ಯಭೂತವಾದದ್ದು. ಅವನ ಜಗದ್ವ್ಯಾಪಾರ ರೂಪವಾದ ಸಕಲ ವ್ಯವಸ್ಥಾಕ್ರಮ ಸತ್ಯವಾದುದು. ಅವನು **ಸತ್ಯಸಂಕಲ್ಪನು.** ಸತ್ಯವೇ ಸ್ವರೂಪಧರ್ಮವನ್ನಾಗಿ ಉಳ್ಳವನು.

ನಿತ್ಯಾವಿಯೋಗಿಯಾದ ಶ್ರೀಲಕ್ಷ್ಮೀಯಿಂದಲೇ ಅವನಿಗೆ ಆಗಬೇಕಾದುದೇನೂ ಇಲ್ಲ. ನಿತ್ಯಾನಂದಉದ್ರಿಕ್ತನು. ಸ್ವಾನಂದ ಪರಿಪೂರ್ಣನು. ಇದರಿಂದ **ಪರಾಪೇಕ್ಷರಹಿತನು.** ಸ್ವಯಂ ಸರ್ವತಂತ್ರಸ್ವತಂತ್ರನಾಗಿ ಸಕಲ ಕಾರ್ಯಗಳನ್ನು ನಿರ್ವಹಿಸುವ ಅಸಮಪರಾಕ್ರಮಿಯು.

ತ್ರಿವಿಧಜೀವರಲ್ಲಿ ಬಿಂಬರೂಪದಿಂದ ಅಂತರ್ಯಾಮಿಯಾಗಿದ್ದರೂ, ಸಕಲಜೀವರಿಂದ ಅತ್ಯಂತ ಭಿನ್ನನು. ಸಕಲ ಜಡವಸ್ತುಗಳಲ್ಲಿ ಕಣ ಕಣಗಳಲ್ಲಿ ವ್ಯಾಪಿಸಿದ್ದರೂ, ಜಡಗಳಿಂದ ಅತ್ಯಂತ ವಿಲಕ್ಷಣನು. ಹೀಗೆ ಸರ್ವಗತವಾಗಿದ್ದರೂ **ಜಗದ್ವಿಲಕ್ಷಣನು.** ಜೀವಕೃತ ಕರ್ಮಗಳ ಫಲ ಸಂಬಂಧ **ಅವನಿಗಿಲ್ಲ.** ॥೪॥

ಅಂತಹ ಸರ್ವ ತಂತ್ರಸ್ವತಂತ್ರನಾದ ಸ್ವರಮಣನು ಸಮಗ್ರಜಗತ್ತನ್ನೂ ತಾನೇ ಸ್ವೇಚ್ಛೆಯಿಂದ ಸೃಷ್ಟಿಸಿ, ಅದರ ಪಾಲನಕಾರ್ಯ ಮಾಡುವನು. **ಅವನೇ ಸೃಷ್ಟ್ಯಾದ್ಯಷ್ಟಕರ್ತನು.** ॥೪॥

## ಪದ್ಯ-೫

**ಮೂಲ :-**

**ಶ್ರೀ ಸರಸ್ವತಿ ಭಾರತೀ ಗಿರಿ ।**
**ಜಾ ಶಚೀ ರತಿ ರೋಹಿಣಿ ಸಂ ।**
**ಜ್ಞಾ ಶತರೂಪಾದ್ಯಖಿಳ ಸ್ತ್ರೀಯರೊಳು ಸ್ತ್ರೀರೂಪ ॥**
**ವಾಸವಾಗಿದ್ದೆಲ್ಲರಿಗೆ ವಿ ।**
**ಶ್ವಾಸ ತನ್ನಲಿ ಕೊಟ್ಟು ಅವರಭಿ ।**
**ಲಾಷೆಗಳ ಪೂರೈಸುತಿಪ್ಪನು ಯೋಗ್ಯತೆಗಳರಿತು ॥ ॥೫॥**

**ಅವತರಣಿಕೆ :-**

ರಮಾದಿ ಸಕಲ ಸ್ತ್ರೀಯರಲ್ಲಿ ಸ್ತ್ರೀರೂಪನಾಗಿದ್ದು, ಬಿಂಬಕ್ರಿಯಾ ದ್ವಾರಾ ಅವರಲ್ಲಿ ಸಮಸ್ತವ್ಯಾಪಾರಗಳನ್ನೂ ಮಾಡಿ ಮಾಡಿಸುತ್ತಾ, ಅವರವರ ಯೋಗ್ಯತಾನುಸಾರ ಮನೋಭೀಷ್ಟಗಳನ್ನು ಸಲ್ಲಿಸುತ್ತಿದ್ದಾನೆಂದು ತಿಳಿಸುತ್ತಾರೆ–**ಶ್ರೀ ಸರಸ್ವತಿ**–ಎಂಬ ೫ ನೆಯ ಪದ್ಯದಿಂದ. ॥೫॥

**ಪ್ರತಿಪದಾರ್ಥ :-**

**ಶ್ರೀ** = ಶ್ರೀನಾಮಕರಾದ ಶ್ರೀಲಕ್ಷ್ಮೀದೇವಿ, **ಸರಸ್ವತಿ** = ಬ್ರಹ್ಮಪತ್ನಿ ಸರಸ್ವತೀ ದೇವಿ, **ಭಾರತೀ** = ವಾಯುಸತಿ ಶ್ರೀಭಾರತೀದೇವಿ, **ಗಿರಿಜಾ** = ರುದ್ರದೇವರ ಮಡದಿ ಶ್ರೀಪಾರ್ವತೀದೇವಿ, **ಶಚೀ** = ಇಂದ್ರಪತ್ನಿ ಶಚೀದೇವಿ, **ರತಿ** = ಕಾಮನ ಸತಿ ರತಿದೇವಿ, **ರೋಹಿಣಿ** =

ಚಂದ್ರನ ಮಡದಿ ರೋಹಿಣೀದೇವಿ, **ಸಂಜ್ಞಾ** = ಸೂರ್ಯಪತ್ನಿ ಸಂಜ್ಞಾದೇವಿ, **ಶತರೂಪಾ** = ಸ್ವಾಯಂಭವ ಮನುವಿನ ಪತ್ನಿ ಶತ ರೂಪಾದೇವಿ, **ಆದಿ** = ಇವರೇ ಮೊದಲಾದ, **ಅಖಿಳಸ್ತ್ರೀಯರೊಳು** = ಸಮಸ್ತರಾದ ಮುಕ್ತಿಯೋಗ್ಯ ಸ್ತ್ರೀಜನರಲ್ಲಿ, **ಸ್ತ್ರೀರೂಪ** = ಸ್ತ್ರೀರೂಪವಾಗಿ ಬಿಂಬ ರೂಪೀ ಶ್ರೀಪರಮಾತ್ಮನು, **ವಾಸವಾಗಿದ್ದು** = ಅಂತರ್ಯಾಮಿಯಾಗಿದ್ದು, **ಎಲ್ಲರಿಗೆ** = ಸ್ವರೂಪದಲ್ಲಿ ಮುಕ್ತಿಯೋಗ್ಯರಾದ ಸ್ತ್ರೀಯರಿಗೆ, **ವಿಶ್ವಾಸ ತನ್ನಲಿ ಕೊಟ್ಟು** = ತನ್ನಲ್ಲಿ ಭಕ್ತಿಯನ್ನು ಪ್ರೇರಿಸಿ, ವರ್ಧಿಸುವಂತೆ ಮಾಡಿ, **ಅವರವರಭಿಲಾಷೆಗಳ** = ಆಯಾಯಾ ಜೀವರ ಮನಸ್ಸಿನ ಇಚ್ಛೆಗಳನ್ನು, **ಯೋಗ್ಯತೆಗಳರಿತು** = ಆಯಾಯಾ ಜೀವರ ಸ್ವರೂಪಯೋಗ್ಯತೆಗನು ಗುಣವಾಗಿ, **ಪೂರೈಸುತಿಪ್ಪನು** = ಸಲ್ಲಿಸುತ್ತಾನೆ. ॥೫॥

## ವ್ಯಾಖ್ಯಾನಗಳು

### ೧. ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ

ಸ್ತ್ರೀಜೀವರಲ್ಲಿ ಬಿಂಬರೂಪ ವಿಚಾರ ಹೇಳತಾರೆ.

ಮೂಲರೂಪೀ ನಾರಾಯಣದೇವರ ಪತ್ನಿಯರಾದ ಶ್ರೀದೇವೇರು, ಭೂದೇವೇರು, ದುರ್ಗಾದೇವೇರು, ಇನ್ನೂ ಅಂಭೃಣೀ, ಸೀತಾ, ರುಕ್ಮಿಣೀ ಅವತಾರರಾದ ಲಕ್ಷ್ಮೀದೇವೇರು, ಬ್ರಹ್ಮದೇವರ ಪತ್ನಿ ಸರಸ್ವತೀ ದೇವೇರು, ವಾಯುದೇವರ ಪತ್ನಿ ಭಾರತೀದೇವೇರು, ರುದ್ರದೇವರ ಪತ್ನಿ ಪಾರ್ವತೀದೇವೇರು, ಇಂದ್ರದೇವರ ಪತ್ನಿ ಶಚೀದೇವೇರು, ಮನ್ಮಥ ಪತ್ನಿ ರತೀದೇವೇರು, ಚಂದ್ರದೇವರ ಪತ್ನಿ ರೋಹಿಣೀ ದೇವೇರು, ಸೂರ್ಯದೇವರ ಪತ್ನಿ ಸಂಜ್ಞಾದೇವೇರು, ಸ್ವಾಯಂಭುವಮನು ಪತ್ನಿ ಶತ ರೂಪಾದೇವೇರು, ಇವರೇ ಮೊದಲಾದ ಸಮಸ್ತರಾದ ತ್ರಿವಿಧ ಸ್ತ್ರೀಜೀವರ ಸ್ವರೂಪದೊಳು, ಹಾಗೂ ಬಾಹ್ಯಸ್ಥೂಲದೇಹದೊಳು ಸ್ತ್ರೀರೂಪದಿಂದ ಬಿಂಬರೂಪೀ ಪರಮಾತ್ಮ ಆವಾಸನಾಗಿದ್ದು, ಸ್ವರೂಪ ಸ್ವಭಾವದಲ್ಲಿ ಮುಕ್ತಿ

ಯೋಗ್ಯರಾದ ಯಾವತ್ತೂ ಸ್ತ್ರೀಯರಿಗೆ, ಬಿಂಬರೂಪೀ ಸ್ತ್ರೀರೂಪಿಯಾದ ಪರಮಾತ್ಮ ತನ್ನಲ್ಲಿ, ತಮ್ಮ ಬಿಂಬರೂಪಿಯಾದ ಪರಮಾತ್ಮ ಸರ್ವೋತ್ತಮ ಎಂತಲೂ, ತಾವುಗಳು ಭೃತ್ಯರು ಎಂತಲೂ, ತಮಗೂ ಈ ಬಿಂಬರೂಪೀ ಪರಮಾತ್ಮಗೂ ಭೇದ ಎಂತಲೂ, ತಾರತಮ್ಯವದೆ ಎಂತಲೂ, ಏತಾದೃಶ ಜ್ಞಾನವನ್ನು ಅನುಸರಿಸಿದ ಭಕ್ತಿ ವಿಶ್ವಾಸವನ್ನು, ಇದ್ದದ್ದರನ್ನ ಅಭಿವ್ಯಕ್ತಿ ಮಾಡಿಕೊಟ್ಟು, ಭಗದಪರೋಕ್ಷ ಆಗಬೇಕೆಂಬ ಇಚ್ಛಾವನ್ನ, ದಾರದಾರ ಯೋಗ್ಯತಕ್ಕೆ ದಾವ-ರೀತಿಯಾದ ಅಪರೋಕ್ಷ ಕೊಡಬೇಕೋ ಆ ಯೋಗ್ಯತೆಗಳನ್ನು ಅರಿತು, ಸಾಧನಪೂರ್ತಿ ಮಾಡಿಸಿ, ಅಪರೋಕ್ಷ ಕೊಟ್ಟು, ಅವರ ಇಚ್ಛಾವನ್ನ ಪೂರ್ಣ ಮಾಡತಾ,ಜೀವದೇಹಾಂತರ್ಗತನಾಗಿ ಇದ್ದಾನೆ- ಎಂತ ತಾತ್ಪರ್ಯ.

ಪ್ರಮಾಣ :-

**ಲಕ್ಷ್ಮೀ ಸರಸ್ವತೀಂದ್ರಾಣೀ ಗಾಯತ್ರೀತ್ಯಾದಿ ನಾಮಭಿಃ ।**
**ನಾನಾ ಲಿಂಗೋನೈಕರೂಪೋ ವೇದೇಷುಸ್ತೂಯತೇ ಹರಿಃ ।**
**ಪುರುಷರೂಪೋ ಹರಿಃ ಸಾಕ್ಷಾತ್ ಸ್ತ್ರೀರೂಪೇ ಬಿಂಬರೂಪ**
**ವಾನ್ ॥ ಇತಿ । ॥೫॥**

೨. ಭಾವಪ್ರಕಾಶಿಕೆ :-

ಲಕ್ಷ್ಮೀ, ಸರಸ್ವತೀ ಮೊದಲಾದ ಸಕಲ ಸ್ತ್ರೀಯರಲ್ಲೂ, ಸ್ತ್ರೀರೂಪದಿಂದ ಪರಮಾತ್ಮನೇ ಇದ್ದು, ತನ್ನಾಮದಿಂದ ಸ್ತುತ್ಯನಾಗಿ, ತಾರತಮ್ಯ ಪ್ರಕಾರ ಲಕ್ಷ್ಮೀದೇವಿಯರಲ್ಲಿ ಸರಸ್ವತೀ ಮೊದಲಾದವರಿಗೆ ಭಕ್ತಿಯೂ, ಅವರಲ್ಲಿ ಪಾರ್ವತೀ ಮೊದಲಾದವರಿಗೆ ಭಕ್ತಿಯೂ, ಹೀಗೆ ಪರಸ್ಪರ ಭಗವದ್ಭಕ್ತರಲ್ಲಿ ವಿಶ್ವಾಸವನ್ನು ಹುಟ್ಟಿಸಿ, ಅವರವರ ಅಭಿಲಾಷೆಗಳನ್ನು ಅವರವರ ಯೋಗ್ಯತಾನುಸಾರ ಇಹ ಪರಂಗಳಲ್ಲಿ ಪೂರೈಸುವನು. ॥೫॥

೩. ಭಾವದರ್ಪಣ :-

ಲಕ್ಷ್ಮೀ ಸರಸ್ವತಿ ಮೊದಲಾದ ಸ್ತ್ರೀಯರಲ್ಲಿ ಸ್ತ್ರೀ ರೂಪನಾಗಿ ಕಾರ್ಯ ನಡಿಸುತ್ತಾನೆಂದು ಹೇಳುತ್ತಾರೆ. ಶ್ರೀ ಸರಸ್ವತಿ । "ಲಕ್ಷ್ಮೀ ಸರಸ್ವತೀಂದ್ರಾಣೀ ಗಾಯತ್ರೀತ್ಯಾದಿ ನಾಮಭಿಃ । ನಾನಾ ಲಿಂಗೋಽನೇಕರೂಪೋ ವೇದೇಷು ಸ್ತೂಯತೇ ಹರಿ" ರಿತಿ । ವಿಷ್ಣುರಹಸ್ಯೋಕ್ತೇಃ ॥೫॥

೪. ಶ್ರೀ ವ್ಯಾಸದಾಸ ಸಿದ್ಧಾಂತ ಕೌಮುದೀ :-

"ಶ್ರೀ" ಇತಿ ॥೫॥

## ಕನ್ನಡಾರ್ಥ

ಸ್ತ್ರೀಯರಲ್ಲಿ ಸ್ತ್ರೀರೂಪದಿಂದ ವಾಸವಾಗಿರುತ್ತಾನೆ. ಈ ವಿಷಯ ವನ್ನು ಸಯುಕ್ತಿಕವಾಗಿ ಗರುಡ ಪುರಾಣದಲ್ಲಿ ಭಗವಾನ್ ಹರಿಯು ಉಪ ಪಾದಿಸಿರುತ್ತಾನೆ. ಗರುಡ ! ಹರಿಗೆ ಸ್ತ್ರೀ ರೂಪವಿರದಿದ್ದರೆ, ಸ್ತ್ರೀಯರ ಬಿಂಬರೂಪನಾಗುವುದು ಹೇಗೆ ? ಸ್ತ್ರೀಯರ ಬಿಂಬರೂಪನಾಗದಿದ್ದರೆ ಗರುಡ ! ಸ್ತ್ರೀಯರು ಹರಿಯ ಪ್ರತಿಬಿಂಬರಾಗುವುದು ಹೇಗೆ ? ಆದುದರಿಂದ ಪರ ಮಾತ್ಮನಿಗೆ ಸ್ತ್ರೀರೂಪವನ್ನು ಸ್ತ್ರೀಯರಲ್ಲಿ ವಾಸ್ತವ ಮತ್ತು ಸ್ವರೂಪ ಭೂತ ವಾದುದೆಂದು ಚಿಂತಿಸಬೇಕು, ಸ್ತ್ರೀರೂಪದಿಂದ ನಪುಂಸಕರೂಪವನ್ನು ಚಿಂತಿಸಬಾರದು. ಯಾಕೆಂದರೆ ಅದು ದೋಷ ಜನ್ಯವಾದುದು. ॥೫॥

೫. ಶ್ರೀಗುರುಹೃದಯ ಪ್ರಕಾಶಿಕೆ :-

ಶ್ರೀಸರಸ್ವತೀ ಭಾರತಿ ಪಾರ್ವತಿ ಶಚಿ ರತಿ ರೋಹಿಣಿ ಸಂಜ್ಞಾ ಎಂಬ ಸೂರ್ಯಪತ್ನೀ, ಶತರೂಪಾ ಎಂಬ ಸ್ವಾಯಂಭುವಮನುಪತ್ನೀ ಮೊದಲಾದ ಸಮಸ್ತ ಸ್ತ್ರೀಯರಲ್ಲಿಯೂ ಸ್ತ್ರೀರೂಪದಿಂದ ಬಿಂಬನಾಗಿ ವಾಸವಾಗಿದ್ದು, ಎಲ್ಲರಿಗೂ ತನ್ನಲ್ಲಿ ವಿಶ್ವಾಸ ಕೊಟ್ಟು, ಅವರವರ ಕೋರಿಕೆಯನ್ನು ಅವರವರಿಗೆ ಕೊಟ್ಟು, ಅವರವರ ಯೋಗ್ಯತಾನುಸಾರವಾಗಿ ರಕ್ಷಿಸುವನು. ॥೫॥

**ಸ್ತ್ರೀರೂಪೋಹಿ, ಕ್ವಚಿತ್ ಕ್ವಚಿತ್ ಲಕ್ಷ್ಮೀ ಸರಸ್ವತೀಂದ್ರಾಣಿ ಗಾಯತ್ರೀತ್ಯಾದಿ ನಾಮಭಿಃ । ನಾನಾ ಲಿಂಗೋऽನೇಕರೂಪೋ ವೇದೇಷು ಸ್ತೂಯತೇ ಹರಿಃ ॥**– ಎಂಬ ಅರ್ಥ ವಿವರಿಸಲ್ಪಟ್ಟಿತು. ॥೫॥

## ಸರ್ವವ್ಯಾಖ್ಯಾನಸಾರಸಂಗ್ರಹ

ಸತ್ತ್ವಗುಣಾಭಿಮಾನಿಯಾದ ಪರಮ ಮಂಗಳಸ್ವರೂಪಿಣಿಯಾದ, ಲಕ್ಷ್ಮೀದೇವಿಗೆ ಶ್ರೀ ಎಂತ ನಾಮ. ಇದರಿಂದ ಭೂ, ದುರ್ಗಾರೂಪಗಳೂ, ಅಂತೆಯೇ ಅಂಭ್ರಣೀ, ಸೀತಾ, ರುಕ್ಮಿಣೀ, ಶಾಂತೀ-ಇತ್ಯಾದಿ ನಾನಾ ರೂಪ ಗಳೂ ಗ್ರಾಹ್ಯ.

ಶ್ರೀಹರಿಯು, ಶ್ರೀವಾಚ್ಯಳಾದ ಲಕ್ಷ್ಮೀದೇವಿಯಲ್ಲಿ ಸ್ತ್ರೀರೂಪದಿಂದ ಬಿಂಬನಾಗಿದ್ದಾನೆ. ಅಂತೆಯೇ, ಬ್ರಹ್ಮದೇವರ ಪತ್ನಿ ಸರಸ್ವತೀ, ವಾಯು ದೇವರ ಸತಿ ಭಾರತೀ, ರುದ್ರದೇವರ ಮಡದಿ ಗಿರಿಜಾ, ಇಂದ್ರನ ರಾಣೀ ಶಚೀ, ಮನ್ಮಥನ ಮಡದಿ ರತೀ, ಚಂದ್ರನ ಪತ್ನಿ ರೋಹಿಣೀ, ಸೂರ್ಯನ ಪತಿ ಸಂಜ್ಞಾದೇವಿ, ಸ್ವಾಯಂಭುವಮನುವಿನ ಪತ್ನಿ ಶತರೂಪಾ ದೇವಿ- ಇವರೇ ಮೊದಲಾದ ಸಮಸ್ತ,ದೇವತೆಗಳಲ್ಲಿ ಸ್ತ್ರೀರೂಪದಿಂದ ಬಿಂಬ ನಾಗಿದ್ದು, ಸಕಲಕ್ರಿಯೆಗಳನ್ನು ಮಾಡಿ ಮಾಡಿಸುವನು.

ಪಂಚಭೇದ, ತಾರತಮ್ಯ ಜ್ಞಾನವನ್ನರಿತ, ತನ್ನನ್ನು ಈಶನೆಂದು ಸದಾ ಭಜಿಸುತ್ತಿರುವ ದೃಢಭಕ್ತರು ಅವನಲ್ಲಿ ವಿಶ್ವಾಸವುಳ್ಳವರು ಅವರ ಭಕ್ತಿಯನ್ನು ಇನ್ನೂ ವರ್ಧಿಸಿ, ದೃಢೀಕರಿಸಿ, ಅವರವರ ಸ್ವರೂಪಯೋಗ್ಯ ತೆಗನುಸಾರವಾಗಿ, ಸತ್ಕಾರ್ಯಗಳನ್ನು ಮಾಡಿ ಮಾಡಿಸಿ, ಸ್ತ್ರೀರೂಪ ದಿಂದಿರುವ ಬಿಂಬನಾದ ಶ್ರೀಹರಿಯು ಅವರವರ ಮನೋಭಿಲಾಷೆಗಳನ್ನು ಅವರಲ್ಲಿ ಅಂಕುರಿಸಿ, ಅವುಗಳನ್ನು ಪೂರ್ತಿಸಿ, ಸಂತೋಷಪಡಿಸುವನೆಂದು. ಶ್ರೀಹರಿಯ ಭಕ್ತವಾತ್ಸಲ್ಯಗುಣವನ್ನು ತಿಳಿಸುತ್ತಾರೆ- ಪ್ರಸಕ್ತ ಪದ್ಯದಿಂದ. ॥೫॥

## ಪದ್ಯ-೬

**ಮೂಲ :-**

**ಕೋಲು ಕುದುರೆಯು ಮಾಡಿ ಆಡುವ ।**
**ಬಾಲಕರ ತೆರನಂತೆ ಲಕುಮಿಲೊ ।**
**ಲೋಲ ಸ್ವಾತಂತ್ರ್ಯಗುಣವ ಬ್ರಹ್ಮಾದ್ಯರೊಳಗಿಟ್ಟು ॥**
**ಲೀಲೆಗೈವನು ತನ್ನವರಿಗನು ।**
**ಕೂಲನಾಗಿದ್ದೆಲ್ಲ ಕಾಲದಿ ।**
**ಖುಲ್ಲರಿಗೆ ಪ್ರತಿಕೂಲನಾಗಿಹ ಪ್ರಕಟನಾಗದಲೆ ॥ ॥೬॥**

**ಅವತರಣಿಕೆ :-**

ಲಕುಮೀಲೋಲನು ಸ್ವಗತಸ್ವಾತಂತ್ರ್ಯಗುಣಗಳನ್ನು ಬ್ರಹ್ಮಾದಿ ದೇವತೆಗಳಲ್ಲಿ ಇಟ್ಟು, ಜಗವದ್ವ್ಯಾಪಾರರೂಪವಾದ ಸಮಸ್ತಕಾರ್ಯಗಳನ್ನು ಲೀಲಾಜಾಲವಾಗಿ ಮಾಡುತ್ತಾನೆಂದು ದೃಷ್ಟಾಂತಪೂರ್ವಕ ತಿಳಿಸುತ್ತಾರೆ-**ಕೋಲು ಕುದುರೆಯು ಮಾಡಿ**- ಎಂಬ ೬ ನೆಯ ಪದ್ಯದಿಂದ. ॥೬॥

**ಪ್ರತಿಪದಾರ್ಥ :-**

**ಕೋಲು ಕುದುರೆಯು ಮಾಡಿ** = ಒಂದು ಬಿದಿರುಕೋಲನ್ನೇ ಕುದುರೆಯನ್ನಾಗಿ ಮಾಡಿಕೊಂಡು, **ಆಡುವ** = ಆಟವಾಡುವ, **ಬಾಲಕರ ತೆರನಂತೆ** = ಮಕ್ಕಳೋಪಾದಿಯಲ್ಲಿ, **ಲಕುಮೀಲೋಲ** = ಶ್ರೀ ಲಕ್ಷ್ಮೀದೇವಿಯರ ಆನಂದಕ್ಕಾಗಿ, ಅವರಲ್ಲಿ ಕ್ರೀಡಿಸುವ, ಶ್ರೀಪರಮಾತ್ಮನು, **ಸ್ವಾತಂತ್ರ್ಯಗುಣವ** = ತನ್ನ ಸ್ವರೂಪಭೂತವಾದ ಸ್ವಾತಂತ್ರ್ಯ ಎಂಬ ಧರ್ಮವನ್ನು, **ಬ್ರಹ್ಮಾದ್ಯರೊಳಗಿಟ್ಟು** = ಬ್ರಹ್ಮಾದಿ ತೃಣಾಂತಜೀವ

ರಲ್ಲಿ ಇಟ್ಟು. **ಎಲ್ಲ ಕಾಲದಿ** = ಸರ್ವಕಾಲಗಳಲ್ಲಿಯೂ (ಅಸೃಜ್ಯ, ಸ್ಥಿತಿ, ಮುಕ್ತಿದಶಾಕಾಲಗಳಲ್ಲಿ), **ತನ್ನವರಿಗೆ** = ತನ್ನ ಅಂತರಂಗ ಭಕ್ತರಿಗೆ, **ಅನುಕೂಲವಾಗಿದ್ದು** = ಸಹಾಯಕನಾಗಿದ್ದು ಎಡಬಿಡದೆ, **ಲೀಲೆಗೈವನು** = ಸತ್ ಸಾಧನಾರೂಪವಾದ ಕರ್ಮಗಳನ್ನು ಮಾಡಿಸುತ್ತಾ, ಅವರಲ್ಲಿ ವಿಹಾರ ಮಾಡುವನು, **ಖುಲ್ಲರಿಗೆ** = ಭಗವದ್ದ್ವೇಷಿಗಳಾದ ತಮೋಯೋಗ್ಯ ಜೀವರಿಗೆ, **ಪ್ರಕಟವಾಗದೆಲೆ** = ಅವರಿಗೆ ಗೋಚರವಾಗದೇ (ತಾವೇ ಸಕಲಕ್ಕೂ ಕರ್ತೃಗಳೆಂಬ ಭಾವನೆ ಅವರ ಸ್ವರೂಪಭೂತವಾದ ಗುಣಕ್ಕನುಸಾರ ಹುಟ್ಟಿಸಿ), **ಪ್ರತಿಕೂಲನಾಗಿಹ** = ಸಹಾಯಕನಾಗದೇ, ದುಃಖಫಲಾನುಭವವನ್ನು ಉಣಿಸುತ್ತಾನೆ. ॥೬॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ಜೀವರ ಸ್ವರೂಪಭೂತಸ್ವಾತಂತ್ರ್ಯ ಹೇಳತಾರೆ.

ಬಿದಿರು ಕೋಲನ್ನು ಕುದುರಿಯಾಗಿ ಮಾಡಿಕೊಂಡು,ಆಟಗಳ ಆಡತಕ್ಕ ಮಕ್ಕಳೋಪಾದಿಯಲ್ಲಿ, ಅಂದರೆ ಬ್ರಹ್ಮಾಂತ ತೃಣಾಂತ ತ್ರಿವಿಧಜೀವರಿಗೆ ಕೋಲುಕುದುರಿಗೆ ಸದೃಶವಾದ ಅನಾದಿಸ್ವರೂಪಭೂತಸ್ವಾತಂತ್ರ್ಯ ಇರೋದಾಗಿ ಅದೆ. ಆ ಸ್ವಾತಂತ್ರ್ಯಕ್ಕೂ ಈಶ್ವರನ ಸ್ವಾತಂತ್ರ್ಯಕ್ಕೂ ಭೇಧ. ಜೀವರ ಸ್ವರೂಪಭೂತ-ಸ್ವಾತಂತ್ರ್ಯದಲ್ಲಿ ಪರಮಾತ್ಮ ತದ್ವಾಚ್ಯನಾಗಿ ಬಿಂಬನಾಗಿ ಇದ್ದಾನೆ. ಅದು ಅನಾದಿಯೇ ಮಧ್ಯಕಾಲದಲ್ಲಿ ಪ್ರವೇಶವಾದದ್ದಲ್ಲ. ಜೀವನ ಸ್ವಾತಂತ್ರ್ಯಗತ ಪರಮಾತ್ಮನ ಸ್ವಾತಂತ್ರ್ಯ; ಬಾಲಕರು ಚಲಿಸಿದರೆ ಕೋಲುಕುದುರಿ ಚಲಿಸತವೆ. ಇಲ್ಲದಿದ್ದರೆ ಇಲ್ಲ. ತದ್ವತ್ ಕೋಲು ಕುದುರಿ ಸದೃಶ ಜೀವರ ಸ್ವಾತಂತ್ರ್ಯ, ಬಾಲಕರ ಸದೃಶ ಜೀವರ ಸ್ವಾತಂತ್ರ್ಯಗತ ಸ್ವಾತಂತ್ರ್ಯಶಬ್ದವಾಚ್ಯ ಪರಮಾತ್ಮ. ಈ ಪರಮಾತ್ಮ ಚಲಿಸಿದರೆ ಜೀವರ

ಸ್ವಾತಂತ್ರ್ಯಕ್ಕೆ ವ್ಯಾಪಾರ, ಇಲ್ಲದಿದ್ದರೆ ಇಲ್ಲ. ಇದು ಮೋಕ್ಷದಲ್ಲಿ ಸ್ವರೂಪಾಭಿವ್ಯಕ್ತಿ ಕಾಲದ ವಿಚಾರ. ಸ್ಥಿತಿಕಾಲದಲ್ಲಿ ಸ್ಥೂಲದೇಹದಿಂದ ತ್ರಿಗುಣಗಳ ಕಾರ್ಯಗಳ ನಡಿಸೋ ನಿಮಿತ್ತ, ಆ ಜೀವನ ಸ್ವರೂಪಭೂತ ಸ್ವಾತಂತ್ರ್ಯದಲ್ಲಿ, ಸೃಷ್ಟಿಕಾಲದಲ್ಲಿ ಪರಮಾತ್ಮ ಸ್ವಾತಂತ್ರ್ಯಶಬ್ದವಾಚ್ಯನಾಗಿ ಪ್ರವೇಶವು ಈ ತ್ರಿಗುಣ ಕಾರ್ಯಗಳಲ್ಲೂ ಕೋಲುಕುದುರಿ ದೃಷ್ಟಾಂತವೇ. ಪರಮಾತ್ಮಗೂ ಅವನ ಸ್ವಾತಂತ್ರ್ಯಕ್ಕೂ ಅತ್ಯಂತ ಅಭೇದ. ಪರಮಾತ್ಮನೇ ಸ್ವಾತಂತ್ರ್ಯ, ಸ್ವಾತಂತ್ರ್ಯವೇ ಪರಮಾತ್ಮ, ಎಲ್ಲಾನೂ ಸಾಕಾರಗಳೇ. ಈ ಪ್ರಕಾರ ಕೋಲುಕುದುರಿ ಬಾಲಕರೋಪಾದಿಯಲ್ಲಿ, ಲಕ್ಷ್ಮೀದೇವೇರಿಂದ ಸಹಿತನಾಗಿ ಆಕೆಗೆ ಸಂತೋಷಬಡಿಸೋದಗೋಸ್ಕರ ಏಕಾಂತ ವಿಹಾರವುಳ್ಳ ಪರಮಾತ್ಮ ತ್ರಿವಿಧಜೀವರಿಗೆ ತ್ರಿವಿಧವಾದ ಸ್ವತಂತ್ರರೂಪವಾದ ಗುಣವನ್ನ ಬ್ರಹ್ಮಾದಿ ತೃಣಾಂತ ಜೀವರಲ್ಲಿ, ಹಾಂಗೇ ಲಕ್ಷ್ಮೀದೇವೇರಲ್ಲೂ ಇಟ್ಟವನಾಗಿ, ಸ್ಥಿತಿ ಕಾಲದಲ್ಲಿ ಪ್ರವಿಷ್ಟ ಸ್ವಾತಂತ್ರ್ಯದಿಂದಲೂ, ಮೋಕ್ಷಕಾಲದಲ್ಲಿ ಪ್ರವಿಷ್ಟವಲ್ಲದ ಅನಾದಿಯಾದ ಬಿಂಬರೂಪ ಸ್ವಾತಂತ್ರ್ಯದಿಂದಲೂ, ಸದಾ ಸರ್ವಕಾಲದಲ್ಲೂ, ಸ್ವಾಮಿಭೃತ್ಯನ್ಯಾಯ ಸ್ವರೂಪ ಸ್ವಭಾವದಲ್ಲಿ ಇದ್ದ ತನ್ನ ಭಕ್ತರಾದವರಿಗೆ ಅವರವರ ಸ್ವರೂಪ ಸ್ವಭಾವದ ಯೋಗ್ಯತಾರತಮ್ಯಾನುಸಾರ ಅನುಕೂಲವಾಗಿದ್ದು,ಸಾಧನರೂಪವಾದ ಕರ್ಮಗಳ ಮಾಡಿಸೋ ನಿಮಿತ್ತ ಬಿಂಬ ಕ್ರಿಯಾರೂಪವಾದ ಆಟಗಳ ಆಡುವನು. ಆಡಿ, ಸಾಧನ ಪೂರ್ತಿಮಾಡಿಸಿ, ಪ್ರತ್ಯಕ್ಷ್ಯನಾಗಿ ಅವರು ಕೂಡಾ ತಾನೂನೂ ಅವರ ಯೋಗ್ಯತಾನುಸಾರ ನಡೀತಾನೆ. ಭಗವಂತನಾದ ತನ್ನಲ್ಲಿ ದ್ವೇಷಮಾಡತಕ್ಕ ಸ್ವರೂಪಸ್ವಭಾವವುಳ್ಳ ದೈತ್ಯರಲ್ಲಿ ಸ್ವಾತಂತ್ರ್ಯವಿಚಾರ ಪೂರ್ವೋಕ್ತ ಪ್ರಕಾರವೇ. ಇವರ ಕಡಿಯಿಂದ ಸ್ವರೂಪವನ್ನು ಅನುಸರಿಸಿದ ದುಸ್ಸಾಧನಗಳ ಮಾಡಿಸಿ, ಇವರಿಗೆ ಬಿಂಬನಾದರೂ ಸ್ವಾಮಿಭೃತ್ಯನ್ಯಾಯ ಸ್ವರೂಪದಲ್ಲಿ ಇಲ್ಲದವರಾದ್ದರಿಂದ ಇವರಿಗೆ ಅಪರೋಕ್ಷನಾಗದೆ, ಅನುಕೂಲ ಇಲ್ಲದವನಾಗಿ ದುಃಖಕರವಾದ ಅಂಧಂತಮಸ್ಸನ್ನು ಸೇರಸತಾನೆ. ಜೀವರು ಅನಾದಿ, ಅವರ ಯೋಗ್ಯತೆಯೂ ಅನಾದಿ, ಈಶ್ವರನಿಂದ ರಚಿತವಲ್ಲ. ಆದ್ದರಿಂದ ಪರಮಾತ್ಮ ನಿರ್ದೋಷನೆಂತ ತಾತ್ಪರ್ಯ. ||೬||

**೨. ಭಾವಪ್ರಕಾಶಿಕೆ :–**

ಹುಡುಗರು ಕೋಲುಗಳನ್ನು ಕುದುರೆಯನ್ನಾಗಿ ಮಾಡಿಕೊಂಡು ಅದನ್ನು ತಮ್ಮ ಕಾಲು ಮಧ್ಯದಲ್ಲಿಟ್ಟುಕೊಂಡು ಕುದುರೆಯನ್ನು ಹೊಡೆಯುವಂತೆ ಹೊಡೆಯುತ್ತಾ ತಾವೇ ಅದನ್ನು ಸೆಳೆದುಕೊಂಡು ಓಡುತ್ತಿರುವರು. ಅವರಲ್ಲಿ ಕೋಲುಕುದುರೆಗೆ ಎಷ್ಟು ಸ್ವಾತಂತ್ರ್ಯವಿರುವುದೋ ಅಷ್ಟೇ ಸ್ವಾತಂತ್ರ್ಯ ಜೀವರಿಗೆ ಇರುವುದು. ಕೋಲನ್ನು ಕುದುರೆಯನ್ನಾಗಿ ಮಾಡಿಕೊಂಡವರೂ ಇವರೇ, ಕೂತವರೂ ಇವರೇ, ಹೊಡೆಯುವವರೂ ಇವರೇ, ಸೆಳೆದುಕೊಂಡು ಓಡುವವರೂ ಇವರೇ. ಆಗ ಹುಡುಗರು ಹೇಗೆ ಆಟವಾಡುವರೋ, ಅದರಂತೆ ಬ್ರಹ್ಮಾದಿ ಸಕಲ ಜೀವರಿಗೂ ತನ್ನ ಸ್ವಾತಂತ್ರ್ಯ ಗುಣಗಳನ್ನು ಕೊಟ್ಟು ಪೂಜ್ಯನೂ, ಪೂಜಕನೂ, ತಾನೇ ಆಗಿ ಕ್ರೀಡಿಸುತ್ತಿರುವನು. ತಾನು ಒಬ್ಬರಿಗೆ ಗೋಚರಿಸದೆ ಭಕ್ತರಿಗೆ ಅನುಕೂಲನಾಗಿಯೂ, ದ್ವೇಷಿಗಳಿಗೆ ಪ್ರತಿಕೂಲನಾಗಿಯೂ ಇರುವನು. ॥೬॥

**೩. ಭಾವದರ್ಪಣ :–**

ಕೋಲು ಕುದುರಿ ! ಈ ಪದ್ಯದ ಭಾವ ಹದಿನೇಳನೇ ಸಂಧಿಯಲ್ಲಿ ವಿವರ ಮಾಡಿಯದೆ. ॥೬॥

**೪. ಶ್ರೀವ್ಯಾಸದಾಸ ಸಿದ್ಧಾಂತ ಕೌಮುದೀ :–**

"ಬ್ರಹ್ಮಾಣಂ ಚ ತಥಾ ಪ್ರಾಣಂ ತಥಾನ್ಯಾಃ ತತ್ವದೇವತಾಃ ॥ ದೇಹೇ ನಿಯೋಜಯಾಂ ಚಕ್ರೇ ತಥಾ ಕಲ್ಯಾದಿಕಾಸುರಾನ್ ॥ ಸ್ವಾತಂತ್ರ್ಯಂ ವ್ಯಭಜತ್ ತೇಷು" ಇತ್ಯುಕ್ತಮಾಹಃ –"ಕೋಲು" ಇತಿ. ॥೬॥

## ಕನ್ನಡಾರ್ಥ

"ಚತುರ್ಮುಖಬ್ರಹ್ಮನನ್ನೂ, ಪ್ರಾಣನನ್ನೂ ಹಾಗೂ ಉಳಿದ ತತ್ವದೇವತೆಗಳನ್ನೂ ದೇಹದಲ್ಲಿ ಹರಿಯು ನಿಯೋಜಿಸಿದನು. ಹರಿಯು ಅವ

ರಲ್ಲಿ ಸ್ವಾತಂತ್ರ್ಯವನ್ನು ಹಂಚಿದನು. ಈ ವಿಷಯವನ್ನು "ಕೋಲು ಕುದುರೆಯ ಮಾಡಿ" ಈ ಪದ್ಯದಿಂದ ಹೇಳುತ್ತಾರೆ. ॥೬॥

**೫. ಶ್ರೀ ಗುರುಹೃದಯ ಪ್ರಕಾಶಿಕೆ :–**

ಕೋಲನ್ನು ಕುದುರೆಯಾಗಿ ಮಾಡಿಕೊಂಡು ತಾವೇ ಆಟಆಡುವ ಹುಡುಗರಂತೆ, ಲಕ್ಷ್ಮೀಲೋಲನಾದ ಸ್ವಾಮಿ ತನ್ನ ಸ್ವಾತಂತ್ರ್ಯಾದಿ ಗುಣವನ್ನು ಬ್ರಹ್ಮಾದ್ಯರಲ್ಲಿ ತಾರತಮ್ಯಾನುಸಾರವಾಗಿ ವಿಭಾಗ ಮಾಡಿಕೊಟ್ಟು, ಅನಾದಿ ಭಕ್ತರಿಗೆ ಅನುಕೂಲನಾಗಿದ್ದು, ಸದಾ ಖೂಳರೆಂಬ ಸ್ವದೇಹ ಮಾತ್ರ ದೋಷಕರಾದ ದುಷ್ಟರಿಗೆ ಪ್ರತಿಕೂಲನಾಗಿಯೂ, ಸ್ವತಃ ಜಗತ್ಕ್ರೀಡೆಯಾಡುವನು.

**ಚೇತನತ್ವೇಪ್ಯಶ್ಮಾಧಿವದ ಸ್ವತಂತ್ರತ್ವಾತ್** ಎಂಬ ಭಾಷ್ಯ, **ಕಾಷ್ಟಾದಿವತ್ತದ್ವಶಗಾಸ್ಸನುಸ್ತಾಃ** ಎಂಬ ನಿರ್ಣಯೋಕ್ತಿಯಿಂದ ಸಹ ಜೀವರು ಜ್ಞಾನೇಚ್ಛಾಕ್ರಿಯಾಸ್ವರೂಪರಾದರೂ, ತದ್ವ್ಯಕ್ತಿ ದೇವರು ಮಾಡದಿದ್ದರೆ ಕಾಷ್ಟಸಮರೆಂದು ತಿಳಿಸುವುದಕ್ಕೆ ಕೋಲುಕುದುರೆಯ ದೃಷ್ಟಾಂತವೇ ಹೊರ್ತು, ಜೀವರು ಜಡವೆಂದರ್ಥವಲ್ಲ.

**ಯಥಾರಾಜಾ ನಿಜಾನಮಾತ್ಯಾನ್ ದತ್ವಾ ಸ್ವಾತಂತ್ರ್ಯ**
**ಮಾತ್ಮನಃ ।**
**ಶಕ್ತ್ಯಾ ಸ್ವದತ್ತಯಾಮಾತ್ಯೈಃ ಕೃತೇ ಕಾರೇಷು ತುಷ್ಯತಿ ॥**
**ಸತ್ಯಾಂಶಕ್ತಾ ಕಾರ್ಯನಾಶೇಸ್ವಾಜ್ಞಾಮುಲ್ಲಂಘ್ಯ ವರ್ತತೇ ।**
**ಕುಪಿತ್ವಾ ದಂಡಯತ್ಯೇವಂ ಕ್ರೀಡತ್ಯೇವ ಸ್ವಯಂ ಹರಿಃ ॥**
**ನಿಯಂತೃತ್ವೇನ ಸರ್ವತ್ರ ತಿಷ್ಠನ್ ಜೀವೇಷು ಸರ್ವದಾ**

ಎಂಬ ಅರ್ಥವೂ ಸಹ ವಿವರಿಸಲ್ಪಟ್ಟಿದೆ. ಕೂಳೆಂಬ ಅನ್ನಮಾತ್ರ ತಿಂದು ವೇದೋಕ್ತಕಾರ್ಯವಿಲ್ಲದವರೇ ಖೂಳರೆಂದು ಹೆಸರುಳ್ಳವರೆಂದು ತಿಳಿಯುವುದು. ॥೬॥

# ಸರ್ವವ್ಯಾಖ್ಯಾನಸಾರಸಂಗ್ರಹ

ಬಾಲಕರು ಒಂದು ಕೋಲನ್ನು ತಮ್ಮ ಕಾಲುಗಳ ಮಧ್ಯದಲ್ಲಿಟ್ಟುಕೊಂಡು, ಅದನ್ನೇ ಕುದುರೆಯೆಂದು ಭಾವಿಸಿ, ಎಳೆದುಕೊಂಡು ಓಡುವರು. ಅಂತೆಯೇ ಬಾಲಕರ ಸದೃಶ ಸರ್ವತಂತ್ರ ಸ್ವತಂತ್ರನಾದ ಶ್ರೀಪರಮಾತ್ಮನು. ಕೋಲು ಕುದುರೆಯು ಸದೃಶ ಅಸ್ವತಂತ್ರರಾದ ಜೀವರು. ಈ ದೃಷ್ಟಾಂತದಲ್ಲಿ ಕೋಲನ್ನು ಕುದುರೆಯನ್ನಾಗಿ ಮಾಡಿಕೊಳ್ಳುವವರು ಬಾಲಕರೇ. ಅದರ ಮೇಲೆ ಕೂತುಕೊಳ್ಳುವವರು ಬಾಲಕರೇ ಅದನ್ನು ಎಳೆದಾಡಿಕೊಂಡು ಓಡಾಡುವವರೂ ಬಾಲಕರೇ. ಬಾಲಕರ ಕ್ರೀಡೆಗನುಸಾರವಾಗಿ ಕೋಲು ಚಲಿಸುವುದು. ಹೀಗೆಯೇ ಶ್ರೀಪರಮಾತ್ಮನು ಸರ್ವತಂತ್ರ ಸ್ವತಂತ್ರನು. ಜೀವರಿಗೆ ಸ್ವರೂಪಭೂತವಾದ ಜ್ಞಾನ, ಇಚ್ಛಾ, ಕ್ರಿಯಾ ಶಕ್ತಿಗಳಿವೆ. ಇವು ಭಗವದಧೀನವಾಗಿವೆ. ಜೀವರಿಗೆ ಕರ್ತೃತ್ವಶಕ್ತಿ ಇದೆ. ಆದರೆ ಅದು ಪರಾಧೀನವು. ಜೀವರ ಕರ್ತೃತ್ವಶಕ್ತಿಯು ಅವರ ಸ್ವರೂಪಭೂತವಾಗಿ ಅನಾದಿಕಾಲದಿಂದಲೂ ಇದೆ. ಅದರಲ್ಲಿ ಬಿಂಬನಾಗಿ ಶ್ರೀಪರಮಾತ್ಮನು ಪ್ರವೇಶಿಸಿ, ಪ್ರೇರಣಾದ್ವಾರಾ, ಶಕ್ತ್ಯಾತ್ಮಕವಾದ ಆ ಕರ್ತೃತ್ವ ಶಕ್ತಿಯನ್ನು ಕ್ರಿಯಾತ್ಮಕವನ್ನಾಗಿ ಮಾಡುವನು. ಇದೇ ಶ್ರೀಹರಿಯ ಕ್ರೀಡಾರೂಪವಾದ ಬಿಂಬಕ್ರಿಯಾ. ಬಿಂಬನ ಚಲನೆಯಿಂದ ಪ್ರತಿಬಿಂಬದ ವ್ಯಾಪಾರಗಳ ಅಭಿವ್ಯಕ್ತಿ. ಇದಕ್ಕೆ ಕೋಲು ಕುದುರೆಯು ಉತ್ತಮವಾದ ದೃಷ್ಟಾಂತ.

ಸ್ಥಿತಿಕಾಲದಲ್ಲಿ ತ್ರಿಗುಣಗಳ ಕಾರ್ಯ ಸ್ಥೂಲದೇಹದ ದ್ವಾರಾ ನಡಿಯುತ್ತದೆ. ಆ ನಿಮಿತ್ತ ಶ್ರೀಪರಮಾತ್ಮನು ಜೀವರ ಸ್ವರೂಪಭೂತ ಕರ್ತೃತ್ವದಲ್ಲಿ (ಇದನ್ನೇ ಶ್ರೀ **ಸಂಕರ್ಷಣ ಒಡೆಯರ ವ್ಯಾಖ್ಯಾನದಲ್ಲಿ** "ಜೀವರ ಸ್ವರೂಪಭೂತ ಸ್ವಾತಂತ್ರ್ಯ" –ಎಂದು ಕರೆಯಲಾಗಿದೆ). ಸ್ವಾತಂತ್ರ್ಯ ಶಬ್ದವಾಚ್ಯನಾಗಿ ಪ್ರವೇಶಿಸಿ, ಬಿಂಬಕ್ರಿಯಾದ್ವಾರಾ, ಜೀವರ ಕರ್ತೃತ್ವ ಶಕ್ತಿಯನ್ನು ಉದ್ಬೋಧಿಸಿ, ಅಭಿವ್ಯಕ್ತಿಗೊಳಿಸುವನು.

ಶ್ರೀಲಕ್ಷ್ಮೀದೇವಿಯರಲ್ಲಿ ಬಿಂಬನಾಗಿದ್ದು, ಅವರ ಶ್ರೀ ಭೂ-ದುರ್ಗಾ ರೂಪಗಳ ದ್ವಾರಾ ಗುಣತ್ರಯಗಳ ಪ್ರಾಚುರ್ಯರೂಪವಾದ ಕ್ರಿಯೆಗಳನ್ನು ಮಾಡಿ ಮಾಡಿಸುವನು. ಇದರಿಂದ ಸೃಷ್ಟ್ಯಾದಿ ಜಗದ್ವ್ಯಾಪರಗಳು ನಡೆಯುವುವು. (ಮೂಲ ಪ್ರಕೃತಿಯು ಉಪಾದಾನ ಕಾರಣ ನಿಮಿತ್ತದಿಂದ). ಪಿಂಡಾಂಡರೂಪವಾದ ಸ್ಥೂಲದೇಹದಲ್ಲಿ ತ್ರಿಗುಣಗಳ ಕಾರ್ಯಾಭಿವ್ಯಕ್ತ ರಮಾ ದ್ವಾರಾ, ಶ್ರೀ ರಮಾದೇವಿಯರಲ್ಲಿ ಬಿಂಬರೂಪದಿಂದ ತ್ರಿಗುಣಗಳ ವ್ಯಾಪಾರ ಮಾಡಿ ಮಾಡಿಸುತ್ತಾ, ವಿಹರಿಸುತ್ತಿರುವುದರಿಂದ **ಶ್ರೀಲಕುಮೀ ಲೋಲನು.**

ಲಕ್ಷ್ಮೀದೇವಿಯರಿಗೆ ಆನಂದವನ್ನು ಕೊಡುವುದಕ್ಕಾಗಿ. ಈ ಲೀಲಾ ರೂಪವಾದ ಕ್ರೀಡೆಯನ್ನಾಡುವನು. ಆಪ್ತಕಾಮನೂ ಸ್ವಾನಂದಪೂರ್ಣನು ಆದ ಸ್ವರಮಣನಿಗೆ ರಮಾದೇವಿಯರಿಂದಲೂ ಆನಂದ ಬೇಕಿಲ್ಲ.

ಸರ್ವತಂತ್ರಸ್ವತಂತ್ರನಾದ ಆ ಸರ್ವೇಶನು ಬ್ರಹ್ಮಾದಿ ತೃಣಾಂತ ಸಮಸ್ತಜೀವರಲ್ಲಿ ಬಿಂಬನಾಗಿದ್ದು, ತನ್ನ ಸ್ವಾತಂತ್ರ್ಯ ಗುಣದ್ವಾರಾ, ಅವರ ಕರ್ತೃತ್ವಸಾಮರ್ಥ್ಯವನ್ನು ಕ್ರಿಯಾತ್ಮಕವಾಗಿ ಅಭಿವ್ಯಕ್ತಿಗೊಳಿಸಿ, ವಿಹಾರ ಮಾಡುವನು.

ತನ್ನ ಪಾದಗಳನ್ನೇ ದೃಢವಾಗಿ ನಂಬಿ, ನಿಶ್ಚಲವಾದ ಭಕ್ತಿ ಭಾವದಿಂದ ಭಜಿಸುತ್ತಿರುವ ಭಗವದ್ಭಕ್ತರು **ತನ್ನವರೆನಿಸುವರು.** ಅವರಿಗೆ ಸ್ವಾಮಿಭೃತ್ಯನ್ಯಾಯ ಈಶ-ದಾಸ ಭಾವ ಸ್ವರೂಪ ಭೂತವಾಗಿ ಅನಾದಿ ನಿತ್ಯವಾಗಿದೆ. ಇದನ್ನು ನಿಮಿತ್ತೀಕರಿಸಿಕೊಂಡು, ಆ ಅನಿಮಿತ್ತಬಂಧುವು

ಅವರಿಗೆ ಸದಾ ಸರ್ವಕಾಲದಲ್ಲಿಯೂ ಸ್ಥಿತಿ ಹಾಗೂ ಮೋಕ್ಷಕಾಲಗಳಲ್ಲಿ ಸಹಾಯಕನಾಗಿರುವನು. ಅಂದರೆ, **ಅನುಕೂಲವಾಗಿರುವನು.**

ಸ್ವರೂಪದಲ್ಲಿ ಭಗವದ್ವೇಷಿಗಳಾದವರು ತಮೋಯೋಗ್ಯರು. ಖುಲ್ಲರು ಅವರಿಗೆ ಸ್ವಾಮಿಭೃತ್ಯನ್ಯಾಯವು ಸ್ವರೂಪದಲ್ಲಿಯೇ ಇಲ್ಲ. ಅವರ ಉಪಾಸನೆಗನುಗುಣವಾಗಿ, ಅವರಿಗೆ ಪ್ರತಿಕೂಲನಾಗಿದ್ದು, ಅಪರೋಕ್ಷವಾಗದ ನಿತ್ಯದುಃಖರೂಪವಾದ ಅಂಧತ ಮನಸ್ಸನ್ನು ಕೊಡುವನು. ಇದು ಪಕ್ಷಪಾತವಲ್ಲ. ಅವರ ಸ್ವರೂಪ ಗುಣಕ್ಕೆ ಅನುಸಾರವಾಗಿ ಉಪಾಸನೆ. ತದನುಸಾರವಾದ ಫಲಪ್ರಾಪ್ತಿ.

**ವಿಶೇಷವಿಷಯ :–**

ಬ್ರಹ್ಮಾದಿ ತೃಣಾಂತ ಸಕಲ ಜೀವರಲ್ಲಿ ಪ್ರವಿಷ್ಟನಾಗಿದ್ದು ಬಿಂಬಕ್ರಿಯಾದ್ವಾರಾ ಸಮಸ್ತ ಕ್ರಿಯಾಭಿವ್ಯಕ್ತಿ.

ಸ್ಥಿತಿ ಕಾಲದಲ್ಲಿ ತ್ರಿಗುಣಗಳ ಕಾರ್ಯಗಳ ಪ್ರಾಚುರ್ಯ. ಈ ನಿಮಿತ್ತದಿಂದ **ಪ್ರವಿಷ್ಟ ಸ್ವಾತಂತ್ರ್ಯದಿಂದ** ಬಿಂಬನ ವ್ಯಾಪಾರ.

ಮೋಕ್ಷ ಸ್ಥಿತಿಯಲ್ಲಿ ಪ್ರವಿಷ್ಟವಲ್ಲದ **ಅನಾದಿ ಬಿಂಬರೂಪ ಸ್ವಾತಂತ್ರ್ಯದಿಂದ** ಕ್ರಿಯಾಭಿವ್ಯಕ್ತಿ **(ಸಂಕರ್ಷಣ ಒಡೆಯರ ವ್ಯಾಖ್ಯಾನುಸಾರ).**

॥೬॥

# ಪದ್ಯ - ೨

**ಮೂಲ :–**

**ಸೌಪರ್ಣಿವರವಹನ ನಾನಾ |**
**ರೂಪ ನಾಮದಿ ಕರೆಸುತವರ ಸ |**
**ಮೀಪದಲ್ಲಿದ್ದಖಿಳ ವ್ಯಾಪಾರಗಳ ಮಾಡುವನು ||**
**ಪಾಪ ಪುಣ್ಯಗಳೆರಡು ಅವರ ಸ್ವ |**
**ರೂಪಗಳನನುಸರಿಸಿ ಉಣಿಪ ಸ |**
**ರೋಪಕಾರಿ ಪರೇಶ ಪೂರ್ಣಾನಂದ ಜ್ಞಾನಘನ || ||೨||**

**ಅವತರಣಿಕೆ :–**

ಗರುಡಗಮನನಾದ ಶ್ರೀಪರಮಾತ್ಮನು ನಾನಾ ರೂಪ ನಾಮಗಳಿಂದ ವಿರಾಜಮಾನನಾಗಿದ್ದು, **ಪರಮಾತ್ಮನು** ಜೀವರ ಯೋಗ್ಯತಾನುಸಾರ ಕ್ರಿಯೆಗಳನ್ನು ಮಾಡಿ ಮಾಡಿಸಿ, ಪಾಪ ಪುಣ್ಯಗಳನ್ನು ಅವರಿಗೆ ಉಣಿಸುತ್ತಾನೆಂದು ತಿಳಿಸುತ್ತಾರೆ– **ಸೌಪರ್ಣಿವರವಹನ**– ಎಂಬ ೨ ನೆಯ ಪದ್ಯದಿಂದ.
||೨||

**ಪ್ರತಿಪದಾರ್ಥ :–**

**ಸೌಪರ್ಣಿವರವಹನ** = ಸೌಪರ್ಣೀದೇವಿಯರ ಪತಿಯಾದ ಗರುಡ ದೇವರನ್ನೇ ವಾಹನವನ್ನಾಗಿ ಉಳ್ಳ ಶ್ರೀಮನ್ನಾರಾಯಣನು, **ನಾನಾ ರೂಪ ನಾಮದಿ** = ನಾನಾ ಪ್ರಕಾರವಾಗಿರುವ ಜೀವರ ಸ್ವರೂಪಾನುಸಾರವಾದ ನಾಮಗಳಿಂದಲೂ, ಜೀವಾಕಾರನಾಗಿ, ತತ್ತದ್ರೂಪಗಳಿಂದಲೂ, **ಕರೆಸುತ** = ಅದೇ ನಾಮಗಳಿಂದ ಕರೆಯಿಸಿದವನಾಗಿದ್ದು, **ಅವರ** = ಅಯಾಯಾ ಜೀವರ, **ಸಮೀಪದಲ್ಲಿದ್ದು** = ಬಿಂಬನಾಗಿ ಅವಿಯೋಗ

ನಾಗಿದ್ದು, **ಅಖಿಳ ವ್ಯಾಪಾರಗಳ** = ಸ್ಥೂಲದೇಹಗತ ಸಕಲೇಂದ್ರಿಯಗಳ ದ್ವಾರಾ, ಸಕಲ ಕ್ರಿಯಾದಿಗಳನ್ನು, **ಮಾಡುವನು** = ಬಿಂಬ ಕ್ರಿಯಾ ದ್ವಾರಾ ತಾನು ಮಾಡಿ, ಜೀವನ ದ್ವಾರಾ ಮಾಡಿಸುವನು. **ಪಾಪ ಪುಣ್ಯಗಳೆರಡು** = ಆಯಾಯಾ ಜೀವರ ದೇಹೇಂದ್ರಿಯಗಳ ದ್ವಾರಾ ನಡೆಯತಕ್ಕ ಪಾಪ ಕರ್ಮಗಳೇನು, ಪುಣ್ಯ ಕರ್ಮಗಳೇನು-ಈ ದ್ವಂದ್ವಗಳನ್ನು, **ಅವರ ಸ್ವರೂಪಗಳನನುಸರಿಸಿ** = ಆಯಾಯಾ ಜೀವರ ಸ್ವರೂಪಗತ ಯೋಗ್ಯತೆಗನುಸಾರವಾಗಿ, **ಪರೋಪಕಾರಿ** = ತನ್ನಧೀನರಾದ ಜೀವರಿಗೆ ಅವರವರ ಗತಿ ನೀಡಲೋಸುಗ ಲಿಂಗಭಂಗ ರೂಪವಾದ ಉಪಕಾರವನ್ನು ಮಾಡುವ, **ಪರೇಶ** = ಪರನಾಮಕಳಾದ ಲಕ್ಷ್ಮಿಗಿಂತ ಉತ್ತಮೋತ್ತಮನಾದವನು, **ಪೂರ್ಣಾನಂದ** ಪರಿಪೂರ್ಣವಾದ -ನಿಬಿಡೀಕೃತವಾದ ಆನಂದ, **ಜ್ಞಾನಘನ** =ಜ್ಞಾನದಿಂದ ಪರಿಪೂರ್ಣನು. ಅಂದರೆ, ಅಪ್ರಾಕೃತ ಜ್ಞಾನಾನಂದ ಪರಿಪೂರ್ಣಸ್ವರೂಪನು, **ಉಣಿಪ** =ಜೀವರಿಗೆ ಕರ್ಮ ಫಲವನ್ನು ಉಣಿಸುವನು. ॥೭॥

## ವ್ಯಾಖ್ಯಾನಗಳು

### ೧. ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ :–

ಪಾಪ ಪುಣ್ಯಗಳ ಯೋಗ್ಯತಾನುಸಾರ ಉಣಿಸುತಾನೆ-ಎಂತ ಹೇಳುತಾರೆ.

ಸೌಪರ್ಣೀದೇವೇರ ಪತಿಯಾದ ಗರುಡದೇವರ ಭುಜದಲ್ಲಿ ವಹಿಸಿಕೊಂಡಂಥಾ ಶ್ರೀ ನಾರಾಯಣದೇವರು, ನಾನಾ ವಿಧವಾದ ಜೀವರ ಸ್ವರೂಪಗಳ ಆಯಾ ಸ್ವರೂಪಕ್ಕೆ ಅನುಸರಿಸಿದ ನಾಮುಗಳುಳ್ಳ ಜೀವಸ್ವರೂಪಗಳಲ್ಲಿ ನಾನಾ ರೂಪದಿಂದಲೂ, ಅದೇ ಪ್ರಕಾರ ಹೆಸರಿನಿಂದಲೂ ಕರೆಸಿದವನಾಗಿ, ಆಯಾ ಪ್ರಾಣಿಗಳ ಬಿಂಬನಾಗಿ, ಅವಿಯೋಗನಾಗಿ, ಅಂತರ್ಗತನಾಗಿ ಇದ್ದು,ಇಚ್ಛಾದಿಗಳ ಹುಟ್ಟಿಸಿ, ಆ ಇಚ್ಛಾವನ್ನ ಅನುಸರಿಸಿ ಸ್ಥೂಲದೇಹೇಂದ್ರಿಯಗಳಲ್ಲಿ ಬಿಂಬನಾಗಿ ಇದ್ದು,ಆಯಾ ಇಂದ್ರಿಯಗಳಿಂದ ಏನು ವ್ಯಾಪಾರಗಳ

ಮಾಡಬೇಕೋ ಆ ಸಮಸ್ತ ವ್ಯಾಪಾರಗಳ ಬಿಂಬಕ್ರಿಯಾ ದ್ವಾರಾ ಜೀವನಿಂದ ಮಾಡಸತಾನೆ. ಆಯಾ ಜೀವರ ದೇಹೇಂದ್ರಿಯಾದಿಗಳಿಂದ ಮಾಡಲ್ಪಟ್ಟ ಪಾಪ ಪುಣ್ಯಗಳೆರಡು. ಈ ಎರಡರಿಂದ ಪೂರ್ವೋಕ್ತರಾದ ತನಗೆ ಅನ್ಯರಾದ, ತನಗೆ ಅಧೀನರಾದ ಜೀವರಿಗೆ ಆಯಾ ಜೀವರ ಸ್ವರೂಪಯೋಗ್ಯತಾನುಸಾರ ಸಾಧನ ಪೂರ್ತಿ ಮಾಡಿಸಿ ಲಿಂಗಭಂಗರೂಪವಾದ ಉಪಕಾರವನ್ನು ಮಾಡುವಂಥ, ಅನ್ಯರಾದ ರಮಾ ಬ್ರಹ್ಮಾದಿ ತೃಣಾಂತ ತ್ರಿವಿಧಜೀವರಿಗೆ ಸ್ವಾಮಿಯಾದ, ಸ್ವಲ್ಪ ಕೂಡಾ ಕಡಿಮಿ ಇಲ್ಲದ, ಸಂಪೂರ್ಣವಾಗಿ ನಿರ್ಬಿಡೀಕೃತವಾದ ಅಸದೃಶವಾದ ಸಂತೋಷವೇನು, ಜ್ಞಾನವೇನು, ಗಂಭೀರ ನಾದಂಥವ ಅಂದರೆ, ಪ್ರಳಯೋದಕದೋಪಾದಿಯಲ್ಲಿ ಅಂತ ಅರ್ಥ. ಇಂಥಾ ಪರಮಾತ್ಮ ಪಾಪ ಪುಣ್ಯಗಳ ಅವರವರ ಸ್ವರೂಪವನ್ನು ಅನುಸರಿಸಿ ಇರತಕ್ಕದ್ದನ್ನ ಉಣಿಸೋವನಾಗತಾನೆ.

**ತಾತ್ಪರ್ಯ :–** ಮಿಥ್ಯಾಜ್ಞಾನವೇ ಪಾಪ, ಭೇದಜ್ಞಾನವೇ ಪುಣ್ಯ- ಇವು ಎರಡೂ ಅವರವರ ಸ್ವರೂಪವನ್ನು ಅನುಸರಿಸಿ ಇರತವೆ. ಏತಾದೃಶ ಜ್ಞಾನವನ್ನ ಅನುಸರಿಸಿ, ದೈತ್ಯರ ಮಾಡಿದ ಕರ್ಮಗಳು ಯಾವತ್ತೂ ಪಾಪವೇ ಆಗಿ, ಅವರಿಗೆ ಪಾಪ ಫಲವೇ ಕೊಡತಾನೆ. ಭೇದಜ್ಞಾನಿಗಳು ಮಾಡಿದ ಯಾವತ್ತೂ ಕರ್ಮಗಳು ಪುಣ್ಯವೇ ಆಗಿ, ಅವರಿಗೆ ಪುಣ್ಯ ಫಲವೇ ಕೊಡತಾನೆ. ಲಿಂಗಭಂಗಾನಂತರ ಎಂತ ತಾತ್ಪರ್ಯ. ॥೭॥

**೨. ಭಾವಪ್ರಕಾಶಿಕೆ :–**

ಗರುಡವಾಹನನೂ, ಸರ್ವೋತ್ತಮನೂ, ಪೂರ್ಣಾನಂದ ಜ್ಞಾನಾತ್ಮಕನೂ ಆದ ಹರಿಯು ಪುರುಷರಲ್ಲೂ, ಸ್ತ್ರೀಯರಲ್ಲೂ, ದೇವ ದೈತ್ಯ ಮನುಷ್ಯಾದಿಗಳಲ್ಲೂ ಇದ್ದು, ನಾನಾವಿಧ ಕರ್ಮಗಳನ್ನು ತಾನು ಮಾಡಿ, ಮಾಡಿಸುವನು. ಪುಣ್ಯ ಪಾಪಗಳ ಫಲವನ್ನು ಮಾತ್ರ ಆ ಜೀವರ ಯೋಗ್ಯತಾನುಸಾರವೇ ಕೊಡುವನು. ಆದ್ದರಿಂದ ಪರಮಾತ್ಮನಿಗೆ ವೈಷಮ್ಯಾದಿಗಳು ಇಲ್ಲವೆಂದು ಭಾವ. ಈ ವಿಷಯಗಳನ್ನು ಹಿಂದೆ ಅನೇಕ ಸ್ಥಳಗಳಲ್ಲಿ ವಿವರ ಮಾಡಿರುತ್ತೆ. ॥೭॥

**೩. ಭಾವದರ್ಪಣ :–**

ಸ್ವರೂಪಾನುಸಾರ ಪಾಪ ಪುಣ್ಯ ಫಲಪ್ರಾಪ್ತಿ ಮಾಡಿಕೊಡುವನೆಂದು ಹೇಳುತ್ತಾರೆ. ಸೌಪರ್ಣಿವರ = ಗರುಡ. ॥೭॥

**೪. ಶ್ರೀವ್ಯಾಸದಾಸ ಸಿದ್ಧಾಂತ ಕೌಮುದೀ :–**

"ಸ ವಿಷ್ಣುಃ ಸ ಶಿವಃ ಹರಿಃ" "ಬ್ರಹ್ಮಾ ಚ ಸವಿತಾ ಶಕ್ರಃ ಸೂರ್ಯ ಚಂದ್ರಾದಿ ನಾಮಭಿಃ" "ತತ್ತದ್ಗುಣ ವಿಶೇಷತಃ ಸಂಸ್ತೂಯತೇ ಸ್ತ್ರೀ ರೂಪೇ ಅಪಿ ಕ್ವಚಿತ್" ಇತ್ಯುತ್ತರಂ. ಲಕ್ಷ್ಮೀಸರಸ್ವತೀಂದ್ರಾಣಿ ಗಾಯತ್ರೀ ತ್ಯಾದಿ ನಾಮಭಿಃ । ವೇದೇಷು ಸ್ತೂಯತೇ ಇತ್ಯುಕ್ತಮಾಹ–"ಸೌಪರಣಿ" ಇತಿ ॥ ಅನೇನ ಶ್ರೀಃ ಸರಸ್ವತೀತ್ಯೇತದಪಿ ಪ್ರಮಾಪಿತವಾ್. ॥೭॥

## ಕನ್ನಡಾರ್ಥ

ಆ ನಾರಾಯಣನೇ "ಶಿವ" ಶಬ್ದ ಮುಖ್ಯವಾಚ್ಯನು. ಅವನಲ್ಲಿಯೇ "ಬ್ರಹ್ಮ"ಶಬ್ದವನ್ನು ಮುಖ್ಯವಾಗಿ ಪ್ರಯೋಗಿಸುವರು. ಅವನೇ ಸೂರ್ಯ, ಚಂದ್ರ, ಇಂದ್ರ ಮುಂತಾದ ನಾಮಗಳಿಂದ, ಆಯಾ ಗುಣಗಳಿರುವುದರಿಂದ ಸ್ತುತಿಸಲ್ಪಡುತ್ತಾನೆ. ಈ ಅಭಿಪ್ರಾಯವನ್ನು "ಸೌಪರಣಿ" ಈ ಪದ್ಯದಿಂದ ತೋರಿಸುತ್ತಾರೆ. ಇದರಿಂದ "ಶ್ರೀಃ ಸರಸ್ವತೀ" ಎಂಬ ಮಾತನ್ನೂ ತಿಳಿಸಿ ದಂತೆ ಆಯಿತು. ॥೭॥

**೫. ಶ್ರೀಗುರುಹೃದಯ ಪ್ರಕಾಶಿಕೆ :–**

ಜೀವರು ಬಿಂಬರೂಪಿಯಾದ ದೇವರ ಕ್ರಿಯಾದ್ವಾರಾ ಚೇತನರೆಂಬುವು ದನ್ನು ಮೂರು ಪದ್ಯದಿಂದ ತಿಳಿಸುತ್ತಾರೆ, ಸೌಪರ್ಣೀ ಎಂದು ಮೊದಲು ಪದ್ಯದಿಂದ. ಸೌಪರ್ಣೀದೇವಿ ಪತಿಯಾದ ಗರುಡನ ವಾಹನವುಳ್ಳ ಸ್ವಾಮಿ

ನಾನಾವಿಧ ಜೀವರ ರೂಪ ನಾಮದಿಂದ ಅವರ ಸಮೀಪದಲ್ಲಿದ್ದು ಕರೆಸುತ್ತಾ ಅವರವರ ಅಖಿಳ ವ್ಯಾಪಾರಗಳನ್ನು ವ್ಯಕ್ತಿ ಮಾಡುವನು. ಪಾಪ ಪುಣ್ಯ ಫಲಗಳಾದ ಸುಖ ದುಃಖಗಳನ್ನು ಅವರವರ ಸ್ವರೂಪಾನುಸಾರ ಉಣಿಸುವನು. ಆದ್ದರಿಂದ ಪರೋಪಕಾರಿ, ಸರ್ವೇಶ, ಪೂರ್ಣಾನಂದ, ಅಖಂಡ ಜ್ಞಾನಸ್ವರೂಪನು. ॥೭॥

## ಸರ್ವವ್ಯಾಖ್ಯಾನಸಾರಸಂಗ್ರಹ

ಸೌಪರ್ಣೀದೇವಿಯು ಗರುಡದೇವರ ಪತ್ನಿಯು. **ಸೌಪರ್ಣೀವರನಾದ** ಗರುಡದೇವರ ಹೆಗಲ ಮೇಲೆ ಕುಳಿತು, ಸಂಚರಿಸುವ ಗರುಡಾರೂಢನಾದ ಶ್ರೀಮನ್ನಾರಾಯಣನು **ಸೌಪರ್ಣೀವರವಹನನು.**

ಜೀವರಾಶಿಗಳಲ್ಲಿ ತ್ರಿವಿಧವರ್ಗಗಳಿವೆ. ಅಸಂಖ್ಯಾತರಾದ ಜೀವರು ನಾನಾರೂಪಗಳಲ್ಲಿರುವರು. ಜೀವರ ಸ್ವರೂಪ ಶರೀರವು ನಾನಾ ಪ್ರಕಾರವಾಗಿದೆ. ಅಂತಹ ಜೀವರಲ್ಲಿ ಸೌಪರ್ಣೀವರವಹನು ಬಿಂಬನಾಗಿ **ಶ್ರೀಪರಮಾತ್ಮನು** ಆಯಾಯಾ ಜೀವರ ಆಕಾರ ರೂಪ ವಿಶಿಷ್ಟನಾಗಿದ್ದಾನೆ. ಬಿಂಬ–ಪ್ರತಿಬಿಂಬಗಳ ಸಂಬಂಧ, ನಿತ್ಯ ಹಾಗೂ ಸಾದೃಶ್ಯಗುಣವುಳ್ಳದ್ದು. ಪ್ರತಿ ಜೀವನಲ್ಲೂ ಜೀವಾಕಾರನಾಗಿ, ತದ್ರೂಪನಾಗಿ ಆ ಜೀವರ ಹೆಸರುಗಳಿಂದಲೇ ಕರೆಯಿಸಿಕೊಳ್ಳುತ್ತಾನೆ. ತನ್ನಾಮ ತದ್ವಾಚ್ಯನಾಗಿರುವನು.

**ಪ್ರಮಾಣ :–**

"**॥ಸ ವಿಷ್ಣುಃ** ಸ ಶಿವಃ ಹರಿಃ । ಬ್ರಹ್ಮಾ **ಚ ಸವಿತಾ ಶಕ್ರಃ ಸೂರ್ಯ ಚಂದ್ರಾದಿ ನಾಮಭಿಃ** ॥"

ಜೀವರ ಬಿಂಬನಾದ ಶ್ರೀವಿಷ್ಣುವೇ ಬ್ರಹ್ಮನಲ್ಲಿ ಬ್ರಹ್ಮನೆಂತಲೂ, **ಶಿವನಲ್ಲಿ ಶಿವನಾಮದಿಂದಲೂ** ವಾಚ್ಯನಾಗಿದ್ದಾನೆ.

ಬಿಂಬ ಪ್ರತಿಬಿಂಬಗಳ ಸಂಬಂಧ ಅನ್ಯೋನ್ಯ, ನಿತ್ಯ ಹಾಗೂ ಅನಾದಿ. ಸಕಲಜೀವರೂ ಬಿಂಬನಾದ ಶ್ರೀಶನ ಪ್ರತಿಬಿಂಬಭೂತರು. ಬಿಂಬನು ಪ್ರತಿಬಿಂಬರಾದ ಜೀವರನ್ನು ಎಂದೆಂದಿಗೂ ಬಿಟ್ಟು ಅಗಲನು. ನಿತ್ಯಾವಿಯೋಗಿಯಾದ್ದಾನೆ. ಇದರಿಂದ **ಸಮೀಪದಲ್ಲಿದ್ದು** – ಎಂದು ಜೀವೇಶರ ನೈಕಟ್ಯ ಸಂಬಂಧವನ್ನು ಹೇಳಿದ್ದಾರೆ.

ಸಕಲಜೀವರಲ್ಲಿ ಬಿಂಬನು ಅಂತಸ್ಥಿತನಾಗಿದ್ದು, ಅವರ ದೇಹೇಂದ್ರಿಯಗಳಲ್ಲಿ ವ್ಯಾಪಿಸಿ, ಸಮಸ್ತಕ್ರಿಯಾರೂಪವಾದ ವ್ಯಾಪಾರಗಳನ್ನು ಬಿಂಬಕ್ರಿಯಾ ದ್ವಾರಾ ತಾನೇ ಮಾಡಿ, ತತ್ತ್ವದೇವ ದಾನವರ ದ್ವಾರಾ ಮಾಡಿಸಿ, ದೇಹೇಂದ್ರಿಯಗಳಲ್ಲಿ ಪ್ರಕಾಶತೋವ್ಯಾಪ್ತವಾದ ಜೀವನ ದ್ವಾರಾ ಮಾಡಿ ಮಾಡಿಸುವನು.

ಆಯಾಯಾ ಜೀವರ ಅನಾದಿಸ್ವರೂಪಗತ ಗುಣಕ್ಕನುಸಾರವಾಗಿ **ಪಾಪ ಪುಣ್ಯಗಳೆಂಬ** ದ್ವಂದ್ವ ಕರ್ಮಗಳನ್ನು ಮಾಡಿ ಮಾಡಿಸುವನು. ಅದಕ್ಕೆ ಗನುಗುಣವಾಗಿ ಕರ್ಮಜನಿತ ಫಲಗಳನ್ನು ಜೀವರಿಗೆ ಉಣಿಸುವನು.

ಮಿಥ್ಯಾಜ್ಞಾನವೇ ಪಾಪ. ಭೇದಜ್ಞಾನವೇ ಪುಣ್ಯ, ಮಿಥ್ಯಾಜ್ಞಾನವು ತಮೋಯೋಗ್ಯರ ಸ್ವರೂಪಲಕ್ಷಣವು. ಭೇದಜ್ಞಾನವು ಮುಕ್ತಿಯೋಗ್ಯ ಚೇತನರ ಸ್ವರೂಪಭೂತಗುಣವು. ಅವರವರ ಸ್ವರೂಪಭೂತಗುಣಕ್ಕೆ ತಕ್ಕಂತೆ ಅನುಸಂಧಾನ, ಉಪಾಸನೆ. ತದನುಸಾರ ಕರ್ಮಫಲ ಭೋಕ್ತೃತ್ವ. ಇದರಿಂದ ನಿರ್ದೋಷವಾದ ಬಿಂಬನಿಗೆ ವೈಷಮ್ಯವೆಂಬ ಪಕ್ಷಪಾತ ದೋಷವಿಲ್ಲ.

ಸಕಲಜೀವರೂ ಭಗವಂತನ ಅಧೀನರು. ಅವರ ಕರ್ತೃತ್ವ ಸಾಮರ್ಥ್ಯ ಈಶ್ವರಾಧೀನವು. ಕರ್ತೃತ್ವಶಕ್ತಿ ಜೀವರ ಸ್ವರೂಪಗತ ಲಕ್ಷಣವು. ಶ್ರೀ ಪರಮಾತ್ಮನು ಸರ್ವತಂತ್ರ ಸ್ವತಂತ್ರನು. ಅವನಿಗೆ ರಮಾಬ್ರಹ್ಮಾದಿಗಳಿಂದಲೂ ಆಗಬೇಕಾದ್ದುದೂ ಏನೂ ಇಲ್ಲ. ತನಗಿಂತ ಭಿನ್ನರಾದ ಜೀವರ್ನು

ಅವನಿಗೆ **ಪರರು.** ಕರ್ಮಕ್ಷಯ ದ್ವಾರಾ ಲಿಂಗಭಂಗವೆಂಬ ಮಹೋಪಕಾರ ವನ್ನು ಜೀವರಿಗೆ ಮಾಡುವುದರಿಂದ **ಪರೋಪಕಾರಿಯು.**

"ಪರ" – ನಾಮಕಳಾದ ಇಂದಿರೆಗಿಂತ ಅನಂತಾನಂತಕೋಟಿಗುಣ ಗಳಿಂದ ಉತ್ತಮೋತ್ತಮನು. ಲಕ್ಷ್ಮಿಗೆ ನಿಯಾಮಕನು. ಇದರಿಂದ **ಪರೇಶನು.**

ಶ್ರೀಹರಿಯು ಜ್ಞಾನ ಆನಂದಾದಿ ಗುಣಗಳು ಅಪಾರ, ಅಪರಿಚ್ಛಿನ್ನ ಹಾಗೂ ಅಪ್ರಾಕೃತ. ಸರ್ವಗುಣಗಳಲ್ಲಿಯೂ ಏಕಪ್ರಕಾರವಾಗಿ ಪರಿಪೂರ್ಣನು. ಇದರಿಂದ ಪೂರ್ಣಜ್ಞಾನಾನಂದ ಸ್ವರೂಪಿಯು. **ಪೂರ್ಣಾನಂದ ಜ್ಞಾನಘನನು.** ॥೭॥

## ಪದ್ಯ - ೮

ಮೂಲ :–

ಆಹರನಿದ್ರಾ ಮೈಥುನಗಳಹ ।
ರಹರ ಬಯಸಿ ಬಳಲುವವ ಲಕ್ಷ್ಮೀ ।
ಮಹಿತನ ಮಹಾಮಹಿಮೆಗಳನೆಂತರಿವ ನಿತ್ಯದಲಿ ॥
ಅಹಿಕ ಸೌಖ್ಯವ ಮರೆದು ಮನದಲಿ ।
ಗ್ರಹಿಸಿ ಶಾಸ್ತ್ರಾರ್ಥಗಳ ಪರಮೋ ।
ತ್ಸಹದಿ ಕೊಂಡಾಡುತಲಿ ಮೈಮರೆದವರಿಗಲ್ಲದೆಲೆ ॥ ॥೮॥

**ಅವತರಣಿಕೆ :–**

ನಿತ್ಯದಲ್ಲಿಯೂ ಐಹಿಕ ವಿಷಯೋಪಭೋಗಗಳಲ್ಲಿಯೇ ಆಸಕ್ತರಾಗಿರುವವರು ಶ್ರೀಹರಿಯ ಮಹಾಮಹಿಮೆಯನ್ನು ಅರಿಯರೆಂದು ತಿಳಿಸುತ್ತಾರೆ– **ಅಹರನಿದ್ರಾ ಮೈಥುನ** – ಎಂಬ ೮ ನೆಯ ಪದ್ಯದಿಂದ. ॥೮॥

**ಪ್ರತಿಪದಾರ್ಥ :–**

**ಅಹರ** = ಹಗಲಿನಲ್ಲಿ, **ನಿದ್ರಾ** = ಹಗಲಿನಲ್ಲಿಯೂ ನಿದ್ರೆ ಅಂದರೆ ಅಹೋರಾತ್ರಿಗಳಲ್ಲಿ ನಿದ್ರೆ, **ಅಹರಹರ** = ಹಗಲು ರಾತ್ರಿಗಳ ಕಾಲಗಳಲ್ಲಿ, **ಮೈಥುನಗಳ** = ಸ್ತ್ರೀ ಭೋಗಗಳನ್ನು, **ಬಯಸಿ** = ಅಪೇಕ್ಷಿಸುತ್ತಾ, **ಬಳಲುವ** = ವಿಷಯಾಸಕ್ತನಾಗಿರುವವನು, **ಲಕ್ಷ್ಮೀರಮಣನ** = ಶ್ರೀ ಲಕ್ಷ್ಮೀದೇವಿಯರಿಂದ ಉಪಾಸ್ಯಮಾನನಾದ ಶ್ರೀಪರಮಾತ್ಮನ, **ಮಹಾಮಹಿಮೆಗಳನು** = ಅಪಾರವಾದ ಮಹಿಮಾತಿಶಯಗಳನ್ನು, **ಎಂತು ಅರಿವ** ಹೇಗೆ ತಾನೇ ತಿಳಿಯಬಲ್ಲನು ? **ನಿತ್ಯದಲಿ** = ಪ್ರತಿದಿನಗಳಲ್ಲಿ, **ಐಹಿಕ ಸೌಖ್ಯವ ಮರೆದು** = ಉದರ ಪೋಷಣೆ, ನಿದ್ರಾ, ಮೈಥುನಾದಿ ಪ್ರಾಪಂಚಿಕ ವಿಷಯಭೋಗಗಳನ್ನು ಬಿಟ್ಟು, **ಶಾಸ್ತ್ರಗಳ** = ಸಚ್ಛಾಸ್ತ್ರಗತ ಪ್ರಮೇಯರಹಸ್ಯಾರ್ಥಗಳನ್ನು, **ಮನದಲಿ ಗ್ರಹಿಸಿ** = ಮನಸ್ಸಿನ ದ್ವಾರಾ ಅರ್ಥಮಾಡಿಕೊಂಡು, **ಪರಮೋತ್ಸಹದಿ** = ಅತ್ಯಂತ ಉಲ್ಲಾಸ ಭರಿತವಾದ ಆನಂದದಿಂದ, **ಮೈಮರೆದು** = ಆನಂದೋದ್ರೇಕದಿಂದ ಮೈಮರೆತು, ರೋಮಾಂಚಿತನಾಗಿ, **ಕೊಂಡಾಡುತಲಿ** = ಶ್ರೀ ಪರಮಾತ್ಮನ ಮಹಾಮಹಿಮೆ, ಗುಣಾವಳಿಗಳನ್ನು ಸ್ತೋತ್ರ ಮಾಡುತ್ತಾ, ಭಜಿಸುತ್ತಿರುವ, **ಅವರಿಗಲ್ಲದಲೆ** = ಅಂತಹ ಭಗವದ್ಭಕ್ತರಿಗಲ್ಲದೇ ವಿಷಯಾಸಕ್ತರಾದ ಇತರರು ತಿಳಿಯಬಲ್ಲರೇ ?– ಎಂದು ಪ್ರಶ್ನಿಸುತ್ತಾರೆ. ದಾಸರಾಯರು. ॥೮॥

# ವ್ಯಾಖ್ಯಾನಗಳು

## ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ:-

ಶ್ರೀಪರಮಾತ್ಮನ ಮಹಿಮಾವನ್ನ ದಾರು ತಿಳೀತಾರೆ, ದಾರು ತಿಳಿಯೋದಿಲ್ಲ ಎಂಬ ಉಭಯರ ವಿಚಾರ ಹೇಳತಾರೆ.

ಸರ್ವದಾ ಜಿಹ್ವಾಚಾಪಲ್ಯದಿಂದ ಅತಿಶಯವಾದ ಭೋಜನವನ್ನು ಅಹೋ ರಾತ್ರಿಗಳಲ್ಲಿ ನಿದ್ರಾ ಏನು, ಗುಹ್ಯಚಾಪಲ್ಯದಿಂದ ಸ್ವಸ್ತ್ರೀ ಅಥವಾ ಪರಸ್ತ್ರೀ ಸಂಭೋಗವೇನು ಇತ್ಯಾದಿಗಳ, ಹಗಲು ರಾತ್ರಿಯಲ್ಲಿಯೂ ಅಪೇಕ್ಷಾ ಮಾಡಿದವನಾಗಿ, ಅದರಲ್ಲೇ ಲೋಲನಾಗಿ ಆಯಾಸಪಡತಕ್ಕವ, ರಮಾದೇವೇರಿಂದ ಉಪಾಸ್ಯಮಾನನಾದ ಶ್ರೀನಾರಾಯಣದೇವರ ವಿಸ್ತಾರವಾಗಿನ್ನೂ, ಶ್ರೇಷ್ಠವಾಗಿನ್ನೂ ಇರುವ ಮಹಾತ್ಮ್ಯಗಳ ಹ್ಯಾಂಗೆ ತಿಳಿವ ಅಂದರೆ, ಶುದ್ಧವಾಗಿ ತಿಳಿಯಲಾರನು. ಆದರೆ ದಾರು ತಿಳಿಯುತಾರೆ ಅಂದರೆ, ಪ್ರತಿದಿನ ಪ್ರತಿಕ್ಷಣದಲ್ಲೂ ಪೂರ್ವೋಕ್ತ ಆಹಾರ, ನಿದ್ರಾ, ಮೈಥುನ ಸುಖಗಳಲ್ಲಿ ಆಶಾ ತ್ಯಾಗಮಾಡಿ, ಅಹಂ ಮಮತಾದಿಗಳ ಬಿಟ್ಟು ಐಹಿಕ ವಿಷಯದಲ್ಲಿ ಹ್ಯಾಂಗೆ ಇರತಾನೋ ಹಾಂಗೆ, ಪರಮಾತ್ಮನಲ್ಲಿ ತೈಲಧಾರೆಯಂತೆ ಮನಸ್ಸು ಮಾಡಿ, ಗುರುಗಳ ಮುಖದಿಂದ ಸಚ್ಛಾಸ್ತ್ರಗಳ ಓದಿ, ಆ ಓದಿದ್ದರನ್ನ ಅರ್ಥಾವಲೋಕನದಿಂದ ಮನಸ್ಸಿನಲ್ಲಿ ಮನನ ಮಾಡಿ, ಅದರಂತೆ ಅನುಷ್ಠಾನ ಮಾಡುತಾ ಅತ್ಯಂತ ಸಂತೋಷದಿಂದ ಶ್ರೀಪರಮಾತ್ಮನ್ನ ಕೊಂಡಾಡುತಾ, ಆನಂದೋದ್ರೇಕದಿಂದ ಶರೀರದಲ್ಲಿ ಸ್ಮರಣೆ ಇಲ್ಲದವನು ದಾವನೋ ಅವನೇ ಭಗವದ್ಭಕ್ತನು ಹೊರ್ತು ಅನ್ಯರು ಅಲ್ಲ ಎಂತ ಭಾವ.

**ತಾತ್ಪರ್ಯ** :- ಭಗವನ್ಮಹಿಮಾ ಅರಿತು, ತದನುಷ್ಠಾನವುಳ್ಳವ ವಿಷಯ ವಿರಕ್ತನಾಗತಾನೆ. ಮಹಿಮಾ ತಿಳಿಯದವ, ತಿಳಿದೂ ಅನುಷ್ಠಾನ ಇಲ್ಲದವ, ದೇವರನ್ನು ಮರೆತು ಅಹಂಕಾರಯುಕ್ತನಾಗಿ, ವಿಷಯಾಸಕ್ತನಾಗಿ ಇರತಾನೆ.

ತಿಳಿಯದವನಿಗಿಂತಲೂ ತಿಳಿದವ ಉತ್ತಮ. ಬರೀ ತಿಳಿದವನನಿಗಿಂತಲೂ ಅನುಷ್ಠಾನ ಮಾಡತಕ್ಕವ ಉತ್ತಮ. ಈ ಜನ್ಮದಲ್ಲಿ ಶಾಸ್ತ್ರಶ್ರವಣವಿಲ್ಲದೆ ಅಲ್ಪಸಂಸ್ಕಾರದಿಂದ ಅನುಷ್ಠಾತೃವಾಗತಾನೆ. ಜನ್ಮಾಂತರಗಳಲ್ಲಿ ಶಾಸ್ತ್ರ ಶ್ರವಣಾದಿಗಳ ಬಹು ವಿಧದಲ್ಲಿ ಮಾಡಿ, ಪಾಠಪ್ರವಚನ ವಿಧ್ಯುಕ್ತ ಆಚಾರ ದಿಂದ ಅನುಷ್ಠಾನಮಾರ್ಗಾವಲಂಬನ ಮಾಡಿ, ಆ ವಾಸನಾದಿಂದ ವರ್ತ ಮಾನ ಜನ್ಮದಲ್ಲಿ ಅಲ್ಪಸಂಸ್ಕಾರದಿಂದ ವಿರಕ್ತನಾಗಿ, ಅನುಷ್ಠಾನಪರನಾಗಿ ಇರತಾನೆ-ಎಂತ ತಾತ್ಪರ್ಯ. ॥೮॥

## ೨. ಭಾವಪ್ರಕಾಶಿಕೆ :-

ಯಾವ ಪುರುಷನು ಕ್ಷಣಿಕವಾದ ಐಹಿಕ ಸುಖವನ್ನು ಸುಖವೆಂದು ಭಾವಿಸದೆ, ಪರಮಾತ್ಮನಲ್ಲಿ ದೃಢತರವಾದ ಭಕ್ತಿಯಿಂದ ಶಾಸ್ತ್ರಗಳನ್ನು ಶ್ರವಣಮಾಡಿ, ಮನನ ಮಾಡುತ್ತಾ. ಪ್ರೈಮರೆತು ಪರಮಾತ್ಮನನ್ನು ಕೊಂಡಾಡುತ್ತಿರುವನೋ ಅವನಿಗೆ ಪರಮಾತ್ಮನ ಮಹಿಮೆಯು ಗೊತ್ತಾಗು ವುದೇ ಹೊರತು, ಆಹಾರ, ನಿದ್ರೆ ಸ್ತ್ರೀಭೋಗ ಮೊದಲಾದ ಕ್ಷಣಿಕ ಸುಖ ವನ್ನೇ ಸರ್ವದಾ ಅಪೇಕ್ಷಿಸುತ್ತಾ, ಸಂಸಾರ ಲೋಲುಪರಾದವರಿಗೆ ಭಗ ವನ್ಮಹಿಮೆಯು ಗೊತ್ತಾಗುವುದೆಂತು ! ಎಂದಿಗೂ ಗೊತ್ತಾಗದೆಂಬ ಭಾವ. ॥೮॥

## ೩. ಭಾವದರ್ಪಣ :-

ಅಹರ । ಆಹಾರ ನಿದ್ರಾ ಇವುಗಳು ಅಹರಹ ಹಗಲು ರಾತ್ರಿ ಎಂಬರ್ಥ. ॥೮॥

## ೪. ವ್ಯಾಸದಾಸ ಸಿದ್ಧಾಂತ ಕೌಮುದೀ :-

"ಅಹರ" ಇತಿ ॥ 'ಎಂತರಿವ' –ಹೇಗೆ ತಿಳಿಯುವ. ॥೮॥

## ಕನ್ನಡಾರ್ಥ

ಎಂತು—ಅರಿವ = ಎಂತರಿವ–ಹೇಗೆ ತಿಳಿಯುವ.

**೫. ಶ್ರೀ ಗುರುಹೃದಯ ಪ್ರಕಾಶಿಕೆ :–**

ಐಹಿಕಸುಖದ ಅಪೇಕ್ಷೆಯನ್ನು ದೃಢ ವೈರಾಗ್ಯದಿಂದ ಮರೆತು, ಶಾಸ್ತ್ರಾರ್ಥಗಳನ್ನು ಮನಸ್ಸಿಗೆ ತಂದುಕೊಂಡು, ಪರಮೋತ್ಸಾಹವೆಂಬ ದೃಢಭಕ್ತಿಯಿಂದ ದೇವರನ್ನು ಸ್ತುತಿಸುತ್ತಾ, ದೇಹಾಭಿಮಾನವನ್ನು ಬಿಡುವ ಸಜ್ಜನರಿಗೆ ಲಕ್ಷ್ಮಿಯಿಂದ ಪೂಜ್ಯನಾದ ದೇವರ ಮಹಿಮೆ ತಿಳಿಯುವುದು. ಪಶುಗಳಂತೆ ಆಹಾರ,ನಿದ್ರೆ,ಸ್ತ್ರೀ ಭೋಗಗಳೆಂಬ ಮೂರನ್ನೇ ಸದಾ ಬಯಸಿ ಬಳಲುವವನು, ಲಕ್ಷ್ಮೀಪತಿಯ ಮಹಾತ್ಮ್ಯೆಯನ್ನು ತಿಳಿಯುವುದಿಲ್ಲ. ॥೮॥

# ಸರ್ವವ್ಯಾಖ್ಯಾನಸಾರಸಂಗ್ರಹ

ಜಿಹ್ವಾಚಾಪಲ್ಯದಿಂದ ರುಚಿಕರವಾದ ಭೋಜನವೇನು, ಹಗಲು ರಾತ್ರಿಗಳನ್ನದೆ ನಿದ್ರೆಯೇನು, ವಿಷಯಲೋಲುಪನಾಗಿ, ಇಂದ್ರಿಯ ಚಾಪಲ್ಯಕ್ಕಾಗಿ ಸ್ತ್ರೀಭೋಗಾದಿಗಳೇನು- ಇತ್ಯಾದಿ ನಾನಾ ಪ್ರಕಾರವಾದ ವಿಷಯೋಪಭೋಗಗಳಲ್ಲಿ ಹಗಲೂ ರಾತ್ರಿ ಆಸಕ್ತನಾಗಿರುವ ಪಾಮರನು ಲಕ್ಷ್ಮೀಪತಿಯಾದ ಶ್ರೀಹರಿಯ ಮಹಾಮಹಿಮೆಗಳನ್ನು ಅರಿಯಲು ಸಾಧ್ಯವೇ ? ಶ್ರೀಹರಿಯ ವಿಸ್ಮೃತಿಯಿಂದ ಐಹಿಕ ಭೋಗಗಳಲ್ಲಿಯೇ ಅವನ ಮನಸ್ಸು ಸದಾ ಆಸಕ್ತವಾಗಿರುವುದು.

ವಿಷಯಾಸಕ್ತಿಯನ್ನು ತೊರೆದು, ಪ್ರಾಪಂಚಿಕ ಸುಖಗಳು ಕ್ಷಣಿಕವೆಂದು ತಿಳಿದು, ವೈರಾಗ್ಯಶಾಲಿಯಾಗಿ, ಶ್ರೀಹರಿಯ ಪಾದಾರವಿಂದಗಳಲ್ಲಿಯೇ ಆಸಕ್ತಮನಸ್ಕನಾಗಿರುವವನೇ ಶ್ರೀಪರಮಾತ್ಮನ ಮಹಾಮಹಿಮೆಗಳನ್ನು ತಿಳಿಯಲು ಅರ್ಹನಾದವನು.

ವಿಷಯಲಂಪಟರಹಿತನಾಗಿ, ಅಹಂಕಾರ ಮಮಕಾರಗಳನ್ನು ತೊರೆದು, ಸಚ್ಛಾಸ್ತ್ರಗಳನ್ನು ಗುರೂಪಸಕ್ತಿಮಾರ್ಗದಿಂದ ಅಧ್ಯಯನ ಮಾಡುತ್ತಾ, ಅದರಂತೆ ಮನನ ಮಾಡುತ್ತಾ, ತನ್ನ ನಿತ್ಯಜೀವನದಲ್ಲಿ ಶಾಸ್ತ್ರಾರ್ಥಗತ ತತ್ತ್ವಗಳನ್ನು ಅನುಷ್ಠಾನದಲ್ಲಿ ತರುತ್ತಾ, ಭಗವತ್ಸೇವೆಯಲ್ಲಿ ಸದಾ ನಿರತನಾಗಿ, ವೈಸ್ಮರಣೆ ಹಾರಿ, ಗದ್ಗದಕಂಠದಿಂದ, ರೋಮಾಂಚಿತನಾಗಿ, ಶ್ರೀಹರಿಯ ಮಹಿಮೆ, ಗುಣಾತಿಶಯಗಳನ್ನು ಕೊಂಡಾಡುತ್ತಿರುವವರಿಗಲ್ಲದೆ, ಅನ್ಯರಾದ ವಿಷಯಲಂಪಟರಿಗೆ ಶ್ರೀಹರಿಯ ಒಲುಮೆಯ ಪ್ರಾಪ್ತಿಯಾಗುವುದಿಲ್ಲವೆಂದು, ನಿಜಭಕ್ತರ ಲಕ್ಷಣವನ್ನು ತಿಳಿಸುತ್ತಾರೆ- ಪ್ರಸಕ್ತಪದ್ಯದಿಂದ. ॥೮॥

## ಪದ್ಯ—೯

ಮೂಲ :-

ಬಂಧ ಮೋಕ್ಷಪ್ರದನ ಜ್ಞಾನವು ।
ಮಂದಮತಿಗಳಿಗೆಂದು ದೊರೆವುದು ।
ಬಿಂದು ಮಾತ್ರ ಸುಖಾನುಭವ ಪರ್ವತಕೆ ಸಮದುಃಖ ॥
ಎಂದು ತಿಳಿಯದಲನ್ಯದೈವಗ ।
ಳಿಂದ ಸುಖವಾಪೇಕ್ಷಿಸುವರು ಮು ।
ಕುಂದನಾರಾಧನೆಯ ಬಿಟ್ಟವಗುಂಟೆ ಮುಕ್ತಿಸುಖ ॥ ॥೯॥

**ಅವತರಣಿಕೆ :–**

ಬಂಧಮೋಕ್ಷ ಪ್ರದನಾದ ಮುಕುಂದನ ಪಾದಾರವಿಂದಧ್ಯಾನವನ್ನು ಬಿಟ್ಟು, ಅವನನ್ನು ಪರ್ವತಕೆ ಸಮದುಃಖವೇ ಹೊರತು, ಮುಕ್ತಿ ಸುಖ ವಿಲ್ಲೆಂದು ತಿಳಿಸುತ್ತಾರೆ – **ಬಂಧ ಮೋಕ್ಷಪ್ರದನ** – ಎಂಬ ೯ ನೆಯ ಪದ್ಯ ದಿಂದ. ॥೯॥

**ಪ್ರತಿಪದಾರ್ಥ :–**

**ಬಂಧ** = ಅನಾದಿಯಿಂದ ಜೀವನಿಗೆ ಆವರ್ತವಾಗಿರುವ ಲಿಂಗ ದೇಹಾಖ್ಯಬಂಧನವನ್ನು, **ಮೋಕ್ಷಪ್ರದನ** = ಲಿಂಗಭಂಗದ್ವಾರಾ ಕರ್ಮವಿಮೋಚನೆಗೈದು, ಜೀವನ ಸ್ವರೂಪಗತ ಆನಂದವನ್ನು ಅಭಿವ್ಯಕ್ತಿ ಮಾಡಿ, ನಿತ್ಯಾನಂದರೂಪವಾದ ಮುಕ್ತಿಯ ಭೋಗಪ್ರದನಾದ ಶ್ರೀ ಮುಕುಂದನ, **ಜ್ಞಾನವು** = ಭಗವತ್ಸಂಬಂಧವಾದ ಜ್ಞಾನವು, **ಮಂದ ಮತಿಗಳಿಗೆ** = ವಿಷಯಾಸಕ್ತರಾದ, ಮೂಢರಿಗೆ, **ಎಂದು ದೊರೆವುದು** = ಯಾವಾಗ ಸಿಗುವುದು ? **ಸುಖಾನುಭವ** = ಅವರಿಗೆ ವಿಷಯಭೋಗಗ ಳಿಂದ ಉಂಟಾಗುವ ಸುಖವು, **ಬಿಂದುಮಾತ್ರ** = ಅತ್ಯಲ್ಪ ಮತ್ತು ಕ್ಷಣಿಕ. **ದುಃಖ** = ಸುಖಾನುಭವದ ನಂತರ ಉಂಟಾಗುವ ದುಃಖವು, **ಪರ್ವತಕೆ ಸಮ** = ಮೇರು ಪರ್ವತಕ್ಕೆ ಸಮ. ಅಂದರೆ ಅಲ್ಪಸುಖ, ಅಪಾರದುಃಖ, **ಎಂದು ತಿಳಿಯದೆ** = ಈ ರಹಸ್ಯವನ್ನು ಅರಿಯದೇ, **ಅನ್ಯದೈವಗಳಿಂದ** = ಶ್ರೀಹರಿಗೆ ಅನ್ಯರಾದ ಬ್ರಹ್ಮಾದಿ ಇತರ ದೇವತೆಗಳು, ಕ್ಷುದ್ರದೇವತೆ ಗಳೂ ಇವುಗಳಿಂದ, **ಸುಖವ ಅಪೇಕ್ಷಿಸುವರು** = ಸುಖ ಉಂಟಾಗು ವುದು ಎಂದು ಅನ್ಯದೇವತೋಪಾಸಕರು ಅಪೇಕ್ಷಿಸುತ್ತಾರೆ. **ಮುಕುಂ ದನ** = ಮೋಕ್ಷಪ್ರದನಾದ ಶ್ರೀಪರಮಾತ್ಮನ, **ಆರಾಧನೆಯ ಬಿಟ್ಟವಗೆ** = ಅರ್ಚನೆ, ಸಂಸ್ಮರಣೆ ಭಜನೆ ಇತ್ಯಾದಿಗಳನ್ನು ತೊರೆದವನಿಗೆ, **ಮುಕ್ತಿ ಸುಖ ಉಂಟೆ** = ಸ್ವರೂಪಗತ ನಿತ್ಯಾನಂದರೂಪವಾದ ಆನಂದಭೋಗ ಇದೆಯೋ ? ಸರ್ವಥಾ ಇಲ್ಲವೆಂದರ್ಥ. ॥೯॥

# ವ್ಯಾಖ್ಯಾನಗಳು

## ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ಪರಮಾತ್ಮನ ಬಿಟ್ಟವಗೆ ಮುಕ್ತಿಸುಖವಿಲ್ಲ-ಎಂತ ಹೇಳತಾರೆ.

ಅನಾದಿಯಿಂದ ಜೀವಗೆ ಬಂಧರೂಪವಾದ ಲಿಂಗದೇಹಾಖ್ಯಬಂಧವನ್ನ ಪರಿಹಾರ ಮಾಡಿ, ಜೀವನ ಸ್ವರೂಪವೇನು, ತದ್ಗತ ಆನಂದವೇನು ಅಭಿವ್ಯಕ್ತಮಾಡಿ, ಭೋಗಪ್ರದನಾದ ಶ್ರೀಪರಮಾತ್ಮನ, ತಾರತಮ್ಯ ಪಂಚಭೇದ ಪೂರ್ವಕವಾಗಿ ಸರ್ವೋತ್ತಮತ್ವಾದಿಗುಣಗಳ ಜ್ಞಾನವು, ತದನು ಧ್ಯಾನವು, ವಿಷಯಾಸಕ್ತರಾಗಿ ವಿಷಯ ಭೋಗಗಳು ಶಾಶ್ವತವೆಂದು ತಿಳಿದು, ಅಶಾಶ್ವತ ಎಂಬೋದು ಪ್ರತ್ಯಕ್ಷ ಕಣ್ಣಿಂದಾ ನೋಡತಾ ಇದ್ದ್ರಾನೂ, ಅದರ ವಿಚಾರ ಮನನ ಮಾಡದೆ ವಿಷಯಾಸಕ್ತರಾದ, ಓದಿ ಇರುವ, ಓದದೇ ಇರುವ ಈ ಉಭಯ ವಿಧರಾದ ಮಂದಮತಿಗಳಿಗೆ, ಇನ್ನೂ ಪೂರ್ವಾಪರ ವಿಚಾರ ಇಲ್ಲದವರಿಗೆ ಭಗವನ್ಮಹಿಮಾ ಏನು, ತದ್ವಿಷಯಯುಕ್ತವಾದ ಸುಖವೇನು ಯಾವಾಗ ಸಿಕ್ಕೋದಾಗತದೆ ? ಸಿಕ್ಕಲಾರದು ಎಂತ ಭಾವ. ವಿಷಯಾಸಕ್ತರಾಗಿ ಇದ್ದವರಿಗೆ ಇದರಲ್ಲಿ ಇರತಕ್ಕ ಸುಖ ಎಂಥಾದ್ದೆಂದರೆ, ಒಂದು ಉದಕಬಿಂದುಮಾತ್ರ ಸುಖ, ಮೇರುಪರ್ವತಕ್ಕೆ ಸಮಾನ ದುಃಖ, ಅಂದರೆ ಅತ್ಯಲ್ಪ ಸುಖ, ಅತ್ಯಧಿಕ ದುಃಖ ಇರೋದಾಗಿ ಅದೆ. (ಮತ್ತು ರೇತೋಬಿಂದು ಪತನಸುಖ ನಿಮಿಷ ಕಾಲದ ಸುಖ. ತಜ್ಜನಿತ ಸಂಸಾರ ಮೇರುತುಲ್ಯವಾದ ದುಃಖ ಇದರನ ಭೋಗಸತಾ, ದುಃಖ ಪ್ರತ್ಯಕ್ಷದಲ್ಲಿ ಅನುಭವ ಮಾಡುತಲೂ, ಅದರ ಕಾರಣ ವಿಚಾರ ಮಾಡದೇನೆ ಬಾರಿ ಬಾರಿಗೂ ಆ ಬಿಂದುಸುಖಕ್ಕಾಗಿ ಮಹಾಪ್ರಯತ್ನ ಮಾಡತಾರೇ ಹೊರ್ತು, ಮೇರುತುಲ್ಯ ದುಃಖ ಪರಿಹಾರಕ್ಕೆ ಯತ್ನ ಮಾಡೋದಿಲ್ಲ. ಮೂಲಕಾರಣ ಅಹಂ ಮಮತಾ ಎಂಬುವು ಎರಡು), ಎಂಬುದರನ್ನ ತಿಳಿಯದೆ ದುಃಖಗಳ ಭೋಗ ಮಾಡತಾ ಮತ್ತು ತಮಗೆ ಪ್ರಾಪ್ತವಾಗಿ ಭೋಗಿಸತಾ ಇರುವ

ವಿಷಯಜನ್ಯ ದುಃಖವ, ಈಶ್ವರಗೆ ಅನ್ಯರಾದ ದೇವತೆಗಳಾದ ಬ್ರಹ್ಮ ವಾಯ್ವಾದಿದೇವತೆಗಳ ಅಂತರ್ಗತ ಪರಮಾತ್ಮನ್ನ ತಿಳಿಯದೆ, ಆಯಾ, ಅನ್ಯ ದೇವತೆಗಳಿಂದಲೇ ತಮಗೆ ದುಃಖ ಪರಿಹಾರವಾಗಿ ಸುಖವಾಗತದೆ- ಎಂತ ಭಾವನೆ ಮಾಡಿ,ಸುಖವನ್ನ ಅಪೇಕ್ಷಿಸುವವರು ಆಗತಾರೆ. ಮೋಕ್ಷಪ್ರದನಾದ ಶ್ರೀಪರಮಾತ್ಮನ ಆರಾಧನೆಯನ್ನು ಬಿಟ್ಟು, ಅನ್ಯದೇವತೆಗಳನ್ನು ಮಾತ್ರ ಪೂಜಾದಿಗಳು ಮಾಡಿದವಗೆ ದುಃಖರೂಪಬಂಧನ ಪರಿಹಾರವಾಗಿ ಸ್ವರೂಪ ಸುಖಭೋಗ ಉಂಟಾ-ಎಂದರೆ,ಶುದ್ಧವಾಗಿ ಇಂದಿಗೂ ಇಲ್ಲ.

**ವಿಶೇಷಾರ್ಥ :–** ನೀಚಾಧಿಷ್ಠಾನದಲ್ಲಿ ಅಂತರ್ಗತ ತಿಳಿದೂನೂ ಪೂಜಾದಿಗಳು ನಿಷೇಧ. ಉತ್ತಮಾಧಿಷ್ಠಾನದಲ್ಲಿ ಸರ್ವತ್ರ ಪರಮಾತ್ಮನ ವ್ಯಾಪ್ತಿ ತಿಳೀಬೇಕು-ಎಂತ ತಾತ್ಪರ್ಯ. ॥೯॥

**೨. ಭಾವಪ್ರಕಾಶಿಕೆ :–**

ಸರ್ವಪ್ರಾಣಿಗಳನ್ನು ಸಂಸಾರದಲ್ಲಿ ತಗಲಿಸುವುದಕ್ಕೂ ಸಂಸಾರದಿಂದ ಬಿಡುಗಡೆ ಮಾಡಿ ಮುಕ್ತಿಯನ್ನು ಕೊಡುವುದಕ್ಕೂ ಪರಮಾತ್ಮನು ಸಮರ್ಥನೇ ಹೊರತು, ಮತ್ಯಾರಿಗೂ ಈ ಅಧಿಕಾರವು ಇಲ್ಲ. ಇಂತಹ ಪರಮಾತ್ಮನ ವಿಷಯಕವಾದ ಜ್ಞಾನವು, ಅಲ್ಪಮತಿಗಳಿಗೆ ದೊರಕುವುದೆಂತು ! ಇವರು ಅನ್ಯದೇವತೆಗಳನ್ನು ಭಜಿಸಿ, ಸಂಪತ್ತನ್ನೂ, ಆಯುಷ್ಯವನ್ನೂ ಬೇಡಿ, ಕೃತಾರ್ಥರು ತಾವೆಂದು ಭಾವಿಸುವರು. ಈ ಸಂಸಾರದಲ್ಲಿರುವ ವಿಷಯ ಭೋಗವನ್ನು ನೋಡಿದರೆ, ಅದು ಬಿಂದುಮಾತ್ರ ಸುಖವು. ದುಃಖವು ಬೆಟ್ಟದಂತೆ ಇರುವುದು. "ಕರ್ಮ ದುಃಖಪ್ರತೀಕಾರಂ ಸುಖವನ್ಮನ್ಯತೇ ಗೃಹೇ" ಎಂದು **ಭಾಗವತ** ವಾಕ್ಯದಂತೆ, ದುಃಖ ಪರಿಹಾರಕ್ಕೆ ಪ್ರಯತ್ನ ಪಡುತ್ತಾ, ನಾನೇ ಸುಖಿ ಎಂದು ಭಾವಿಸುವವನು ಇಂತಹಾ ಅತ್ಯಲ್ಪ ಸುಖ ಕ್ಕಾಗಿ ಅನ್ಯದೇವತೆಗಳನ್ನು ಭಜಿಸುವನು. ಮೋಕ್ಷಪ್ರದನಾದ ಪರಮಾತ್ಮ ನನ್ನು ಭಜಿಸದೆ ಇರುವವನಿಗೆ ಮೋಕ್ಷವೆಲ್ಲಿಯದು ! ಎಂದಿಗೂ ಇಲ್ಲವೆಂಬ ಭಾವ. ॥೯॥

೩. ಭಾವದರ್ಪಣ :–

ಅನ್ಯದೇವತಾರಾಧನೆ ಮಾಡದೆ ಪರಮಾತ್ಮನನ್ನೇ ಆರಾಧಿಸುವವಗೆ ಮುಕ್ತಿಸುಖವೇ-ಎಂದು ಹೇಳುತ್ತಾರೆ. ಬಂಧ ಮೋಕ್ಷ ॥೯॥

೪. ಶ್ರೀ ವ್ಯಾಸದಾಸ ಸಿದ್ಧಾಂತ ಕೌಮುದೀ :–

'ಬಂಧ' ಇತಿ ॥ "ಸಮಸ್ತ ಯಜ್ಞ ಭೋಕ್ತಾರಂ ಅವಿದಿತ್ವಾಽಚ್ಯುತಂ ಹರಿಮ್ ॥ ಉದ್ದಿಶ್ಯ ದೇವತಾಃ ಯಸ್ತು ಜುಹೋತಿ ಚ ದದಾತಿ ಯಃ ॥ ಸ ಪಾಷಂಡೀ" ಇತಿ ವಾಚಂ ಅನುಸೃತ್ಯ ಆಹ– 'ಅನ್ಯದೈವ' ॥ 'ಮೋಕ್ಷ ಶಾಕಾ' ಇತ್ಯುಕ್ತಂ ಆಹ– 'ಮುಕ್ತಿಸುಖ' ಇತಿ. ॥೯॥

## ಕನ್ನಡಾರ್ಥ

ಯಜ್ಞಗಳನ್ನೆಲ್ಲ ಭುಂಜಿಸುವವನು ಶ್ರೀಹರಿಯೇ ! "ಹೀಗೆ ತಿಳಿಯದೆ ಅನ್ಯದೇವತೆಗಳನ್ನುದ್ದೇಶಿಸಿ ಹೋಮಿಸುವವನು ಹಾಗೂ ದಾನ ಮಾಡುವವನು ಪಾಷಂಡಿ ಎನಿಸುವನು."– ಎಂಬ ಹೇಳಿಕೆಯನ್ನು ಅನುಸರಿಸಿ 'ಅನ್ಯದೈವಗಳಿಂದ' ಎಂಬ ವಚನವನ್ನು ಹೇಳಿರುತ್ತಾರೆ.

ಮೋಕ್ಷದ ಆಶೆ ಯಾವುದು ? (ಎಲ್ಲಿಂದ) ಎಂಬ ವಚನವನ್ನು "ಮುಕ್ತಿಸುಖ" ಎಂಬ ವಚನದಿಂದ ವಿಶದಪಡಿಸಿರುತ್ತಾರೆ. ॥೯॥

೫. ಶ್ರೀ ಗುರುಹೃದಯ ಪ್ರಕಾಶಿಕೆ :–

ಸಂಸೃತಿಬಂಧ ಪರಿಹಾರ ಮಾಡುವ ಪರಮಾತ್ಮನ ತತ್ತ್ವಜ್ಞಾನವು ಮುಂದಮತಿಗಳೆಂಬ ವಿಷಯಲಂಪಟರಿಗೆ ದೊರಕಲಾರದು ದೇಹಸಂಬಧ ಸುಖವು ಒಂದು ಹನಿ ಉದಕದಂತೆ ಅಲ್ಪವು. ದೇಹಸಂಬಂಧ ದುಃಖವು

ಪರ್ವತದಂತೆ ಬಹಳವೆಂದು ತಿಳಿಯದೆ, ಅನ್ಯರೆಂಬ ವಿಷ್ಣು ವಾಯು ವ್ಯತಿರಿಕ್ತದೇವತೆಗಳಿಂದ ಸುಖವಾಗಬೇಕೆಂದು ಪ್ರಾರ್ಥಿಸುವನು. ಮುಕುಂದನೆಂಬ ಮೋಕ್ಷಪ್ರದ ವಾಸುದೇವನನ್ನು ಆರಾಧಿಸದೆ ಬಿಟ್ಟವರಿಗೆ ಮುಕ್ತಿಸುಖ ದೊರಕದು-ಅಂದರೆ ಸಿಕ್ಕುವುದಿಲ್ಲ. ॥೯॥

## ಸರ್ವವ್ಯಾಖ್ಯಾನಸಾರಸಂಗ್ರಹ

ಜೀವರಿಗೆ ಅವರವರ ಗತಿ ಕೊಡುವುದಕ್ಕಾಗಿ, ಸರ್ವತಂತ್ರಸ್ವತಂತ್ರನಾದ ಸರ್ವೇಶನು ಜೀವರ ಅನಾದಿನಿತ್ಯವಾದ ಸ್ವರೂಪದೇಹಕ್ಕೆ ಆವರ್ಕವಾಗಿರುವ ಲಿಂಗದೇಹದ **ಉಪಚಯವನ್ನು** ತನ್ನ **ಇಚ್ಛಾಮಾತ್ರ**ದಿಂದ ಮಾಡುವನು. ಆಗ ಜೀವರಿಗೆ ದುಸ್ತರವಾದ ಸಂಸಾರದ ಸಂಬಂಧವುಂಟಾಗುವುದು. ಲಿಂಗೋಪದಾನದಿಂದ ಜೀವರಿಗೆ ಉಂಟಾಗುವ ಜನನ ಮರಣಾಖ್ಯವಾದ ಭವವೆಂಬ ಮಹಾ ಸಮುದ್ರವೇ **ಬಂಧಕವು.**

ಬಂಧಕರೂಪವಾದ ಭವದ ಪರಿಹಾರವೇ **ಮೋಚನೆಯು.** ತ್ರಿಗುಣಗಳ ವ್ಯಾಪಾರವಿಶೇಷದಿಂದ ಕರ್ಮಾನುಭವ. ಕರ್ಮವನ್ನು ಕಾರುಣ್ಯದಿಂದ ಹಂತ ಹಂತವಾಗಿ ಜನ್ಮ ಜನ್ಮಗಳಲ್ಲಿ ಕಳೆದು, ಕೊನೆಯಲ್ಲಿ ಲಿಂಗಭಂಗ ದ್ವಾರಾ ಕರ್ಮವಿಮೋಚನೆಯನ್ನು ಮಾಡುವವನು ಶ್ರೀಹರಿಯೇ. ಶ್ರೀಪರಮಾತ್ಮನು ಭವಬಂಧಕನು ಹಾಗೂ ಭವಮೋಚಕನು, ಇದರಿಂದ **ಬಂಧ ಮೋಕ್ಷಪ್ರದನು** –ಎಂದಿದ್ದಾರೆ. ಭವವಿಮೋಚನೆಯಿಂದ, ಪ್ರತಿಬಂಧಕಸಾಮಗ್ರಿ ನಿವಾರಣೆಯಾಗಿ, ಶ್ರೀಹರಿಯ ದಯೆಯಿಂದ ಜೀವರ ಸ್ವರೂಪಗತ ಆನಂದದ ಅಭಿವ್ಯಕ್ತಿ. ತದ್ವಾರಾ ನಿತ್ಯಾನಂದ ಸುಖ ರೂಪವಾದ ಮೋಕ್ಷಾನಂದಾನುಭೋಗ,

ಪಂಚಭೇದ ತಾರತಮ್ಯ ಯುಕ್ತವಾದ ಜ್ಞಾನ, ಜೀವೇಶದ ಬೇಧ ಜ್ಞಾನಪೂರ್ವಕ ಈಶ – ದಾಸರ ಅನ್ಯೋನ್ಯಸಂಬಂಧದ ಅರಿವು, ಶ್ರೀಶನ ಸರ್ವೋತ್ತಮತ್ವಜ್ಞಾನ ಇವೇ ಭಗವದ್ವಿಷಯಕವಾದ ನೈಜಜ್ಞಾನವು.

ಯಾವಾಗಲೂ ವಿಷಯಸಕ್ತರಾಗಿ, ಪ್ರಾಪಂಚಿಕ ಭೋಗಾಪೇಕ್ಷಿಗಳಾದ ಮೂಢ ಜನರು **ಮಂದಮತಿಗಳು.** ಇಂತಹ ಮಂದಮತಿಗಳಿಗೆ ಬಾಧ ಮೋಕ್ಷಪ್ರದನಾದ ಮುಕುಂದನ ಸಂಬಂಧವಾದ ಸಮೀಚೀನ ಜ್ಞಾನವೆಲ್ಲಿಂದ ಒರಬೇಕು ? ಅವರು ಜ್ಞಾನಶೂನ್ಯರು. ಅಹಂ ಮಮಕಾರಗ್ರಸ್ತರು. ವಿಷಯಾಸಕ್ತರು.

ಐಹಿಕಭೋಗಗಳಿಂದ ಆ ಮಂದಮತಿಗಳಿಗೆ ಸುಖವೇನೋ ಆಗುವುದು. ಆದರೆ ಆ ಸುಖಾನುಭವವು ಕ್ಷಣಿಕ. ಅದು ಅತ್ಯಲ್ಪ. ನೀರಿನ ಒಂದು ಹನಿ ಇದ್ದಂತೆ. **ಬಿಂದು ಮಾತ್ರ ಸುಖಾನುಭವ ಅವರ ಪಾಲಿಗೆ.**

ಆ ಕ್ಷಣಭಂಗುರವಾದ ಸುಖಾನುಭವದ ನಂತರ, ಉಂಟಾಗುವ ದುಃಖ ಅಪಾರ, ಮೇರುಪರ್ವತದಷ್ಟು ಅತ್ಯಗಾಧ. **ಪರ್ವತಕ್ಕೆ ಸಮ ದುಃಖ.**

ವಿಷಯಸುಖಾನುಭವದ ಕ್ಷಣಿಕ ಆನಂದವನ್ನು ಮಾತ್ರ ಬಯಸುತ್ತಾ, ಅದರ ಹಿನ್ನೆಲೆಯಲ್ಲಿರುವ ಪರ್ವತಸದೃಶವಾದ ಅಪಾರದುಃಖವನ್ನು ಯೋಚಿಸದೆ, ಕೇವಲ ವಿಷಯಸುಖಗಳಲ್ಲಿಯೂ ಮಗ್ನರಾಗಿ, ತಮ್ಮ ಕಾಮಿತಾರ್ಥಗಳ ಪೂರೈಕೆಗಾಗಿ ಸರ್ವೋತ್ತಮನಾದ ಶ್ರೀರಮಣನನ್ನು ಮರೆತು, ಕ್ಷುದ್ರದೇವತೆಗಳನ್ನು ಆರಾಧಿಸುವರು. ಅದರಿಂದ ದೊರೆಯುವುದು ಕ್ಷಿಪ್ರ ಫಲವಾದರೂ, ಕ್ಷಣಿಕ ಮತ್ತು ಮಹಾದುಃಖಕ್ಕೆ ಮೂಲ.

ಮುಕ್ತಿಪ್ರದನಾದ ಮುಕುಂದನನ್ನು ಮರೆತು, ಅವನ ಅರ್ಚನೆ, ಧ್ಯಾನ, ಮನನಾದಿ ರೂಪವಾದ ಆರಾಧನೆಯನ್ನು ತ್ಯಜಿಸಿದವರಿಗೆ ವಿಷಯ ಜನಿತ ಕ್ಷಣಿಕವಾದ ಸುಖದ ಭೃಂಗದ ಬೆನ್ನಟ್ಟಿ, ಬಳಲುವವರಿಗೆ ನಿತ್ಯಾನಂದ ರೂಪವಾದ ಮುಕ್ತಿಯು ಸುಖವು ಎಂದೆಂದಿಗೂ ಪ್ರಾಪ್ತವಾಗುವುದಿಲ್ಲ. ಶ್ರೀ ಹರಿ ವಿಸ್ಮರಣೆಯೇ ಪಾಪ. ದುಃಖಕ್ಕೆ ಮೂಲ. ಅವನ ಸಂಸ್ಮರಣೆಯೇ ಪುಣ್ಯಫಲ ಪ್ರದವು. ಮುಕ್ತಿಸುಖಾನುಭವಕ್ಕೆ ಕಾರಣವು. ॥೯॥

## ಪದ-೧೦

**ಮೂಲ :–**

**ರಾಜ ತನ್ನಾಮಾತ್ಯ ಕರುಣದಿ ।**
**ನೈಜ ಜನರಿಗೆ ಕೊಟ್ಟು ಕಾರ್ಯ ನಿ ।**
**ಯೋಜಿಸುವ ಮಾನಾಪಮಾನವ ಮಾಳ್ಪ ತೆರನಂತೆ ॥**
**ಶ್ರೀ ಜನಾರ್ದನ ಸಕಲರೊಳಗಪ ।**
**ರಾಜಿತನು ತಾನಾಗಿ ಸರ್ವ ಪ್ರ ।**
**ಯೋಜನವ ಮಾಡಿಸುತ ಮಾಡುವ ಫಲಕೆ ಗುರಿ ಮಾಡಿ ॥**
**॥೧೦॥**

**ಅವತರಣಿಕೆ :–**

ಸಮಸ್ತಕರ್ಮಗಳನ್ನೂ ಜೀವರ ದ್ವಾರಾ ಮಾಡಿಸಿ, ಆ ಕರ್ಮಫಲಕ್ಕೆ ಜೀವರನ್ನು ಗುರಿ ಮಾಡಿಸುತ್ತಾನೆಂದು ತಿಳಿಸುತ್ತಾರೆ. ॥೧೦॥

**ಪ್ರತಿಪದಾರ್ಥ :–**

**ರಾಜ** = ದೊರೆಯು, **ತನ್ನ ಅಮಾತ್ಯ** = ತನ್ನ ಮಂತ್ರಿಗಳು, **ನೈಜ ಜನರಿಗೆ** = ತನ್ನ ಅಧೀನರಾದ ಅಧಿಕಾರಿಗಳಿಗೆ, **ಕರುಣದಿ** = ದಯದಿಂದ, **ಕೊಟ್ಟು** = ಅಧಿಕಾರ ಸ್ವಾತಂತ್ರ್ಯವನ್ನು ಕೊಟ್ಟು–ಅಂದರೆ ಅವರಲ್ಲಿಟ್ಟು, **ಕಾರ್ಯ ಯೋಜಿಸುವ** = ರಾಜಕಾರ್ಯಗಳನ್ನು ಅವರ ಸ್ಥಾನಮಾನಕ್ಕೆ ತಕ್ಕಂತೆ ನಿರ್ವಹಣೆ ಮಾಡಿಸುವನು. **ಮಾನ ಅಪಮಾನವ** = ರಾಜಾಜ್ಞೆಯಂತೆ ನಡೆಯತಕ್ಕ ಮಂತ್ರಿ ಮತ್ತು ಅಧಿಕಾರಿಗಳಿಗೆ ಗೌರವವನ್ನೂ, ರಾಜಾಜ್ಞೆಯನ್ನೇ ಉಲ್ಲಂಘಿಸಿದ ಅಯೋಗ್ಯರಿಗೆ ಶಿಕ್ಷೆಯನ್ನೂ, **ಮಾಳ್ಪ ತೆರೆನಂತೆ** = ಕೊಡುವೋಪಾದಿಯಲ್ಲಿ, **ಶ್ರೀಜನಾರ್ದನ** = ದುಷ್ಟಜನ ಮರ್ದನನಾದ ಶ್ರೀಪರಮಾತ್ಮನು, **ಸಕಲರೊಳಗೆ** = ಸಮಸ್ತರಾದ ತ್ರಿವಿಧ ಜೀವರುಗಳಲ್ಲಿ, **ಅಪರಾಜಿತನು ತಾನಾಗಿ** = ಯಾರಿಂದಲೂ ಅಪಜಯ ಹೊಂದದವನಾಗಿ, ಸರ್ವತಂತ್ರ ಸ್ವತಂತ್ರನಾಗಿ, **ಸರ್ವ ಪ್ರಯೋಜನವ ಮಾಡಿಸುತ** = ಆಯಾಯಾ ಜೀವರ ಸ್ವರೂಪಯೋಗ್ಯತಾ, ಅನಾದಿಕರ್ಮಗಳಿಗನುಗುಣವಾಗಿ ಸ್ಥೂಲದೇಹದಿಂದ ಆಗಬೇಕಾದ ಸಮಸ್ತ ಕರ್ಮಗಳ ಪ್ರಯೋಜನಗಳನ್ನು ಕರ್ಮಜನಿತಫಲಗಳನ್ನು, **ಮಾಡಿಸುತ** = ಜೀವರ ಸ್ಥೂಲಶರೀರ ದ್ವಾರಾ ಮಾಡಿಸುತ್ತಾ, **ಫಲಕೆ ಗುರಿಮಾಡಿ** = ಆ ಕರ್ಮ ಫಲಗಳಿಗೆ ಜೀವರನ್ನೇ ಗುರಿಮಾಡಿ, **ಮಾಡುವ** = ಕರ್ಮಫಲಭೋಗವನ್ನು ಜೀವರಿಗೆ ಉಣಿಸುವನು. ॥೧೦॥

## ವ್ಯಾಖ್ಯಾನಗಳು

### ೧. ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ

ಸರ್ವಕರ್ಮವೂ ಜೀವನಿಂದ ಮಾಡಿಸಿ, ಆ ಕರ್ಮಫಲಕ್ಕೆ ಜೀವರನ ಗುರಿ ಮಾಡಸತಾನೆ ಎಂತ ಹೇಳತಾರೆ.

ಭೂಪಾಲಕನಾದ ಅರಸು, ಮಂತ್ರಿ ಇನ್ನೂ ತನ್ನ ಸೇವಾ ಮಾಡುವ ಭೃತ್ಯಜನರಿಗೆ, ರಾಜನಾದ ತನ್ನ ಸ್ವಕೀಯವಾದ ರಾಜತಂತ್ರ ನಡೆಸತಕ್ಕ ಅಧಿಕಾರ ಸ್ವಾತಂತ್ರ್ಯವನ್ನು ಅವರವರ ಯೋಗ್ಯತಾನುಸಾರ ದಯೆಯಿಂದ, ತನ್ನ ಮುಖದಿಂದ ಶಬ್ದಮೂಲಕವಾಗಿ ತೆಗೆದು ಆಯಾ ಮಂತ್ರಿ, ಭೃತ್ಯ ಜನರಲ್ಲಿ ಇಟ್ಟು, ಹೀಂಗೆ ಇಟ್ಟ ಮಾತ್ರಕ್ಕೆ ತಮ್ಮ ತಮ್ಮ ಮನಸ್ಸಿನ ಕಾರ್ಯಗಳ ಮಾಡೋವಕ್ಕೆ ಅಧಿಕಾರಿಗಳಿಗೆ ಆಗೋದಿಲ್ಲ. ಅಧಿಕಾರ ಹೊಂದಿದವರು ಎಂತ ಮಾತ್ರವೇ ಕರಸತಾರೆ. ಇವರಿಗೆ ರಾಜನಾದವ ಪುನಃ ದಾವಕಾಲದಲ್ಲಿ ದಾವ ಕಾರ್ಯ ಮಾಡಬೇಕೆಂದು ಆಜ್ಞಾರೂಪವಾದ ವರ್ಣಾತ್ಮಕಶಬ್ದಗಳ ಮಂತ್ರಿ ಭೃತ್ಯರ ಶ್ರವಣೇಂದ್ರಿಯದಿಂದ ಮನಸ್ಸಿನಲ್ಲಿ ಪ್ರವೇಶಮಾಡಸತಾನೋ ಆಗ್ಗೆ ಆ ಕಾರ್ಯದಲ್ಲಿ ಪ್ರವರ್ತಿಸತಾರೆ. ಇಂಥಾ ಪ್ರೇರಣೆಯಿಂದ ಕಾರ್ಯ ಮಾಡಿದ ಮಂತ್ರಿ ಭೃತ್ಯರಿಗೆ ರಾಜನಾದವನು ಯೋಗ್ಯರಾದ ತನ್ನ ಆಜ್ಞಾ ವಹಿಸಿದ ಭೃತ್ಯರಿಗೆ ಮರ್ಯಾದಾ ತಥಾ ಜೀವನವು, ಅಯೋಗ್ಯರಾಗಿ ತನ್ನ ಆಜ್ಞಾಕ್ಕೆ ಸರಿಯಾಗಿ ನಡಿಯದೆ ಇರುವ ಮಂತ್ರಿ ಭೃತ್ಯರಿಗೆ ಅವಮಾನ, ಶಿಕ್ಷೆಯನ್ನು ಮಾಡೋವನಾಗತಾನೆ ಮತ್ತು ರಾಜಾಜ್ಞಾದಿಂದ ಯುದ್ಧಾದಿ ಕರ್ಮವೇನು, ಗ್ರಾಮ ಗ್ರಾಮ ಸಂಚಾರವೇನು, ಇತ್ಯಾದಿ ಕರ್ಮಗಳ ಮಾಡತಾರೆ. ಯುದ್ಧದಲ್ಲಿ ಆಗತಕ್ಕ ಛೇದ ಭೇದಾದಿಗಳು, ಮಾರ್ಗಾಯಾಸ ಮೊದಲಾದ ದುಃಖಗಳು ಭೃತ್ಯರಿಗೆ ಆಗತವೆ. ರಾಜಗೆ ಇಲ್ಲ. ರಾಜ ಸುಖಿಯವಾಗೇ ಇರತಾನೆ. ದುಃಖ ಹೊಂದತಕ್ಕವರು ಮಂತ್ರಿ, ಭೃತ್ಯರು—ಇದು ಹಾಂಗೋ ಇದರಂತೆ ಮಹಾರಾಜನಾದ ಗುಣಪೂರ್ಣನಾದ ಪರಮಾತ್ಮ ಸರ್ವರಿಗೆ ತನ್ನ ಸ್ವಾತಂತ್ರ್ಯಕೊಟ್ಟು, ತದ್ದ್ವಾರಾ ಕರ್ಮವ್ಯಾಪಾರಗಳ ಬಿಂಬಕ್ರಿಯಾ ದ್ವಾರಾ ಮಾಡಿಸಿ, ಆಯಾ ಕರ್ಮಫಲಕ್ಕೆ ಆಯಾ ಜೀವರನ್ನ ಗುರಿ ಮಾಡಿ ಸುಖಪೂರ್ಣನಾಗಿ ಇರ್ತಾನೆ. ದುಷ್ಟಭೃತ್ಯರಾದ ಅಸುರರಿಗೆ, ವಿದುರನ ಮನೆಯಲ್ಲಿ ಪಾಲುಂಡು, ದುರ್ಯೋಧನನ್ನ ಅವಮಾನ ಮಾಡಿದಂತೆ ಮಾಡತಾನೆ. ಅಂತ್ಯದಲ್ಲಿ ಶಿಕ್ಷೆಯೂ ಮಾಡತಾನೆ. ದುಷ್ಟ ಮರ್ದನನಾದ ಪರಮಾತ್ಮ ಸಮಸ್ತರಾದ ತ್ರಿವಿಧಜೀವರೊಳು ಬಿಂಬನಾಗಿಯೂ ಸ್ವತಂತ್ರ

ರೂಪದಿಂದ ಪ್ರವೇಶನಾಗಿಯೂ, ದಾವದರಿಂದಲೂ, ದಾರಿಂದಲೂ, ಅಪೇಜಯು ಹೊಂದದೆ ತಾನೇ ತಾನಾಗಿ ಜೀವರಲ್ಲಿ ಇದ್ದುಕೊಂಡು, ಆಯಾ ಜೀವರಿಂದ ಆಗಬೇಕಾದ ಸ್ವರೂಪ ಅನುಸರಿಸಿನ್ನೂ, ಅನಾದಿಕರ್ಮ ಅನುಸರಿಸಿನ್ನೂ, ಸ್ಥೂಲದೇಹದಿಂದ ಆಗಬೇಕಾದ ಯಾವತ್ತೂ ಕರ್ಮರೂಪವಾದ ಪ್ರಯೋಜನಗಳ ತನ್ನ ಕ್ರಿಯಾದ್ವಾರಾ ಮಾಡುವ ಮತ್ತು ಜೀವರುಗಳ ದೇಹದ್ವಾರಾ ಮಾಡಿಸತಾ, ಆಯಾ ಕರ್ಮಫಲಕ್ಕೆ ಜೀವರನ್ನ ಗುರಿಮಾಡಿ, ಕರ್ಮಗಳ ಮಾಡಸ ತಾನೆ. ಹೊರ್ತು, ಆಯಾ ಕರ್ಮಫಲ ತನ್ನ ಭೋಗಕ್ಕಾಗಿ ಮಾಡಿಸೋದಿಲ್ಲ. ಪರಮಾತ್ಮಗೆ ಅಂಥಾ ಕರ್ಮವೂ ಇಲ್ಲ. ಅಂಥಾ ಭೋಗವೂ ಇಲ್ಲ. ಇದಕ್ಕೆ ಪೂರ್ವದೃಷ್ಟಾಂತವೇ ಎಂತ ತಾತ್ಪರ್ಯ. ॥೧೦॥

## ೨. ಭಾವಪ್ರಕಾಶಿಕೆ

ರಾಜನು ಮಂತ್ರಿತ್ವ ಮೊದಲಾದ ಸ್ವಾತಂತ್ರ್ಯ ಅಧಿಕಾರಗಳನ್ನು ತನ್ನ ಭೃತ್ಯರಿಗೆ ಕೊಟ್ಟು,ಕಾರ್ಯಗಳನ್ನು ಮಾಡುವಂತೆ,ಅವರಿಗೆ ಅಪ್ಪಣೆಯನ್ನಿತ್ತು, ಅವರು ಮಾಡಿವ ಕಾರ್ಯವು ಮನಸ್ಸಿಗೆ ತೃಪ್ತಿಕರವಾಗಿದ್ದರೆ, ಅವರಿಗೆ ಬಹುಮಾನವನ್ನೂ. ಕಾರ್ಯವು ಕೆಟ್ಟಿದ್ದರೆ, ಅವಮಾನವನ್ನು ಮಾಡುವಂತೆ, ಶ್ರೀ ಪರಮಾತ್ಮನು ಬ್ರಹ್ಮಾದಿಗಳಿಗೆ ಸ್ವಾತಂತ್ರ್ಯವನ್ನು ಕೊಟ್ಟು, ಅವರೊಳಗಿದ್ದು (ಅಮೋಘಪರಾಕ್ರಮ ಉಳ್ಳವನಾಗಿ), ಅವರವರ ಯೋಗ್ಯತಾನುಸಾರ ಕರ್ಮಗಳನ್ನು ಮಾಡಿಸಿ,ಕರ್ಮಗಳಿಗೆ ತಕ್ಕ ಸುಖ ದುಃಖ ಮಾನವಮಾನ ಮೊದಲಾದ ಫಲಗಳನ್ನು ಕೊಡುವನು. ಈ ಪದ್ಯ ಮೊದಲು ೧ಳ ನೆಯ ಪದ್ಯದವರೆಗೂ ಇರುವ ವಿಷಯಗಳು ೧೬ನೆಯ ದತ್ತಸ್ವಾತಂತ್ರ್ಯಸಂಧಿಯ ವ್ಯಾಖ್ಯಾನದಲ್ಲಿ ವಿಷ್ಣುರಹಸ್ಯದ ಪ್ರಮಾಣಸಹಿತವಾಗಿ ವಿವರಿಸಲ್ಪಟ್ಟಿದೆ. ॥೧೦॥

**೩. ಭಾವದರ್ಪಣ :-**

ರಾಜನು ಮಂತ್ರಿತ್ವ ಅನ್ಯರಲ್ಲಿ ಕೊಟ್ಟು, ಕಾರ್ಯಮಾಡಿಸುವಂತೆ ಶ್ರೀ ಹರಿ ನಡಿಸುತ್ತಾನೆಂದು ಹೇಳುತ್ತಾರೆ. ತದುಕ್ತಂ ವಿಷ್ಣುರಹಸ್ಯೇ। "ಯಥಾ ರಾಜಾ ನಿಜಾಮಾತ್ಯಾನ್ ದತ್ವಾ ಸ್ವಾತಂತ್ರ್ಯಮಾತ್ಮನಃ । ಕಾರ್ಯೇ ನಿಯೋಜ್ಯ ತತ್ರತ್ಯಾನ್ ಗುಣಾನ್ ದೋಷಾಂಶ್ಚ ಪೃಚ್ಛತಿ । ಕುಪಿತ್ವಾ ದಂಡಯತ್ಯೇವ ತಥಾ ಕ್ರೀಡತ್ಯಯಂ ಹರಿಃ" ಇತಿ ॥ ಅಪರಾಜಿತಃ ಸರ್ವಸಹ ಇತ್ಯುಕ್ತೇಃ ॥೧೦॥

**೪. ಶ್ರೀ ವ್ಯಾಸದಾಸ ಸಿದ್ಧಾಂತ ಕೌಮುದೀ :-**

"ಯಥಾ ರಾಜಾ ನಿಜಾಮಾತ್ಯಾನ್ ದತ್ವಾ ಸ್ವಾತಂತ್ರ್ಯಂ ಕಾರ್ಯೇ ನಿಯೋಜ್ಯ ಸ್ವಾಜ್ಞೋಲಂಘನೇ ದಂಡಯತಿ ಏವಂ ತಥಾ ಕ್ರೀಡತ್ಯಯಂ ಹರಿಃ" ಇತ್ಯುಕ್ತಂ ಆಹ-'ರಾಜಾ' ಇತಿ. ॥೧೦॥

**ಕನ್ನಡಾರ್ಥ**

"ರಾಜನು ತನ್ನ ಮಂತ್ರಿಗಳಿಗೆ ಸ್ವಾತಂತ್ರ್ಯವನ್ನು ಕೊಟ್ಟು, ಕಾರ್ಯದಲ್ಲಿ ನಿಯೋಜಿಸಿ, ತನ್ನ ಆಜ್ಞೆಯನ್ನು ಉಲ್ಲಂಘಿಸಿದಲ್ಲಿ, ಅವರನ್ನು ದಂಡಿಸುವಂತೆ, ಹರಿಯು ಆದರಂತೆ ಕ್ರೀಡಿಸುತ್ತಾನೆ-" ಎಂಬ ವಚನದ ವಿಷಯವನ್ನು 'ರಾಜ' ಎಂಬ ಪದ್ಯದಿಂದ ಹೇಳುತ್ತಾರೆ. ॥೧೦॥

**೫. ಶ್ರೀಗುರುಹೃದಯ ಪ್ರಕಾಶಿಕೆ :-**

ಸದೃಷ್ಟಾಂತವಾಗಿ ದೇವರು ಜೀವರಿಗೆ ಸ್ವಾತಂತ್ರ್ಯ ಕೊಡುವ ಬಗೆಯನ್ನು ತಿಳಿಸುತ್ತಾರೆ- ರಾಜ ಎಂದು. ರಾಜನು ತನ್ನ ಅಮಾತ್ಯನೆಂಬ ಸ್ವಸಹಾಯವುಳ್ಳ ಜೀವರಿಗೆ ಕರುಣದಿಂದ ನೈಜವೆಂಬ ತನ್ನ ಸ್ವತಂತ್ರರೂಪ ಅಧಿಕಾರವನ್ನು ಕೊಟ್ಟು, ಕಾರ್ಯವೆಂಬ ತನ್ನ ಚಾಕರಿಯಲ್ಲಿ ನಿಯೋಜಿಸುವ ಅಂದರೆ, ಆಜ್ಞಾಪಿಸುವನು. ಸರಿಯಾಗಿ ಚಾಕರಿ ಮಾಡಿದರೆ, ಮಾನವನ್ನು

ಮಾಡಿ, ತಾನು ಹೇಳಿದ್ದಕ್ಕೆ ವಿರೋಧವಾಗಿ ಮಾಡಿದರೆ, ಅಪಮಾನವನ್ನು ಮಾಡುವನು. ಇದೇ ರೀತಿಯಾಗಿ ಶ್ರೀಜನಾರ್ದನನೆಂಬ ಬಂಧಪರಿಹಾರಕನಾದ ಸ್ವಾಮಿ, ಸಕಲಜೀವರಲ್ಲಿ ತಾನು ಇದ್ದಾಗ್ಯೂ, ಅಪರಾಜಿತನು ಅಂದರೆ, ಸುಖದುಃಖ ಬಾಧಕಗಳಿಲ್ಲದವನಾಗಿ, ಸರ್ವಪ್ರಯೋಜನವೆಂಬ ಅವರವರ ಸಾಧನವನ್ನು ತಾನು ವ್ಯಕ್ತಿಮಾಡಿ, ಆಯಾಯಾ ಫಲಕ್ಕೆ ಅವರವರನ್ನು ಗುರಿ ಎಂಬ ಕಾರಣವನ್ನು ಮಾಡಿ ಸಾಧನಗಳನ್ನು ಮಾಡಿಸುವನು. ॥೧೦॥

## ಸರ್ವವ್ಯಾಖ್ಯಾನಸಾರಸಂಗ್ರಹ

ರಾಜ್ಯವನ್ನಾಳುವ ದೊರೆಯು ಸರ್ವಾಧಿಕಾರಿಯು. ಅವನು ತನ್ನ ಅಧೀನರಾದ ಮಂತ್ರಿಗಳು, ನಗರಾಧಿಕಾರಿಗಳು, ಗ್ರಾಮಾಧಿಕಾರಿಗಳು-ಮೊದಲಾದ ವಿವಿಧ ಸ್ಥಾನಗತರಾದ ಅಧಿಕಾರಿಗಳಿಗೆ ರಾಜ್ಯಾಡಳಿತದ ಕಾರ್ಯನಿರ್ವಹಣೆಯನ್ನು ವಿಭಾಗಮಾಡಿ, ಹಂಚಿಕೊಡುವನು. ರಾಜಾಜ್ಞೆಯಂತೆ ಆಯಾಯಾ ಅಧಿಕಾರಿಗಳು ತಮ್ಮ ಅಧಿಕಾರವ್ಯಾಪ್ತಿಗೆ ಒಳಪಟ್ಟು, ಕಾರ್ಯನಿರ್ವಹಣೆ ಮಾಡುವರು. ಈ ಕಾರ್ಯನಿಯೋಜನೆಯಲ್ಲಿ ತಮ್ಮ ಅಂತಸ್ತು ಪದವಿಗನುಗುಣವಾಗಿ, ಆ ಅಧಿಕಾರಿಗಳೇ ಜವಾಬ್ದಾರರು. ರಾಜಾಜ್ಞೆಯಂತೆ ನಡೆದು, ದಕ್ಷತೆಯಿಂದ ಪ್ರಾಮಾಣಿಕರಾಗಿ ಕೆಲಸ ಮಾಡುವ ಅಧಿಕಾರಿಗಳು ರಾಜಾನುಗ್ರಹಕ್ಕೆ ಪಾತ್ರರಾಗುವರು. ಅವರಿಗೆ ರಾಜನು ಗೌರವ ಮತ್ತು ಮಾನ್ಯತೆ ನೀಡುವನು. ಹಾಗಿಲ್ಲದೆ, ರಾಜಾಜ್ಞೆಯನ್ನು ಉಲ್ಲಂಘಿಸಿ, ತಮ್ಮ ಮನಸ್ಸಿಗೆ ತೋರಿದ ಹಾಗೆ ಕಾರ್ಯಭಾರ ಮಾಡುವ ಅಧಿಕಾರಿಗಳನ್ನು ರಾಜರು ಅವಮಾನಗೊಳಿಸಿ, ಶಿಕ್ಷಿಸುವನು.

ಶ್ರೀಹರಿಯು ಜಗತ್ಪ್ರಭುವು. ಸರ್ವೇಶನು. ರಮಾ ಬ್ರಹ್ಮಾದಿ ತೃಣಾಂತ ಸಮಸ್ತರೂ ಅವನ ಅಧೀನರು. ಶ್ರೀಹರಿಯು ರಾಜನ ಸದೃಶನು. ಅವನ ಅಧೀನರಾದ ಸಮಸ್ತಜೀವರೂ ರಾಜನ ಪ್ರಜೆಗಳಲ್ಲಿ ಸದೃಶರು, ಶ್ರೀಹರಿಯು ಧರ್ಮಸಂಸ್ಥಾಪಕನು. ದುಷ್ಟಶಿಕ್ಷಕನು. ತದ್ವಾರಾ ಶಿಷ್ಟರಕ್ಷಕನು.

ಶ್ರೀ ಜನಾರ್ದನ ನಾಮಕನಾದ ಶ್ರೀಪರಮಾತ್ಮನು ಸಕಲಜೀವರಲ್ಲಿ ನಿತ್ಯ ನಿಯೋಗಿಯಾಗಿ ಬಿಂಬನಾಗಿ ವಿರಾಜಮಾನನಾಗಿದ್ದಾನೆ. ಬ್ರಹ್ಮಾದಿ ಸಕಲ ದೇವತಾವರ್ಗದಲ್ಲಿ, ಪುರಂಜನಾದಿ ಸಮಸ್ತ ನಿತ್ಯಸಂಸಾರಿಚೇತನರಲ್ಲಿ ಕಲ್ಯಾದಿ ಸರ್ವದೈತ್ಯರಲ್ಲಿ, ಅಂತಸ್ಥಿತನಾಗಿದ್ದು, ಅವರವರ ಸ್ವರೂಪ ಯೋಗ್ಯತೆ, ಅನಾದಿಕರ್ಮವನ್ನು ಅನುಸರಿಸಿ, ಬಿಂಬಕ್ರಿಯಾದ್ವಾರಾ ಸಕಲ ದೇಹೇಂದ್ರಿಯಗಳ ಕ್ರಿಯಾ ಮಾಡಿ ಮಾಡಿಸುವನು. ಬಿಂಬನಾಗಿ ಜೀವರಲ್ಲಿ ಶ್ರೀಹರಿಯ ಪ್ರವೇಶರೂಪವಾದ ವ್ಯಾಪಾರವಿಶೇಷವೇ, ಅವನು ಆಯಾಯಾ ಜೀವರಲ್ಲಿ ಇಟ್ಟಿರುವ ಸ್ವಾತಂತ್ರ್ಯಗುಣಾಭಿವ್ಯಕ್ತಿಯು.

ಅಧಿಕಾರಿಗಳಾದ ರಾಜನ ಪ್ರಜೆಗಳು ಅವರವರ ಕಾರ್ಯವ್ಯಾಪ್ತಿಗೆ ಹೇಗೆ ಅವರವರೇ ಜವಾಬ್ದಾರರೋ, ಅಂತೆಯೇ ಸಕಲಕಾರ್ಯಗಳನ್ನು ಬಿಂಬನೇ ಮಾಡಿ ಮಾಡಿಸುತ್ತಿದ್ದರೂ. ಜೀವರ ಅನಾದಿಕರ್ಮಾನುಸಾರವಾಗಿ ನಡೆಯುತ್ತಿರುವುದರಿಂದ, ಆ ಕರ್ಮಜನ್ಯ ಫಲಗಳಿಗೆ ಅವರೇ ಜವಾಬ್ದಾರರು. ತಜ್ಜನಿತ ಕರ್ಮಫಲಗಳಿಗೆ ಆ ಜೀವರನ್ನೇ ಗುರಿಮಾಡಿ, ಸರ್ವತಂತ್ರಸ್ವತಂತ್ರನಾದ ಶ್ರೀಹರಿಯು ಆ ಫಲವನ್ನು ಅವರಿಗೇ ಉಣಿಸುವನು. ಅಮೋಘಪರಾಕ್ರಮಿಯಾದ ಬಿಂಬನು ಅಪರಾಜಿತನು. ಅವರಿಗೆ ಕರ್ಮಫಲಭೋಗಗಳಲ್ಲಿ, ಜಗದ್ವಿಲಕ್ಷಣನಾದ ಶ್ರೀಹರಿಗೆ ಆ ಕರ್ಮಫಲಗಳ ಲೇಪವಿಲ್ಲ. ॥೧೦॥

## ಪದ್ಯ-೧೧

**ಮೂಲ:-**

ವಾಸುದೇವ ಸ್ವತಂತ್ರ್ಯವ ಸರೋ ।
ಜಾಸನಾದ್ಯಮರಾಸುರರಿಗೀಯ ।
**ಲೋಸುಗರ್ಧವ ತೆಗೆದದರೊಳರ್ಧವ ಚತುರ್ಭಾಗ ||**
ಗೈಸಿ ಒಂದನು ಶತವಿಧದ್ವಿಷಂ ।
ಚಾಶತಾಬ್ಜ ಜಗಷ್ಟಚತ್ವಾ ।
ರಿಂಶದನಿಲನಿಗಿತ್ತ ವಾಣೀ ಭಾರತೀ ರ್ಧ || ||೧೧||

**ಅವತರಣಿಕೆ :-**

ಶ್ರೀಪರಮಾತ್ಮನು ಬ್ರಹ್ಮಾದಿದೇವತೆಗಳಿಗೆ ಸರ್ವ ಸ್ವಾತಂತ್ರ್ಯವಿಭಾಗಿಸಿದ ಕ್ರಮವನ್ನು ತಿಳಿಸುತ್ತಾರೆ. ||೧೧||

**ಪ್ರತಿಪದಾರ್ಥ :-**

**ವಾಸುದೇವ** = ಮುಕ್ತಿಪ್ರದನಾದ ವಾಸುದೇವನು, **ಸ್ವತಂತ್ರ್ಯವ** = ತನ್ನ ಸ್ವರೂಪಗತಸ್ವಾತಂತ್ರ್ಯವನ್ನು, **ಸರೋಜಾಸನಾದಿ** = ಕಮಲೋದ್ಭವರಾದ ಬ್ರಹ್ಮದೇವರೇ ಮೊದಲಾಗಿ, **ಅಮರ** = ತೃಣಾಂತ ಮುಕ್ತಿಯೋಗ್ಯಚೇತನರಿಗೆ, **ಅಸುರರಿಗೆ** = ತಮೋಯೋಗ್ಯರಾದ ದೈತ್ಯರು ಹಾಗೂ,ನಿತ್ಯ ಸಂಸಾರಿಗಳಿಗೆ, **ಈಯಲೋಸುಗ** = ಕೊಡುವುದಕ್ಕಾಗಿ, **ಅರ್ಧವ ತೆಗೆದು** = ಒಂದು ಗುಣವನ್ನು ಅರ್ಧ ಅರ್ಧವಾಗಿ ವಿಭಾಗಿಸಿ, ಅದರಲ್ಲಿ ಅರ್ಧವನ್ನು ತೆಗೆದುಕೊಂಡು, **ಅದರೊಳಗರ್ಧವ** = ಆ ಅರ್ಧದಲ್ಲಿ ಅರ್ಧಭಾಗ ಎಂದರೆ, ಕಾಲು ಭಾಗವಾಯಿತು. **ಚತು**

**ಭಾಗೆ** = ಆ ಕಾಲುಭಾಗವನ್ನೇ ಪುನಃ ನಾಲ್ಕು ಭಾಗಗಳಾಗಿ ವಿಭಾಗಿಸಿದ. ಅಲ್ಲಿಗೆ ೧/೪×೧/೪ = ೧/೧೬ ಅಂಶವಾಯಿತು. (ಹದಿನಾರನೆಯ ಒಂದಂಶ), ಆ ನಾಲ್ಕು ಭಾಗಗಳಲ್ಲಿ, **ಒಂದನು** = ಒಂದು ಭಾಗವನ್ನು, **ಶತವಿಧಗೈಸಿ** = ನೂರು ಭಾಗ ಮಾಡಿ, **ದ್ವಿಪಂಚಾಶತ್**= ೫೨ ಭಾಗಗಳನ್ನು (ದ್ವಿ = ೨. ಪಂಚಾಶತ್ = ೫೦), **ಅಬ್ಜಜಗೆ** = ಶ್ರೀಪರಮಾತ್ಮನ ನಾಭೀಕಮಲೋದ್ಭವರಾದ ಬ್ರಹ್ಮದೇವರಿಗೂ, **ಅಷ್ಟಚತ್ವಾರಿಂಶತ** = ೪೮ ಅಂಶಗಳನ್ನು (ಅಷ್ಟ = ೮ ಚತ್ವಾರಿಂಶತಿ = ೪೦), **ಅನಿಲಗಿತ್ತ** = ಶ್ರೀ ವಾಯುದೇವರಿಗೆ ಕೊಟ್ಟನು, **ವಾಣೀ** = ವಾಗಭಿಮಾನಿಗಳಾದ ಸರಸ್ವತಿಗೆ, **ಅರ್ಧ** ೫೨ ರಲ್ಲಿ ಅರ್ಧ ಅಂದರೆ, ೨೬ ಭಾಗಗಳನ್ನೂ, **ಭಾರತಿಗೆ** = ಶ್ರೀ ವಾಯುಪತ್ನಿ ಭಾರತೀದೇವಿಗೆ, **ಅರ್ಧ** = ೪೮ ರಲ್ಲಿ ಅರ್ಧ, ಅಂದರೆ, ೨೪ ಭಾಗಗಳನ್ನು ಕೊಟ್ಟನು. ॥೧೧॥

## ವ್ಯಾಖ್ಯಾನಗಳು

### ೧. ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ :–

ಸರ್ವಸ್ವಾತಂತ್ರ್ಯ ವಿಭಾಗಕ್ರಮವನ್ನು ಹೇಳತಾರೆ.

ಗುಣಪೂರ್ಣನಾದ ವಾಸುದೇವನಾದ ಶ್ರೀಲಕ್ಷ್ಮೀನಾರಾಯಣ ದೇವರು ದತ್ತಸ್ವಾತಂತ್ರ್ಯವಿಭಾಗ ಕಾಲದಲ್ಲಿ ತನ್ನಲ್ಲಿ ಇಟ್ಟುಕೊಂಡ ೧೩೨ ೩/೪ ಸ್ವಾತಂತ್ರ್ಯಗುಣಗಳೊಳಗೆ ಸ್ವಗತ ಸ್ವಾತಂತ್ರ್ಯ ವಿಭಾಗಕ್ಕಾಗಿ ಒಂದು ಗುಣ ಹೋಗತಾ,ಉಳ್ಳದ ೧೩೪ ೩/೪ ಸ್ವಾತಂತ್ರ್ಯದೊಳಗೆ ಬ್ರಹ್ಮದೇವರೇ ಮೊದಲಾದ ತೃಣಾಂತ ಮುಕ್ತಿಯೋಗ್ಯರಿಗೆ, ತಮೋಯೋಗ್ಯರು ಮತ್ತು ನಿತ್ಯ ಸಂಸಾರಿಗಳಿಗೆ ಕೊಡೋದಕ್ಕಾಗಿ, ಪೂರ್ವೋಕ್ತ ೧೩೧ ೩/೪ ಗುಣದೊಳಗೆ ಒಂದು ಗುಣವನ್ನು ತೆಗೆದು ವಿಭಾಗಮಾಡಿ ಕೊಡೋದಕ್ಕಾಗಿ ಇರುವ ದಿಕ್ಪ್ರದರ್ಶನದಿಂದ ಇದರ ವಿಭಾಗಕ್ಕೂ ಒಂದು ಗುಣ ಎಂತ ಅರ್ಥ. ಈ ಒಂದು

ಗುಣವನ್ನೇ ಅರ್ಧಾರ್ಧವಾಗಿ ಮಾಡಿದ. ಈ ಒಂದು ಅರ್ಧದೊಳು ಅರ್ಧ ಭಾಗ ಮಾಡಿದರೆ, ಅಂದರೆ ಕಾಲುಭಾಗವಾಯಿತು. ಈ ಕಾಲು ಭಾಗವನ್ನ ನಾಲ್ಕು ಅಂದರೆ, ೧/೧೬ ಭಾಗಮಾಡಿ, ಆ ಭಾಗಗಳನ್ನು ಒಂದನ್ನ ತೆಗೆದುಕೊಂಡು, ನೂರುಭಾಗ ಮಾಡಿ, ಐವತ್ತೆರಡು ಗುಣವನ್ನ ಬ್ರಹ್ಮ ದೇವರಿಗೆ, ನಲವತ್ತೆಂಟು ಗುಣವನ್ನು ವಾಯುದೇವರಿಗೆ, ಅಂತೂ ನೂರು ಗುಣಗಳು ಸರಿಯಾಯಿತು. ಸರಸ್ವತೀದೇವೇರಿಗೆ ಬ್ರಹ್ಮದೇವರ ೫೨ ಗುಣ ದೊಳಗೆ ಒಂದೊಂದು ಗುಣದೊಳಗೆ ಅರ್ಧಾರ್ಧ ಪ್ರಕಾರ ಅಂಶ ವಿಭಾಗ ಮಾಡಿ, ೨೬ ಗುಣ ಸರಸ್ವತೀದೇವೇರಿಗೂ, ಭಾರತೀದೇವೇರಿಗೆ ವಾಯು ದೇವರ ೪೮ ಗುಣದೊಳಗೆ ಪೂರ್ವೋಕ್ತ ಪ್ರಕಾರ ಅಂಶ ವಿಭಾಗ ಮಾಡಿ, ೨೪ ಗುಣಗಳ ಭಾರತೀದೇವೇರಲ್ಲೂ-ಈ ಪ್ರಕಾರ ಅರ್ಧಾಂಶವನ್ನೂ ಕೊಡೋ ವನಾದ: ಇದು ಪಕ್ವಕಾಲದಲ್ಲಿ ಕಾರ್ಯ ಮಾಡತಕ್ಕದ್ದು.

ಇದಕ್ಕೆ ವಿವರ—

೧೩೧ ೩/೪ ಗುಣದೊಳಗೆ ತೆಗೆದ ಗುಣ ........ ........೧.

ಎರಡು ಅರ್ಧಗಳಾಗಿ ಮಾಡಿದ-ಅಂದರೆ................೧/೨, ೧/೨

ಒಂದು ಅರ್ಧದೊಳಗೆ ಎರಡು ಅರ್ಧ.... ... .........೧/೪, ೧/೪

ಈ ಕಾಲುಭಾಗದೊಳಗೆ ಒಂದು ಕಾಲನ್ನು ನಾಲ್ಕು ಭಾಗ ಮಾಡಿದ ಅಂದರೆ ....... ........೧/೧೬, ೧/೧೬, ೧/೧೬, ೧/೧೬

ಈ ೧/೧೬ ಭಾಗ ನೂರು ಭಾಗಮಾಡಿ ಬ್ರಹ್ಮದೇವರಿಗೆ..............೫೨ ಗುಣಕೊಟ್ಟ.

ವಾಯುದೇವರಿಗೆ ಉಳಿದ ... . .... ೪೮ ಗುಣಕೊಟ್ಟ.

ಅಂತು, ೫೮ + ೪೨ = ೧೦೦ ಭಾಗ ಆಯಿತು.

ಅಂದರೆ ೧ ಗುಣದೊಳಗೆ, ೧೬ ಭಾಗಮಾಡಿ ಅದರ ಪೈಕಿ ಒಂದು ಗುಣದ ವಿಭಾಗ ಹೇಳಿದಂತಾಯಿತು. ಇನ್ನು ೧೫ ಭಾಗ ಉಳಿದಿದೆ.

ಈ ನೂರರ ಒಳಗೆ ಸರಸ್ವತಿಗೆ ಬ್ರಹ್ಮನ ಗುಣದಲ್ಲಿ ಅರ್ಧ– ಅಂದರೆ ೨೬ ಗುಣ.

ಭಾರತೀದೇವೇರಿಗೆ ವಾಯುದೇವರ ಗುಣದಲ್ಲಿ ಅರ್ಧ ಅಂದರೆ, ೨೪ ಗುಣ. ಅಂತು, ೫೦ ಗುಣ. ॥೧೧॥

೨. ಭಾವಪ್ರಕಾಶಿಕೆ :–

ಸರ್ವಸ್ವತಂತ್ರನಾದ ಶ್ರೀಪರಮಾತ್ಮನು,ಅಪಾರವಾದ ತನ್ನ ಸ್ವಾತಂತ್ರ್ಯ ಗುಣಗಳಲ್ಲಿ ಅರ್ಧಭಾಗವನ್ನು ತೆಗೆದು, ಅದನ್ನು ೪ ಭಾಗಮಾಡಿ, ಅದರಲ್ಲಿ ಒಂದು ಭಾಗವನ್ನು ೧೦೦ ಭಾಗಗಳನ್ನಾಗಿ ಮಾಡಿ, ಅದರಲ್ಲಿ ೫೨ ಭಾಗಗಳನ್ನು ಬ್ರಹ್ಮದೇವರಿಗೂ, ೪೮ ಭಾಗಗಳನ್ನು ವಾಯುದೇವರಿಗೂ ಕೊಟ್ಟನು. ಆ ಬ್ರಹ್ಮ ವಾಯುಗಳಿಗೆ ಕೊಟ್ಟ ಭಾಗಗಳಲ್ಲಿ ಬ್ರಹ್ಮದೇವರ ಭಾಗದಲ್ಲಿ ಅರ್ಧ ೨೬ ಭಾಗಗಳನ್ನು ಸರಸ್ವತೀದೇವಿಯರಿಗೂ, ವಾಯುದೇವರ ಭಾಗಗಳಲ್ಲಿ ಅರ್ಧ ೨೪ ಭಾಗಗಳನ್ನು ಭಾರತೀದೇವಿಯರಿಗೂ ಕೊಟ್ಟನು. ॥೧೧॥

೩. ಭಾವದರ್ಪಣ :–

ಶ್ರೀಹರಿ ತನ್ನ ಸ್ವಾತಂತ್ರ್ಯಾಂಶ ಬ್ರಹ್ಮಾದಿ ಜೀವರಲ್ಲಿಟ್ಟು, ಕಾರ್ಯ ಮಾಡಿಸುವನೆಂದು ಗುಣವಿಭಾಗಪೂರ್ವಕ ಮೂರು ಪದ್ಯದಿಂದ ವಿವರ ಮಾಡುತ್ತಾರೆ. (ವಾಸುದೇವ) "ನಿತ್ಯತ್ವೇನ ಸರ್ವತ್ರ ತಿಷ್ಠನ್ ಜೀವೇಷು ಸರ್ವದಾ । ಸ್ವಸ್ಮಿನ್ನರ್ಧಂ ಸ್ವತಂತ್ರತ್ವಂ ಸಮಾಧಾಯ ತದರ್ಧಕಂ । ವಿಭಜ್ಯ ಶತಧಾ ಭೂಯೋಽಷ್ಟಚತ್ವಾರಿಂಶಕಾನ್ । ಪ್ರಾಣೇ ಸ್ವಾತಂತ್ರ್ಯಮಾಧಾಯ ದ್ವಿಪಂಚಾಶಚ್ಚ ವೇಧಸೀತ್ಯುಕ್ತೇಶ್ಚ" । ವಾಣಿಗೆ ೨೬ ಭಾರತಿಗೆ ೨೪ ॥ ಗೈಸಿ = ಮಾಡಿ. ॥೧೧॥

### ೪. ಶ್ರೀವ್ಯಾಸದಾಸ ಸಿದ್ಧಾಂತ ಕೌಮುದೀ :-

ಸ್ವಸ್ವರೂಪೈಃ ಹರಿಃ ನಿಯಂತೃತ್ವೇನ ಸರ್ವತ್ರ ತಿಷ್ಠನ್ ಇತ್ಯುಕ್ತ್ವಾ ತತ್ರ ತತ್ರ ಮಿತ್ಯೈರಾಸ್ತೇ ತದೇವ ದಾನಮ್" ಇತ್ಯಾಹ-'ವಾಸುದೇವ' ಇತಿ· ॥೧೧॥

### ಕನ್ನಡಾರ್ಥ

ಹರಿಯು ನಿಯಾಮಕನಾಗಿ ಆಯಾ ರೂಪಗಳಿಂದ ಎಲ್ಲ ಕಡೆಗಳಲ್ಲಿ ಇರುತ್ತಾನೆ" ಎಂದು ಹೇಳಿ, ಅಲ್ಲಿ ತನ್ನ ಸ್ವಾತಂತ್ರ್ಯರೂಪಗಳಿಂದ ಇರುವುದೇ "ಸ್ವಾತಂತ್ರ್ಯದಾನ" ಎಂಬ ಹಿಂದೆ ಹೇಳಿದ ಮಾತನ್ನು 'ವಾಸುದೇವ' ಈ ಪದ್ಯದಿಂದ ಹೇಳುತ್ತಾರೆ. ॥೧೧॥

### ೫. ಶ್ರೀಗುರುಹೃದಯಪ್ರಕಾಶಿಕೆ :-

ವಾಸುದೇವನ್ನು ಸ್ವತಂತ್ರವೆಂಬ ಅವರವರ ಕ್ರಿಯಾವ್ಯಕ್ತಿ ಆಗುವ ಶಕ್ತಿಯನ್ನು ಸರೋಜಾಸನನನೆಂಬ ಬ್ರಹ್ಮ ಮೊದಲಾದ ದೇವತೆಗಳಲ್ಲಿಯೂ, ಅಸುರರಲ್ಲಿಯೂ ಸಹ ಇಡುವುದಕ್ಕೋಸ್ಕರ ತನ್ನಲ್ಲಿರುವ ಸ್ವಾತಂತ್ರ್ಯಶಕ್ತಿಯಲ್ಲಿ ಅರ್ಧ ತೆಗೆದು, ಆ ಅರ್ಧದಲ್ಲಿ ಅರ್ಧವನ್ನು ನಾಲ್ಕು ಪಾಲು ಮಾಡಿ, ಅಂದರೆ, ನಾನ್ನೂರು ವಿಭಾಗಮಾಡಿ, ಒಂದು ಭಾಗವಾದ ನೂರರಲ್ಲಿ ಅಬ್ಜಜನೆಂಬ ಬ್ರಹ್ಮದೇವರಿಗೆ ಐವತ್ತೆರಡು, ಅನಿಲನೆಂಬ ಪ್ರಾಣಗೆ ನಲವತ್ತೆಂಟನ್ನು ಕೊಟ್ಟು, ಅವರಲ್ಲೇನೇ ಇಪ್ಪತ್ತಾರು ಸರಸ್ವತೀ ಎಂಬ ವಾಣಿಗೂ, ವಾಯು ಪತ್ನಿ ಭಾರತಿಗೆ ಇಪ್ಪತ್ನಾಲ್ಕು-ಹೀಗೆ ಗೊತ್ತುಮಾಡಿ ಕೊಟ್ಟು,ನೂರು ಪೂರ್ತಿ ಮಾಡಿದನು. ॥೧೧॥

# ಸರ್ವವ್ಯಾಖ್ಯಾನಸಾರಸಂಗ್ರಹ

ಮುಕ್ತಿಪ್ರದನಾದ ಶ್ರೀವಾಸುದೇವನಾಮಕ ಪರಮಾತ್ಮನು ತನ್ನ ಸ್ವಾತಂತ್ರ್ಯವನ್ನು ಕಮಲೋದ್ಭವರಾದ ಬ್ರಹ್ಮಾದಿ ತೃಣಾಂತ ಸಕಲ ಮುಕ್ತಿ ಯೋಗ್ಯ ಚೇತನರಿಗೂ, ಕಲ್ಯಾದಿ ಸಕಲ ಅಸುರವರ್ಗಕ್ಕೂ ನಿತ್ಯಸಂಸಾರಿ ಜೀವರಿಗೂ ಕೊಡುವುದಕ್ಕಾಗಿ,ಹಂಚಿ ವಿಭಾಗ ಮಾಡಿದ ಕ್ರಮವನ್ನು ತಿಳಿಸುತ್ತಾರೆ.

ಅಪಾರವಾದ ಸ್ವಸ್ವರೂಪಗತ ಸ್ವಾತಂತ್ರ್ಯದಲ್ಲ ಒಂದು ಭಾಗವನ್ನು ತೆಗೆದು, ಅದನ್ನು ಎರಡು ಸಮಭಾಗಗಳಾಗಿ ವಿಭಾಗಿಸಿದನು. ಆಗ ಪ್ರತಿ ಅಂಶವೂ ಅರ್ಧ ಅರ್ಧವಾಯಿತು.

ಆ ಅರ್ಧ ಭಾಗದಲ್ಲಿ ಪುನಃ ಅರ್ಧಾಂಶ ಮಾಡಿದನು. ಅಲ್ಲಿಗೆ ಕಾಲು ಕಾಲು ಭಾಗವಾದುವು.

ಆ ಕಾಲು ಭಾಗವನ್ನು ಪುನಃ ನಾಲ್ಕು ಭಾಗಗಳಾಗಿ ವಿಭಾಗಿಸಿ, ಅದರಲ್ಲಿ ಒಂದರ ೧೦೦ ಭಾಗಗಳಲ್ಲಿ ಈ ರೀತಿ ಹಂಚಿದನು.

| | | |
|---|---|---|
| ೧. | ಕಮಲೋದ್ಭವನಾದ ಬ್ರಹ್ಮದೇವರಲ್ಲಿ | = ೫೨ ಭಾಗಗಳು. |
| ೨. | ಶ್ರೀವಾಯುದೇವರಲ್ಲಿ | = ೪೮ ಭಾಗಗಳು |
| | | = ೧೦೦ ಭಾಗಗಳು |
| ೩. | ವಾಗಭಿಮಾನಿಯಾದ ಸರಸ್ವತಿಯಲ್ಲಿ | = ೨೬ ಭಾಗಗಳು |
| ೪. | ಭಕ್ತ್ಯಭಿಮಾನಿಯಾದ ಭಾರತಿಯಲ್ಲಿ | = ೨೪ ಭಾಗಗಳು |
| | ಅಲ್ಲಿಗೆ | = ೫೦ ಭಾಗಗಳಾಯಿತು |

**ಲೆಕ್ಕಾಚಾರ :–**

ದತ್ತಸ್ವಾತಂತ್ರ್ಯಸಂಧಿಯಲ್ಲಿ, ೪೦೦ ಭಾಗಗಳನ್ನು ತೆಗೆದು ಎಂದು ಹೇಳಿದೆ. ಇವನ್ನೇ ಒಂದು (ಏಕಾಂಶ) ವೆಂದು ಪ್ರಸಕ್ತ ಪದ್ಯದ ಅನ್ವಯದಿಂದ ಇಟ್ಟುಕೊಳ್ಳೋಣ.

ಆಗ ಒಂದರಲ್ಲಿ ಅರ್ಧಭಾಗ, ಅಂದರೆ ೪೦೦ ರಲ್ಲಿ ಅರ್ಧ = ೨೦೦
ಪುನಃ ೨೦೦ ರಲ್ಲಿ ಅರ್ಧವೆಂದು ಪರಿಗಣಿಸಿದರೆ = ೧೦೦
ಆ ೧೦೦ ಭಾಗಗಳಲ್ಲಿ ಪುನಃ ನಾಲ್ಕು ಪ್ರಕಾರ ವಿಂಗಡಿಸಿದನು.
ಅವುಗಳ ಪೈಕಿ ೧. ಬ್ರಹ್ಮನಿಗೆ = ೫೨ (ದ್ವಿಪಂಚಾಶತ)
೨. ವಾಯುವಿಗೆ = ೪೮ (ಅಷ್ಟ ಚತ್ವಾರಿಂಶತ)
ಒಟ್ಟು = ೧೦೦ ಭಾಗಗಳಾಯಿತು
ಅವಿಶಿಷ್ಟ ಭಾಗಗಳಲ್ಲಿ ೧. ಸರಸ್ವತಿಗೆ = ೨೬ (೫೨ ರ ಅರ್ಧ)
೨. ಭಾರತಿಗೆ = ೨೪ (೪೮ ರ ಅರ್ಧ)
ಅಲ್ಲಿಗೆ ೫೦ ॥೧೧॥

## ಪದ್ಯ-೧೨

ಮೂಲ :–

**ದ್ವಿತಿಯು ಪಾದವ ತೆಗೆದುಕೊಂಡದ ।**
**ಶತವಿಭಾಗವ ಮಾಡಿ ತಾ ನಿಂ ।**
**ಶತಿ ಉಮೇಶನೊಳಿಟ್ಟು ಇಂದ್ರನೊಳೈಧಿಕ ಹತ್ತು ॥**
**ರತಿಪನೊಳಗಿನಿತಿಟ್ಟೆ ಖಿಳ ದೇ ।**
**ವತೆಗಳೊಳಗೀರೈದು ಜೀವ ।**
**ಪ್ರತತಿಯೊಳು ದಶವೈದಧಿಕ ನಾಲ್ವತ್ತು ದೈತ್ಯರೊಳು ॥ ॥೧೨॥**

**ಅವತರಣಿಕೆ :-**

ದ್ವಿತಿಯಪಾದದ (ಅವಶಿಷ್ಟ ಭಾಗ) ಹಂಚಿಕೆಯನ್ನು ತಿಳಿಸುತ್ತಾರೆ.

**ಪ್ರತಿಪದಾರ್ಥ :-**

**ದ್ವಿತೀಯ ಪಾದವ** = ಪೂರ್ವೋಕ್ತ ಎರಡನೆಯದಾದ (೧/೧೬) ಪಾದವನ್ನು, **ತೆಗೆದುಕೊಂಡು** = ತೆಗೆದುಕೊಂಡವನಾಗಿ, **ಅದ ಶತ ವಿಭಾಗ ಮಾಡಿ** = ಆ ಭಾಗಗವನ್ನು ನೂರು ವಿಭಾಗಗಳಾಗಿ ಮಾಡಿ, **ತಾ** = ಸರ್ವತಂತ್ರಸ್ವತಂತ್ರನಾದ ಶ್ರೀಹರಿಯು ಅದರಲ್ಲಿ, **ವಿಂಶತಿ** = ೨೦ ಭಾಗಗಳನ್ನು, **ಉಮೇಶನೊಳಿಟ್ಟ** ಶ್ರೀ ರುದ್ರದೇವರಲ್ಲಿ ಇಟ್ಟನು, **ಇಂದ್ರನೊಳು** = ಇಂದ್ರದೇವರಲ್ಲಿ, **ಐದಧಿಕ ಹತ್ತು** = ೧೫ ಗುಣಾಂಶಗಳನ್ನು ಇಡುವವನಾದನು, **ರತಿಪನೊಳಗೆ** = ಮನ್ಮಥನಲ್ಲಿ, **ಇನಿತು** = ಅಷ್ಟೇ ೧೫ ಭಾಗಗಳನ್ನು ಇಟ್ಟನು, **ಅಖಿಳ ದೇವತೆಗಳೊಳು** = ಉಳಿದ ಸಮಸ್ತ ದೇವತೆಗಳಲ್ಲಿ, **ಈರೈದು** = ೧೦ ಭಾಗಗಳನ್ನು ಇಟ್ಟನು. **ಜೀವ ಪ್ರತತಿಯೊಳು** = ಜೀವರ ಸಮೂಹದಲ್ಲಿ, **ದಶವ** = ೧೦ ಭಾಗಗಳನ್ನು ಇಟ್ಟನು, **ದೈತ್ಯರೊಳು** = ಕಲ್ಯಾದಿ ಸಕಲಅಸುರರಲ್ಲಿ, ನಿತ್ಯಸಂಸಾರಿಗಳಲ್ಲಿ, **ಐದಧಿಕ ನಾಲ್ವತ್ತು** = ೪೫ ಭಾಗಗಳನ್ನು ಇಟ್ಟನು. (೧೦೦ ರಲ್ಲಿ ಅವಶಿಷ್ಟಾಂಶ). ॥೧೨॥

## ವ್ಯಾಖ್ಯಾನಗಳು

### ೧. ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ

ಅವಶಿಷ್ಟ ವಿಭಾಗಕ್ರಮವನ್ನು ಹೇಳುತಾರೆ.

ಪೂರ್ವೋಕ್ತ ಎರಡನೇವಾದ (೧/೧೬) ಪಾದವನ್ನ ತೆಗೆದುಕೊಂಡವನಾಗಿ ಆ ೧/೧೬ ಭಾಗವನ್ನ ನೂರು ಭಾಗ ಮಾಡಿ, ಅದರೊಳಗೆ ತಾನ್ನು

ಇಪ್ಪತ್ತು ಗುಣವನ್ನ ಪಾರ್ವತೀಪತಿ ರುದ್ರದೇವರಲ್ಲಿ ಇಟ್ಟವನಾಗಿ, ಇಂದ್ರ ದೇವರಲ್ಲಿ ಹದಿನೈದು ಗುಣ ಇಡೋವನಾದ. ಮನ್ಮಥನಲ್ಲಿ, ಇಂದ್ರನಲ್ಲಿ ಎಷ್ಟು ಗುಣ ಇಟ್ಟನೋ ಅಷ್ಟು ಮಾತ್ರವೇ ತದಂಶಗಳ (೧೫ ಗುಣ) ಮತ್ತು ಸಮಸ್ತರಾದ ದೇವತೆಗಳಲ್ಲಿ ಹತ್ತುಗುಣಗಳು, ಜೀವಸಮೂಹದಲ್ಲಿ ಹತ್ತು, ನಾಲ್ವತ್ತೈದು ತಮೋಯೋಗ್ಯರು, ಹಾಂಗೂ ನಿತ್ಯಸಂಸಾರಿಗಳಲ್ಲಿ ಈ ರೀತಿ ಇಡೋವನಾದ. ಅಂತು ನೂರುಗುಣ ಸರಿ ಆಯಿತು. (ಇಂದ್ರ ಕಾಮರಲ್ಲಿ ಇಟ್ಟಿದ್ದು ೧೫ ಗುಣ, ಹೆಚ್ಚು ಅಲ್ಲ. ಇಂದ್ರದೇವರಲ್ಲಿ ಇಟ್ಟ ಸ್ವಾತಂತ್ರ್ಯ ದೊಳಗೆ ೧೫ ಗುಣ ಗುಣಾಂಶವನ್ನು ತೆಗೆದು ಮನ್ಮಥನಲ್ಲಿಟ್ಟ. ಈ ಹದಿ ನೈದು ಗುಣ ಬ್ಯಾರೆ ಅಲ್ಲ. ಸೇರಿಸಿದರೆ ಹೆಚ್ಚಾಗುತ್ತದೆ. ಇಂದ್ರ ಕಾಮರಲ್ಲಿ ಇಟ್ಟಿದ್ದು ಈ ಪ್ರಕಾರ ಅಂತ ತಾತ್ಪರ್ಯ). ॥೧೨॥

## ೨. ಭಾವಪ್ರಕಾಶಿಕೆ :–

ಮೊದಲನೆಯ ಕಾಲುಭಾಗವನ್ನು ನೂರು ಭಾಗಮಾಡಿ,ಬ್ರಹ್ಮ ವಾಯು ಗಳಿಗೆ ಕೊಟ್ಟನು. ಎರಡನೆಯ ಪಾದಾಂಶವನ್ನು ೧೦೦ ಭಾಗಮಾಡಿ, ೨೦ ಭಾಗಗಳನ್ನು ರುದ್ರದೇವರಿಗೂ, ಇಂದ್ರ ಮನ್ಮಥ ಇವರಿಗೆ ೧೫ ಭಾಗ ಗಳನ್ನೂ, ಮಿಕ್ಕದೇವತೆಗಳಿಗೆ ೧೦ ಭಾಗಗಳನ್ನೂ, ಎಲ್ಲಾ ಜೀವಸಮು ದಾಯಕ್ಕೂ ೧೦ ಭಾಗಗಳನ್ನೂ, ಕಲಿ ಮೊದಲಾದ ದೈತ್ಯರಿಗೆ ೪೫ ಭಾಗ ಗಳನ್ನೂ ಕೊಟ್ಟನು. ॥೧೨॥

## ೩. ಭಾವದರ್ಪಣ :

ದ್ವಿತೀಯಪಾದ । "ಪಾದಂ ದ್ವಿತೀಯಂ ಶತಧಾ ವಿಭಜ್ಯ ದಶಭಾಗ ಕಾನ್ । ಅಹಂಕಾರಾತ್ಮಕೇ ರುದ್ರೇ ತಥಾ ಬುದ್ಧೌ ವಿಧಾಯಚ । ಮನೋ

ದೇವೇ ತತಃ ಶಕ್ರೇ ಭಾಗಾನ್ ಪಂಚದಶೈವತು । ತತ್ವದೇವೇ ದಶಾಂಶಾಶ್ಚ ಸ್ವಾತಂತ್ರ್ಯಂ ನಿದಧೇ ಹರಿರಿತಿ" ವಿಷ್ಣುರಹಸ್ಯೋಕ್ತೇಃ ಪಂಚಚತ್ವಾರಿಂಶ ದಂಶಾನ್ ಕಲಿಮುಖ್ಯೇಶ್ವಧಾತ್ಸ್ವಯು" ಮಿತಿ ಚ ॥೧೨॥

## ೪. ಶ್ರೀವ್ಯಾಸದಾಸ ಸಿದ್ಧಾಂತ ಕೌಮುದೀ :–

ಷೋಡಷ ಸಂಧಿ ವಿವರಣೇ ಮಾನ ಮುಕ್ತಮ್ । ತದ್ವಿವರಣಂ ಇದಂ- "ದ್ವಿತೀಯ" ಇತಿ. ॥೧೨॥

## ಕನ್ನಡಾರ್ಥ

೧೬ ನೆಯ ಸಂಧಿಯ ವಿವರಣದಲ್ಲಿ ಪ್ರಮಾಣಗಳನ್ನು ಹೇಳಲಾಗಿದೆ. ಅದರ ವಿಷಯವನ್ನು "ದ್ವಿತೀಯ" ಪದ್ಯದಿಂದ ಸಂಗ್ರಹಿಸಿರುತ್ತಾರೆ. ॥೧೨॥

## ೫. ಗುರುಹೃದಯಪ್ರಕಾಶಿಕೆ :–

ಎರಡನೇ ಪಾದವಾದ ನೂರನ್ನ ತೆಗೆದುಕೊಂಡು, ಉಮೇಶನೆಂಬ ಶಿವನಲ್ಲಿ ಇಪ್ಪತ್ತು ಇಟ್ಟು, ಇಂದ್ರನಲ್ಲೂ ರತಿಪತಿ ಕಾಮನಲ್ಲೂ ಇನಿತೆಂಬ ಹದಿನೈದನ್ನೇ ಇಟ್ಟು, ಅಖಿಳ ತತ್ತ್ವೇಶ ದೇವತೆಗಳಿಗೆ ಈರೈದೆಂಬ ಹತ್ತನ್ನೂ ಕೊಟ್ಟು, ಇತರ ಸರ್ವಜೀವರಿಗೂ ಹತ್ತು ಭಾಗವನ್ನು ಕೊಟ್ಟನು. ಕಲ್ಯಾದಿ ಸಮಸ್ತದೈತ್ಯರಲ್ಲಿ ನಲವತ್ತೈದು ಭಾಗವನ್ನು ಇಟ್ಟು, ಎರಡನೆ ನೂರನ್ನು ಪೂರ್ತಿಮಾಡಿದನು. ॥೧೨॥

## ಪದ್ಯ-೧೩

**ಮೂಲ :–**

**ಕಾರುಣಿಕ ಸ್ವಾತಂತ್ರ್ಯಯುತ್ವವ ।**
**ಮೂರುವಿಧಗೈಸೆರಡು ತನ್ನೊಳು ।**
**ನಾರಿಗೊಂದನು ಕೊಟ್ಟ ಸ್ವಾತಂತ್ರ್ಯಯುವ ಸರ್ವರಿಗೆ ॥**
**ಧಾರುಣಿಪ ತನ್ನನುಗರಿಗೆ ವ್ಯಾ ।**
**ಪಾರ ಕೊಟ್ಟು ಗುಣಾಗುಣಗಳ ವಿ ।**
**ಚಾರ ಮಾಡುವ ತೆರದಿ ತ್ರಿಗುಣವ್ಯಕ್ತಿಯುನೆ ಮಾಳ್ಪ ॥**
**॥೧೩॥**

**ಅವತರಣಿಕೆ :–**

ಅವಶಿಷ್ಟ ಸ್ವಾತಂತ್ರ್ಯ ವಿಭಾಗ ಕ್ರಮವನ್ನು ತಿಳಿಸುತ್ತಾರೆ.

**ಪ್ರತಿಪದಾರ್ಥ :–**

**ಕಾರುಣಿಕ** = ಸೃಷ್ಟ್ಯಾದಿ ಸರ್ವಕಾರ್ಯಗಳಿಗೆ ಮೂಲಕಾರಣನಾದ ಪರಮದಯಾಮಯನಾದ ಶ್ರೀಪರಮಾತ್ಮನು, **ಸ್ವಾತಂತ್ರ್ಯಯುವ** = ತನ್ನ ಸ್ವಾತಂತ್ರ್ಯವೆಂಬ ಗುಣವನ್ನು, ತ್ರಿವಿಧ ಜೀವರಿಗೆ ವಿಭಾಗ ಮಾಡಿಕೊಟ್ಟದ್ದು ಹೋಗತಾ, ಅವಶಿಷ್ಟ ಭಾಗವನ್ನು, **ಮೂರು ವಿಧಗೈಸಿ** = ಮೂರು ಭಾಗಗಳನ್ನಾಗಿ ಮಾಡಿ, **ಎರಡು ತನ್ನೊಳು** = ಎರಡಂಶಗಳನ್ನು, ತನ್ನಲ್ಲಿಯೂ, **ಒಂದನು** = ಉಳಿದ ಒಂದು ಭಾಗವನ್ನು, **ನಾರಿಗೆ** =

ತನ್ನ ಪತ್ನಿಯಾದ ಲಕ್ಷ್ಮೀದೇವಿಯರಿಗೆ, **ಕೊಟ್ಟ** = ಕೊಟ್ಟನು. **ಸ್ವಾತಂತ್ರ್ಯ ಸರ್ವರಿಗೆ** = ಈ ರೀತಿಯಲ್ಲಿ ಸರ್ವರಿಗೂ ತನ್ನ ಸ್ವಾತಂತ್ರ್ಯವನ್ನು ವಿಭಾಗಿಸಿ ಹಂಚಿಕೊಟ್ಟನು, **ಧಾರುಣಿಪ** = ಭೂಮಿಯನ್ನಾಳುವ ಅರಸು, **ತನ್ನ ಅನುಗರಿಗೆ** = ತನ್ನಿಂದ ಅಧಿಕಾರ ಕೊಡಲ್ಪಟ್ಟ ತನ್ನ ಪ್ರಜೆಗಳಾದ ಭೃತ್ಯರಿಗೆ, **ವ್ಯಾಪಾರಕೊಟ್ಟು** = ಕಾರ್ಯನಿರ್ವಹಣಾ ರೂಪವಾದ ವ್ಯವಸ್ಥೆ ಮಾಡಿಕೊಟ್ಟು, **ಗುಣಾಗುಣಗಳ** = ಗುಣವಾದದ್ದು ಯಾವುದು, ದೋಷವಾದದ್ದು ಯಾವುದು, **ವಿಚಾರ ಮಾಡುವ ತೆರದಿ** = ಎಂದು ನಿರ್ಣಯಿಸುವೋಪಾದಿಯಲ್ಲಿ, **ತ್ರಿಗುಣವ್ಯಕ್ತಿಯನೆ ಮಾಳ್ಪ** = ಸತ್ವ ರಜ, ತಮೋಗುಣಗಳಿಗೆ ಅನುಸಾರವಾದ ಕರ್ಮಗಳನ್ನು ಮಾಡಿ ಮಾಡಿಸಿ, ಅವುಗಳನ್ನು ಅಭಿವ್ಯಕ್ತಿಗೊಳಿಸಿ, ಜೀವರಿಗೆ ತಜ್ಜನ್ಯಫಲಗಳನ್ನು ಅನುಭವಕ್ಕೆ ತಂದುಕೊಟ್ಟು, ಉಣಿಸುವನು. ॥೧೩॥

## ವ್ಯಾಖ್ಯಾನಗಳು

### ೧. ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ :-

'ಇನ್ನೂ ಅವಶಿಷ್ಟ ಸ್ವಾತಂತ್ರ್ಯ ವಿಭಾಗವನ್ನೇ ಹೇಳತಾರೆ.

ಸೃಷ್ಟ್ಯಾದಿ ಸರ್ವಕಾರ್ಯಗಳಿಗೆ ಮೂಲಕಾರಣನಾದ ನಾರಾಯಣ ದೇವರು ಸ್ವಾತಂತ್ರ್ಯವನ್ನ ತ್ರಿವಿಧ ಜೀವರಿಗೆ ಭಾಗಮಾಡಿ ಕೊಟ್ಟದು ಹೋಗತಾ, ಅವಶಿಷ್ಟ ಮುಕ್ಕಾಲು ಅರಕಾಲು ಭಾಗವನ್ನ ಮೂರು ಭಾಗ ಮಾಡಿ, ಎರಡು ಭಾಗ ಅಂದರೆ, ೯ ಆಣೆ ೪ ಪೈ ಭಾಗ ಪರಮಾತ್ಮನಾದ ತನ್ನಲ್ಲಿ ಇಟ್ಟುಕೊಂಡು, ಒಂದು ಭಾಗ ಅಂದರೆ,೪ ಆಣೆ೮ ಪೈ ಭಾಗ ಲಕ್ಷ್ಮೀ ದೇವೇರಿಗೆ ಕೊಡೋವನಾದ. ಅಂತು, ಮೂರು ಭಾಗ ಸರಿ ಆಯಿತು.

131 $\frac{3}{4}$ ಗುಣದೊಳಗೆ, 1 ತೆಗೆದು,

$\frac{1}{2}$, $\frac{1}{2}$ ಮಾಡಿ, ಇದರನ್ನ $\frac{1}{4}$, $\frac{1}{4}$ ಮಾಡಿ

ಇದರನ್ನ $\frac{1}{8}$, $\frac{1}{8}$ ಮಾಡಿ ಇದರನ್ನ

200 ಭಾಗ ಮಾಡಿ, 52 ಬ್ರಹ್ಮನಲ್ಲಿ 48 ವಾಯುದೇವರಲ್ಲಿ, 20 ರುದ್ರನಲ್ಲಿ ಇಂದ್ರ ಕಾಮರಲ್ಲಿ 15, ದೇವತೆಗಳಲ್ಲಿ 10, ಜೀವರಲ್ಲಿ 10, ಕಲ್ಯಾದಿ ದೈತ್ಯರಲ್ಲಿ 45, ಅಂತು 200 ಆಯಿತು. ಅರ್ಧಭಾಗ 1 ಕಾಲುಭಾಗ 1 ಮುಕ್ಕಾಲುವರಿ 1

ಇದರನ್ನ ಮೂರು ಭಾಗಮಾಡಿ, 2 ಭಾಗ ತನ್ನೊಳಗೆ, 1 ಭಾಗ ರಮಾದೇವರಲ್ಲಿ, ಅಂತು 2 ಭಾಗ ಆಯಿತು.

ಪೂರ್ವೋಕ್ತ ತ್ರಿವಿಧಜೀವರಿಗೆ ತ್ರಿವಿಧಪ್ರಕಾರ ಸ್ವಾತಂತ್ರ್ಯವ ಸಮಸ್ತಜೀವರಿಗೆ ಕೊಟ್ಟು ವಿಭಾಗಮಾಡಿಕೊಟ್ಟಿದ್ದಾನೆ. ಇದಕ್ಕೆ, ದೃಷ್ಟಾಂತ ಭೂಪಾ ಕಾಲಕನಾದ ರಾಜ ತನ್ನಿಂದ ಅಧಿಕಾರ ರೂಪವಾದ ಸ್ವಾತಂತ್ರ್ಯಹೊಂದಿ ಅನುಸರಿಸಿದ ಭೃತ್ಯರಿಗೆ, ಅವರವರ ಯೋಗ್ಯತಾನುಸಾರ ಮಾಡತಕ್ಕ ಕಾರ್ಯಗಳ ವ್ಯವಸ್ಥಾ, ಮಾಡಿಕೊಟ್ಟು, ಗುಣದಾವದು ದೋಷದಾವದುಎಂತ ವಿಚಾರ ಮಾಡುವ್ರದಕ್ಕೋಸ್ಕರ ಲಿಖಿತರೂಪವಾದ ನಿಂಬಂಧನೆಗಳ ಮಾಡಿ, ತದ್ವಾರಾ ಗುಣಾವಗುಣಗಳ ಆಗಾಗ್ಗೆ ತಿಳಿಸುವ ತೆರಧಂತೆ, ಗುಣಾವಗುಣಗಳ ತಿಳಿಸೋದಗೋಸ್ಕರ ವೇದೋಕ್ತ್ಯಾನುಸಾರ

ಶಾಸ್ತ್ರಪುರಾಣರೂಪವಾದ ಶಾಸನಗಳ ನಿರ್ಮಾಣ ಮಾಡಿ, ತ್ರಿವಿಧವಾದ ಸ್ವಾತಂತ್ರ್ಯಗುಣಗಳ ದ್ವಾರಾ, ಸತ್ತ್ವಜೀವರಲ್ಲಿ ವಿದ್ಯಮಾನವಾದ ಸತ್ತ್ವ ಸಂಬಂಧವಾದ ತಾರತಮ್ಯ ಪಂಚಭೇದಜ್ಞಾನ ಮುಕ್ತಿಯೋಗ್ಯ ಜೀವರಲ್ಲಿ, ರಾಜಸ ಜೀವರಾದ ನಿತ್ಯಸಂಸಾರಿಗಳಲ್ಲಿ ವಿದ್ಯಮಾನವಾದ ರಜಸ್ಸಂಬಂಧವಾದ ತಾರತಮ್ಯಶೂನ್ಯವಾದ ಪಂಚಭೇದ ಜ್ಞಾನ, ತಮೋಯೋಗ್ಯರಲ್ಲಿ ವಿದ್ಯಮಾನವಾದ ತಮೋಗುಣ ಸಂಬಂಧವಾದ ತಾರತಮ್ಯ ಪಂಚಭೇದದಿಂದ ಶೂನ್ಯವಾದ ಮಿಥ್ಯಾಜ್ಞಾನ ಏತಾದೃಶ ತ್ರಿಗುಣಗಳ, ತತ್ಕಾರ್ಯಗಳ ಲಿಂಗಗತ ಗುಣತ್ರಯಗಳ ದ್ವಾರಾ, ತದ್ಗತ ಅನಾದಿಕರ್ಮದ್ವಾರಾ, ಸ್ಥೂಲದೇಹದಲ್ಲಿ ವ್ಯಕ್ತಮಾಡಿ, ತದ್ವಾರಾ ಗುಣಾವಗುಣಗಳ ತಿಳಕೋತಕ್ಕ ಶಾಸನರೂಪವಾದ ಶಾಸ್ತ್ರಗಳ ತಿಳಿಸಿಕೊಟ್ಟು, ತನ್ನಿಂದ ರಚಿತವಲ್ಲದ ಅನಾದಿ ಸ್ವರೂಪಸ್ವಭಾವದ ಯೋಗ್ಯತಾನುಸಾರ ಸಾಧನೆ ಪೂರ್ತಿಮಾಡಿಸಿ, ಲಿಂಗಭಂಗ ಐದಿಸಿ ಸ್ವರೂಪವ್ಯಕ್ತಮಾಡಿ, ತ್ರಿವಿಧರಿಗೆ ತ್ರಿವಿಧಸ್ವರೂಪವನುಸರಿಸಿ, ಸುಖ, ದುಃಖ, ಮಿಶ್ರಣ ವ್ಯಕ್ತಮಾಡಿ ಕೋಡೋವನಾಗತಾನೆ. ॥೧೩॥

## ದತ್ತಸ್ವಾತಂತ್ರ್ಯ, ಸ್ವಗತ ಸ್ವಾತಂತ್ರ್ಯ, ಸರ್ವಸ್ವಾತಂತ್ರ್ಯ ನೊತ್ತ ವಿವರ :-

| ಸಂಖ್ಯಾ ವಿವರ | ದತ್ತ ಸ್ವಾತಂತ್ರ್ಯ ಗುಣ | ಸ್ವಗತ ಸ್ವಾತಂತ್ರ್ಯ ಗುಣ | ಸರ್ವಸ್ವಾತಂತ್ರ್ಯ ಗುಣ |
|---|---|---|---|
| 1. ಶ್ರೀ ನಾರಾಯಣ ದೇವರು | $132\frac{3}{4}$ | 2 | 2 |
| 2. ರಮಾದೇವೇರು | $67\frac{1}{4}$ | 1 | 1 |
| 3. ಬ್ರಹ್ಮದೇವರು | 52 | $5\frac{1}{4}$ | 52 |
| 4. ವಾಯುದೇವರು | 48 | $2\frac{3}{4}$ | 48 |
| 5. ರುದ್ರದೇವರು | 20 | 2 | 20 |
| 6. ಇಂದ್ರ ಕಾಮರು | 15 | $1\frac{1}{2}$ | 15 |
| 7. ತತ್ತ್ವದೇವತೆಗಳು | 10 | 1 | 10 |
| 8. ಸರ್ವಸುಜೀವರಲ್ಲಿ | 10 | 1 | 10 |
| 9. ಕಲ್ಯಾದಿಗಳಲ್ಲಿ | 45 | $4\frac{1}{2}$ | 45 |

| ಅಂತು 400 | 22 | 203 |
|---|---|---|

ಅಂತು ಒಟ್ಟು ಮೊತ್ತ 625 ಆಯಿತು. ‖೧೩‖

## ೨. ಭಾವಪ್ರಕಾಶಿಕೆ :—

ಉಳಿದ ಎರಡು ಭಾಗಗಳನ್ನು ಮೂರು ಭಾಗಗಳನ್ನಾಗಿ ಮಾಡಿ, ಎರಡು ತಾನಿಟ್ಟುಕೊಂಡು, ಲಕ್ಷ್ಮೀದೇವಿಯರಿಗೆ ಒಂದು ಭಾಗವನ್ನು ಕೊಟ್ಟನು. ಹೀಗೆ ಸ್ವಾತಂತ್ರ್ಯವನ್ನು ಅವರವರಿಗೆ ಹಂಚಿ, ರಾಜನು ಭೃತ್ಯರಿಗೆ ಕೆಲಸವನ್ನು ಮಾಡುವ ಸ್ವಾತಂತ್ರ್ಯವನ್ನು ಕೊಟ್ಟು, ಅವರು ಮಾಡಿದ ಕಾರ್ಯಗಳ ಗುಣಾವಗುಣಗಳನ್ನು ವಿಚಾರಮಾಡಿ ಅವರವರ ಯೋಗ್ಯತೆಯನ್ನು ವ್ಯಕ್ತಪಡಿಸುವಂತೆ, ಪರಮಾತ್ಮನು ಜೀವರ ಯೋಗ್ಯತೆಯನ್ನು ಅವರಿಂದ ಮಾಡಿಸುವ ಕರ್ಮಗಳಿಂದ– ಇವರು ಸಾತ್ವಿಕರು, ಇವರು ರಾಜಸರು, ಇವರು ತಾಮಸರು-ಎಂದು ಅವರ ಯೋಗ್ಯತೆಯನ್ನು ವ್ಯಕ್ತಪಡಿಸುವನು. ‖೧೩‖

## ೩. ಭಾವದರ್ಪಣ :—

ಕಾರುಣಿಕ । "ಈಶ ಸ್ವಾತಂತ್ರ್ಯ ಭಾಗೇಷು ಭಾರ್ಯಾಭಾಗಸ್ತ್ರುತೀಯಕಃ । ಶೇಷಂ ಭಾಗದ್ವಯಂ ಸ್ವಸ್ಮಿನ್‌ಸ್ಥಾಪಯನ್ನಿತಿ" **ವಿಷ್ಣುರಹಸ್ಯೋಕ್ತೇಃ** । ಧಾರುಣಿಪ=ರಾಜ, ತನ್ನನುಗರು= ಕೈಕೆಳಗಿನವರು. ‖೧೩‖

## ೪. ಶ್ರೀವ್ಯಾಸದಾಸ ಸಿದ್ಧಾಂತ ಕೌಮುದೀ :—

ಕಾರುಣಿಕ–ಇತಿ ‖ ಕರುಣಾಶಾಲಿ. ‖೧೩‖

## ೫. ಶ್ರೀ ಗುರುಹೃದಯ ಪ್ರಕಾಶಿಕೆ :—

ದಯಾಶಾಲಿಯಾದ ಸ್ವಾಮಿಯು ಉಳಿದ ಅರ್ಧ ಇನ್ನೂರನ್ನು ಮೂರು ಪಾಲು ಮಾಡಿ, ತನ್ನ ಪತ್ನಿ ರಮಾದೇವಿಯಲ್ಲಿ ಅರವತ್ತಾರು ಮೂರನೇ ಎರಡು ಭಾಗವನ್ನು ಇಟ್ಟು, ನೂರಮೂವತ್ತಮೂರೂ ಮೂರನೇ ಒಂದು ಭಾಗವನ್ನು ತನ್ನಲ್ಲಿಯೇ ಇಟ್ಟುಕೊಂಡು, ನಾಲ್ಕುನೂರು ಭಾಗವನ್ನು ಹೀಗೆ ಹಂಚಿದ ನಂತರ, ಧಾರುಣಿಪನೆಂಬ ದೊರೆ ತನ್ನಣುಗರೆಂಬ ಭೃತ್ಯರಿಗೆ

ವ್ಯಾಪಾರಶಕ್ತಿ ಕೊಟ್ಟು, ಅವರಲ್ಲಿರುವ ಸುಗುಣ,ದುರ್ಗುಣಗಳನ್ನು ವಿಚಾರಿಸುವಂತೆ, ಅವರ ಸ್ವಭಾವ ತ್ರಿಗುಣಕ್ರಿಯೆಗಳನ್ನು ಅವರಲ್ಲಿ ವ್ಯಕ್ತಿಮಾಡುವನು.

**ತತ್ತತ್ಕಾರ್ಯ ಕೃತ್‌ಶಕ್ತಿ ಸ್ವಾತಂತ್ರ್ಯಂ ಪರಮಂ ಸ್ಮೃತಂ ।**
**ಸ್ವಸ್ಮಿನ್ನರ್ಧಂ ಸ್ವತಂತ್ರತ್ವಂ ಸಮಾಧಾಯ ತದರ್ಧಕಂ ॥**
**ವಿಭಜ್ಯ ಶತಧಾ ಭೂಯೋ ಅಷ್ಟಾ ಚತ್ವಾರಿಂಶದಂಶಕಾನ್ ।**
**ಪ್ರಾಣೇ ಸ್ವಾತಂತ್ರ್ಯಮಾಧಾಯ ದ್ವಿಪಂಚಾಶತ್ತು ವೇಧಸಿ ॥**
**ಪಾದಂ ಚತುರ್ಥಂ ಶತಧಾ ವಿಭಜ್ಯ ದಶಭಾಗಕಾನ್ ।**
**ಜೀವೇ ಸ್ವಾತಂತ್ರ್ಯಮಾಧಾಯ ತತೋ ವಿಂಶತಿಭಾಗಕಾನ್ ॥**
**ಅಹಂಕಾರಾತ್ಮಕೇ ರುದ್ರೇ ತತೋ ಬುದ್ಧ್ಯಾ ನಿಧಾಯಚ ।**
**ಮನೋದೇವೇ ತತಶ್ಶಕ್ರೇ ಭಾಗಾ ಪಂಚದಶನ್ವಿತು ॥**
**ತತ್ತದೇವೇ ದಶಾಂಶಂ ಚ ಸ್ವಾತಂತ್ರ್ಯಂ ವಿದಧೇ ಹರಿಃ ।**
**ಪಂಚಶತ್ವಾರಿಂಶದಂಶಾರ್ಕಲಿ ಮುಖ್ಯೇಷ್ವದಧಾತ್ ಸ್ವಯಂ ॥**
ಎಂಬರ್ಥವು ವಿವರಿಸಿತು. ॥೧೩॥

## ಸರ್ವವ್ಯಾಖ್ಯಾನಸಾರಸಂಗ್ರಹ

ಸರ್ವತಂತ್ರ ಸ್ವತಂತ್ರನಾದ ಶ್ರೀಹರಿಯು ತಾನು ಸೃಷ್ಟಿಸಿ ತಂದ ಜೀವರಲ್ಲಿ ಅಂತಸ್ಥಿತನಾಗಿದ್ದು, ಸರ್ವವ್ಯಾಪಾರಗಳನ್ನು ಜೀವರ ಹೆಸರಿನಲ್ಲಿಯೇ, ಅವರ ಪರವಾಗಿ ಬಿಂಬಕ್ರಿಯೆಯಾದ್ವಾರಾ ತಾನೇ ಮಾಡಿ, ದೇವ ದೈತ್ಯರ ದ್ವಾರಾ ಮಾಡಿಸಿ, ಜೀವನದ್ವಾರಾ ಮಾಡಿ ಮಾಡಿಸುತ್ತಾ, ಜೀವರ ಅನುಭವಕ್ಕೆ ಕರ್ಮಫಲಗಳನ್ನು ತಂದುಕೊಡುತ್ತಾ, ತತ್ಫಲಗಳನ್ನು ಅವರಿಗೆ ಉಣಿಸುವನು. ಇದರಿಂದ ಕರ್ಮವಿಮೋಚನೆ. ತದ್ವಾರಾ ತ್ರಿವಿಧಜೀವರ ಲಿಂಗದೇಹಭಂಗ. ಅನಂತರ ಅವರವರ ಗತಿಯನ್ನು ನೀಡಲೋಸುಗ, ಇಷ್ಟು ವ್ಯಾಪಾರಗಳನ್ನೂ ಮಾಡುತ್ತಿರುವ ಶ್ರೀಪರಮಾತ್ಮನು ಕಾರುಣಿಕನು.

ತನ್ನ ಅಪಾರ ಸ್ವಾತಂತ್ರ್ಯವನ್ನು ಮೂರು ವಿಧಗಳಾಗಿ ವಿಭಾಗಿಸಿ, ಅವು ಗಳಲ್ಲಿ ಎರಡನ್ನು ತನ್ನಲ್ಲಿಯೇ ಇಟ್ಟುಕೊಂಡನು.

ಉಳಿದ ಒಂದು ಭಾಗವನ್ನು ಜಗತ್ಕಾರ್ಯಕ್ಕಾಗಿ ತನ್ನ ಪತ್ನಿಯಾದ ಶ್ರೀ ಲಕ್ಷ್ಮೀದೇವಿಯಲ್ಲಿ ಇಟ್ಟನು.

ಭೂಮಿಯನ್ನಾಳುವ ಅರಸು ತನ್ನ ಪ್ರಜೆಗಳಾದ ಅಧಿಕಾರಿಗಳಿಗೆ, ಅವ ರವರ ಸಾಮರ್ಥ್ಯಕ್ಕನುಗುಣವಾಗಿ ರಾಜ್ಯಾಧಿಕಾರವನ್ನು ಕೊಡುವನು. ರಾಜಾಜ್ಞೆಯಂತೆ ಅವರು ತಮ್ಮ ತಮ್ಮ ಕಾರ್ಯವ್ಯಾಪ್ತಿಗೆ ಒಳಪಟ್ಟು, ರಾಜ್ಯಾಡಳಿತರೂಪವಾದ ಕಾರ್ಯವನ್ನು ನಿರ್ವಹಿಸುವರು. ಈ ಅಧಿಕಾರವು ರಾಜನಿಂದ ದತ್ತವಾದದ್ದೇ ಹೊರತು, ಅವರ ಸ್ವರೂಪದ್ದಲ್ಲ. ಈ ರೀತಿಯ ಕಾರ್ಯವ್ಯವಸ್ಥೆಯಲ್ಲಿ ರಾಜನು ಆ ಅಧಿಕಾರಿಗಳ ಗುಣಾಗುಣ ಗಳನ್ನು ವಿಮರ್ಶಿಸಿ, ಅದಕ್ಕೆ ತಕ್ಕಂತೆ ಮನ್ನಣೆ ಮಾಡುವನು.

ಆ ಅರಸನೋಪಾದಿಯಲ್ಲಿ ಜಗತ್ಪ್ರಭುವಾದ ಶ್ರೀಹರಿಯು ತ್ರಿಗುಣ ಗಳ ಅಭಿವ್ಯಕ್ತಿ ಮಾಡಿ, ಅದಕ್ಕೆ ತಕ್ಕಂತೆ ಕರ್ಮಗಳನ್ನು ಮಾಡಿ ಮಾಡಿಸಿ, ಜೀವರಿಗೆ ಉಣಿಸುವನು.

ಸತ್ತ್ವಗುಣಾಭಿವ್ಯಕ್ತಿ ದ್ವಾರಾ, ಮುಕ್ತಿಯೋಗ್ಯಚೇತನರಲ್ಲಿ ಪಂಚ ಭೇದಯುಕ್ತವಾದ ತಾರತಮ್ಯಜ್ಞಾನವನ್ನು ನೀಡಿ, ತದ್ವಾರಾ ಸತ್ಸಾಧನೆ ಮಾಡಿ ಮಾಡಿಸಿ, ನಿತ್ಯಾನಂದರೂಪವಾದ ಮೋಕ್ಷವನ್ನು ಅನುಗ್ರಹಿಸುವನು.

ರಜೋಗುಣಾಭಿವ್ಯಕ್ತಿ ದ್ವಾರಾ, ನಿತ್ಯಸಂಸಾರಿಗಳಲ್ಲಿ ಮಿಶ್ರಸಾಧನೆ ಮಾಡಿಸಿ, ಸುಖದುಃಖರೂಪವಾದ ಮಿಶ್ರಗತಿಯನ್ನೀಯುವನು.

ತಮೋಗುಣಾಭಿವ್ಯಕ್ತಿ ದ್ವಾರಾ, ಭಗವದ್ವೇಷಿಗಳಾದ ತಮೋ ಯೋಗ್ಯರಲ್ಲಿ ನವವಿಧ ದ್ವೇಷ, ಮಿಥ್ಯಾಜ್ಞಾನ– ಇತ್ಯಾದಿಗಳನ್ನುಂಟು ಮಾಡಿ, ಕೊನೆಯಲ್ಲಿ ಅವರಿಗೆ ನಿತ್ಯದುಃಖರೂಪವಾದ ಅಂಧತಮಸ್ಸನ್ನು ಹೊಂದಿಸುವನು.

**ಸ್ವಾತಂತ್ರ್ಯ ಗುಣವಿಭಾಗದ ಕ್ರಮದ ಪೂರ್ಣ ವಿವರಣೆ :–**

1. ತೆಗೆದುಕೊಂಡಿದ್ದು = 1 ಗುಣ.

2. ಅದನ್ನು ವಿಭಾಗಿಸಿದ್ದು $= 2$ ಸಮಭಾಗಗಳಾಗಿ $\left\{\frac{1}{2}\right.$ ಮತ್ತು $\left.\frac{1}{2}\right\}$

3. ಮೊದಲನೆಯ $\frac{1}{2}$ ಭಾಗವನ್ನು ಪುನಃ ಎರಡು ಭಾಗಗಳಾಗಿ ಮಾಡಿದನು.

$\left\{\frac{1}{4}\right.$ ಮತ್ತು $\left.\frac{1}{4}\right\}$

4. ಮೊದಲನೆಯ $\frac{1}{4}$ ಭಾಗವನ್ನು ಪುನಃ ನಾಲ್ಕು ಭಾಗಗಳಾಗಿ ವಿಭಾಗಿಸಿದನು.

ಆಗ $\frac{1}{16}$, $\frac{1}{16}$, $\frac{1}{16}$, $\frac{1}{16}$, ಮತ್ತು $\frac{1}{16}$ ಹೀಗೆ ನಾಲ್ಕು ಭಾಗಗಳಾಯಿತು.

5. ಮೊದಲನೆಯ $\frac{1}{16}$ ಭಾಗವನ್ನು 100 ಭಾಗಗಳಾಗಿ ವಿಭಾಸಿದನು.

ಅವುಗಳಲ್ಲಿ (1) ಬ್ರಹ್ಮದೇವರಲ್ಲಿ ಹಾಗೂ ಸರಸ್ವತಿಯಲ್ಲಿ
ಇಟ್ಟಿದ್ದು $= 52$ ಗುಣಗಳು
(2) ವಾಯುದೇವರಲ್ಲಿ ಹಾಗೂ ಭಾರತಿಯಲ್ಲಿ
ಇಟ್ಟಿದ್ದು $= 48$ ಗುಣಗಳು

ಒಟ್ಟು $= 100$ ಭಾಗಗಳು

6. ಎರಡನೆಯ $\frac{1}{16}$ ಭಾಗವನ್ನು 100 ಭಾಗಗಳಾಗಿ ವಿಭಾಗಿಸಿ, ಹಂಚಿದನು.

ಅವುಗಳಲ್ಲಿ (1) ರುದ್ರ (ಪಾರ್ವತೀ) ಹಾಗೆಯೇ, ಶೇಷ ಮತ್ತು ಗರುಡರು ಗ್ರಾಹ್ಯ (ತತ್ಪತ್ನಿಯರಾದ ವಾರುಣೀ ಮತ್ತು ಸೌಪರ್ಣಿಯಲ್ಲಿ) 20 ಗುಣ

(2) ಇಂದ್ರ ಮತ್ತು ಕಾಮರಲ್ಲಿ (ಶಚೀ-ರತೀ ಸೇರಿ) = 15 ಗುಣ

(3) ತತ್ತ್ವದೇವತೆಗಳು, (ತತ್ಪತ್ನಿಯರೂ) ಮತ್ತು ಉಳಿದ ಸಮಸ್ತದೇವತಾಸಮೂಹದಲ್ಲಿ = 10 ಗುಣ

(4) ಸಮಸ್ತ ಮುಕ್ತಿಯೋಗ್ಯ ಚೇತನರಲ್ಲಿ = 10 ಗುಣ

(5) ತಮೋಯೋಗ್ಯ ಹಾಗೂ ನಿತ್ಯಸಂಸಾರಿಗಳಲ್ಲಿ = 45 ಗುಣ

ಒಟ್ಟು = 100 ಭಾಗಗಳು

(7) ಅವಶಿಷ್ಟ $\frac{1}{16}$ ಮತ್ತು $\frac{1}{16}$ ಭಾಗಗಳನ್ನು ಸೇರಿಸಿ, ಅಂದರೆ, $\frac{1}{8}$ ಭಾಗವನ್ನು ಮೂರು ಭಾಗ ಮಾಡಿದನು.

(1) ಅದರಲ್ಲಿ ತಾನು ಇಟ್ಟುಕೊಂಡ ಭಾಗ = 2

(2) ತನ್ನ ನಾರೀ ಲಕ್ಷ್ಮೀದೇವಿಯಲ್ಲಿ = 1

ಒಟ್ಟು = 2

# ಪದ್ಯ-೧೪

**ಮೂಲ :–**

**ಪುಣ್ಯಕರ್ಮಕೆ ಸಹಾಯುವಾಗುವ ।**
**ಧನ್ಯರಿಗೆ ಕಲ್ಯಾದಿ ದೈತ್ಯರ ।**
**ಪುಣ್ಯಫಲಗಳನೀವ ದಿವಿಜರ ಪಾಪಕರ್ಮಫಲ ॥**
**ಅನ್ಯಕರ್ಮವ ಮಾಳ್ಪರಿಗೆ ಅನು ।**
**ಗುಣ್ಯ ಜನರಿಗೆ ಕೊಡುವ ಬಹು ಕಾ ।**
**ರುಣ್ಯಸಾಗರ ನೀ ತೆರದಿ ಭಕ್ತರನ ಸಂತೈಪ ॥ ॥೧೪॥**

**ಅವತರಣಿಕೆ :–**

ಪಾಪ ಪುಣ್ಯಕರ್ಮಗಳ ವಿನಿಮಯು ವಿಚಾರ ತಿಳಿಸುತ್ತಾರೆ. ॥೧೪॥

**ಪ್ರತಿಪದಾರ್ಥ :–**

**ಪುಣ್ಯಕರ್ಮಕೆ** = ಶ್ರೀಹರಿಯು ಪ್ರೀತ್ಯರ್ಥವಾದ ಸತ್ಕರ್ಮಗಳಿಗೆ, **ಸಹಾಯುವಾಗುವ** = ಸಹಾಯಕವಾಗಿ ಯಾರು ಇರುತ್ತಾರೋ, **ಧನ್ಯರಿಗೆ** = ಅಂತಹ ಪುಣ್ಯಾತ್ಮರಿಗೆ, **ಕಲ್ಯಾದಿ ದೈತ್ಯರ** = ಕಲಿಯೇ ಮೊದಲಾದ ಭಗವದ್ವೇಷಿಗಳ, **ಪುಣ್ಯಫಲಗಳ ನೀವ** = ಪುಣ್ಯಫಲಗಳನ್ನು ಕೊಡುತ್ತಾನೆ. **ದಿವಿಜರ** = ದೇವತಾದಿ ಸಮಸ್ತಮುಕ್ತಿಯೋಗ್ಯಚೇತನರ, **ಪಾಪಕರ್ಮ ಫಲ** = ದುಷ್ಕರ್ಮಗಳಿಂದ ಜನಿತವಾದ ಪಾಪಫಲಗಳನ್ನು, **ಅನ್ಯ ಕರ್ಮವ ಮಾಳ್ಪರಿಗೆ** = ಶ್ರೀಹರಿಗೆ ಪ್ರೀತಿಕರವಲ್ಲದ ಅನ್ಯಕರ್ಮಗಳನ್ನು ಮಾಡುವ ಕಲ್ಯಾದಿ ದೈತ್ಯರಿಗೆ, **ಅನುಗುಣ್ಯ ಜನ**

**ರಿಗೆ** = ಕಲ್ಯಾದಿ ದೈತ್ಯರ ಪಾಪ ಕಾರ್ಯಗಳಿಗೆ ಸಹಾಯಕರಾದ ಜನರಿಗೆ, **ಕೊಡುವ** = ವಿನಿಮಯ ಮಾಡುವನು. **ಬಹು ಕಾರುಣ್ಯ ಸಾಗರನು** = ಭಗವದ್ಭಕ್ತರ ವಿಷಯದಲ್ಲಿ ದಯಾಸಾಗರನಾದ ಶ್ರೀಪರಮಾತ್ಮನು, **ಈ ತೆರದಿ** = ಪುಣ್ಯ ಪಾಪ ಕಾರ್ಯಫಲಗಳನ್ನು ವಿನಿಮಯ ಮಾಡುವ ಈ ರೀತಿಯಲ್ಲಿ, **ಭಕ್ತರನ** = ತನ್ನ ಭಕ್ತಜನರನ್ನು, **ಸಂತೈಪ** =ಅವರ ಪಾಪಕ್ಷಾಳನ ದ್ವಾರಾ, ಪವಿತ್ರರನ್ನಾಗಿಸಿ, ಸಂರಕ್ಷಿಸುತ್ತಾನೆ. ॥೧೪॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ಪುಣ್ಯ–ಪಾಪಗಳ ಒಬ್ಬರದು ಮತ್ತೊಬ್ಬರಿಗೆ ಕೊಡತಾನೆ ಎಂತ ತಾತ್ಪರ್ಯ.

ಶ್ರೀಪರಮಾತ್ಮಗೆ ಪ್ರೀತಿಕರವಾದ ಪುಣ್ಯಕರ್ಮಕ್ಕೆ ಸಹಾಯವಾಗಿ ಇರತಕ್ಕವರು ದಾರೋ ಅವರೇ **ಧನ್ಯರು.** ಅಂಥಾ ಪುಣ್ಯಾತ್ಮರಿಗೆ ಕಲಿಯೇ ಮೊದಲಾದ ಭಗವದ್ದ್ವೇಷಿಗಳ ಪುಣ್ಯಫಲಗಳ ಕೊಡತಾನೆ. ದೈತ್ಯರ ಸ್ವರೂಪವೇ ಪಾಪ ಸ್ವರೂಪ ಆದ ಕಾಲಕ್ಕೂ, ಅವರವರಿಗೆ ಸ್ವರೂಪಕ್ಕೆ ಅನ್ಯಥಾವಾದ ಅನಾದಿಕರ್ಮ ಲಿಂಗದೇಹದಲ್ಲಿ ಇರೋದಾಗಿದೆ. ಅದರಲ್ಲಿ ಪುಣ್ಯ ಪಾಪ, ನಾನಾ ವಿಚಿತ್ರವಾದ ಕರ್ಮಗಳೂ ಅವೆ. ಕರ್ಮವನ್ನು ಅನುಸರಿಸೇ, ಸ್ಥಿತಿಕಾಲದಲ್ಲಿ ಸ್ಥೂಲದೇಹೇಂದ್ರಿಯಾದಿಗಳಿಂದ ಪಾಪ ಪುಣ್ಯಗಳೆರಡೂ ಬಿಂಬಕ್ರಿಯಾದ್ವಾರಾ, ಆಗತಾ ಇರತವೆ. ಈ ರೀತ್ಯಾ ಕಲ್ಯಾದಿ ದೈತ್ಯರಿಂದ ಆದ ಪುಣ್ಯ ಕರ್ಮಫಲಗಳ ಸಜ್ಜನರಿಗೆ ಕೊಡತಾನೆ. ದೇವತೆಗಳ ಆರಂಭಮಾಡಿ ತೃಣಾಂತ (ಋಜುಗಳ ವ್ಯತಿರಿಕ್ತ) ಮುಕ್ತಿಯೋಗ್ಯರ ಸ್ವರೂಪ ಪುಣ್ಯ ಸ್ವರೂಪವಾದ ಕಾಲಕ್ಕೂ ಪೂರ್ವೋಕ್ತ ಪ್ರಕಾರ, ಪುಣ್ಯ ಪಾಪಾತ್ಮಕ ಜಡಕರ್ಮ ಒಂದು ಇರೋದಾಗಿ ಅದೆ. ಅದನ್ನನುಸರಿಸಿ ಪರ

ಮಾತ್ಮ ಸ್ಥೂಲದೇಹೇಂದ್ರಿಯಾದಿಗಳಿಂದ ಬಿಂಬಕ್ರಿಯಾ ದ್ವಾರಾ ಪುಣ್ಯ ಪಾಪಗಳೆರಡೂ ಮಾಡಿಸುತಾ, ಇಂಥಾ ಕರ್ಮಜನ್ಯ ಪಾಪವನ್ನು, ಪರಮಾತ್ಮಗೆ ಪ್ರೀತಿಕರವಲ್ಲದ ಅನ್ಯವಾದ ಪಾಪಕರ್ಮ ಮಾಡತಕ್ಕ ಕಲ್ಯಾದಿ ದೈತ್ಯರಿಗೆ ಅನುಕೂಲರಾಗಿ ಇರತಕ್ಕ ಜನರಿಗೆ ಕೊಡುತಾನೆ. ಇದರಲ್ಲಿ ಅನುಸಂಧಾನ ಭೇದವಿಂತಲೂ, ಭಾವಭೇದದಿಂದಲೂ ಅವಾಂತರ ವಿಚಾರ ಬಹಳವದೆ. ಎಲ್ಲಾದಕ್ಕೂ ಪರಿಯವಸಾನ ತಾತ್ಪರ್ಯವಿದು. ಸ್ವರೂಪಸ್ವಭಾವದಲ್ಲಿ ಭಗವದ್ಭಕ್ತಿಯುಳ್ಳ ಜನರಿಗೆ ಬಹಳವಾದ ಅಂತಃಕರುಣಾಸಮುದ್ರನಾದ ಪರಮಾತ್ಮ, ಈ ಪೂರ್ವೋಕ್ತ ಪ್ರಕಾರ ಪುಣ್ಯಫಲಗಳ ತಂದುಕೊಟ್ಟು, ತನ್ನ ಭಕ್ತರಿಗೆ ಸಹಾಯವಾದ ಸ್ವಾರ್ಜಿತ ಪುಣ್ಯ ಒಂದು, ಅನ್ಯ ಪುಣ್ಯ ಒಂದು–ಈ ಎರಡರನ್ನ ಘಟನಾ ಮಾಡಿ ಕೊಟ್ಟು, ಸಂರಕ್ಷಣೆ ಮಾಡುತಾನೆ. ತದನ್ಯರಿಗೆ ಇವಕ್ಕೆ ವಿಪರೀತ ಫಲ ಕೊಟ್ಟು, ಅವರನ್ನ ದಂಡಿಸುತಾನೆ.

ಪ್ರಮಾಣ :–

**ಪುಣ್ಯ ಕರ್ಮಸಹಾಯಾ ಯೇ ಪುಣ್ಯಾತ್ಮಾನಸ್ತು ಯೇ ನರಾಃ ।**
**ದೈತ್ಯ ಭಾಗಗತಾತ್ ಪುಣ್ಯಾತ್ ತೇಭ್ಯೋಂಶಂ ದದತೇ ಹರಿಃ ॥೧॥**
**ಪಾಪಕರ್ಮ ಸಹಾಯಾ ಯೇ ಪಾಪಾತ್ಮಾನಸ್ತು ಯೇ ನರಾಃ ॥**
**ದೇವಭಾಗಗತಾತ್ಪಾಪಾತ್ ತೇಭ್ಯೋಂಶಂ ದದತೇ ಹರಿಃ ॥೨॥**
**॥೧೪॥**

೨. ಭಾವಪ್ರಕಾಶಿಕೆ :–

ಪುಣ್ಯಕರ್ಮಕ್ಕೆ ಸಹಾಯ ಮಾಡುವವರಿಗೆ ಕಲಿ ಮೊದಲಾದವರು ಮಾಡುವ ಪುಣ್ಯಫಲವನ್ನು ಕೊಡುವನು. ದೇವತೆಗಳು ಮಾಡುವ ಪಾಪಕರ್ಮಫಲವನ್ನು ಪಾಪ ಮಾಡುವವರಿಗೆ ಸಹಾಯಕರು ಯಾರೋ, ಅವರಿಗೆ ಕೊಡುವನು. ಈ ಪ್ರಕಾರ ಕರುಣಾಸಮುದ್ರನಾದ ಹರಿಯು, ಭಕ್ತರನ್ನು ಸರ್ವದಾ ರಕ್ಷಿಸುವನು. ॥೧೪॥

**೩. ಭಾವದರ್ಪಣ :–**

ದೈತ್ಯರ ಪುಣ್ಯ ಸೆಳೆದು ದೇವತೆಗಳಿಗೆ ಕೊಡುತ್ತಾನೆಂದು ಹೇಳುತ್ತಾರೆ. ಪುಣ್ಯೇತಿ ॥ ಪುಣ್ಯ ಕರ್ಮ ಸಹಾಯ ಮಾಡುವವರೆ ದೇವತೆಗಳೆಂಬರ್ಥ. ॥೧೪॥

**೪. ಶ್ರೀ ವ್ಯಾಸದಾಸ ಸಿದ್ಧಾಂತ ಕೌಮುದೀ :–**

"ಪುಣ್ಯಕರ್ಮ ಸಹಾಯಾ ಯೇ ಪುಣ್ಯಾತ್ಮಾನಸ್ತು ಯೇ ನರಾಃ ॥ ದೈತ್ಯಭಾಗಗತಾತ್ ಪುಣ್ಯಾತ್ ತೇಭ್ಯೋಂಶಂ ಪ್ರದದೌ ಹರಿಃ ॥" ಇತ್ಯುಕ್ತ ಮಾಹ- 'ಪುಣ್ಯ' ಇತಿ ॥ 'ಅನುಗುಣ್ಯ'– ಅಧೀನಾಃ ದೈತ್ಯಾಃ ॥೧೪॥

## ಕನ್ನಡಾರ್ಥ

ಪುಣ್ಯ ಕರ್ಮಗಳಿಗೆ ಸಹಾಯಕರಾಗುವವರಿಗೂ, ಪುಣ್ಯಕರ್ಮಗಳನ್ನು ಮಾಡುವವರಿಗೂ ದೈತ್ಯರ ಪುಣ್ಯಾಂಶಗಳನ್ನು ತೆಗೆದುಕೊಡುವನೆಂದು ಹೇಳಿದುದನ್ನು ಈ ಪದ್ಯದಿಂದ ಹೇಳುತ್ತಾರೆ. "ಅನುಗುಣ್ಯ ಜನರು"– ಅಧೀನರು. ಪ್ರಕೃತ ದೈತ್ಯರು. ॥೧೪॥

**೫. ಶ್ರೀಗುರುಹೃದಯ ಪ್ರಕಾಶಿಕೆ :–**

ಪುಣ್ಯಕರ್ಮಕ್ಕೆ ಸಹಾಯ ಮಾಡುವ ಧನ್ಯರೆಂಬ ಕೃತಕೃತ್ಯ ಜನರಿಗೆ, ಕಲ್ಯಾದಿ ದೈತ್ಯರು ಮಾಡಿದ ಪುಣ್ಯವನ್ನು ತಾನೇ ತೆಗೆದುಕೊಂಡು, ಅವರಲ್ಲಿ (ಕೃತಕೃತ್ಯರಲ್ಲಿ) ತಾರತಮ್ಯಾನುಸಾರವಾಗಿ ಪುಣ್ಯವನ್ನು ಹಂಚಿಕೊಡುವನು. ದೇವತೆಗಳಲ್ಲಿ ನಡೆದ ದೈತ್ಯಾವೇಶ ಮೂಲಕ ಪಾಪಗಳನ್ನು, ಅನ್ಯಥಾಕರ್ಮವ ಮಾಳ್ಪರಿಗೆ ಅನುಗುಣ್ಯ ಜನರಿಗೆ ಕೊಡುವ–ಅಂದರೆ, ಪಾಪಕರ್ಮಕ್ಕೆ ಸಹಾಯ ಮಾಡಿದ ಜನರಿಗೆ ಹಂಚಿಕೊಡುವನು. ಹೀಗೆ ಭಕ್ತರನ್ನು ರಕ್ಷಿಸುವುದರಿಂದ ಸ್ವಾಮಿಯು ಬಹು ಕಾರುಣ್ಯಸಮುದ್ರನು.

**ಪುಣ್ಯಕರ್ಮ ಸಹಾಯಾಯೇ ಪುಣ್ಯಾತ್ಮಾನಸ್ತು ಯೇ ನರಾಃ |**
**ದೈತ್ಯಭಾಗಗತಾತ್ ಪುಣ್ಯಾತ್ ತೇಭ್ಯೋಽಂಶಂ ದದತೇ ||**
**ಪಾಪಕರ್ಮ ಸಹಾಯಾಯೇ ಪಾಪಾತ್ಮಾನಸ್ತು ಯೇ ನರಾಃ |**
**ದೇವಭಾಗಗತಾತ್ಪಾಪಾತ್ ತೇಭ್ಯೋಽಂಶಂ ದದತೇ ಹರಿಃ ||**

ಎಂಬ ಶಾಸ್ತ್ರಾರ್ಥವು ವಿವರಿಸಲ್ಪಟ್ಟಿತು. ||೧೪||

## ಸರ್ವವ್ಯಾಖ್ಯಾನಸಾರಸಂಗ್ರಹ

ಸಜ್ಜನರು ಮಾಡುವ ಸತ್ಕರ್ಮರೂಪವಾದ ಪುಣ್ಯಕಾರ್ಯಗಳಿಗೆ ಸಹಾಯಮಾಡುವ ದೇವತಾವರ್ಗ ಮತ್ತು ಇತರ ಮುಕ್ತಿಯೋಗ್ಯ ಚೇತನರು **ಧನ್ಯ**ರೆನಿಸುವವರು. ಅವರೇ ಪುಣ್ಯಾತ್ಮರು ಮತ್ತು ಮಂಗಳಾತ್ಮರು.

ಕಲ್ಯಾದಿ ತಮೋಯೋಗ್ಯರ ಸ್ವರೂಪವೇ ಪಾಪಸ್ವರೂಪವು. ಆದರೆ ಅವರ ಸ್ವರೂಪಕ್ಕೆ ಆವರ್ಕವಾಗಿರುವ ಅನಾದಿ ಲಿಂಗದೇಹದಲ್ಲಿ ಅವರ ಸ್ವರೂಪಧರ್ಮಕ್ಕೆ ಅನ್ಯವಾದ ಸತ್ತ್ವಗುಣಾತ್ಮಕ ಕರ್ಮಬೀಜಗಳಿರುವುವು. ಆ ಕರ್ಮಗಳಲ್ಲಿ ಶ್ರೀಹರಿಯು ಅಂತರ್ಗತನಾಗಿದ್ದು, ಆ ಪ್ರಾಕೃತ ಸತ್ತ್ವಗುಣ ಪ್ರಾಚುರ್ಯಗೊಳಿಸುವನು. ಆದರಿಂದ ಪುಣ್ಯಕರ್ಮವು ಅಭಿವ್ಯಕ್ತವಾಗಿ, ತಜ್ಜನಿತ ಪುಣ್ಯ ಫಲಪ್ರಾಪ್ತವಾಗುವುದು. ಆದರೆ ತಮೋಯೋಗ್ಯರಾದ ಕಲ್ಯಾದಿ ದೈತ್ಯರಿಗೆ ಈ ಪುಣ್ಯಫಲದಿಂದ ಲೋಕಕ್ಕೆ ಹಾನಿಯೇ ಹೊರತು, ಕ್ಷೇಮದಾಯಕವಲ್ಲ. ಅದು ಅವರಿಗೆ ಸರ್ವಥಾ ಸಲ್ಲತಕ್ಕದ್ದಲ್ಲ. ಅಂಚಿತ್ಯಾದ್ಭುತ ಚರಿತನಾದ ಶ್ರೀಪರಮಾತ್ಮನು ಕಲ್ಯಾದಿಗಳ ಈ ಪುಣ್ಯಫಲವನ್ನು ಅವರಿಂದ ತೆಗೆದು, ಸತ್ಕರ್ಮಕ್ಕೆ ಸಹಾಯಕರಾಗುವ ಪುಣ್ಯಾತ್ಮರಿಗೆ ಕೊಡುವನು. ಇದರಿಂದ ಶ್ರೀಹರಿಗೆ ವೈಷಮ್ಯವೆಂಬ ದೋಷವು ತಟ್ಟುವುದಿಲ್ಲ. ಆಯಾಯಾ ಜೀವರ ಅನಾದಿಸ್ವರೂಪಕ್ಕನುಗುಣವಾಗಿ ಕರ್ಮಗಳು

ಮತ್ತು ಕರ್ಮಜನಿತ ಫಲಗಳ ಅನುಭವ. ಅದಕ್ಕನುಗುಣವಾದ ಶ್ರೀಪರಮಾತ್ಮನ ಕಾರ್ಯ ಸಹಜವಾದದ್ದು. ಇದರಿಂದ ಅವನಿಗೆ ಪಕ್ಷಪಾತ ದೋಷವಿಲ್ಲ.

ದೇವತೆಗಳು ಹಾಗೂ ಇತರ ಮುಕ್ತಿಯೋಗ್ಯಜೀವರು, ಅಜ್ಞಾನದಿಂದಲಾಗಲೀ, ಕಲ್ಯಾವೇಶದಿಂದಲಾಗಲೀ, ಶಾಪಾದಿನಿಮಿತ್ತವಾಗಲೀ ಪಾಪಕರ್ಮಗಳನ್ನು ಮಾಡುವರು. ಅವರ ಸ್ವರೂಪ ಪುಣ್ಯಸ್ವರೂಪವು. ಇಲ್ಲಿಯೂ ಸಹ ಅವರ ಅನಾದಿ ಲಿಂಗದೇಹಗತ ರಜೋ ಮತ್ತು ತಮೋ ಗುಣಗಳ ಪ್ರಾಚುರ್ಯರೂಪವಾಗಿ, ಪಾಪ ಮತ್ತು ಮಿಶ್ರ ಕರ್ಮಗಳು ಶ್ರೀಹರಿಯ ಬಿಂಬಕ್ರಿಯಾದ್ವಾರಾ ನಡೆಯುವುವು. ಪಾಪಕರ್ಮಗಳ ಫಲ ಅವರಿಗೆ ಸಲ್ಲದು. ಈ ಕಾರಣದಿಂದ ನಿಸ್ಪೃಹನಾದ ನಿರಂಜನನು ಸಚ್ಚೇತನರ ಪಾಪಕರ್ಮಗಳ ಫಲವನ್ನು ಶ್ರೀಹರಿಗೆ ಪ್ರೀತಿಕರವಲ್ಲದ ಜೀವೇಶರ ಐಕ್ಯ, ಮಿಥ್ಯಾಜ್ಞಾನ, ಭಗವದ್ದ್ವೇಷ, ಭಗವದ್ಭಕ್ತರ ದ್ವೇಷ ಇತ್ಯಾದಿ ಅನ್ಯ ಕರ್ಮಗಳನ್ನು ಮಾಡುವ ಅನುಗುಣ್ಯ ಜೀವರಿಗೆ, ಪಾಪಕಾರ್ಯಕ್ಕೆ ಸಹಾಯಕರಾದ ಜನರಿಗೆ ಕೊಡುವನು. ಇದರಿಂದ ದೈತ್ಯರ ಪುಣ್ಯಕರ್ಮಗಳು ಸಜ್ಜನರಿಗೂ, ಸಜ್ಜನರ ಪಾಪಕರ್ಮಗಳು ದೈತ್ಯರಿಗೂ ಪರಸ್ಪರ ವಿನಿಮಯವಾಗುವುವು. ಆಗ ಕರ್ಮಫಲಗಳ ಸಮತೋಲನಸ್ಥಿತಿ ಉಂಟಾಗುವುದು. ಇದೇ ದಯಾಸಮುದ್ರನಾದ ದೇವದೇವೇಶನ ನ್ಯಾಯರೂಪವಾದ, ನಿಸ್ಪೃಹವಾದ, ಮಹತ್ಕಾರ್ಯ. ಈ ರೀತಿ ಭಗವದ್ಭಕ್ತರನ್ನು ಪಾಪವಿಮುಕ್ತರನ್ನಾಗಿ ಮಾಡಿ, ಅವರಿಗೆ ಅಂತಃಕರಣಶುದ್ಧಿಯನ್ನು ನೀಡಿ, ಸದಾ ಸಂರಕ್ಷಿಸುವನು. ॥೧೪॥

## ಪದ್ಯ-೧೫

ಮೂಲ :-

ನಿರುಪಮಂಗೆ ಸರಿಯುಂಟು ಎಂದು ।
ಚ್ಚರಿಸುವನ ತದ್ಭಕ್ತರೊಳು ಮ ।
ತ್ಸರಿಸುವನ ಗುಣಿಗುಣಗಳಿಗೆ ಭೇದಗಳ ಪೇಳುವವ ॥
ದರ ಸುದರ್ಶನ ಊರ್ಧ್ವಪುಂಡ್ರವ ।
ಧರಿಸಿದವರೊಳು ದ್ವೇಷಿಸುವ ಹರಿ ।
ಚರಿತೆಗಳ ಕೇಳದಲೆ ಲೋಗರವಾರ್ತೆ ಕೇಳುವವ ॥ ॥೧೫॥

ಅವತರಣಿಕೆ :-

ಭಗವದ್ದ್ವೇಷಿಗಳಾದ ತಮೋಯೋಗ್ಯ ಜೀವರ ಸ್ವಭಾವ ಮತ್ತು ಲಕ್ಷಣಗಳನ್ನು ತಿಳಿಸುತ್ತಾರೆ. ॥೧೫॥

ಪ್ರತಿಪದಾರ್ಥ :-

**ನಿರುಪಮಂಗೆ** = ಸಮಾನರಹಿತನಾದ ಸರ್ವೋತ್ತಮನಾದ ಶ್ರೀಹರಿಗೆ, **ಸರಿಯುಂಟು** = ಸಮಾನರಾದವರು ಬ್ರಹ್ಮ ರುದ್ರ ಅಥವಾ ಇತರ ದೇವತೆಗಳು ಇದ್ದಾರೆ-ಎಂದು **ಉಚ್ಚರಿಸುವನ** = ಪ್ರತಿಪಾದನೆ ಮಾಡುವವನು, **ತದ್ಭಕ್ತರೊಳು** = ಆ ವಿಷ್ಣುವಿನ ಭಕ್ತರಲ್ಲಿ, **ಮತ್ಸರಿಸುವವ** = ಹೊಟ್ಟೆಕಿಚ್ಚು ಪಡುವವನು, **ಗುಣಿ** = ಗುಣಪರಿಪೂರ್ಣನಾದ ಶ್ರೀಪರಮಾತ್ಮನಿಗೂ, **ಗುಣಗಳಿಗೆ** = ಅವನ ಅನಂತಾನಂತ ಗುಣಗಳಿಗೂ, **ಭೇದಗಳ ಪೇಳುವವ** = ಭೇದವುಂಟೆಂದು ಪ್ರತಿಪಾದಿಸುವವ, **ದರ** = ಶಂಖ, **ಸುದರ್ಶನ** = ಚಕ್ರ (ಅಂತೆಯೇ ಗದಾ, ಪದ್ಮ, ನಾರಾಯಣ ಮುದ್ರೆಗಳೆಂಬ ಪಂಚಮುದ್ರೆಗಳೂ ಗ್ರಾಹ್ಯ), **ಊರ್ಧ್ವಪುಂಡ್ರವ** = ಹಣೆ

ಯಲ್ಲಿ ಹಚ್ಚುವ ನಾಮ (ಆದರಿಂದ ದ್ವಾದಶ ನಾಮಗಳು ಗ್ರಾಹ್ಯ), **ಧರಿಸಿದವರೊಳು** = ಪಂಚಮುದ್ರೆ, ದ್ವಾದಶನಾಮಗಳನ್ನು ಧರಿಸಿದವರಲ್ಲಿ, **ದ್ವೇಷಿಸುವ** = ಅಂತರ್ಬಹಿಶ್ಚ ದ್ವೇಷಮಾಡುವವ, **ಹರಿ ಚರಿತೆಗಳ ಕೇಳಿದಲೆ** = ಭಗವತ್ಸಂಬಂಧವಾದ ಚರಿತ್ರೆ, ಪುರಾಣ, ಇತಿಹಾಸಾದಿ ಸಚ್ಛಾಸ್ತ್ರಗಳನ್ನು ಶ್ರವಣಮಾಡದೆ, ಅವುಗಳನ್ನು ಸದಾ ನಿಂದಿಸುತ್ತಾ, **ಲೋಗರ ವಾರ್ತೆ** = ವಿಷಯಾಸಕ್ತನಾಗಿ, ಲೋಕಪ್ರಸಂಗಾದಿಗಳು, **ಕೇಳುವವ** = ಕೇಳುವವನು ತಮೋಯೋಗ್ಯಚೇತನನೆಂದು ತಿಳಿಯಬೇಕು. ಅವರ ಸ್ವಭಾವ ಲಕ್ಷಣಗಳ ವಿವರಣೆಯನ್ನು ಮುಂದಿನ ೧೬ ನೆಯ ಪದ್ಯದಲ್ಲಿ ಮುಂದುವರಿಸುತ್ತಾರೆ. ॥೧೫॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ:-

ಪೂರ್ವೋಕ್ತ ದೈತ್ಯರ ಸ್ವಭಾವ ಮತ್ತು ಅವರ ಲಕ್ಷಣವನ್ನು ಹೇಳುತಾರೆ.

ಉಪಮಾನ ಸಮಾನರಹಿತನಾದ ಸರ್ವೋತ್ತಮನಾದ ಪರಮಾತ್ಮಗೆ ಉಪಮಾನರಾದವರು ಸಮಾನರಾದವರು ಬ್ರಹ್ಮರುದ್ರಾದಿಗಳೆಂತಲೂ (ಬ್ರಹ್ಮ ವಿಷ್ಣು ಶಿವ- ಈ ಮೂರುಮಂದಿಯೂ ತಮ್ಮೊಳಗೆ ಸಮರೆಂತಲೂ) ಈ ಪ್ರಕಾರ ಪ್ರತಿಪಾದನ ಮಾಡತಕ್ಕವ, ಸತ್ಯವಾಗಿ ಸರ್ವೋತ್ತಮನಾದ ವಿಷ್ಣುವನ್ನು ಸರ್ವೋತ್ತಮನೆಂದು ತಿಳಿದು, ಆ ವಿಷ್ಣುವಿನಲ್ಲಿ ಭಕ್ತಿಮಾಡತಕ್ಕ ಭಕ್ತರಲ್ಲಿ ಮತ್ಸರ (ಹೊಟ್ಟೆಕಿಚ್ಚು) ದ್ವೇಷಾದಿಗಳ ಮಾಡತಕ್ಕವ, ಮಂಗಳಕರಗಳಾದ, ಪರಿಪೂರ್ಣಗಳಾದ ಅಸದೃಶ ಗುಣೋಪೇತನಾದ ಪರಮಾತ್ಮನಿಗೂ, ಆ ಪರಮಾತ್ಮನ ಅಪ್ರಾಕೃತ ಗುಣಗಳಿಗೂ ಭೇದ ಉಂಟು- ಎಂತ ಹೇಳತಕ್ಕವ, ಶಂಖ ಚಕ್ರ ಗದಾ ಪದ್ಮ ನಾರಾಯಣ- ಎಂಬ ಪಂಚಮುದ್ರೆ

ಗಳಾದ ವಿಷ್ಣು ಆಯುಧಗಳ ಚಿನ್ಹವೇನು, ಗೋಪೀಚಂದನದಿಂದಲೂ, ಗಂಧದಿಂದಲೂ ದ್ವಾದಶನಾಮಗಳು (ಇನ್ನೂ ದೇವರಿಗರ್ಪಿಸಿದ ನಿರ್ಮಾಲ್ಯ ಧಾರಣ, ತುಲಸೀ ಮೊದಲಾದವುಗಳು) ದೇಹದಲ್ಲಿ ಧಾರಣಮಾಡಿಕೊಂಡು, ಹರಿನಾಮೋಚ್ಚಾರಣಾದಿ ಸತ್ಕರ್ಮಾನುಷ್ಠಿತರಾದವರಲ್ಲಿ ಅಂತಃ ದ್ವೇಷವೂ, ಬಹಿಃ ಅವರಿಗೆ ವಿರೋಧಕಾರ್ಯಗಳ ಮಾಡುತ್ತಲೂ, ಭಾರತಾದಿ ಪುರಾಣಗಳ ನಿಂದಾ, ಶ್ರೀಮಧ್ವಶಾಸ್ತ್ರ ಟೀಕಾ ಟಿಪ್ಪಣಿ, ಇನ್ನೂ ಪುರಂದರದಾಸರು ಮೊದಲಾದ ಭಗವದ್ಭಕ್ತರಿಂದ ಕೃತವಾದ ಕವಿತಾಗಳ ನಿಂದಾ ಮಾಡತಾ ದ್ವೇಷದಿಂದ ಕೇಳಧಾಂಗೆ, ವಿಷಯಾಸಕ್ತರಾದ ಜನರು ಐಹಿಕಸಂಬಂಧವಾಗಿನ್ನೂ, ಪಾಪರೂಪವಾಗಿಯೂ ಇರತಕ್ಕ ಕಥೆಗಳು– ಇವುಗಳನ್ನು ಕೇಳತಾ, ನೀಚರ ಸೇವಾದಿಂದ, ಕೇವಲ ಡಾಂಭಿಕರಾಗಿ, ಮದಾಂಧರಾಗಿ ಇರತಕ್ಕವರು ದೈತ್ಯರು-ಎಂತ ತಿಳಿಯಬೇಕು.

**ಪ್ರಮಾಣ :–**

**ಸ ವಿವಾಹಂತ ದುಷ್ಕರ್ಮಜ್ಞಾಪಕಂ ತತ್ಪ್ರಮಾಣಕಂ । ತಸ್ಯ ನಿಂದಾ ತದೀಯಸ್ಯ । ಭಕ್ತಸ್ಯಾಪಿ ವಿನಿಂದನಂ । ಶಂಖ ಚಕ್ರಾದಿ ತಲ್ಲಿಂಗಧಾರಿಣಾಂ ದ್ವೇಷಿಣಂ ತಥಾ । ಏವಮಾದಿರ್ಹರಿದ್ವೇಷಸ್ತತ್ಕೃತೋ ದೈತ್ಯ ಉಚ್ಯತೇ ॥** ಎಂಬ ಪ್ರಮಾಣಾರ್ಥ ವಿವರಿಸಿತು.

॥೧೫॥

**೨. ಭಾವಪ್ರಕಾಶಿಕೆ :–**

(ಈ ಪದ್ಯಕ್ಕೆ ತಾತ್ಪರ್ಯ ೧೭ ನೇ ಪದ್ಯದಲ್ಲಿ ಬರೆದಿದೆ).

**೩. ಭಾವದರ್ಪಣ :–**

ದೈತ್ಯರ ಸ್ವಭಾವ ಎರಡು ಪದ್ಯದಿಂದ ಹೇಳುತ್ತಾರೆ. ನಿರುಪಮ । ಪರಮಾತ್ಮಾ । "ತಸ್ಯನಿಂದಾ ತದೀಯಸ್ಯ ಭಕ್ತಸ್ಯಾಪಿ ವಿನಿಂದನಂ । ಶಂಖ

ಚಕ್ರಾದಿ ತಲ್ಲಿಂಗಧಾರಿಣಾಂ ದ್ವೇಷಿಣಂ ತಥಾ । ಏವಮಾದಿ ಹರೇರ್ದ್ವೇಷ ಸ್ತತ್ಕಾರೀ ದೈತ್ಯ ಉಚ್ಯತೇ" ಇತಿ ವಿಷ್ಣುರಹಸ್ಯೋಕ್ತೇಃ ! ಮತ್ಸರ = ದ್ವೇಷ, ದರ = ಶಂಖ, ಸುದರ್ಶನ = ಚಕ್ರ, ಊರ್ಧ್ವಪುಂಡ್ರ = ದ್ವಾದಶನಾಮ, ಲೋಕವಾರ್ತೆ = ಉದರ ನಿಮಿತ್ತ ವಾರ್ತೆ. ॥೧೫॥

೪. ವ್ಯಾಸದಾಸ ಸಿದ್ಧಾಂತ ಕೌಮುದೀ :–

"ಯಸ್ತು ನಾರಾಯಣಂ ದೇವಂ ಬ್ರಹ್ಮರುದ್ರಾದಿ ದೈವತೈಃ ॥ ಸಮ ತ್ವೇನೈವ" ॥ "ತಸ್ಯನಿಂದಾ ತದೀಯಸ್ಯ ಭಕ್ತಸ್ಯಾಪಿ ವಿನಿಂದನಮ್ ॥ ಶಂಖ ಚಕ್ರಾದಿ ತಲ್ಲಿಂಗಧಾರಿಣಾಂ ದ್ವೇಷಿಣಂ ತಥಾ ॥ "ಭೇದಸ್ತದ್ಗತ ಏವ ಚ ॥ ದೈತ್ಯ ಉಚ್ಯತೇ ॥" ಇತ್ಯುಕ್ತಂ ಆಹ–"ನಿರುಪಮ" ಇತಿ.

॥೧೫॥

## ಕನ್ನಡಾರ್ಥ

(1) "ಬ್ರಹ್ಮರುದ್ರಾದಿ ದೇವತೆಗಳು ನಾರಾಯಣನಿಗೆ ಸಮರು" ಹೀಗೆ ಭಾವಿಸುವುದು. (2) ಆ ನಾರಾಯಣನನ್ನು ನಿಂದಿಸುವುದು. (3) ನಾರಾಯಣನ ಭಕ್ತರನ್ನು ನಿಂದಿಸುವುದು (4) ನಾರಾಯಣನ ಚಕ್ರ ಶಂಖ ಮುಂತಾದ ಚಿಹ್ನಧಾರಿಗಳನ್ನು ದ್ವೇಷಿಸುವುದು. (5) ಪರಮಾತ್ಮನ ಅವತಾರ – ಅಂಶ – ರೂಪಗಳಲ್ಲಿ ಪರಸ್ಪರ ಭೇದವನ್ನು ತಿಳಿಯುವುದು. (6) ಹರಿಯ ಶಾಸ್ತ್ರಗಳನ್ನು ಶ್ರವಣ ಮಾಡದಿರುವುದು. (7) ಲೋಕ ವಾರ್ತೆಗಳನ್ನೇ ಕೇಳುತ್ತಿರುವುದು." ಈ ಮುಂತಾದುದು "ಹರಿದ್ವೇಷ" ವೆನಿಸುತ್ತದೆ. ಇವುಗಳನ್ನು ಮಾಡುವವನು ದೈತ್ಯನೆನಿಸುತ್ತಾನೆ" ಎಂಬ ಮಾತಿನ ಭಾವವನ್ನು "ನಿರುಪಮ" ಈ ಪದ್ಯದಿಂದ ತಿಳಿಸುತ್ತಾರೆ– ॥೧೫॥

೫. ಶ್ರೀಗುರುಹೃದಯ ಪ್ರಕಾಶಿಕೆ :-

ದುಷ್ಟ ಸ್ವಭಾವವನ್ನೂ ತತ್ಸಹವಾಸದ ದುಷ್ಫಲವನ್ನೂ ಸಹ ಮೂರು ಪದ್ಯದಿಂದ ತಿಳಿಸುತ್ತಾರೆ, ನಿರುಪಮ ಎಂದು. ನಿರುಪಮ ಎಂಬ ಸಮ ರಹಿತ ಶ್ರೀಹರಿಗೆ ಶಿವಾದಿಗಳು ಸಮರೆಂದು ತಿಳಿದು ಆಚರಿಸುವವನು-ಅಂದರೆ ಭಾವಿಸುವವನೂ, ವಿಷ್ಣುಭಕ್ತರಲ್ಲಿ ಮತ್ಸರವೆಂಬ ವಿರೋಧವುಳ್ಳವನೂ; ಗುಣವೆಂಬ ದೇವರ ಜ್ಞಾನಾದಿ ಗುಣಗಳಿಗೂ, ಗುಣಿ ಎಂಬ ದೇವರಿಗೂ ಭೇದವೆಂಬುದಾಗಿ ಹೇಳುವವನೂ; ದರವೆಂಬ ಶಂಖವನ್ನು ಸುದರ್ಶನವೆಂಬ ಚಕ್ರವನ್ನು ಊರ್ಧ್ವಪುಂಡ್ರವನ್ನು ಸಹಾ ಧರಿಸಿದವರಲ್ಲಿ ದ್ವೇಷಮಾಡುವ ವನು, ಹರಿ ಚರಿತ್ರೆಗಳೆಂಬ ಸಚ್ಛಾಸ್ತ್ರಗಳನ್ನು ಕೇಳದೆ, ಲೋಗರವಾರ್ತೆಎಂಬ ಕುತ್ಸಿತ ಕಾರ್ಯಗಳನ್ನು ಅಭ್ಯಾಸ ಮಾಡುವವನು. ॥೧೫॥

## ಸರ್ವವ್ಯಾಖ್ಯಾನಸಾರಸಂಗ್ರಹ

ತಮೋಯೋಗ್ಯಚೇತನರಾದ ದುಷ್ಟರ ಸ್ವಭಾವ ಮತ್ತು ಲಕ್ಷಣ ಗಳನ್ನು ತಿಳಿಸುತ್ತಾರೆ–

ಶ್ರೀಹರಿಯು ಅಪಾರಮಹಿಮಾಸಂಪನ್ನನು. ಅವನಿಗೆ **ನಿರುಪಮ**ನೆಂದು ಹೆಸರು. ಅಂತಹ ಸಮಾಭ್ಯಧಿಕಶೂನ್ಯನಾದ ಶ್ರೀಹರಿಗೆ ಸಮರಾದ ಬ್ರಹ್ಮಾದಿ ದೇವತೆಗಳಿದ್ದಾರೆ. ಬ್ರಹ್ಮ, ವಿಷ್ಣು, ರುದ್ರ – ಈ ತ್ರಿಮೂರ್ತಿ ಗಳಲ್ಲಿ ಯಾವ ಭೇದವೂ ಇಲ್ಲ. ಒಬ್ಬರಿಗೊಬ್ಬರು ಸಮರು, ಎಂದು ಪ್ರತಿ ಪಾದಿಸುವವರೂ,

ನಿರುಪಮನಾದ ಆ ನಿರಂಜನನ ಭಕ್ತರಲ್ಲಿ ಹೊಟ್ಟೆಕಿಚ್ಚು ಪಡುವವರೂ, ತತ್ಕಾರಣವಾಗಿ ಅವರ ದ್ವೇಷ ವಿರೋಧಾದಿಗಳನ್ನು ಮಾಡುವವರೂ,

ಅನಂತಕಲ್ಯಾಣಗುಣಗಣ ಸಾಗರನಾದ ಶ್ರೀಹರಿಯು **ಗುಣಿ** ಎನಿಸಿಕೊಳ್ಳುವನು. ಶ್ರೀಹರಿಗೂ ಅವನ ಅನಂತಾನಂತ ಗುಣಗಳಿಗೂ ಭೇದವಿದೆ ಎಂದು ಭಾವಿಸುವವರೂ ಮತ್ತು ಶ್ರೀಹರಿಯ ಅಪಾರ ಗುಣ, ಕ್ರಿಯಾ, ಅವತಾರ, ಅಂಗೋಪಾಂಗಗಳು, ರೂಪಗಳಿಗೂ ವ್ಯತ್ಯಾಸವಿದೆ-ಎಂದು ಪ್ರತಿಪಾದಿಸುವವರೂ,

ಶಂಖ, ಚಕ್ರ, ಗದಾ, ಪದ್ಮ, ಮತ್ತು ನಾರಾಯಣ ಎಂಬ ಪಂಚ ಮುದ್ರೆಗಳನ್ನು ಭಗವದ್ಧ್ಯಾನ ಮತ್ತು ರೂಪಚಿಂತನಾಪೂರ್ವಕವಾಗಿ ಧರಿಸಿ, ಊರ್ಧ್ವಪುಂಡ್ರಾದಿ ದ್ವಾದಶನಾಮಗಳನ್ನು ದೇಹದ ತದುಚಿತವಾದ ಸ್ಥಾನಗಳಲ್ಲಿ ಧಾರಣ ಮಾಡಿರುವ ವಿಷ್ಣುಭಕ್ತರೊಳು ದ್ವೇಷ ಸಾಧಿಸುವವರೂ,

ಭಗವತ್ಸಂಬಂಧವಾದ ಪುರಾಣ, ಇತಿಹಾಸಾದಿ ಚರಿತ್ರೆಗಳನ್ನು ಕೇಳದೆ, ಸಚ್ಛಾಸ್ತ್ರಗಳನ್ನು ಯಾವಾಗಲೂ ನಿಂದೆ ಮಾಡುತ್ತಿರುವವರೂ,

ಸದಾ ವಿಷಯೋಪಭೋಗಗಳಲ್ಲಿ ಆಸಕ್ತರಾಗಿ, ಪ್ರಾಪಂಚಿಕವಾದ ಹಾಳು ಹರಟೆಗಳಲ್ಲಿ ಕಾಲಕಳೆಯುತ್ತಾ, ಲೋಕವಾರ್ತೆಗಳಲ್ಲಿ ಸದಾಸಕ್ತಿ ಮನಸ್ಸುಳವರಾದವರೂ, ಈ ಲಕ್ಷಣ ಹಾಗೂ ಸ್ವಭಾವವುಳ್ಳ ಚೇತನರು ದುಷ್ಟರು. ಅವರು ತಮೋಯೋಗ್ಯಜೀವರೆಂದು ತಿಳಿಸುತ್ತಾರೆ.

**ಪ್ರಮಾಣ :–**

**"ತಸ್ಯನಿಂದಾ ತದೀಯಸ್ಯ ಭಕ್ತಸ್ಯಾಪಿ ವಿನಿಂದನಂ ।**
**ಶಂಖ ಚಕ್ರಾದಿ ತಲ್ಲಿಂಗಧಾರಿಣಾಂ ದ್ವೇಷಿಣಂ ತಥಾ ।**
**ಏವಮಾದಿ ಹರೇರ್ದ್ವೇಷಸ್ತತ್ಕಾರೀ ದೈತ್ಯ ಉಚ್ಯತೇ ।"**

–ಇತಿ ವಿಷ್ಣುರಹಸ್ಯೋಕ್ತೇಃ ||೧೫||

❀❀

## ಪದ್ಯ-೧೨

**ಮೂಲ :–**

**ಏವಮಾದಿ ದ್ವೇಷವುಳ್ಳ ಕಂ ।**
**ಜೀವರೆಲ್ಲರು ದೈತ್ಯರೆಂಬರು ।**
**ಕೋವಿದರ ವಿಜ್ಞಾನ ಕರ್ಮವ ನೋಡಿ ನಿಂದಿಪರು ॥**
**ದೇವ ದೇವನ ಬಿಟ್ಟು ಯಾವ ।**
**ಜ್ಜೀವ ಪರಿಯಂತರದಿ ತುಚ್ಛರ ।**
**ಸೇವೆಯಿಂದುಪಜೀವಿಸುವರಜ್ಞಾನಕೊಳಗಾಗಿ ॥** ॥೧೬॥

**ಅವತರಣಿಕೆ :–**

ತಮೋಯೋಗ್ಯರಾದ ದೈತ್ಯರ ಲಕ್ಷಣವನ್ನು ಮುಂದುವರಿಸುತ್ತಾರೆ. ॥೧೬॥

**ಪ್ರತಿಪದಾರ್ಥ :–**

**ಏವಮೇವಾದಿ** = ಇತ್ಯಾದಿ ಸ್ವಭಾವಗತ ಲಕ್ಷಣಗಳುಳ್ಳವರಾದ, **ದ್ವೇಷವುಳ್ಳ** = ವಿಷ್ಣು ಹಾಗೂ ವಿಷ್ಣುಭಕ್ತರಲ್ಲಿ ದ್ವೇಷ ಸ್ವಭಾವವುಳ್ಳ, **ಕಂಜೀವರೆಲ್ಲರು** = ಅಸುರ ಸ್ವಭಾವವುಳ್ಳ ತಮೋಯೋಗ್ಯಜೀವರೆಲ್ಲರೂ, **ದೈತ್ಯರೆಂಬರು** = ದೈತ್ಯರೆಂದು ಕರೆಯುತ್ತಾರೆ. **ಕೋವಿದರ** = ಪಂಚಭೇದ, ತಾರತಮ್ಯಜ್ಞಾನವನ್ನರಿತ, ಬ್ರಹ್ಮಜ್ಞಾನಿಗಳ, **ವಿಜ್ಞಾನ** = ವಿಶೇಷವಾದ, ಅಂದರೆ, ವಿಷ್ಣು ಪ್ರೀತ್ಯರ್ಥವಾಗಿ ಮಾಡತಕ್ಕ, **ಕರ್ಮವ** = ಸತ್ಕರ್ಮಗಳನ್ನು, **ನೋಡಿ ನಿಂದಿಪರು** = ನೋಡಿ, ಅದನ್ನು ಸಹಿಸಲಾರದೆ ದ್ವೇಷಭಾವಾಯುಕ್ತರಾಗಿ ನಿಂದೆ ಮಾಡುತ್ತಾರೆ. **ದೇವ ದೇವನ ಬಿಟ್ಟು** = ದೇವತಾವರ್ಗಕ್ಕೆ ಸ್ವಾಮಿಯಾದ ಶ್ರೀ ವಿಷ್ಣುವನ್ನು ಬಿಟ್ಟು, **ಯಾವಜ್ಜೀವ ಪರಿಯಂತರದಿ** = ಜನನಾರಭ್ಯ ಮರಣ

ಪರ್ಯಂತವಾಗಿ, **ತುಚ್ಛರ ಸೇವೆಯಿಂದ** = ನೀಚರಾದ ಜನರನ್ನು ಸೇವೆ ಮಾಡುವುದರ ದ್ವಾರಾ, **ಅಜ್ಞಾನಕೊಳಗಾಗಿ** = ಅಜ್ಞಾನಕ್ಕೆ ವಶರಾಗಿ, **ಉಪಜೀವಿಸುವರು** = ಉದರಪೋಷಣೆಗಾಗಿ ಜೀವನ ಮಾಡುವರು. ॥೧೬॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ಇನ್ನೂ ದೈತ್ಯರ ಸ್ವಭಾವವನ್ನೂ ಅವರ ಲಕ್ಷಣವನ್ನೂ ಹೇಳತಾರೆ.

ತಾರತಮ್ಯ, ಪಂಚಭೇದ ಸಹಿತವಾದ ವಿಷ್ಣು ಸರ್ವೋತ್ತಮನೆಂದು ಹೇಳತಕ್ಕ ಜ್ಞಾನಿಗಳ, ವಿಶೇಷವಾದ ಜ್ಞಾನಾಪೂರ್ವಕವಾಗಿ, ವಿಷ್ಣುಪ್ರೀತಿ ಕರವಾಗಿ ಮಾಡತಕ್ಕ ಕಾರ್ಯಗಳನ್ನ ನೋಡೋವರಾಗಿ, ದ್ವೇಷದಿಂದ ಆಯಾ ಕರ್ಮಗಳ, ಕರ್ಮ ಮಾಡತಕ್ಕವರ ನಿಂದಾ ಮಾಡತಾರೆ. ದೇವತೆಗಳಿಗೆ ಸ್ವಾಮಿ ಯಾದ ವಿಷ್ಣುವಿನ ಬಿಟ್ಟು, ಜನ್ಮಾರಭ್ಯ ಮರಣಾಂತವರಿಗೂ ಶ್ರೀಪರ ಮಾತ್ಮನ ಸೇವಾ ಆಗಲೀ, ಅವನ ಭಕ್ತರ ಸೇವಾ ಆಗಲೀ ಮಾಡಿ ಜೀವನ ಮಾಡೋ ಇಚ್ಛಾರಹಿತರಾಗಿ, ಭೇದ ತಾರತಮ್ಯ ಜ್ಞಾನವಿಲ್ಲದೆ ಭಗವನ್ಮ ಹಿಮಾ ಅರಿಯದ, ನೀಚ ಜಾತಿಯವರಾದ ಮನುಷ್ಯರ ಸೇವೆಯಿಂದ, ಸ್ವರೂಪ ಸ್ವಭಾವವನ್ನನುಸರಿಸಿದ ಅಜ್ಞಾನಕ್ಕೆ ಒಳಗಾಗಿ, ಇನ್ನೂ ಅಜ್ಞಾನಿ ಯಾದ ಮನುಷ್ಯರ ಮಾತಿಗೆ ವಶರಾಗಿ, ಉದರ ಪೋಷಣೆಗಾಗಿ ಉಪಪತ್ತಿ ಮಾಡಿಕೊಂಡು ಜೀವನ ಮಾಡತಾ, ಭೂಮಿಗೆ ಭಾರವಾಗಿ ಬದುಕಿ ಇರು ವರು. **ಕಿಂ ತೇನ ಜಾತ ಮಾತ್ರೇಣ ಭೂಭಾರೇಣಾನ್ನ ಶತ್ರುಣಾ**– ಎಂತ ಇತ್ಯಾದಿ ಗುಣಗಳಿಂದ ಸಹಿತರಾಗಿ, ವಿಷ್ಣು ವೈಷ್ಣವರಲ್ಲಿ ದ್ವೇಷವುಳ್ಳ ಅಸುರ ಸ್ವಭಾವವುಳ್ಳ ಮನುಷ್ಯ ಜೀವರು ತಮೋಯೋಗ್ಯರು– ಎಂತ ಹೇಳ ತಾರೆ. (ಶ್ರುತಿಸ್ಮೃತಿಗಳು ಈ ಪ್ರಕಾರ ಇರುವದ್ದರಿಂದ) ॥೧೬॥

**೨. ಭಾವಪ್ರಕಾಶಿಕೆ :-**

ಈ ಪದ್ಯದ ತಾತ್ಪರ್ಯ ೧೭ನೇ ಪದ್ಯದಲ್ಲಿ ಕೊಟ್ಟಿದೆ.

**೩. ಭಾವದರ್ಪಣ :**

ಏವಮಾದಿ ॥೧೬॥

**೪. ಶ್ರೀವ್ಯಾಸದಾಸ ಸಿದ್ಧಾಂತ ಕೌಮುದೀ :-**

“ಸತೋಽವ ಮನ್ಯಂತೇ (ತಿ) ಹರಿಪ್ರಿಯಾನ್ ಖಲಾಃ” ಇತ್ಯುಕ್ತಂ ಆಹ ‘ಏವಮಾದಿ’ ಇತಿ ॥೧೬॥

## ಕನ್ನಡಾರ್ಥ

ಹರಿಪ್ರಿಯರಾದ ಸಜ್ಜನರನ್ನು ಖಳರು ಅವಮಾನಿಸುತ್ತಾರೆಂದು ಹೇಳಿದುದನ್ನು ‘ಏವಮಾದಿ’ ಈ ಪದ್ಯದಿಂದ ಹೇಳುತ್ತಾರೆ. ॥೧೬॥

**೫. ಗುರುಹೃದಯಪ್ರಕಾಶಿಕೆ :-**

ಇದು- ಮೊದಲಾದ ದೋಷವೆಂಬ ಪಾಪವುಳ್ಳವರನ್ನು ಕುಜೀವರೆಂತಲೂ ದೈತ್ಯರೆಂತಲೂ ಹೇಳುವರು. ಅವರು ಸಜ್ಜನರೆಂಬ ಕೋವಿದರ ಸುಜ್ಞಾನವನ್ನು ಕರ್ಮಗಳನ್ನು ನೋಡಿ ಸಹಿಸದೆ ನಿಂದಿಸುತ್ತಿರವರಾದ್ದರಿಂದ ದುಷ್ಟರು, ದೇವದೇವೋತ್ತಮನಾದ ವಿಷ್ಣುವನ್ನು ಬಿಟ್ಟು, ಯಾವಜ್ಜೀವವೂ ತುಚ್ಛರೆಂಬ ಅಧಮರ ಸೇವೆಯಿಂದಲೇ ಜೀವನ ಮಾಡುವರು. ನಿಜವಾದ ಜ್ಞಾನವನ್ನು ಅರಿಯದಿರುವರು. ॥೧೬॥

# ಸರ್ವವ್ಯಾಖ್ಯಾನಸಾರಸಂಗ್ರಹ

ಪೂರ್ವೋಕ್ತ ಪದ್ಯದಲ್ಲಿ ವಿವರಿಸಿರುವಂತೆ, ವಿಷ್ಣು ಮತ್ತು ವೈಷ್ಣವ ದ್ವೇಷಿಗಳಾದ ತಮೋಯೋಗ್ಯಜೀವರೆಲ್ಲರೂ ಕನಜರೆನಿಸುತ್ತಾರೆ. ಅವರನ್ನೇ ಶಾಸ್ತ್ರಗಳಲ್ಲಿ ದೈತ್ಯರೆಂದು ಕರೆಯಲಾಗಿದೆ.

ದೈತ್ಯಸ್ವಭಾವವುಳ್ಳ ಕುಜನರು ಪಂಚಭೇದ ತಾರತಮ್ಯ ಜ್ಞಾನ ಪೂರ್ವಕವಾಗಿ ವಿಷ್ಣುವನ್ನು ಸರ್ವೋತ್ತಮನೆಂದು ಉಪಾಸನೆ ಮಾಡುವ ಬ್ರಹ್ಮಜ್ಞಾನಿಗಳಾದ ಕೋವಿದರು ವಿಷ್ಣು ಪ್ರೀತ್ಯರ್ಥವಾಗಿ ಮಾಡುವ ಸಕಲ ಸತ್ಕರ್ಮಗಳನ್ನು ನೋಡಿ, ಸಹಿಸದೆ, ದ್ವೇಷಭಾವದಿಂದ ಅವರನ್ನು ನಿಂದಾ ಮಾಡುವರು.

ಆ ಕುಜನರು ದೇವಶ್ರೇಷ್ಠನಾದ ಶ್ರೀಹರಿಯನ್ನು ಬಿಟ್ಟು, ತಮ್ಮ ಜನ್ಮ ಆರಂಭಮಾಡಿ ಮರಣ ಪರ್ಯಂತ, ಪಂಚಭೇದ ತಾರತಮ್ಯ ಜ್ಞಾನವಿಲ್ಲದೆ, ಕೇವಲ ವಿಷಯೋಪಭೋಗಗಳಲ್ಲಿ. ಆಸಕ್ತರಾದ ನೀಚ ಜನರ ಸೇವೆಯಲ್ಲಿ ತಮ್ಮ ಆಯುಸ್ಸನ್ನು ಕಳೆಯುವರು.

ಕೇವಲ ಉದರಂಭರಕ್ಕಾಗಿ ತುಚ್ಛಜನರನ್ನು ಆಶ್ರಯಿಸಿ, ಅವರೇ ತಮ್ಮ ಉದ್ಧಾರಕರೆಂದು ಅಜ್ಞಾನಕ್ಕೆ ವಶರಾಗಿ, ತಮ್ಮ ಬಾಳನ್ನು ಹಾಳು ಮಾಡಿಕೊಳ್ಳುವರು. ॥೧೬॥

## ಪದ್ಯ-೧೭

**ಮೂಲ:-**

**ಕಾಮ ಲೋಭ ಕ್ರೋಧ ಮದ ಹಿಂ ।**
**ಸಾಮಯಾನೃತ ದಂಭ ಕಪಟ ತ್ರಿ ।**
**ಧಾಮನವತಾರಗಳ ಭೇದ ಅಪೂರ್ಣಸುಖಬದ್ಧ ॥**
**ಆನಿಮಿಷ ನಿವೇದಿತವ ಭೋಜ್ಯತಿ ।**
**ತಾಮಸಾನ್ನವನುಂಬ ತಾಮಸ ।**
**ಶ್ರೀಮದಾಂಧರ ಸಂಗದಿಂದಲಿ ತಮವೆ ವರ್ಧಿಪುದು ॥ ॥೧೭॥**

**ಅವತರಣಿಕೆ :-**

ತಮೋಯೋಗ್ಯರಾದ ಭಗವದ್ದ್ವೇಷಿಗಳ ದುಸ್ಸಾಧನಾ ಕ್ರಮವನ್ನು ತಿಳಿಸುತ್ತಾರೆ. ॥೧೭॥

**ಪ್ರತಿಪದಾರ್ಥ :-**

**ಕಾಮ** = ಪ್ರಾಪಂಚಿಕ ಸುಖಾಭಿಲಾಷೆ ಹಾಗೂ ವಿಷಯಾಸಕ್ತತೆ, **ಲೋಭ** = ಸತ್ಕರ್ಮಗಳಲ್ಲಿ ದ್ರವ್ಯವನ್ನು ವಿನಿಯೋಗಿಸದೆ, ಇತರರಿಗೂ ದಾನಮಾಡದೆ ಇರುವ ಗುಣ, **ಕ್ರೋಧ** = ಭಗವದ್ಭಕ್ತರಲ್ಲಿ ಸಿಟ್ಟು ಮಾಡುವಿಕೆ, **ಮದ** = ಅಷ್ಟಮದಯುಕ್ತನಾಗಿ ದುರಂಹಾಕಾರಯುಕ್ತನಾಗಿರುವುದು, **ಹಿಂಸೆ** = ಸಜ್ಜನರನ್ನು ಪೀಡಿಸುವುದು, **ಆಮಯ** = ಸದಾ ರೋಗಗ್ರಸ್ತನಾಗಿರೋಣ, **ಅನೃತ** = ಮಿಥ್ಯಾವಾದಿಯಾಗಿರೋಣ, **ದಂಭ** = ಸರ್ವಜ್ಞನೆಂಬ ಆಟಾಟೋಪಗುಣ, **ಕಪಟ** = ಅಂತರ್ಬಹಿಶ್ಚ ಶುದ್ಧವಿಲ್ಲದ ವಂಚನಾಗುಣವುಳ್ಳ, **ತ್ರಿಧಾಮನ** = ವೈಕುಂಠ, ಅನಂತಾ

ಸನ, ಶ್ವೇತ ದ್ವೀಪಗಳೆಂಬ ಮೂರು ಮುಕ್ತಿಸ್ಥಾನಗಳನ್ನೇ ಮನೆಯಾಗಿ ಉಳ್ಳ ಶ್ರೀವಿಷ್ಣುವಿನ, **ಅವತಾರಗಳ ಭೇದ** = ಮೂಲರೂಪಕ್ಕೂ, ಅನಂತ ಅವತಾರರೂಪಗಳಿಗೂ ಭೇದ ಚಿಂತನೆ ಮಾಡೋಣ, **ಅಪೂರ್ಣ ಸುಖ** = ಶ್ರೀಪರಮಾತ್ಮನ ಆನಂದ ಪೂರ್ಣವಲ್ಲದ್ದು ಎಂದು ಹೇಳೋಣ, **ಬದ್ಧ** = ಜೀವರಂತೆ ಶ್ರೀಪರಮಾತ್ಮನೂ ಸಹ ಸುಖ ದುಃಖಾದಿಗಳಿಂದ ಬದ್ಧನಾಗಿದ್ದಾನೆ ಎಂದು ಹೇಳೋಣ, **ಆಮಿಷ**=ಮಾಂಸಾದಿಗಳ ನಿಷಿದ್ಧ ಪದಾರ್ಥಗಳು, **ನಿವೇದಿತ ಭೋಜ್ಯ**=ಆ ಕ್ಷುದ್ರ ದೇವತೆಗಳಿಗೆ ನಿವೇದನ ಮಾಡಿದ ದುರ್ಭೋಜ್ಯ ವಸ್ತುಗಳು, **ಅತಿ ತಾಮಸಾನ್ನವಸುಂಬ** = ನಿಷಿದ್ಧವಾದ ತಾಮಸಆಹಾರಪದಾರ್ಥಗಳನ್ನು ಸೇವಿಸುವ, **ಶ್ರೀ ಮದಾಂಧರ** = ಐಶ್ವರ್ಯವೇ ಶಾಶ್ವತವೆಂದು ನಂಬಿ, ಪರಸ್ತ್ರೀಯರಲ್ಲಿ ಆಸಕ್ತರಾಗಿ ದುರಂಹಕಾರದಿಂದ ವರ್ತಿಸುವ, **ಸಂಗದಿಂದ** = ಜನರ ಸಹ ವಾಸದಿಂದ, **ತಾಮಸ** ತಮೋಯೋಗ್ಯಜೀವರಿಗೆ, **ತಮನೆ ವರ್ಧಿಪುದು** = ತಮಸ್ಸಾಧನವೇ ಕ್ರಮಕ್ರಮವಾಗಿ ಹೆಚ್ಚುತ್ತಾ ಹೋಗಿ, ಅಂತ್ಯದಲ್ಲಿ ನಿತ್ಯದುಃಖರೂಪವಾದ ತಮಃಪ್ರಾಪ್ತಿಗೆ ಕಾರಣವಾಗುವುದು. ॥೧೬॥

## ವ್ಯಾಖ್ಯಾನಗಳು

### ೧. ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ

ತಾಮಸನಾದ ಭಗವದ್ದ್ವೇಷಿಗೆ ತಮಃಸಾಧನ ಅಭಿವೃದ್ಧಿಯಾಗಿ ಸಾಧನಪೂರ್ತಿ ಆಗತಕ್ಕ ಕ್ರಮವನ್ನ ಹೇಳತಾರೆ.

ತಮೋಯೋಗ್ಯಸ್ವರೂಪನಾದ ಭಗವದ್ದ್ವೇಷಿಯಾದ ಅಸುರನಾದ ತಾಮಸನು ಅಹಂ ಬ್ರಹ್ಮ, ಪರಬ್ರಹ್ಮನಾಗತೇನೆ– ಎಂಬ ಅಪೇಕ್ಷಾವೇನು, ಪರಮಾತ್ಮನ ಪೂಜಾ ತದ್ಭಕ್ತರ ಪೂಜಾದಿಗಳ ಮಾಡದೇ ಇರತಕ್ಕ ಲೋಭ ವೇನು, ದೇವರಲ್ಲಿ ತದ್ಭಕ್ತರಲ್ಲಿ ಕೋಪಮಾಡೋಣವೇನು, ಭಗವದ್ಭಕ್ತರ

ರನ್ನು ಕಂಡರೆ ವಂದನಾದಿ ಮರ್ಯಾದಾ ಮಾಡದೆ ಉನ್ಮತ್ತನಾಗಿರೋಣ ವೇನು, ಭಗವದ್ಭಕ್ತರ ಮನಃಕ್ಲೇಶಪಡಿಸೋಣ, ಸರ್ವದಾರೋಗ ಬಂದವ ನೋಪಾದಿಯಲ್ಲಿ ತೋರತಾ ಇರೋಣವೇನು, ಸರ್ವದಾ ಅಪದ್ಧ ಮಾತು ಗಳ ಆಡತಾ ಇರೋಣವೇನು, ಇನ್ನೂ ಜಗನ್ಮಿಥ್ಯಾ– ಎಂತ ಹೇಳತಾ ಇರೋಣ, ಸರ್ವವೂ ತನಗೆ ತಿಳಿದೇ ಅದೆ– ಎಂಬುವ ಪಟಾಟೋಪವೇನು, ಆ ಆಂತರಿಕ ಮನಸ್ಸಿನಿಂದ ಭಗವದ್ಭಕ್ತರ ದುಃಖಪಡಿಸೋಣ ಹಾಂಗೆ ಬಾಹ್ಯ ದಲ್ಲಿ ಅತಿ ಪ್ರೀತಿ ತೋರಿಸಿ ನಂಬಿಕೆ ಹುಟ್ಟಿಸಿ ಕೆಡಿಸೋಣ, ಶ್ವೇತದ್ವೀಪಾದಿ ಮೂರು ಮನಿ ಉಳ್ಳ ಶ್ರೀವಿಷ್ಣುವಿನ ಮೂಲರೂಪಕ್ಕೂ ಅವತಾರರೂಪ ಗಳಿಗೂ ಪರಸ್ಪರ ಭೇದಗಳ ಹೇಳೋಣ, ಶ್ರೀಪರಮಾತ್ಮ ಸಂಪೂರ್ಣಸುಖ ನಲ್ಲ ಎಂತಲೂನೂ, ಸುಖದುಃಖಾದಿಗಳಿಂದಲೂ ಲಿಂಗದೇಹದಿಂದಲೂ ಬದ್ಧ ಎಂತಲೂನೂ ಹೇಳೋಣವೇನು, ತಮೋಯೋಗ್ಯದೇವತೆಗಳಾದ ಎಲ್ಲಮ್ಮ, ಎಕ್ಕಲಾತಮ್ಮ ಮೊದಲಾದ ಅನ್ಯದೇವತೆಗಳ ಭಜನ, ತತ್ಪ್ರಸಾದ ಮಾಂಸಾದಿ ಗಳನ್ನ ಭೋಜನ ಮಾಡೋಣವೇನು, ಶಾಸ್ತ್ರತಃ ನಿಷೇಧಮಾಡಿದ ಪಲ್ಲಾಂಡು, ನುಗ್ಗೀಕಾಯಿ, ವೃತಾಂಕ ಇನ್ನೂ ಅನೇಕ ನಿಷಿದ್ಧ ಪದಾ ರ್ಥಗಳ, ಇನ್ನೂ ದೇವರಿಗೆ ಸಮರ್ಪಣ ಮಾಡದೆ ಇದ್ದ ಅನಿಷಿದ್ಧ ಪದಾ ರ್ಥಗಳ (ಇತರ ಮತಸ್ಥರಾದ ಮಾಯಾವಾದಿಗಳಿಂದ ಪಕ್ವ ಮಾಡಿದ ಅಡಿಗಿ, ಭಕ್ಷ್ಯ ಮೊದಲಾದವು) ಭೋಜನ ಮಾಡೋಣವೇನು, ಐಶ್ವರ್ಯವೇ ಶಾಶ್ವತ ವೆಂದು ನಂಬಿ ಮದಾಂಧರಾಗಿ ಇರೋಣವೇನು, ಇನ್ನೂ ಸ್ತ್ರೀ ಮದಾಂಧರ ಎಂದರೆ, ಅನ್ಯರಾದ ಸ್ತ್ರೀಗಳ ಸಂಭೋಗ ಸರ್ವದಾ ಮಾಡುವವರ ಸ್ನೇಹ ಮಾಡಿ, ತಾನೂನೂ ಸರ್ವದಾ ಪರಸ್ತ್ರೀಯರ ಸಂಗ ಅಪೇಕ್ಷಿತನಾಗಿ ಇರೋಣ- ಇತ್ಯಾದಿ ಕಾರ್ಯಗಳ ಮಾಡೋಣದರ ದಶೆಯಿಂದ (ತಮೋಯೋಗ್ಯರಾದ ವರಿಗೆ) ತಮಸ್ಸಾಧನ ಆಗತಾ ಬಂದು, ಲಿಂಗಭಂಗ ಕಾಲಕ್ಕೆ ಅಂಧತಃಮಸ್ಸಿಗೆ ಸಾಧನ ಪೂರ್ತಿ ಆಗತದೆ.

**ವಿಶೇಷಾರ್ಥ :–**

ಶ್ರೀಭಗವಂತನ ಪ್ರೀತಿಕರವಾದ ಪುಣ್ಯಕರ್ಮಕ್ಕೆ ಸಹಾಯವಾಗುವ ಭಗವದ್ಭಕ್ತರಿಗೆ ಮೇಲೆ ಮೇಲೆ ಹೇಳಿದಂಥಾ ಅಸುರರು ತಮ್ಮ ತಮ್ಮ ಅನಾದಿ ಜಡಕರ್ಮವನ್ನನುಸರಿಸಿ, ದೇವರಿಂದ ಪ್ರೇರಿತರಾಗಿ ಮಾಡಲ್ಪಟ್ಟ ಪುಣ್ಯಕರ್ಮಫಲಗಳ ಕೊಡೋವನಾಗತಾನೆ. ಪುಣ್ಯಭೋಗ ಅಸುರರ ಸ್ವಭಾವದ್ದಲ್ಲ. ಇದರಿಂದ ಅವರಿಗೆ ಪ್ರಯೋಜನವೇನೆಂದರೆ, ಐಹಿಕದಲ್ಲಿ ಮಹಾಸುಖ, ಬಲಪೌರುಷ, ಐಶ್ವರ್ಯಕೊಟ್ಟು, ಅವರನ್ನು ಮೋಹ ಯುಕ್ತರನ್ನಾಗಿ ಮಾಡಿ, ತಮಃಪ್ರಾಪ್ತಿ ಕಾಲಕ್ಕೆ ಪುಣ್ಯಲೇಶವೂ ಇರದಂತೆ ಮಾಡಿ, ಉಳಿದಿರುವ ಸಮಸ್ತ ಫಲಗಳ ದೇವತೆಗಳಿಗೆ ಕೊಟ್ಟು, ಭಕ್ತರ ಪಾಪಗಳ ಈ ದೈತ್ಯರಿಗೆ ಭೋಗಕ್ಕೆ ಕೊಡತಾನೆ.

**ಪ್ರಮಾಣ :–**

**ದಂಭೋ ಮಾನೋ ಮದೋ ಹಿಂಸಾ ಪೌರುಷ್ಯಂ ಕಪಟಾನೃತಂ।**
**ಜಾಯಂತೇ ತಮಸೋ ವೃದ್ಧಿಃ ಕಲಿಸ್ತತ್ರಾಧಿದೇವತಾ ।**
**ತಾಮಸಾನ್ನಸ್ಯ ಭೋಗೇನ ತಾಮಸಾನಾಂ ಚ ಸಂಗತಃ ।**
**ತಾಮಸೇನ ಸ್ವಭಾವೇನ ತಮೋವೃದ್ಧಿಃ ಪ್ರಜಾಯತೇ ॥ ಇತಿ ।**
**॥೧೭॥**

೨. **ಭಾವಪ್ರಕಾಶಿಕೆ :–**

15–16–17 ಈ ಮೂರು ಪದ್ಯಗಳ ತಾತ್ಪರ್ಯವೂ ಇಲ್ಲಿ ಬರೆಯಲ್ಪಡುತ್ತೆ. ತಾಮಸ ಲಕ್ಷಣಗಳನ್ನು ಹೇಳುತ್ತಾರೆ. ಪರಮಾತ್ಮನಿಗೆ ಸಮರು ಬ್ರಹ್ಮರುದ್ರಾದಿಗಳೆಂದು ಹೇಳುವವರು; ಅಥವಾ ಪರಮಾತ್ಮನೇ ತಾನೆಂದು ಹೇಳುವವರು; ಅವನ ಭಕ್ತರಾದ ದೇವತೆಗಳಲ್ಲಿ ಅಸೂಯೆ ಪಡುವವರು; ಪರಮಾತ್ಮನ ಆನಂದಾದಿ ಗುಣಗಳಿಗೂ ಪರಮಾತ್ಮನಿಗೂ ಭೇದವನ್ನು ಹೇಳು

ವವರು. ದ್ವಾದಶ ಪುಂಡ್ರಗಳನ್ನು ಗೋಪೀಚಂದನದಿಂದ ಧರಿಸಿ, ಶಂಖ ಚಕ್ರಾದಿ ಪಂಚಮುದ್ರೆಗಳನ್ನು ಧರಿಸಿದ ವೈಷ್ಣವರನ್ನು ನೋಡಿ,ದೂಷಿಸುವವರು; ಪರಮಾತ್ಮನ ಚರಿತ್ರೆಗಳನ್ನು ಕೇಳದೆ, ಹಾಳು ಹರಟೆಗಳನ್ನು ಕೊಚ್ಚುತ್ತಾ ಕೂತಿರುವವರು, ಇಂತಹವರೆಲ್ಲರನ್ನೂ ದೈತ್ಯರೆಂದು ತಿಳಿಯಬೇಕು. ಜ್ಞಾನಿಗಳನ್ನು ನೋಡಿ, ಅವರ ಗುಣಕರ್ಮಗಳನ್ನು ದೂಷಿಸುವವರು, ಪರಮಾತ್ಮನ ಪೂಜಾದಿಗಳನ್ನು ಬಿಟ್ಟು, ತಮ್ಮ ಯಾವಜ್ಜೀವವೂ, ನೀಚರ ಸೇವೆಯಿಂದಲೇ ಕಾಲವನ್ನು ಕಳೆಯುವವರು, ಇವರೆಲ್ಲರನ್ನೂ ತಾಮಸಜೀವರೆಂದು ಭಾವಿಸಬೇಕು. ವಿಷ್ಣುರಹಸ್ಯದಲ್ಲಿ "ದಂಭೋಮಾನೋ ಮದೋ ಹಿಂಸಾಪಾರುಷ್ಯಂ ಕಪಟಾನ್ಯತೇ ॥ ಜಾಯಂತೆ,ತಮಸೋವೃದ್ಧೌ ಕಲಿಸ್ತತ್ರಾಧಿದೇವತಾ ॥ ತಾಮಸಾನ್ನಸ್ಯಭೋಗೇನ ತಾಮಸಾನಾಂಚ ಸಂಗತೇ॥ ತಾಮಸೇನ ಸ್ವಭಾವೇನ ತಮೋವೃದ್ಧಿಃ ಪ್ರಜಾಯತೇ"– ದಂಭ ಅಭಿಮಾನ ಮೊದಲಾದುವು ತಮೋಗುಣವೃದ್ಧಿಗೆ ಕಾರಣವಾಗುವುವು. ಅವುಗಳಿಧಿಪತಿಯು ಕಲಿಯು. ತಾಮಸಾನ್ನವನ್ನು ಭುಂಜಿಸುವುದೂ, ತಾಮಸರ ಸಹವಾಸ ಮಾಡುವುದು-ಇವುಗಳಿಂದ ತಮೋಗುಣವು ವೃದ್ಧಿಯಾಗುವುದು-ಎಂದು ಹೇಳಿರುವರು. ಇದೇ ಅರ್ಥವನನ್ನೇ ದಾಸಾರ್ಯರು ಇಲ್ಲಿ ಹೇಳುತ್ತಾರೆ. ಕಾಮ ಕ್ರೋಧ ಮೊದಲಾದವು, ರಾಮಕೃಷ್ಣಾದಿ ಅವತಾರರೂಪಗಳಲ್ಲಿ ಭೇದಗಳನ್ನು ಹೇಳುವುದು, ಪರಮಾತ್ಮನು ಅಪೂರ್ಣಸುಖನು, ಬದ್ಧನು ಎಂದು ಹೇಳುವುದು-ಮಾಂಸಾದಿಗಳನ್ನೂ ದೇವರ ನೈವೇದ್ಯವಿಲ್ಲದ ಪದಾರ್ಥಗಳನ್ನೂ ತಿನ್ನುವುದು, ತಾಮಸರ ಮನೆಯಲ್ಲಿ ಉಣ್ಣುವುದು, ತಾಮಸರ ಸಹವಾಸ ಮಾಡುವುದು, ಇವುಗಳಿಂದ ತಮೋಗುಣವು ವೃದ್ಧಿಯಾಗುವುದು, ಎಂದು ಹೇಳಿರುವರು. ಈ ಗುಣಗಳುಳ್ಳವರೆಲ್ಲರೂ ತಾಮಸರೆಂದು ತಿಳಿಯಬೇಕು. ॥೧೭॥

ಖ. ಭಾವದರ್ಪಣ :–

ಕಾಮಕ್ರೋಧ । ತದುಕ್ತಂ । "ದಂಭೋಮಾನೋ ಮದೋಹಿಂಸಾ ಪಾರುಷ್ಯಂ ಕಪಟಾನ್ನತೇ । ಜಾಯಂತೆ ತಮಸೋ ವೃದ್ಧೌ ಕಲಿಸ್ತತ್ರಾಧಿ

ದೇವತಾ । ತಾಮಸಾನ್ನಸ್ಯ ಭೋಗೇನ ತಾಮಸಾನಾಂಚ ಸಂಗತೇಃ । ತಾಮಸೇನ ಸ್ವಭಾವೇನ ತಮೋವೃದ್ಧಿಃ ಪ್ರಜಾಯತೇ । " ಇತಿ ಚ । ಆಮಿಷ ಮಾಂಸ ಎಂಬರ್ಥ । "ಪಿಷಿತಂ ತರಲಂ ಮಾಂಸಂ ಪಲಲಂ ಕ್ರವ್ಯಮಾಭಿಷ" ಮಿತ್ಯಮರಃ ॥೧೭॥

೪. ಶ್ರೀ ವ್ಯಾಸದಾಸ ಸಿದ್ಧಾಂತ ಕೌಮುದೀ :–

"ದೈತ್ಯೇಷ್ವಪಿ ಕಲಿಃ ಮುಖ್ಯಃ ತತೋಽನ್ಯೇ ತದ್ಗಣಾಃ ಪರೇ ॥........॥ "ಕಾಮ" ಇತಿ. ॥೧೭॥

## ಕನ್ನಡಾರ್ಥ

ದೈತ್ಯರಲ್ಲಿ ಕಲಿಯು ಮುಖ್ಯನು. ಅವನ ತರುವಾಯ ಉಳಿದ ಅವನ ಗಣದವರು. ಇವರು ಕಾಮ, ಕ್ರೋಧ ಮುಂತಾದ ದೋಷಗಳನ್ನು ಆಕ್ರಮಿಸಿ, ಈ ಶರೀರದಲ್ಲಿ ಆ ದೋಷಗಳ ರೂಪದಿಂದ ಇರುತ್ತಾರೆ. ದಂಭ, ಮಾನ, ಮದ, ಹಿಂಸಾ, – ಪರುಷ ವಚನ, ಕಾಪಟ್ಯ, ಸುಳ್ಳು, ಈ ಮುಂತಾದ ದೋಷಗಳು ತಮೋಗುಣದ ವೃದ್ಧಿಯಿಂದ ಉಂಟಾಗುತ್ತವೆ. ಇದಕ್ಕೆಲ್ಲಾ ಕಲಿಯು ಮುಖಾಧಿಪತಿಯು. ತಾಮಸ ಅನ್ನ ಸ್ವೀಕರಿಸುವುದರಿಂದ, ತಾಮಸರ ಸಂಗತಿಯಿಂದ, ತಾಮಸಸ್ವಭಾವದಿಂದ, ತಾಮಸ ವ್ಯಾಪಾರ ವೃದ್ಧಿಯು ಆಗುತ್ತದೆ". ಇತ್ಯಾದಿ ವಿಷಯವನ್ನು "ಕಾಮ ಕ್ರೋಧ" ಈ ಪದ್ಯದಿಂದ ಹೇಳುತ್ತಾರೆ. "ಆಮಿಷ"–ಮಾಂಸ. ॥೧೭॥

೫. ಶ್ರೀ ಗುರುಹೃದಯ ಪ್ರಕಾಶಿಕೆ :–

ಕಾಮವೆಂಬ ದುರಾಶೆ, ಕ್ರೋಧವೆಂಬ ಸಜ್ಜನರಿಗೆ ಅಪಕಾರ ಮಾಡುವುದು, ಲೋಭವೆಂಬ ಅತ್ಯಾಶೆ, ಮದವೆಂಬ ಇತರರನ್ನು ಲಕ್ಷ್ಯಮಾಡದೆ ಇರುವುದು, ಹಿಂಸೆ ಎಂಬ ಮನೋವಾಕ್ಕಾಯಗಳಿಂದ ಇತರರನ್ನು ಬಾಧೆ ಪಡಿಸುವುದು, ಆಮಯವೆಂಬ ಮಹಾರೋಗದಿಂದ ಕೂಡಿರುವುದು, ಅನ್ಯತ

ವೆಂಬ ಸುಳ್ಳಾಡುವುದು, ದಂಭವೆಂಬ ತಮ್ಮಲ್ಲಿಲ್ಲದ ಮಹಾತ್ಮ್ಯೆಯನ್ನು ಪ್ರಕಟಮಾಡಿಕೊಳ್ಳುವುದು, ಕಪಟವೆಂಬ ಮೋಸದಿಂದ ಕೂಡಿರುವುದು, ತ್ರಿಧಾಮವೆಂಬ ವೈಕುಂಠಾದಿ ಮೂರು ಲೋಕದ ಸ್ವಾಮಿಯ ಅವತಾರಗಳಿಗೆ ಭೇದ ಎಣಿಸುವುದು, ದೇವರು ಸಂಪೂರ್ಣ ಸುಖಿಯಲ್ಲವೆಂದು ತಿಳಿಯು ವುದು, ದೇವರು ಅಜ್ಞಾನ ಬದ್ಧನೆಂದು ತಿಳಿಯುವುದು, ಆಮಿಷವೆಂಬ ಮಾಂಸ, ತತ್ಸದೃಶ ದೇವರ ನಿವೇದನವಿಲ್ಲದ ಪದಾರ್ಥಗಳನ್ನೂ ಅಭೋದ್ಯ ವೆಂಬ ಈರುಳ್ಳಿ, ಮುಲ್ಲಂಗಿ, ಹಿಂಡಿ ಮೊದಲಾದ ಅತಿ ತಾಮಸಾನ್ನವನ್ನು ತಿನ್ನುವುದು ಮತ್ತು ಅಂಥ ತಾಮಸರಾದಂಥವರ ಸಹವಾಸ ಮಾಡುವುದು- ಇದರಿಂದ ತಮೋಗುಣವೇ ವೃದ್ಧಿಯಾಗುವುದು.

ಗ ಏವಾಹಂ ತದುತ್ಕರ್ಷ ಜ್ಞಾಪಕಂ ತತ್ಪ್ರಮಾಣಕಂ ।
ತಸ್ಯ ನಿಂದ್ಯಾ ತದೀಯಸ್ಯ ಭಕ್ತಸ್ಯಾಪಿ ವಿನಿಂದನಂ ॥

ಶಂಖ ಚಕ್ರಾದಿ ತಲ್ಲಿಂಗಧಾರಣ ದ್ವೇಷಣಂ ತಥಾ ।
ಏವಮಾದಿ ಹರೇರ್ದ್ವೇಷಸ್ತತ್ಕಾರೀ ದೈತ್ಯ ಉಚ್ಯತೇ ॥

ದಂಭೋ ಮಾನೋ ಮದೋ ಹಿಂಸಾ ಪಾರುಷ್ಯಂ ಕಪಟಾನೃತೇ ।
ಜಾಯಂತೇ ತಮಸೋ ವೃದ್ಧೇ ಕಲಿಸ್ತತ್ರಾಧಿ ದೇವತಾ ॥
ತಾಮಸಾನ್ನಸ್ಯ ಭೋಗೇನ ತಾಮಸಾನಾಂ ಚ ಸಂಗತಃ ।
ತಾಮಸೇನ ಸ್ವಭಾವೇನ ತಮೋವೃದ್ಧಿಃ ಪ್ರಜಾಯತೇ ॥
ಎಂಬ ಶಾಸ್ತ್ರಾರ್ಥವು ವಿವರಿಸಿತು. ॥೧೭॥

## ಸರ್ವವ್ಯಾಖ್ಯಾನಸಾರಸಂಗ್ರಹ

ತಮೋಯೋಗ್ಯಜೀವರು ಸದಾ ವಿಷಯಭೋಗಗಳೆಂಬ ಕಾಮಾಸಕ್ತ ರಾಗಿರುತ್ತಾರೆ. ಅವರ ವಿಷಯಾಭಿಲಾಷೆಯೇ ಕಾಮವೆನಿಸುವುದು.

ತನ್ನಲ್ಲಿರುವ ದ್ರವ್ಯವನ್ನು ಸತ್ಕರ್ಮಗಳಿಗೆ ವಿನಿಯೋಗಿಸದೇ, ತಾನೂ ಅದರಿಂದ ಸುಖಪಡದಿರುವುದೇ ಲೋಭವು. ಎಷ್ಟಿದ್ದರೂ ಮತ್ತಿಷ್ಟು ಬೇಕೆಂಬ ಅತ್ಯಾಸೆಯೇ ಲೋಭಿತನ-ಅವರ ಲಕ್ಷಣವು.

ವಿಷ್ಣುವಿನಲ್ಲಿ ಹಾಗೂ ವಿಷ್ಣುಭಕ್ತರಲ್ಲಿ ದುಷ್ಟರು ತೋರಿಸುವ ಸಿಟ್ಟು-ಕ್ರೋಧವು. ಅವರ ಕುವಾದವನ್ನು ಖಂಡಿಸುವವರಲ್ಲಿ ಅವರ ಕ್ರೋಧವು ಹೆಚ್ಚು.

ತಾಮಸರು ಅಷ್ಟಮದಗಳಿಂದ ಯುಕ್ತರಾಗಿರುವರು. ನಾನೇ ಹೆಚ್ಚೆಂಬ ದುರಹಂಕಾರದಿಂದ ಮದೋನ್ಮತ್ತರಾಗಿರುವರು.

ಸಾಧು ಸಜ್ಜನರಲ್ಲಿ ಅವರು ಮಾಡುವ ಪೀಡೆಯೇ ಹಿಂಸೆಯು. ಹಿಂಸಾ ವೃತ್ತಿಯು ತಾಮಸರ ಮುಖ್ಯಲಕ್ಷಣವು.

ಸದಾ ರೋಗಪೀಡಿತನಾಗಿರುವುದೇ ಅವರ ಲಕ್ಷಣವು.

ಸುಳ್ಳನ್ನು ಹೇಳುವುದು-ಜಗತ್ತನ್ನು ಮಿಥ್ಯೆ ಎನ್ನುವುದು-ಎಂಬ ಅನೃತವೇ ಅವರಿಗೆ ಭೂಷಣವು.

ತನ್ನಲ್ಲಿಲ್ಲದ ಮಹಿಮೆಯನ್ನು ಪ್ರಕಟಿಸಲು ಯತ್ನಿಸುವುದು. ಆಟಾಟೋಪದ ಟೊಳ್ಳು ಆಡಂಬರವೇ ಅವರ ದಂಭವೆನಿಸುವುದು.

ಕಾಪಟ್ಯ, ವಂಚನೆ, ತ್ರಿಕರಣಶುದ್ಧಿರಾಹಿತ್ಯವೇ ತಾಮಸರ ಲಕ್ಷಣವು.

ವೈಕುಂಠ, ಅನಂತಾಸನ, ಶ್ವೇತ ದ್ವೀಪಗಳೆಂಬ ಮುಕ್ತಿಧಾಮಗಳೇ ಶ್ರೀಹರಿಯ ಮಂದಿರಗಳು. ತ್ರಿಧಾಮನಾದ ಆ ತ್ರಿವಿಕ್ರಮನ ನಾನಾ ಅವತಾರಗಳಲ್ಲಿ ಪರಸ್ಪರ ಭೇದವಿದೆ-ಎಂದು ಪ್ರತಿಪಾದಿಸುವುದು ತಮೋಯೋಗ್ಯರ ಸ್ವಭಾವವು.

ಆನಂದ ಪರಿಪೂರ್ಣನಾದ ಶ್ರೀಪರಮಾತ್ಮನ ಸುಖವು ಅಪೂರ್ಣವಾದದ್ದು. ಪರಿಚ್ಛಿನ್ನವಾದದ್ದು ಎಂದು ಹೇಳುವುದೇ ಅವರ ಸ್ವಭಾವವು.

ಜೀವರಂತೆ ಶ್ರೀಪರಮಾತ್ಮನೂ ಸಹ ಸುಖ ದುಃಖಾದಿಗಳಿಂದ ಬದ್ಧನು. ಲಿಂಗದೇಹದಿಂದ ಬದ್ಧನೆಂದು ತಾಮಸರ ತಿಳಿವಳಿಕೆ.

ಕ್ಷುದ್ರದೇವತೆಗಳ ಉಪಾಸನೆ, ಅವರಿಗೆ ನಿವೇದಿತವಾಗಿರುವ ಮಾಂಸಾದಿ ನಿಷಿದ್ಧಪದಾರ್ಥಗಳ ಸೇವನೆ ಅವರ ಲಕ್ಷಣಗಳು.

ಲಕ್ಷಣಕ್ಕೆ ಯೋಗ್ಯವಲ್ಲದ, ಶಾಸ್ತ್ರದಲ್ಲಿ ನಿಷೇಧಿಸಿರುವ ಆಹಾರ ವಸ್ತುಗಳ ಭೋಜನ.

ಪ್ರಾಪಂಚಿಕ ಸಂಪತ್ತು, ವೈಭವಗಳನ್ನೇ ಶಾಶ್ವತವೆಂದು ತಿಳಿದಿರುವುದು, ಪರಸ್ತ್ರೀಗಮನ, ಮದೋನ್ಮತ್ತರಾದ ನಾಸ್ತಿಕರ ಸಹವಾಸ, ವಿಷ್ಣುಪ್ರೀತ್ಯರ್ಥವಲ್ಲದ ಕಾರ್ಯಗಳಲ್ಲಿ ಆಸಕ್ತಿ-ಇವೇ ಮೊದಲಾದ ದುರ್ಗುಣಗಳು ತಮಸ್ಸಾಧನೆಗೆ ಕಾರಣಗಳು. ಅವು ತಮೋಯೋಗ್ಯಜೀವರ ತಾಮಸಗುಣವನ್ನು ವರ್ಧಿಸಿ, ಅವರಿಗೆ ನಿತ್ಯದುಃಖರೂಪವಾದ ಅಂಥ ತಮಸ್ಸಿಗೆ ಕಾರಣವಾಗುವುವು.

## ಪದ-೧೮

ಮೂಲ :–

ಜ್ಞಾನ ಭಕ್ತಿ ವಿರಕ್ತಿ ವಿನಯ ಪು ।
ರಾಣ ಶಾಸ್ತ್ರ ಶ್ರವಣ ಚಿಂತನ ।
ದಾನ ಶಮ ದಮ ಯಜ್ಞ ಸತ್ಯಾಹಿಂಸೆ ಭೂತದಯ ॥

ಧ್ಯಾನ ಭಗವನ್ನಾಮ ಕೀರ್ತನೆ ।
ಮೌನ ಜಪ ತಪ ವ್ರತ ಸುತೀರ್ಥ ।
ಸ್ನಾನ ಮಂತ್ರ ಸ್ತೋತ್ರ ವಂದನ ಸಜ್ಜನರ ಗುಣವು ॥ ॥೧೮॥

**ಅವತರಣಿಕೆ :–**

ಮುಕ್ತಿಯೋಗ್ಯಚೇತನರಾದ ಸಜ್ಜನರ ಸ್ವಭಾವ ಮತ್ತು ಲಕ್ಷಣಗಳನ್ನು ತಿಳಿಸುತ್ತಾರೆ. ॥೧೮॥

**ಪ್ರತಿಪದಾರ್ಥ :–**

**ಜ್ಞಾನ**= ಪಂಚಭೇದ ತಾರತಮ್ಯ ಯುಕ್ತವಾದ ಶ್ರೀಹರಿ ಸರ್ವೋತ್ತಮತ್ವ, ವಾಯು ಜೀವೋತ್ತಮತ್ವ, ಜಗತ್ಸತ್ಯತ್ವ-ಇತ್ಯಾದಿ ಸಮೀಚೀನವಾದ ಜ್ಞಾನ, **ಭಕ್ತಿ** = ಶ್ರೀಶನ ಪಾದಾರವಿಂದಗಳಲ್ಲಿ ದೃಢವಾದ ಪ್ರೇಮ ಪ್ರವಾಹರೂಪವಾದ ಭಕ್ತಿ, **ವಿರಕ್ತಿ** =ವೈರಾಗ್ಯ, **ವಿನಯ** = ತಮಗಿಂತ ಉತ್ತಮರಾದ ಗುರು ಹಿರಿಯರಲ್ಲಿ ನಮ್ರತೆ, **ಪುರಾಣ** = ವೇದವ್ಯಾಸರಿಂದ ಕೃತವಾದ ಪುರಾಣಗಳು, ವಾಲ್ಮೀಕ್ಯಾದಿ ಋಷಿಗಳಿಂದ ಕೃತ ಪುರಾಣಗಳು, **ಶಾಸ್ತ್ರ** =ಶ್ರೀಮನ್ಮಧ್ವಶಾಸ್ತ್ರ, ತದನುಸಾರಿಯಾದ ಟೀಕಾ ಟಿಪ್ಪಣೀ ಗ್ರಂಥಗಳು, **ಶ್ರವಣ** ಕೇಳುವುದು, **ಚಿಂತನ** =ಶ್ರವಣವಾದದ್ದನ್ನು ಸದಾ ಮನಸಾ ಉಪಾಸನೆ ಮಾಡುವುದು, **ಧ್ಯಾನ**= ಸತ್ಪಾತ್ರರಲ್ಲಿ ವಿದ್ಯಾ, ದ್ರವ್ಯ, ಭೂ, ಕನ್ಯಾ, ಅನ್ನದಾನಾದಿಗಳನ್ನು ಮಾಡುವುದು **ಶಮ** = ಸದಾ ಶಾಂತ ಚಿತ್ತನಾಗಿರೋಣ, **ದಮ**= ಇಂದ್ರಿಯ ನಿಗ್ರಹ, **ಯಜ್ಞ** = ಶ್ರೀಹರಿಯ ಪ್ರೀತ್ಯರ್ಥವಾಗಿ ಮಾಡುವ ಜ್ಯೋತಿಷ್ಟೋಮಾದಿ ಯಜ್ಞಗಳು, ಔಪಾಸನೆ, ವೈಶ್ವದೇವ, ಬಲಿಹರಣ–ಇತ್ಯಾದಿ ಯಜ್ಞಗಳು, **ಸತ್ಯ** = ಅನೃತವಾಡದಿರುವುದು, **ಅಹಿಂಸೆ**= ಸಜ್ಜನರನ್ನು ಪೀಡಿಸದೆ ಇರೋಣ, **ಭೂತದಯ** = ಸಮಸ್ತ ಪ್ರಾಣಿಗಳಲ್ಲಿ ಅಂತಃಕರಣ ಪೂರ್ವಕವಾದ ಕರುಣೆ ತೋರಿಸೋಣ, **ಧ್ಯಾನ** = ಮನಸ್ಸಿನಲ್ಲಿ ಭಗವಧ್ಯಾನ,

**ಭಗವನ್ನಾಮ ಕೀರ್ತನೆ** = ಭಗವನ್ನಾಮಗಳನ್ನು ಕೀರ್ತನಾರೂಪದಲ್ಲಿ ಹೇಳುವುದು, **ಮೌನ** = ಉಪಯುಕ್ತವಿಲ್ಲದಿರುವ ಮಾತುಗಳನ್ನು ಆಡದಿರೋಣ, **ಜಪ** = ಗಾಯತ್ರ್ಯಾದಿ ಜಪಗಳು, **ತಪ** = ಭಗವದ್ವ್ಯಾಪಾರಗಳನ್ನು ಸದಾ ಮನಸಾ ಚಿಂತಿಸುತ್ತಿರುವುದು, **ವ್ರತ** = ಏಕಾದಶ್ಯಾದಿ ವ್ರತಾಚರಣೆ, **ಸುತೀರ್ಥಸ್ನಾನ** = ಮಹಾ ಕ್ಷೇತ್ರಗಳ ಸಂದರ್ಶನ. ಅಲ್ಲಿ ಪುಣ್ಯತೀರ್ಥಗಳಲ್ಲಿ ಸ್ನಾನ, **ಮಂತ್ರ** = ಗುರೂಪದಿಷ್ಟಿತ ಮಂತ್ರಗಳನ್ನು ಜಪಿಸುವುದು, **ಸ್ತೋತ್ರ** = ಶ್ರೀಪರಮಾತ್ಮನ ಭಗವದ್ಭಕ್ತರ ಗುಣಗಾನ ಮಾಡುವುದು, **ವಂದನ** = ಶ್ರೀಹರಿ, ದೇವತಾವರ್ಗ, ಗುರುಹಿರಿಯರು, ಸ್ವೋತ್ತಮರಾದ ಸಜ್ಜನರಿಗೆ ಭಕ್ತಿಪೂರ್ವಕವಾಗಿ ನಮಸ್ಕಾರ ಮಾಡುವುದು, **ಸಜ್ಜನರ ಗುಣವು** = ಇತ್ಯಾದಿಗಳೆಲ್ಲವೂ ಮುಕ್ತಿಯೋಗ್ಯರಾದ ಸಚ್ಚೇತನರ ಗುಣ ಸ್ವಭಾವಗಳು. ॥೧೮॥

## ವ್ಯಾಖ್ಯಾನಗಳು

### ೧. ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ :-

ಮುಕ್ತಿಯೋಗ್ಯರ ಸ್ವಭಾವವನ್ನು ಅವರ ಲಕ್ಷಣವನ್ನೂ ಹೇಳತಾರೆ.

ಮುಕ್ತಿಯೋಗ್ಯರಾದವರ ಗುಣಗಳು ದಾವವೆಂದರೆ, ಹರಿಸರ್ವೋತ್ತಮ ವಾಯು ಜೀವೋತ್ತಮ, ತಾರತಮ್ಯ ಪಂಚ ಭೇದಜ್ಞಾನ, ಜಗತ್ಸತ್ಯತ್ವ ಪ್ರತಿಪಾದಕವಾದ ಜ್ಞಾನ, ತಾರತಮ್ಯಾನುಸಾರ ಬ್ರಹ್ಮಾದಿ ಸಮಸ್ತರಲ್ಲಿ, ಸ್ವಜನ ಪರಜನರಿಗಿಂತಲೂ ಅವರಲ್ಲಿ ವಿಶೇಷ ಸ್ನೇಹ ಮಾಡೋಣ, ವಿಷ್ಣು **ಭಕ್ತಿರೇವ ಸರ್ವ ಸಾಧನೋತ್ತಮತ್ವಂ ಪರೋಕ್ಷಾಪರೋಕ್ಷ ಜ್ಞಾನಯೋಃ ಜ್ಞಾನಿನೋಪಿ ಮೋಕ್ಷಂ ಚತದಧೀನತ್ವಂ ಚ । ಎಂತಲೂ, ದೇವಾನಾಂ ತಾತ್ತ್ವಿಕಸಂಜ್ಞಾನಾಂ ಸತ್ತ್ವೇ ಭಕಗತೀ ಏಕ ಮನಸಃ ಏಕಾಗ್ರತಹ್ಯಾಸ್ಯ ವ್ಯಾಪಾರ ಮಂತರೇಣಾಂತಃಕರಣಸ್ಯ**

**ಯಾ ವೃತ್ತಿಃ ಸಾ ಭಕ್ತಿರುಚ್ಯತೇ**–ಎಂತಲೂ ಈ ಪ್ರಕಾರ ಭಕ್ತಿ, ಭಗವದ್ದ್ವೇಷಿಗಳಲ್ಲಿ ದ್ವೇಷ, ದಾರಾ ಪುತ್ರಾದಿಗಳಲ್ಲಿ, ಪಾಂಚಭೌತಿಕ ತನ್ನ ದೇಹದಲ್ಲಿ, ದ್ರವ್ಯಾದಿಗಳಲ್ಲಿ ಹೇಯುತಾ ಬುದ್ಧಿ ಇರುವುದು, ತಾರತಮ್ಯಾನುಸಾರವಾಗಿ ಭಗವದ್ಭಕ್ತರಲ್ಲಿ ವಣಂಗಿ (ಭಕ್ತಿಪೂರ್ವಕವಾದ ನಮ್ರತೆ) ಇರೋಣ, ವೇದವ್ಯಾಸದೇವರಿಂದ ಕೃತವಾದ ಪುರಾಣ, ಇನ್ನೂ ಭಗವದ್ಭಕ್ತರಾದ ವಾಲ್ಮೀಕ್ಯಾದಿ ಋಷಿಗಳಿಂದ ಕೃತವಾದ ಪುರಾಣಗಳು, ಶ್ರೀಮಧ್ವಾಚಾರ್ಯರಿಂದ ಕೃತವಾದ ಗ್ರಂಥಗಳ, ಇನ್ನೂ ಟೀಕಾ ಟಿಪ್ಪಣಿಗಳ, ಹರಿಸರ್ವೋತ್ತಮ, ' ವಾಯುಜೀವೋತ್ತಮನೆಂದು, ಅನ್ಯಮತ ನಿರಾಕರಣ ಪೂರ್ವಕವಾಗಿ ಇರುವ ಸಚ್ಛಾಸ್ತ್ರಗಳು-ಇವುಗಳನ್ನು ಶ್ರವಣೇಂದ್ರಿಯದ್ವಾರಾ ಕೇಳೋಣ, ಈ ಕೇಳಿದ್ದರನ್ನ ಸದಾ ಮನಸ್ಸಿನಿಂದ ಆಲೋಚಿಸತಾ ತದನುಷ್ಠಾತೃವಾಗಿ ಇರೋಣ, ಸತ್ಪಾತ್ರದಲ್ಲಿ ದ್ರವ್ಯ, ಅನ್ನ, ವಿದ್ಯಾದಾನ ಮಾಡೋಣ (ಅನ್ಯರಿಗೆ ಹಿತೋಪದೇಶವಾದ ದಾನ), ಭಗವದ್ಭಕ್ತರಲ್ಲಿ ಅತಿ ಶಾಂತನಾಗಿ ಇರೋಣ, ಇಂದ್ರಿಯಗಳು ವಿಷಯಾಸಕ್ತವಾಗದಂತೆ ನಿಗ್ರಹಮಾಡಿ, ಪರಮಾತ್ಮನಲ್ಲಿ ಆಸಕ್ತಿಯಿಂದ ಇರೋಣ, ಶ್ರೀಹರಿಪ್ರೀತ್ಯರ್ಥವಾಗಿ ಜ್ಯೋತಿಷ್ಟೋಮಾದಿ ಯಜ್ಞಗಳೇನು, ಔಪಾಸನೆ, ವೈಶ್ವದೇವ, ಬಲಿಹರಣ, ಅಧ್ಯಾತ್ಮಯಜ್ಞಗಳೇನು, ವೇದಗಳಿಗೆ ವಿರುದ್ಧಾರ್ಥ ಹೇಳದೆ,ತಾನು ಅನೃತವಾಡದೆ ಇರೋಣ, ಭಗವದ್ಭಕ್ತರ ಮನಃಕ್ಲೇಶ ಪಡಿಸದೇ ಇರೋಣ, ಸಮಸ್ತಪ್ರಾಣಿಗಳಲ್ಲಿ ಪರಮಾಂತಃಕರಣದಿಂದ ಇರೋಣ, ಹೃದಯಾಕಾಶದಲ್ಲಿ ಶ್ರೀಪರಮಾತ್ಮನ ಮೂರ್ತಿಧ್ಯಾನ ಮಾಡೋಣ, ಭಗವನ್ನಾಮೋಚ್ಚಾರಣ ಬಾಹ್ಯಾಂತರದಲ್ಲಿ ಮಾಡತಾ ಇರೋಣ, ಉಪಯುಕ್ತವಿಲ್ಲದೆ ಇರುವ ಮಾತುಗಳ ಆಡದೆ, ಯಥೋಚಿತ ಮಾತನಾಡತಲೂ, ದುರ್ಜನರ ಸಂಗಡ ಮಾತುಗಳ ಆಡಧಾಂಗೂಂತೂ ಇರೋಣ. ಜನ್ಮದಲ್ಲಿ ಮಾಡಿದ ಪಾಪಗಳನ್ನು ನಾಶಮಾಡುವ ಗಾಯತ್ರೀ ಮೊದಲಾದ ಜಪಗಳು, ಮಾತುಗಳು, ಯಾವತ್ತೂ ಅಜಾದಿ ಭಗವನ್ನಾಮಗಳಿಂದು ಅನುಸಂಧಾನಮಾಡಿ, ಜಪ ಸಾಂಕೇತದಿಂದ ಉಚ್ಚಾರ ಮಾಡೋಣ, ಪ್ರಪಂಚದಲ್ಲಿ ನಡೀತಕ್ಕ ನಾನಾ ವಿಚಿತ್ರ ವ್ಯಾಪಾರಗಳೇನು, ದೇಹೇಂದ್ರಿ

ಯಾದಿಗಳಿಂದ ಭಿನ್ನ ಭಿನ್ನ ವ್ಯಾಪಾರಗಳೇನು ಮಾಡಸತಕ್ಕ ಪರಮಾತ್ಮನ ಮಹಾತ್ಮ್ಯವನ್ನು ಸರ್ವದಾ ಆಲೋಚನೆ ಮಾಡೋಣವೇನು (ತಪ ಎಂದರೆ ಆಲೋಚನೆ), ಏಕಾದಶಿ, ವಿಷ್ಣು ಪಂಚಕ, ಚಾಂದ್ರಾಯಣಾದಿ ವ್ರತಗಳ ಮಾಡೋಣವೇನು (ಪರಮಾತ್ಮನ ಸತ್ಯಸಂಕಲ್ಪಕ್ಕೆ ಅನ್ಯಥಾ ನಡಿಯೋದಿಲ್ಲ ಎಂಬುವ ದಾರಢ್ಯ ವ್ರತವೇನು), ಪುರಾಣಪ್ರಸಿದ್ಧಗಳಾದ ಗಂಗಾದಿ ತೀರ್ಥಸ್ನಾನಗಳು, ಮಹಾಕ್ಷೇತ್ರಗಳ ಸಂದರ್ಶನ, ಭಕ್ತರ ಸಂದರ್ಶನಾರ್ಥ ಯಾತ್ರಾದಿಗಳೇನು, ಉಪದಿಷ್ಟಗುರುಗಳ ನಾಮವನ್ನ ಮಂತ್ರತ್ವೇನ ಜಪ, ವೇದಾಧ್ಯಯನ ಸೂಕ್ತಪಠನಾದಿಗಳು, ಇನ್ನೂ ಪರಮಾತ್ಮನ ಗುಣಗಾನ ಮಾಡೋಣವು, ಶ್ರೀಹರಿ ಗುರುಗಳು, ಭಗವದ್ಭಕ್ತರಗಳಿಗೆ ವಂದನ– ಈ ಪೂರ್ವೋಕ್ತಗುಣಗಳು ಮುಕ್ತಿಯೋಗ್ಯರ ಗುಣಗಳು. ಇವರಿಗೆ ಸ್ವರೂಪತಃ ಪಾಪವಿಲ್ಲ. ಆದರೂ ಅನಾದಿ ಜಡಕರ್ಮವಶಾತ್ ಪಾಪಗಳ ಮಾಡಿದರೂ, ಈ ಪಾಪಕರ್ಮಕ್ಕೆ ಸಹಾಯವಾಗತಕ್ಕ ಅಸುರರಿಗೆ ವಿಭಾಗಮಾಡಿಕೊಟ್ಟು, ಸ್ವಪಮಾತ್ರ ಪಾಪಕರ್ಮ ಮಾಡಿದ ಅಧಿಕಾರಿಗೆ ಕೊಟ್ಟು, ತದ್ವತ್ ದೈತ್ಯರ ಪುಣ್ಯ ಇವರಿಗೆ ಸೇರಿಸಿ, ಪುಣ್ಯ ಅಭಿವೃದ್ಧಿ ಮಾಡತಾನೆ.

ಪ್ರಮಾಣ :–

**ತಿತಿಕ್ಷವಃ ಕಾರುಣಿಕಾಃ ಸುಹೃದಃ ಸರ್ವದೇಹಿನಾಂ ।**
**ಅಜಾತಶತ್ರವಃ ಶಾಂತಾಃ ಸಾಧವಃ ಸಾಧುಭೂಷಣಾಃ॥**

**ಮಯ್ಯನನ್ಯೇನ ಭಾವೇನ ಭಕ್ತಿಂ ಕುರ್ವಂತಿ ಯೇ ದೃಢಾಃ ।**
**ಮತ್ಕೃತೇ ತ್ಯಕ್ತಕರ್ಮಾಣಸ್ತ್ಯಕ್ತ ಸ್ವಜನ ಬಾಂಧವಾಃ ॥**

**ಮದಾಶ್ರಯಾ ಕಥಾಮೃಷ್ಟಾ ಶೃಣ್ವಂತಿ ಕಥಯಂತಿ ಚ ।**
**ತಪಂತಿ ವಿವಿಧಾಂಸ್ತಾಪಾನ್ನೈಕಾತ್ಮಾ ಗತಚೇತಸಃ ।**
**ತ ಏತೇ ಸಾಧವಸ್ಸಾಧ್ವೀ ಸರ್ವಸಂಗ ವಿವರ್ಜಿತಾಃ ॥**

ಎಂತ **ಕಪಿಲದೇವರ** ವಚನಗಳು. ॥೧೮॥

**೨. ಭಾವಪ್ರಕಾಶಿಕೆ :–**

ಭಗವದ್ವಿಷಯಕ ಜ್ಞಾನ, ಪರಮಾತ್ಮನಲ್ಲಿ ಭಕ್ತಿ, ಸಂಸಾರದಲ್ಲಿ ವಿರಕ್ತಿ, ದೊಡ್ಡವರಲ್ಲಿ ವಿನಯ, ಭಾಗವತಾದಿ ಪುರಾಣಗಳು, ಬ್ರಹ್ಮಸೂತ್ರ ಭಾಷ್ಯ ಮೊದಲಾದ ಸಚ್ಛಾಸ್ತ್ರಗಳು, ಇವುಗಳ ಶ್ರವಣ, ಅವುಗಳ ಮನನ, ದಾನ ಕೊಡುವುದು, ಶಮ ಅಂದರೆ "ಶಮೋ ಮನ್ನಿಷ್ಟತಾ ಬುದ್ಧೇಃ ದಮ ಇಂದ್ರಿಯ ನಿಗ್ರಹಃ" ಎಂಬ ಭಾಗವತ ಏಕಾದಶಸ್ಕಂಧದ ವಾಕ್ಯದಂತೆ, ಭಗವನ್ನಿಷ್ಟವಾದ ಬುದ್ಧಿಯು ಶಮವು, ಇಂದ್ರಿಯನಿಗ್ರಹವೇ ದಮವು. ಯಾಗ ಮಾಡುವುದು, ಸತ್ಯ, ಅಹಿಂಸೆ, ಭೂತದಯೆ,ಪರಮಾತ್ಮನ ಧ್ಯಾನ, ಭಗವನ್ನಾಮ ಕೀರ್ತನೆ, ಇತರ ವಿಷಯವಾದ ಮಾತುಗಳಲ್ಲಿ ಮೌನ; ಅಷ್ಟಾಕ್ಷರಾದಿ ಮಹಾಮಂತ್ರಗಳ ಜಪ; ತಪಸ್ಸು ಅಂದರೆ, ಭಗವಂತನ ಆನಂದಾದಿ ಗುಣಗಳನ್ನು ಆಲೋಚಿಸುವುದು; ವಿಷ್ಣುಸಂಬಂಧವಾದ ವ್ರತಗಳನ್ನು ವಿಷ್ಣುಪ್ರೀತಿಗಾಗಿ ಮಾಡುವುದು; ಉತ್ತಮವಾದ ತೀರ್ಥಗಳಲ್ಲಿ ಸ್ನಾನ ಮಾಡುವುದು; ಪುರುಷಸೂಕ್ತಾದಿ ಮಂತ್ರಗಳನ್ನು ಪಠಿಸುವುದು; ಸಾಷ್ಟಾಂಗ ನಮಸ್ಕಾರ ಮಾಡುವುದು- ಇವೆಲ್ಲವೂ ಸಾತ್ವಿಕರಾದ ಸಜ್ಜನರ ಸ್ವಭಾವ ಗುಣಗಳು. ॥೧೮॥

**೩. ಭಾವದರ್ಪಣ :-**

ಸಜ್ಜನರ ಗುಣಾನುವಾದ ಮಾಡುತ್ತಾರೆ. ಜ್ಞಾನ ಭಕ್ತಿ । "ಏವಂ ಸಾತ್ವಿಕಯೋಗೇನ ಸತ್ವವೃದ್ಧಿಃ ಪ್ರಜಾಯತೇ । ತದಾ ದ್ವೇಷಿಪ್ರತೀಪತ್ವಂ ಭಕ್ತಿಶ್ಚಾಪಿ ಹರೌಭವೇತ್ । ವೈರಾಗ್ಯಂ ಚ ಕ್ಷಮಾ ಸತ್ಯಮಾನೃಷಂಸ್ಯ ದಯಾ ದಯಾಃ । ಜಾಯಂತೇ ಹಿ ಗುಣಾಃ ಸಮ್ಯಕ್ ಶ್ರೀಪತಿರ್ಯೈಃ ಪ್ರಸೀದತೀತಿ" ಚ । ಶಮ, ಭಗವನ್ನಿಷ್ಟಾಬುದ್ಧಿ, ದಮ = ಇಂದ್ರಿಯ ನಿಗ್ರಹ. ॥೧೮॥

**೪. ಶ್ರೀವ್ಯಾಸದಾಸ ಸಿದ್ಧಾಂತ ಕೌಮುದೀ :–**

"ಏವಂ ಸಾತ್ವಿಕಯೋಗೇನ ಸತ್ವವೃದ್ಧಿಃ ಪ್ರಜಾಯತೇ ॥ ತದಾ ದ್ವೇಷಿ ಪ್ರತೀಪತ್ವಂ ಭಕ್ತಿಶ್ಚಾಪಿ ಹರೌಭವೇತ್ ॥ ವೈರಾಗ್ಯಂ ಚ ಕ್ಷಮಾ ಸತ್ಯಂ ಆನೃ

ಷಂಸ್ಯ ದಯಾದಯಃ ॥ ಜಾಯಂತೇ ಹಿ ಗುಣಾಃ ಸಮ್ಯಕ್ ಶ್ರೀಪತಿಃಯೈರ್ಃ ಪ್ರಸೀದತಿ ॥ " ಇತ್ಯುಕ್ತಮಾಹ— "ಜ್ಞಾನ" ಇತಿ. ॥೧೮॥

## ಕನ್ನಡಾರ್ಥ

ಹೀಗೆ ಸಾತ್ವಿಕಯೋಗದಿಂದ ಸತ್ವಗುಣದ ಅಭಿವೃದ್ಧಿಯು ಆಗುವುದು. ಭಗವದ್ವೇಷಿಗಳಲ್ಲಿ ದ್ವೇಷವೂ, ಹರಿಯಲ್ಲಿ ಭಕ್ತಿಯೂ, ವೈರಾಗ್ಯ, ಕ್ಷಮಾ, ಸತ್ಯ, ಅನೃಶಂಸ್ಯ, ದಯ-ಮುಂತಾದ, ಹರಿಯ ಪ್ರಸಾದ ಸಾಧನಗಳಾದ ಸಾತ್ವಿಕ ಗುಣಗಳು ಬೆಳೆಯುವವು. ಹೀಗೆ ಹೇಳಿದ ವಿಷಯವನ್ನು "ಜ್ಞಾನ" ಈ ಪದ್ಯದಿಂದ ಹೇಳುತ್ತಾರೆ. ॥೧೮॥

## ೫. ಶ್ರೀಗುರುಹೃದಯ ಪ್ರಕಾಶಿಕೆ :—

ಸಜ್ಜನರ ಸ್ವಭಾವವನ್ನು ತಿಳಿಸುತ್ತಾರೆ– ಜ್ಞಾನವೆಂದು. ವಿಷ್ಣು ಸರ್ವೋತ್ತಮನೆಂಬ ಶಾಸ್ತ್ರಜ್ಞಾನ, ಆ ಸ್ವಾಮಿಯಲ್ಲಿಯೇ ದೃಢವಾದ ಆತ್ಯಂತಿಕ ಸ್ನೇಹವೆಂಬ ಭಕ್ತಿ, ಆ ದೈವವ್ಯತಿರಿಕ್ತ ಸರ್ವತ್ರದಲ್ಲಿಯೂ ಆಸಕ್ತಿ ಅಂದರೆ ವೈರಾಗ್ಯ, ವಿನಯವೆಂಬ ಒಳ್ಳೇ ನಡತೆ, ಪುರಾಣಶಾಸ್ತ್ರಗಳ ಶ್ರವಣ ಮಾಡುವುದು, ಅದರ ಅಭಿಪ್ರಾಯ ಚಿಂತನವೆಂಬ ಮನನ ಮಾಡುವುದು, ದಾನವೆಂದರೆ ತನಗಿದ್ದದ್ದರಲ್ಲಿ ಯಥಾಶಕ್ತಿ ಇತರರಿಗೆ ಇಷ್ಟವಾದದ್ದನ್ನು ಕೊಡುವುದು, ಶಮವೆಂದರೆ ಕ್ರೋಧವನ್ನು ಬಿಡುವುದು ಅಥವಾ **ಶಮೋಮನ್ನಿಷ್ಟತಾಬುದ್ಧಿಃ** ಎಂಬಂತೆ ದೇವರಲ್ಲಿಯೇ ನಿಷ್ಠೆ ಇರುವುದು, ದಮವೆಂದರೆ-ಮನ ಆದಿ ಇಂದ್ರಿಯಗಳನ್ನು ದುರ್ಮಾರ್ಗದಲ್ಲಿ ಬಿಡದೇ ಇರುವುದು, ಯಜ್ಞವೆಂದರೆ, ದೇವರ ಆರಾಧನೆಯಲ್ಲಿ ನಿರತರಾಗಿರುವುದು, ಸತ್ಯವೆಂಬ ಯಥಾರ್ಥವಚನಶೀಲರಾಗಿರುವುದು ಅಥವಾ ಸಜ್ಜನರಿಗೆ ಹಿತವಾದದ್ದನ್ನು ಮಾಡುವುದು, ಹಿಂಸೆ ಎಂದರೆ, ಶಾಸ್ತ್ರವಿರುದ್ಧವಾದ ಪರಪೀಡನೆಯನ್ನು ಬಿಡುವುದು, ಭೂತದಯ ಎಂಬ ಸರ್ವತ್ರದಲ್ಲಿಯೂ ದೇಹಬುದ್ಧಿ ಇಲ್ಲದೆ ಇರುವುದು, ಧ್ಯಾನವೆಂದರೆ, ದೇವರ ನಿರ್ದೋಷವಾದ

ಅನಂತಾನಂತಗುಣ ರೂಪ ಅವತಾರಗಳನ್ನು ತನ್ನ ಯೋಗ್ಯತೆ ಇದ್ದಷ್ಟು ಚಿಂತನೆ ಮಾಡುವುದು, ಹಾಗೆಯೇ ಆ ಸ್ವಾಮಿಯ ನಾಮವನ್ನು ಪಠನೆ ಮಾಡುವುದು, ಮೌನವೆಂಬ ದುರ್ಭಾಷಣ ವರ್ಜನವು, ಜಪವೆಂಬ ಮಂತ್ರಗಳನ್ನು ಆವರ್ತನ ಮಾಡುವುದು. ತಪವೆಂಬ ಏಕಾದಶ್ಯಾದ್ಯುಪವಾಸ ಕಾಯಕ್ಲೇಶ ಚಾತುರ್ಮಾಸ್ಯಾದಿಗಳಲ್ಲಿ ಉಕ್ತ ಆಹಾರನಿಯಮ, ಕೃಷ್ಣಾಷ್ಟಮೀ ಮೊದಲಾದ ವ್ರತಗಳನ್ನಾಚರಿಸುವುದು, ಸುತೀರ್ಥವೆಂಬ ಗಂಗಾದಿಗಳಲ್ಲಿ ಸ್ನಾನ, ಮಂತ್ರಸ್ತೋತ್ರವೆಂಬ ಗಾಯತ್ರೀ ವೇದ ಮೊದಲಾದ ದೇವರನ್ನು ಹೊಗಳುವುದು, ವಂದನವೆಂಬ ಪ್ರದಕ್ಷಿಣೆ ನಮಸ್ಕಾರ ಮೊದಲಾದದ್ದು ಸಹ ಸಜ್ಜನರ ಸ್ವಭಾವ ಗುಣಚರ್ಯವು.

**ವೈರಾಗ್ಯಂ ಚ ಕ್ಷಮಾ ಸತ್ಯಮನೃಶಂಸ್ಯಾ ದಮಾದಯಃ ।**
**ಜಾಯಂತೇ ಹಿ ಗುಣಾ ಸಮ್ಯಕ್ ಶ್ರೀಪತಿರ್ಯೈಃ ಪ್ರಸೀದತಿ ॥**

ಎಂಬ ಶಾಸ್ತ್ರಾರ್ಥವು ವಿವರಿಸಲ್ಪಟ್ಟಿತು. ॥೧೮॥

# ಸರ್ವವ್ಯಾಖ್ಯಾನಸಾರಸಂಗ್ರಹ

ಪ್ರಸಕ್ತ ಪದ್ಯದಿಂದ ಮುಕ್ತಿಯೋಗ್ಯ ಚೇತನರಾದ ಶ್ರೀಹರಿಯ ಭಕ್ತರ ಸ್ವಭಾವ ಲಕ್ಷಣಗಳನ್ನು ತಿಳಿಸುತ್ತಾರೆ.

ಪಂಚಭೇದಯುಕ್ತ ತಾರತಮ್ಯ ಜ್ಞಾನ, ಹರಿ ಸರ್ವೋತ್ತಮತ್ವ, ವಾಯುಜೀವೋತ್ತಮತ್ವ ಜ್ಞಾನ, ಜಗತ್ಸತ್ಯತ್ವ ಜ್ಞಾನ, ಶ್ರೀಹರಿಯ ಮಹಿಮಾಜ್ಞಾನ-ಇತ್ಯಾದಿ ಸಮೀಚೀನವಾದ ಜ್ಞಾನವನ್ನು ಹೊಂದಿರುವರು.

ಶ್ರೀಹರಿಯ ಪಾದಪದ್ಮಗಳಲ್ಲಿ ದೃಢವಾದ ಅವಿಚ್ಛಿನ್ನವಾದ ದಾರಾಪುತ್ರಾದಿಗಳಲ್ಲಿರುವ ಪ್ರೀತಿಗಿಂತ ಅನಂತಮಡಿ ಹೆಚ್ಚಾಗಿರುವ ಪ್ರೇಮಪ್ರವಾಹರೂಪವಾದ ಸುಭಕ್ತಿಯುತರಾಗಿರುವರು.

ಪ್ರಾಪಂಚಿಕ ವಿಷಯುಗಳು ಅನಿತ್ಯವೆಂದು ತಿಳಿದು, ಶ್ರೀಪರಮಾತ್ಮ ನಲ್ಲಿಯೇಸ್ಥಿರ ಮನಸ್ಸುಳ್ಳ ವೈರಾಗ್ಯಭಾಗ್ಯ ಸಂಪನ್ನರು,

ತಮಗಿಂತಲೂ ಉತ್ತಮರಾದ ಗುರು ಹಿರಿಯರಲ್ಲಿ ನಮ್ರತೆ ಇರುವ ವಿನಯ ಗುಣಸಂಪನ್ನರಾಗಿರುವರು. ವಿನಯವೇ ಭಗವದ್ಭಕ್ತರ ಭೂಷಣವು.

ಶ್ರೀ ವೇದ ವ್ಯಾಸರಿಂದ ಕೃತ ಪುರಾಣಗಳು, ವಾಲ್ಮೀಕ್ಯಾದಿ ಋಷಿ ಗಳಿಂದ ವಿರಚಿತ ಪುರಾಣಗಳಲ್ಲಿ ಆಸಕ್ತ ಮನಸ್ಸುಳ್ಳವರಾಗಿರುವರು.

ವೇದ ಉಪನಿಷತ್ತುಗಳು, ಬ್ರಹ್ಮ ಸೂತ್ರಇತಿಹಾಸ ಇತ್ಯಾದಿ ಸಚ್ಛಾಸ್ತ್ರಗಳ ಅಧ್ಯಯನದಲ್ಲಿ ನಿರಂತರ ಶ್ರದ್ಧಾಭಕ್ತಿ, ಶ್ರೀಮದಾನಂದತೀರ್ಥಕೃತ ಸರ್ವಮೂಲಗ್ರಂಥಗಳು, ತದನುಸಾರಿ ಟೀಕಾ ಟಿಪ್ಪಣಿಗ್ರಂಥಗಳಲ್ಲಿ ಶ್ರದ್ಧಾಸಕ್ತಿಗಳಿಂದ ಕೂಡಿರುವುದು.

ಅಂತಹ ಸಚ್ಛಾಸ್ತ್ರಗಳನ್ನು ಜ್ಞಾನಿಗಳಿಂದ ನಿರಂತರ ಶ್ರವಣ ಮಾಡುತ್ತಾ, ಆನಂದವನ್ನು ಪಡೆಯೋಣ.

ಅಧ್ಯಯನ ಮಾಡಿದ ವಿಷಯಗಳನ್ನು ಮನಸಾ ಸ್ಮರಣೆ ಮಾಡುವ ಚಿಂತನಕಾರ್ಯ.

ಸತ್ಪಾತ್ರರಿಗೆ ದ್ರವ್ಯ, ಭೂ, ಕನ್ಯಾ, ಗೋ, ವಿದ್ಯಾ-ಇತ್ಯಾದಿ ದಾನ ಗಳನ್ನು ಕೃಷ್ಣಾರ್ಪಣಪೂರ್ವಕವಾಗಿ ಶ್ರೀಹರಿಯ ಪ್ರೀತ್ಯರ್ಥವಾಗಿ ಮಾಡೋಣ.

ಏನೇ ಕಷ್ಟಗಳೂ ಬಂದರೂ, ಶ್ರೀಹರಿಯ ಚಿತ್ತವೆಂದು ಸ್ವೀಕರಿಸುತ್ತಾ, ದ್ವಂದ್ವಾತೀತರಾಗಿ, ಸದಾ ಶಾಂತಚಿತ್ತನಾಗಿರುವ ಲಕ್ಷಣವೇ ಶಮ ಎನಿಸು ವುದು.

ಇಂದ್ರಿಯ ನಿಗ್ರಹವೇ ದಮವು.

ಜ್ಯೋತಿಷ್ಟೋಮ, ಔಪಾಸನ, ವೈಶ್ವದೇವ, ಬಲಿಹರಣ. ಆಧ್ಯಾತ್ಮ ಯಜ್ಞ-ಇತ್ಯಾದಿ ಭಗವತ್ಪೂಜಾರೂಪವಾದ ಯಜ್ಞಗಳ ಆಚರಣೆ.

ಜಗತ್ಸತ್ಯತ್ವದಲ್ಲಿ ದೃಢನಂಬಿಕೆಯುಳ್ಳವನಾಗಿ, ಅನೃತವನ್ನು ಆಡದಿರುವುದು.

ಸಾಧುಸಜ್ಜನರನ್ನು ಪೀಡಿಸದಿರುವುದು, ವಿನಾಕಾರಣ ಪರಪೀಡನಾರೂಪವಾದ ಹಿಂಸೆಯನ್ನು ಮಾಡದೆ ಅಹಿಂಸಾಚರಣೆಯಲ್ಲಿರುವುದು.

ಸರ್ವಪ್ರಾಣಿಗಳಲ್ಲೂ ಸರ್ವತ್ರವ್ಯಾಪ್ತನಾದ ಶ್ರೀಹರಿಯನ್ನು ಚಿಂತಿಸುತ್ತಾ, ಅವುಗಳಲ್ಲಿ ಕರುಣೆಯನ್ನೂ ತೋರಿಸುವ **ಭೂತದಯಾ** ಎಂಬ ಉದಾತ್ತಗುಣ.

ಭಗವಂತನ ಮಹಾಮಹಿಮೆಗಳನ್ನು ನಿರಂತರವಾಗಿ ಮನಸ್ಸಿನಲ್ಲಿ ಚಿಂತನೆ ಮಾಡುತ್ತಿರುವ ಧ್ಯಾನಕಾರ್ಯ.

ಶ್ರೀಪರಮಾತ್ಮನ ನಾಮ, ಮಹಿಮೆ, ಗುಣಗಳನ್ನು ನಿರೂಪಿಸುವ ಕೀರ್ತನೆಗಳನ್ನು ಭಕ್ತಿಯಿಂದ ಹಾಡಿ ಹೊಗಳುವುದು (ಭಗವನ್ನಾಮ ಕೀರ್ತನೆ).

ಅಪ್ರಯೋಜಕವಾದ ಮಾತುಗಳನ್ನು ಆಡದಿರುವುದು, ದುರ್ಜನರಲ್ಲಿ ಸಂಭಾಷಿಸದೆ ಇರುವುದು, ಪ್ರಾಪಂಚಿಕ ಹಾಳು ಹರಟೆಗಳನ್ನು ಆಡದಿರವುದು, ಆದರೆ ಸಜ್ಜನರಲ್ಲಿ ಸಲ್ಲಾಪ ಶಾಸ್ತ್ರಾಲೋಚನೆ, ಜಿಜ್ಞಾಸೆ-ಇತ್ಯಾದಿಗಳನ್ನು ಮಾಡುವುದು- ಇದೇ ಮೌನ. ಸುಮ್ಮನೇ ಮಾತನಾಡದೇ ಮೂಕನಾಗಿರುವುದು ಮೌನವಿಲ್ಲ.

ಗಾಯತ್ರೀ, ಗುರುಮಂತ್ರ, ಸ್ತೋತ್ರ- ಮುಂತಾದ ಜಪಗಳನ್ನು ಮಾಡುವುದು.

ಶ್ರೀಹರಿಯ ಅಪಾರ ಮಹಿಮೆಗಳನ್ನು ಮನಸ್ಸಿನಿಂದ ಆಲೋಚಿಸಿ, ಉಪಾಸನೆ ಮಾಡುವುದು (ತಪ).

ಏಕಾದಶೀ, ವಿಷ್ಣುಪಂಚಕ, ಚಾತುರ್ಮಾಸ, ಚಾಂದ್ರಾಯಣ-ಇತ್ಯಾದಿ ವ್ರತಗಳನ್ನು ಕೇವಲ ವಿಷ್ಣುಪ್ರೇರಣೆಯಾ, ವಿಷ್ಣುಪ್ರೀತ್ಯರ್ಥವಾಗಿ (ನಿಷ್ಕಾಮವಾಗಿ ಮಾಡುದು).

ಪುರಾಣಪ್ರಸಿದ್ಧವಾದ ಕ್ಷೇತ್ರಗಳುಅಲ್ಲಿರುವ ಪುಣ್ಯನದಿ, ತೀರ್ಥ ಗಳಲ್ಲಿ ಅನುಸಂಧಾನಪೂರ್ವಕ ಸ್ನಾನಮಾಡುವ ವಿಧಿಗಳು.

ಗುರೂಪದಿಷ್ಟತನಾಗಿ. ಮಂತ್ರ ಸ್ತೋತ್ರಗಳ ನೈಜಾರ್ಥಗಳನ್ನು ಅರಿತು, ಅವುಗಳನ್ನು ಅಭ್ಯಾಸ ಮಾಡುವುದು.

ಗುರುಹಿರಿಯರಲ್ಲಿ, ದೇವರಲ್ಲಿ, ಸ್ವೋತ್ತಮರಲ್ಲಿ ಭಕ್ತಿಪೂರ್ವಕವಾಗಿ ಮಾಡುವ ಸಾಷ್ಟಾಂಗ ನಮಸ್ಕಾರ.

ಪೂರ್ವೋಕ್ತಲಕ್ಷಣಗಳೆಲ್ಲವೂ ಸಜ್ಜನರಾದ ಶ್ರೀಹರಿಯ ಭಕ್ತರ ಲಕ್ಷಣ ಗಳೆಂದು ತಿಳಿಸುತ್ತಾರೆ. ॥೧೮॥

## ಪದ್ಯ-೧೯

ಮೂಲ :-

ಲೇಶ ಸ್ವಾತಂತ್ರ್ಯಗುಣವನು ಪ್ರ ।
ವೇಶಗೈಸಿದ ಕಾರಣದಿ ಗುಣ ।
ದೋಷಗಳು ತೋರುವುವು ಸತ್ವಾಸತ್ವಜೀವರೊಳು ॥

ಶ್ವಾಸ ಭೋಜನ ಪಾನ ಶಯನ ವಿ ।
ಲಾಸ ಮೈಥುನ ಗಮನ ಹರ್ಷ ।
ಕ್ಲೇಶ ಸ್ವಪ್ನ ಸುಷುಪ್ತಿ ಜಾಗ್ರತಿಯಹವು ಚೇತನಕೆ ॥ ॥೧೯॥

**ಅವತರಣಿಕೆ :–**

ಸಕಲ ಜೀವರಾಶಿಗಳಿಗೆ ಶ್ವಾಸ ಭೋಜನಾದಿ ಸರ್ವಕ್ರಿಯೆಗಳ ವ್ಯಾಪಾರಕ್ಕೆ ಸಂಬಂಧಿಸಿದ ಜ್ಞಾನವಾಗುವುದಕ್ಕೆ ಕಾರಣವನ್ನು ತಿಳಿಸುತ್ತಾರೆ.
॥೧೯॥

**ಪ್ರತಿಪದಾರ್ಥ :–**

**ಸತ್ತ್ವ** = ಸತ್ತ್ವಗುಣ ಪ್ರಾಚುರ್ಯಸ್ವರೂಪ ಭಾವವುಳ್ಳ ಮುಕ್ತಿಯೋಗ್ಯ ಚೇತನರಿಗೆ, **ಅಸತ್ತ್ವ** = ತಮೋಗುಣಪ್ರಾಚುರ್ಯ ಸ್ವರೂಪ ಲಕ್ಷಣವುಳ್ಳ ತಮೋಯೋಗ್ಯ ಜೀವರು (ಅಂತೆಯೇ,ರಜೋಗುಣ ಪ್ರಾಚುರ್ಯ ಸ್ವರೂಪಸ್ವಭಾವವುಳ್ಳ ನಿತ್ಯಸಂಸಾರಿ ಜೀವರೂ ಗ್ರಾಹ್ಯ), **ಲೇಶ** = ಅತ್ಯಂತ ಅಲ್ಪವಾದ, ಸ್ವಾ**ತಂತ್ರ್ಯ ಗುಣವನು** = ತನ್ನ ಸ್ವಾತಂತ್ರ್ಯ ಗುಣವನ್ನು, **ಪ್ರವೇಶಿಸಿದ ಕಾರಣದಿ** = ಜೀವತ್ರಯರಲ್ಲಿ ಪ್ರವೇಶಿಸಿ, ಇಟ್ಟಿರುವ ಕಾರಣದಿಂದ, **ಗುಣ** = ಸುಗುಣ, ಪುಣ್ಯ, ಸತ್ಕರ್ಮ ಇತ್ಯಾದಿ ಗುಣಗಳೂ, ದುರ್ಗುಣ, ಪಾಪ, ದುಷ್ಕರ್ಮಾಚರಣೆ ಇತ್ಯಾದಿ ದೋಷಗಳೂ, **ತೋರುವುವು** = ಪ್ರಕಟವಾಗುವುವು. **ಶ್ವಾಸ** – ಉಸಿರಾಡುವ ಕಾರ್ಯ, **ಭೋಜನ** = ಆಹಾರಸೇವನೆ, **ಪಾನ** = ಉದಕ ಪಾನಕ್ರಿಯೆ, **ಶಯನ** = ಮಲಗುವ ಕಾರ್ಯ, **ವಿಲಾಸ** = ಭೋಗಗಳ ಅನುಭವ, **ಮೈಥುನ** = ಸ್ತ್ರೀಭೋಗಾದಿಗಳು, **ಗಮನ** = ಸಂಚಾರಕ್ರಿಯೆ, **ಹರ್ಷ** = ಆನಂದ ಪಡುವುದು, **ಕ್ಲೇಶ** = ದುಃಖಾನುಭವ, **ಸ್ವಪ್ನ** = ಸ್ವಪ್ನಾವಸ್ಥೆ, **ಸುಷುಪ್ತಿ** = ಗಾಢನಿದ್ರಾವಸ್ಥೆ, **ಜಾಗ್ರತೆ** = ಎಚ್ಚರಿಕೆ, **ಚೇತನರ** = ಸಮಸ್ತ ತ್ರಿವಿಧಜೀವರಿಗೆ, **ಅಹವು** = ಇತ್ಯಾದಿ ಕ್ರಿಯಾವಿಶೇಷಗಳು ನಡೆಯುವುವು. ॥೧೯॥

# ವ್ಯಾಖ್ಯಾನಗಳು

## ೧. ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ

ಜೀವರಿಗೆ ಸರ್ವವಿಷಯಕ ಜ್ಞಾನ ಆಗುವುದಕ್ಕೆ ಕಾರಣ ಹೇಳತಾರೆ.

ಸತ್ತ್ವಗುಣಪ್ರಾಚುರ್ಯವಾದ ಸ್ವರೂಪ ಸ್ವಭಾವವುಳ್ಳ ಮುಕ್ತಿಯೋಗ್ಯ ಜೀವರು, ತಮೋಗುಣಪ್ರಾಚುರ್ಯವಾದ ಸ್ವರೂಪ ಸ್ವಭಾವವುಳ್ಳ ತಮೋಯೋಗ್ಯಜೀವರು ಹಾಂಗೇ ರಜೋಗುಣಪ್ರಾಚುರ್ಯವಾದ ಸ್ವರೂಪ ಸ್ವಭಾವವುಳ್ಳ ನಿತ್ಯಸಂಸಾರಿಜೀವರು ಇವರಿಬ್ಬರೂ ಅಸ್ವತಂತ್ರಜೀವರೆಂತಲೇ ಕರಸತಾರೆ. ಇವರು ಅಸೃಜ್ಯರಾಶಿಯಲ್ಲಿ ಇರಲಾಗಿ, ಅವರವರ ಸ್ವರೂಪಭೂತ ಸ್ವಾತಂತ್ರ್ಯದಲ್ಲಿ ಬಿಂಬರೂಪಿ ಪರಮಾತ್ಮ ಇದ್ದಾನೆ. ತದ್ವ್ಯತಿರಿಕ್ತ, ದತ್ತ ಸ್ವಾತಂತ್ರ್ಯ ಎಂಬುದು ಅನಾದಿ ಜಡಕರ್ಮಗಳ ಸ್ಥೂಲದೇಹೇಂದ್ರಿಯಾದಿಗಳಿಂದ ಮಾಡಿಸಿ, ಅವರವರ ಸಾಧನಪೂರ್ತಿ ಮಾಡಿಸೋ ಉದ್ದಿಶ್ಯ ಪ್ರವೇಶವು. ಈ ಸತ್ತ್ವಾಸತ್ತ್ವ ಜೀವರೊಳು ಶ್ರೀಪರಮಾತ್ಮ ಸ್ವಗತಸ್ವಾತಂತ್ರ್ಯ ದತ್ತಸ್ವಾತಂತ್ರ್ಯ, ಸರ್ವಸ್ವಾತಂತ್ರ್ಯ ಈ ಮೂರು ಸ್ವಾತಂತ್ರ್ಯಗುಣಗಳನ್ನು ಸೃಷ್ಟಿಸಿ, ಪ್ರಾರಂಭದಲ್ಲಿ ಪ್ರವೇಶ ಮಾಡಿಸಿದ ಕಾರಣದಿಂದ, ಅತ್ಯಂತ ಲೇಶವಾದ, ಅತಿ ಪರಮಾಣುವಾದ ಸ್ವರೂಪಗಳುಳ್ಳ ಜೀವರಿಗೆ ಸುಗುಣ ದುರ್ಗುಣ, ಪಾಪ ಪುಣ್ಯ ಇತ್ಯಾದಿ ಗುಣದೋಷಗಳು, ಪ್ರವಿಷ್ಟನಾದ ಸ್ವಾತಂತ್ರ್ಯಶಬ್ದವಾಚ್ಯನಾದ ಪರಮಾತ್ಮ, ತನ್ನ ಗುಣಗಳ ದ್ವಾರಾ ಜೀವರ ಅನಾದಿ ಸ್ವರೂಪಭೂತವಾದ ಸ್ವಾತಂತ್ರ್ಯಗುಣಗಳಿಗೆ ಯಾವಾಗ್ಗೆ ತಿಳಸತಾನೆ, ಆಗ್ಗೆ ಪ್ರಾಣಿಗಳಿಗೆ ಗುಣಾಗುಣಗಳು ಅವರವರ ಮನೋಇಂದ್ರಿಯಕ್ಕೆ ತೋರೋವಾಗತವೆ. ಈ ಪ್ರವಿಷ್ಟವಾದ ಸ್ವಾತಂತ್ರ್ಯಗುಣತ್ರಯಗಳಿಂದಲೇ ಪ್ರಾಣಿಗಳಿಗೆ ಸ್ಥೂಲದೇಹ ದ್ವಾರಾ ಮೂಗಿನಿಂದ ಉಸಿರಾಡೋಣವೇನು, ಜಡಪದಾರ್ಥಗಳ ಭೋಜನವೇನು, ಜಡೋದಕ ಕುಡಿಯೋಣವೇನು, ಮಲಗೋಣವೇನು, ಆಟಗಳ ಆಡೋಣವೇನು, ಸ್ತ್ರೀಸಂಭೋಗ

ವೇನು, ಸಂಚಾರವೇನು, ಸಂತೋಷವೇನು, ದುಃಖವೇನು, ಸ್ವಪ್ನಾವಸ್ಥೆಯೇನು, ನಿದ್ರಾವಸ್ಥೆಯೇನು, ಎಚ್ಚರಿಕೆ ಅವಸ್ಥೆಯೇನು– ಇವೇ ಮೊದಲಾದ ವ್ಯಾಪಾರಗಳು ಜೀವನಿಗೆ ಆಗೋವಾಗತನೆ. ಇವು ಯಾವತ್ತೂ ಕೊಡಲ್ಪಟ್ಟ ಸ್ವಾತಂತ್ರ್ಯದಿಂದ ಆಗತವೆ ಎಂತ ತಾತ್ಪರ್ಯ.

ವಿಶೇಷಾರ್ಥ :–

ಜಡಾಧಿಷ್ಠಾನರಹಿತವಾದ, ದೃಢಕ್ಕಾಗಿ ಜೀವನ ದೇಹೇಂದ್ರಿಯಗಳ ವ್ಯಾಪಾರ ಚಿನ್ಮನಸಿನ ವ್ಯಾಪಾರ. ಆ ಚಿನ್ಮನಸ್ಸನ್ನು ಆಶ್ರಯಿಸಿ ಇರುವ ಚಿದಾತ್ಮಕ ಸ್ವಾತಂತ್ರ್ಯದ ವ್ಯಾಪಾರ ಮೋಕ್ಷದಲ್ಲೇ ಹೊರ್ತು, ಸ್ಥಿತಿಕಾಲದಲ್ಲಿ ಇಲ್ಲ. ಜೀವರಿಗೆ ಅನಾದಿ ಭೂತವಾದ ತ್ರಿಗುಣಾತ್ಮಕ ಜಡರೂಪವಾದ ಲಿಂಗದೇಹ ಆವರಕವಾಗಿ ಬಂಧಕರೂಪದಿಂದ ಇರೋದಾಗಿ ಅದೆ. ಅದರಲ್ಲಿ ಜಡೇಂದ್ರಿಯ, ಜಡಮನಸ್ಸು ಜಡಸ್ವಾತಂತ್ರ್ಯ ಅವೆ. ತದ್ದ್ವಾರಾ ಜೀವನ ಸ್ವರೂಪ ಸ್ವಾತಂತ್ರ್ಯ ಸ್ವರೂಪೇಂದ್ರಿಯಗಳು ಸ್ಥೂಲದೇಹದಲ್ಲಿ ಪ್ರವಿಷ್ಟಗಳಾಗಿ ವ್ಯಾಪಾರಗಳು ಆಗತವೆ.

ಪ್ರಮಾಣ :–

**ಸ್ವಾತಂತ್ರ್ಯಲೇಶದಾನೇನ ಜೀವಾ ಜಗತಿ ಭುಂಜತೇ ।**
**ಭುಂಕ್ತೇಗಿಳದಿ ಪಾನಾದಿ ಕರೋತ್ಯಪಿ ಚ ಗಚ್ಛತಿ ॥**

**ಹಿ ನಸ್ತಿ ಪಾತಿ ಚ ಬ್ರೂತೇ ತಿಷ್ಠತ್ಯುಪವಿಶ್ಯತೇ ।**
**ಅಹಂಕಾರ ಸಮಾವಿಷ್ಟಃ ಸರ್ವಕರ್ತೇತಿ ಮಾನ್ಯತೇ ॥**

**ಅಜ್ಞಾನೇನ ವಿಮೂಢಾತ್ಮಾನ ಜೀನಾತಿ ಪರಾತ್ಪರಂ ।**
**ವಿಧೀನಾಂ ಚ ನಿಷೇಧಾನಾಂ ಪಾತ್ರಂ ತನ್ಮಾದಯಂ ಸ್ಮೃತಃ ॥**

ಎಂಬ ಅರ್ಥಗಳ ವಿವರಿಸಿತು. ॥೧೯॥

## ೨. ಭಾವಪ್ರಕಾಶಿಕೆ

"ಸ್ವಾತಂತ್ರ್ಯ ಲೇಶದಾನೇನ ಜೀವಃ ಶ್ವಸತಿ ಜೃಂಭತೇ" ಇತ್ಯಾದಿ ವಿಷ್ಣುರಹಸ್ಯದ ೨೧ ನೆಯ ಅಧ್ಯಾಯದ ವ್ಯಾಖ್ಯಾನುಸಾರವಾಗಿ ಶ್ರೀಪರಮಾತ್ಮನು ಜೀವರಿಗೆ ಕೊಟ್ಟ ಅಲ್ಪ ಸ್ವಾತಂತ್ರ್ಯದ ಸಾಮರ್ಥ್ಯದಿಂದಲೇ ಸಾತ್ವಿಕ, ರಾಜಸ, ತಾಮಸಜೀವರ ಯೋಗ್ಯತಾನುಸಾರವಾಗಿ ಗುಣದೋಷಗಳು ತೋರುವುವು. ಜೀವರು ಶ್ವಾಸ ಬಿಡುವುದು; ಭೋಜನ ಮಾಡುವುದು; ಕುಡಿಯುವುದು; ಮಲಗುವುದು; ಸ್ತ್ರೀಯರೊಂದಿಗೆ ಏಕಾಂತವಾದ ಸರಸ ಸಲ್ಲಾಪಗಳು; ಭೋಗ ಮೊದಲಾದುವುಗನ್ನನುಭವಿಸುವುದು; ನಡೆಯುವುದು; ಹರ್ಷಶೋಕಗಳನ್ನನುಭವಿಸುವುದು; ಸ್ವಪ್ನ ಕಾಣುವುದು; ನಿದ್ರೆ ಮಾಡುವುದು; ಎಚ್ಚರವಾಗಿರುವುದು; ಮೊದಲಾದ ಎಲ್ಲ ಕಾರ್ಯಗಳೂ ಆಗುವುವು. ಇವು ಪರಮಾತ್ಮನು ಕೊಟ್ಟ ಸ್ವಾತಂತ್ರ್ಯದಿಂದಲೇ ಆಗುವುದರಿಂದ ಜೀವನು ಸ್ವತಂತ್ರ ಕರ್ತನಲ್ಲವೆಂದು ಭಾವ.

॥೧೯॥

## ೩. ಭಾವದರ್ಪಣ :–

ಲೇಶ । ತದುಕ್ತಂ । "ಸ್ವಾತಂತ್ರ್ಯಲೇಶದಾನೇನ ಜೀವನ್ ಶ್ವಸತಿ ಜೃಂಭತೇ" ಇತಿ ಚ. ॥೧೯॥

## ೪. ಶ್ರೀ ವ್ಯಾಸದಾಸ ಸಿದ್ಧಾಂತ ಕೌಮುದೀ :–

"ಸ್ವಾತಂತ್ರ್ಯ ಲೇಶದಾನೇನ ಜೀವಃ ಶಸ್ವತಿ ಜೃಂಭತಿ ॥ ಭುಂಕ್ತೇ ವಿಲತಿ (ಗಿಲತಿ) ಪಾನಾದಿ ಕರೋತ್ಯಪಿ ಚ ಗಚ್ಛತಿ । ಹಿ ನಸ್ತಿ ಪಾತಿ ಚ ಬ್ರೂತೇ ತಿಷ್ಠತ್ಯಪಿ ವಿಶತ್ಯಪಿ ॥ " ತದಭಿಪ್ರಾಯಂ ಆಹ– 'ಲೇಶ' ಇತಿ ॥ 'ಅಸತ್ವ' ರಾಜಸ, ತಾಮಸ. ॥೧೯॥

## ಕನ್ನಡಾರ್ಥ

“ಹರಿಯು ಸ್ವಾತಂತ್ರ್ಯಗುಣದ ಅತ್ಯಂತ ಲೇಶವನ್ನು ಕೊಡುವುದರಿಂದ ಜೀವನು ಉಸುರುತ್ತಾನೆ, ಆಕಳಿಸುತ್ತಾನೆ, ಉಣ್ಣುತ್ತಾನೆ, ಮಿಲನ ಹೊಂದುತ್ತಾನೆ. (ನುಂಗುತ್ತಾನೆ), ಪಾನ ಮುಂತಾದ ಕ್ರಿಯೆಗಳನ್ನು ಮಾಡುತ್ತಾನೆ, ಅವನು ಹೋಗುತ್ತಾನೆ, ಹಿಂಸಿಸುತ್ತಾನೆ,-ರಕ್ಷಿಸುತ್ತಾನೆ, ಮಾತನಾಡುತ್ತಾನೆ, ನಿಲ್ಲುತ್ತಾನೆ, ಪ್ರವೇಶಿಸುತ್ತಾನೆ.”– ಈ ಮುಂತಾದ ವಿಷಯಗಳನ್ನು ‘ಲೇಶ’ ಈ ಪದ್ಯದಿಂದ ಹೇಳುತ್ತಾರೆ. ‘ಅಸತ’ ಈ ಶಬ್ದಕ್ಕೆ ಸತ್ವ ಗುಣವಿಲ್ಲದೆ ರಾಜಸ, ತಾಮಸರೆಂದು ಅರ್ಥ. ॥೧೯॥

### ೫. ಶ್ರೀಗುರುಹೃದಯಪ್ರಕಾಶಿಕೆ :-

ದೇವರು ಲೇಶವೆಂಬ ಅತ್ಯಲ್ಪ ಸ್ವತಂತ್ರವನ್ನು ಪ್ರವೇಶ ಮಾಡಿಸಿದ್ದರಿಂದ ಸತ್ತ್ವಾಸತ್ತ್ವರೆಂಬ ಯೋಗ್ಯಾಯೋಗ್ಯ ಜೀವರಲ್ಲಿ ಗುಣದೋಷಗಳೆಂಬ ವಿಹಿತಾವಿಹಿತ ಕ್ರಿಯೆಗಳೂ ಸಹ ತೋರುತ್ತಿರುವುವು. ಶ್ವಾಸವೆಂಬ ಉಸಿರು ಬಿಡುವುದು, ಭೋಜನವೆಂಬ ಊಟಮಾಡುವುದು, ಪಾನವೆಂಬ ನೀರು ಕುಡಿಯುವುದು, ಶಯನವೆಂಬ ಮಲಗುವಿಕೆ, ವಿಲಾಸವೆಂಬ ವೈಯ್ಯಾರ ಬೆಡಗುಗಳು, ಮೈಥುನವೆಂಬ ಸ್ತ್ರೀಭೋಗ, ಗಮನವೆಂಬ ನಡೆಯುವಿಕೆ, ಹರ್ಷವೆಂಬ ಸಂತೋಷ, ಕ್ಲೇಶವೆಂಬ ದುಃಖ, ಸ್ವಪ್ನವೆಂಬ ಮನೋವಾಸನೆ, ಸುಪ್ತಿ ಎಂಬ ಗಾಢ ನಿದ್ರೆ, ಜಾಗ್ರತೆ ಎಂಬ ಎಚ್ಚರ-ಮೊದಲಾದ್ದು ಜೀವನಿಗೆ ಆಗುವುವು.

**ಸ್ವಾತಂತ್ರ್ಯಾವೇಶ ದಾನೇನ ಜೀವಶ್ಶ್ವಸಿತಿ ಭುಂಜತೇ ।**
**ಭುಂಜ್ತೇ ಗಿಳತಿ ಪಾನಾದಿ ಕರೋತ್ಯಪಿ ಚ ಗಚ್ಛತಿ ॥**

**ಹಿನಸ್ತಿ ಪಾತಿ ಚ ಬ್ರೂತೇ ತಿಷ್ಠತ್ಯುಪವಿಶತ್ಯಪಿ ।**
**ಅಹಂಕಾರ ಸಮಾವಿಷ್ಟಃ ಸರ್ವ ಕರ್ತೇತಿ ಮನ್ಯತೇ ॥**

**ಅಜ್ಞಾನೇನ ವಿಮೂಢಾತ್ಮಾ ನ ಜಾನಾತಿ ಪರಮಾತ್ಮತಾಂ ।**
**ವಿಧೀನಾಂ ಚ ನಿಷೇಧಾನಾಂ ಪಾತ್ರೋ ತಸ್ಮಾದಯಂ ಸ್ಮೃತಃ ॥**

ಎಂಬುದರರ್ಥ ವಿವರಿಸಿತು. ॥೧೯॥

## ಸರ್ವವ್ಯಾಖ್ಯಾನಸಾರಸಂಗ್ರಹ

ಸತ್ತ್ವಗುಣಪ್ರಾಚುರ್ಯವಾದ ಸ್ವರೂಪಸ್ವಭಾವವುಳ್ಳ ಮುಕ್ತಿಯೋಗ್ಯಚೇತನರು ಸಾತ್ವಿಕರು.

ರಜೋಗುಣಪ್ರಾಚುರ್ಯವಾದ ಸ್ವರೂಪಲಕ್ಷಣವುಳ್ಳ ನಿತ್ಯಸಂಸಾರಿ ಜೀವರು ರಾಜಸರು.

ತಮೋಗುಣಪ್ರಾಚುರ್ಯವಾದ ಸ್ವರೂಪಭೂತರಾದ ತಮೋಯೋಗ್ಯ ಜೀವರು ತಾಮಸರು.

ಸತ್ತ್ವಾಸತ್ತ್ವಾದಿ ತ್ರಿವಿಧ ಚೇತನರಲ್ಲಿ ಸರ್ವತಂತ್ರ ಸ್ವತಂತ್ರನಾದ ಸರ್ವಶಕ್ತನು ಪರಮಾಣು ರೂಪದಲ್ಲಿರುವ ಅಲ್ಪ ಸಾಮರ್ಥ್ಯವುಳ್ಳ ಜೀವರಲ್ಲಿ ಅವರವರ ಯೋಗ್ಯತಾನುಸಾರ ಸ್ವಾತಂತ್ರ್ಯವೆಂಬ ಗುಣವನ್ನು ಜೀವರ ಕರ್ತೃತ್ವಶಕ್ತಿಯನ್ನು ಕ್ರಿಯಾತ್ಮಕವನ್ನಾಗಿ ಪ್ರಕಟಿಸಗೊಳಿಸಲು ಇಟ್ಟು, ಪ್ರವೇಶಿಸುವನು.

ಅಸೃಜ್ಯರಾಶಿಯಲ್ಲಿ ತ್ರಿವಿಧ ಜೀವರ ಸ್ವರೂಪಭೂತಕರ್ತೃತ್ವಶಕ್ತಿಯಲ್ಲಿ ಬಿಂಬರೂಪನಾಗಿ ಶ್ರೀಪರಮಾತ್ಮ ಇದ್ದಾನೆ.

ಅನಾದಿ ಲಿಂಗದೇಹಗತ ಅನಾದಿ ಜಡಕರ್ಮಗಳನ್ನು ಸ್ಥೂಲದೇಹಗತ ಇಂದ್ರಿಯಗಳ ದ್ವಾರಾ ಮಾಡಿ ಮಾಡಿಸಿ, ಜೀವರ ಕರ್ಮಕ್ಷಯಗೊಳಿಸಲು,

ಪ್ರವೇಶಿತವಾದ ಶ್ರೀಹರಿಯ ಗುಣವೇ ದತ್ತಸ್ವಾತಂತ್ರ್ಯವು. ಶ್ರೀಹರಿಯು ದತ್ತಸ್ವಾತಂತ್ರ್ಯ, ಸ್ವಗತಸ್ವಾತಂತ್ರ್ಯ ಮತ್ತು ಸರ್ವಸ್ವಾತಂತ್ರ್ಯವೆಂಬ ಮೂರು ಪ್ರಕಾರವಾದ ತನ್ನದೇ ಆದ ಸ್ವಾತಂತ್ರ್ಯಗುಣಗಳನ್ನು ಬಿಂಬರೂಪವಾಗಿ ಜೀವರ ಸೃಷ್ಟಿ ಪ್ರಾರಂಭದಲ್ಲಿಯೇ (ಸ್ವರೂಪ ದೇಹಕ್ಕೆ ಅನಾದಿ ಸಂಗೋಪಾಶನ ಮಾಡುವ ಕಾರ್ಯ ದ್ವಾರಾ) ಪ್ರವೇಶ ಮಾಡಿಸಿದನು.

ಆಯಾಯಾ ಜೀವರ ಯೋಗ್ಯತೆಗನುಗುಣವಾಗಿ ಸ್ಥೂಲ ದೇಹಗತ ಇಂದ್ರಿಯಗಳ ದ್ವಾರಾ ನಡೆಯುತ್ತಿರುವ ಸಕಲಕ್ರಿಯಾವಿಶೇಷಗಳಿಗೂ ಈ ಪ್ರವೇಶಿತ ಅಲ್ಪ ಸ್ವಾತಂತ್ರ್ಯ ಗುಣವೇ ಕಾರಣವಾಗಿದೆ. ||೧೯||

## ಪದ್ಯ-೨೦

ಮೂಲ :–

ಅರ್ಥ ತನ್ನೊಳಗಿರಿಸಿ ಉಳಿದೊಂ |
ದರ್ಥವ ವಿಭಾಗಗೈಸಿ ವ್ಯಜಿ |
ನಾರ್ದನನು ಪೂರ್ವದಲಿ ಸ್ವಾತಂತ್ರ್ಯವ ಕೊಟ್ಟಂತೆ ||
ಸ್ವಾರ್ಥನೀಪಿತ ಕೊಡುವವರ ಸುಖ |
ವೃದ್ಧಿಗೋಸುಗ ಬ್ರಹ್ಮ ವಾಯು ಕ |
ಪರ್ದಿ ಮೊದಲಾದವರೊಳಿದ್ದವರ ಯೋಗ್ಯತೆಯನ್ನರಿತು ||
||೨೦||

**ಅವತರಣಿಕೆ :-**

ಗಂಗಾಪಿತನಾದ ಮಂಗಳಾಂಗನು ಬ್ರಹ್ಮ ವಾಯು ರುದ್ರಾದಿ ದೇವತೆಗಳಲ್ಲಿ, ಅವರವರ ಸ್ವರೂಪಯೋಗ್ಯತಾನುಸಾರ ವ್ಯಾಪಾರಮಾಡಿಸುತ್ತಾನೆಂದು ತಿಳಿಸುತ್ತಾರೆ.

**ಪ್ರತಿಪದಾರ್ಥ :-**

**ಅರ್ಧ** = ದತ್ತ ಸ್ವಾತಂತ್ರ್ಯ ವಿಭಾಗ ಗುಣಗಳು $132\frac{3}{4}$ ಒಳಗೆ ಸ್ವಗತ ಸ್ವಾತಂತ್ರ್ಯ ವಿಭಾಗಕ್ಕಾಗಿ ಒಂದು ಗುಣ ಹೋಗತಾ, ಉಳಿದ $132\frac{1}{4}$ ಒಳಗೆ ಸರ್ವಸ್ವಾತಂತ್ರ್ಯ ವಿಭಾಗಕ್ಕಾಗಿ ಒಂದು ಗುಣದಲ್ಲಿ ಅರ್ಧ ಭಾಗವನ್ನು, **ತನ್ನೊಳಗಿರಿಸಿ** = ತನ್ನಲ್ಲಿಟ್ಟುಕೊಂಡು, **ಉಳಿದ ಒಂದರ್ಧವ** = ಉಳಿದ ಅರ್ಧಭಾಗವನ್ನು, **ವಿಭಾಗಗೈಸಿ** = ಪುನಃ ವಿಭಾಗ ಮಾಡಿ, **ವೃಜಿನಾರ್ದನನು** = ಪಾಪಪರಿಹಾರಕನಾದ ಶ್ರೀಪರಮಾತ್ಮನು, **ಪೂರ್ವದಲಿ** = ಹಿಂದೆ ಹೇಳಿದ ಪ್ರಕಾರ, **ಸ್ವಾತಂತ್ರ್ಯ ಕೊಟ್ಟಂತೆ** = ದತ್ತ ಸ್ವಾತಂತ್ರ್ಯವನ್ನು ತ್ರಿವಿಧಜೀವರಿಗೆ ಮೂರು ಪ್ರಕಾರ ವಿಭಾಗಿಸಿ ಕೊಟ್ಟ ತೆರನಂತೆ, **ಸ್ವರ್ಧುನೀಪಿತ** = ಗಂಗಾಜನಕನಾದ ಪರಮಾತ್ಮನು, **ಬ್ರಹ್ಮ** = ಬ್ರಹ್ಮದೇವರು, **ವಾಯು** = ವಾಯುದೇವರು, **ಕಪರ್ದಿ** = ರುದ್ರದೇವರು, **ಮೊದಲಾದವರೊಳಿದ್ದು** = ಮೊದಲಾದ ದೇವತೆಗಳಲ್ಲಿ ಬಿಂಬರೂಪನಾಗಿದ್ದು, **ಅವರವರ** = ಆಯಾಯಾ ದೇವತೆಗಳ, **ಸುಖವೃದ್ಧಿಗೋಸುಗ** = ಆನಂದಾಭಿವೃದ್ಧಿಗಾಗಿ, (ಅಂತೆಯೇ ದೈತ್ಯರಿಗೆ ದುಃಖಾಭಿವೃದ್ಧಿಗಾಗಿ), **ಅವರವರ ಯೋಗ್ಯತೆಯನುಸರಿಸಿ** = ಆಯಾಯಾ ಜೀವರ ಸ್ವರೂಪಯೋಗ್ಯತೆಗನುಗುಣವಾಗಿ, **ಕೊಡುವ** = ಸ್ವಾತಂತ್ರ್ಯರೂಪದಿಂದ ಪ್ರವೇಶಿಸಿರುವನು. ॥೨೦॥

# ವ್ಯಾಖ್ಯಾನಗಳು

## ೧. ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ

ಪೂರ್ವೋಕ್ತ ಸಂಗತಿಯನ್ನು ಸಿಂಹಾವಲೋಕನ ನ್ಯಾಯದಿಂದ ಮತ್ತು ಹೇಳತಾರೆ.

ಸರ್ವಸ್ವಾತಂತ್ರ್ಯ ವಿಭಾಗಕ್ಕಾಗಿ ತನ್ನಲ್ಲಿರತಕ್ಕ ದತ್ತಸ್ವಾತಂತ್ರ್ಯ ವಿಭಾಗ ಗುಣಗಳು $132\frac{3}{4}$ರ ಒಳಗೆ ಸ್ವಗತ ಸ್ವಾತಂತ್ರ್ಯ ಗುಣಕ್ಕೆ ಒಂದು ಗುಣ ಹೋಗತಾ ಉಳಿದ $131\frac{3}{4}$ ಗುಣದೊಳಗೆ, ಸರ್ವಸ್ವಾತಂತ್ರ್ಯ ವಿಭಾಗ ಒಂದು ಗುಣ ತೆಗೆದುಕೊಂಡ. ಈ ಒಂದರನ್ನ ಅರ್ಧರ್ಧವಾಗಿ ಎರಡು ಅರ್ಧಗಳು ಮಾಡೋವನಾದ. ಅದರಲ್ಲಿ ಒಂದು ಅರ್ಧ ತೆಗೆದುಕೊಂಡು, ಈ ಅರ್ಧವನ್ನ ಕಾಲು ಕಾಲಾಗಿ ಎರಡು ಭಾಗ ಮಾಡಿ, ಅದರೊಳಗೆ ಒಂದು ಕಾಲುಭಾಗವನ್ನು ತೆಗೆದುಕೊಂಡು, ಅದರನ್ನ ಎರಡು ಅರ ಕಾಲುಗಳಾಗಿ ವಿಭಾಗಮಾಡಿ, ಆ ಎರಡು ಅರಕಾಲುನಾಗೆ ಒಂದು ಅರ ಕಾಲನ್ನು ತೆಗೆದುಕೊಂಡು ಅದರನ್ನ 200 ಭಾಗ ಮಾಡಿ, ಶ್ರೀಪರಮಾತ್ಮ ಪ್ರಥಮತಃ ಹೇಳಿದ ದತ್ತಸ್ವಾತಂತ್ರ್ಯ ತ್ರಿವಿಧಜೀವರಿಗೆ ಮೂರು ಪ್ರಕಾರ ಸ್ವಾತಂತ್ರ್ಯವ ವಿಭಾಗ ಮಾಡಿ, ಬ್ರಹ್ಮಗೆ 52, ವಾಯುದೇವರಿಗೆ 48 ಎಂತಲೂ, ಈ ಪ್ರಕಾರ ಕೊಟ್ಟೋಪಾದಿಯಲ್ಲಿ ಈ ಸರ್ವಸ್ವಾತಂತ್ರ್ಯವೂ ಕೊಟ್ಟು ವಿಭಾಗ ಮಾಡಿದ್ದು ಹೋಗತಾ, ಉಳಿದಿರುವ ಕಾಲೇ ಅರಕಾಲು ಭಾಗವನ್ನ, ವಿಭಾಗಕ್ಕೆ ಬಾರದೇ ನಿಂತಿರುವ ಒಂದು ಅರ್ಧ– ಅಂತೂ ಮುಕ್ಕಾಲೇ ಅರಕಾಲು ಭಾಗವನ್ನ, ತನ್ನೊಳಗೆ 2 ಭಾಗ, ಎಂದರೆ 9 ಆಣೆ

4 ಪೈ, ರಮಾದೇವೇರಲ್ಲಿ ಒಂದು ಭಾಗ, ಎಂದರೆ 4 ಆಣೆ 8 ಪೈ-ಅಂತು ಮುಕ್ಕಾಲೇ ಅರಕಾಲು ಭಾಗವನ್ನ ಇಟ್ಟುಕೊಂಡನು. ಗಂಗಾಪಿತನಾದ ತ್ರಿವಿಕ್ರಮದೇವರು ಬ್ರಹ್ಮದೇವರು, ವಾಯುದೇವರು, ರುದ್ರದೇವರು ಮೊದಲಾದ ದೇವತೆಗಳೊಳು, ಹಾಂಗೆ ದೈತ್ಯರೊಳು ಸ್ವಾತಂತ್ರ್ಯಶಬ್ದ ವಾಚ್ಯನಾಗಿದ್ದು, ಆಯಾ ದೇವತೆಗಳ ಹಾಂಗೂ ದೈತ್ಯರ, ದೇವತೆಗಳಿಗೆ ಸುಖ ಅಭಿವೃದ್ಧಿ– ದೈತ್ಯರಿಗೆ ದುಃಖಅಭಿವೃದ್ಧಿ ಆಗೋದಕ್ಕೋಸ್ಕರವಾಗಿ ಸ್ವಾತಂತ್ರ್ಯರೂಪದಿಂದ ಪ್ರವೇಶಮಾಡಿ, ಆಯಾ ಪ್ರಾಣಿಗಳ ಸ್ವರೂಪ ಯೋಗ್ಯತಾಗಳ ಅರಿತವನಾಗಿ, ದೇವತೆಗಳಿಗೆ ಸುಃಖವೃದ್ಧಿಮಾಡಿ, ಭೋಗಕ್ಕೆ ಕೊಡೋವನಾಗತಾನೆ. ರಮಾದೇವೇರಲ್ಲಿ ಇಡಲ್ಪಟ್ಟ ಸ್ವಾತಂತ್ರ್ಯದಿಂದ ಜಗತ್ಕಾರ್ಯ ನಡೆಸೋದಕ್ಕೆ ಇಟ್ಟುಕೊಂಡಿದ್ದಾನೆ ಎಂತ–ತಾತ್ಪರ್ಯ. ॥೨೦॥

೨. ಭಾವಪ್ರಕಾಶಿಕೆ :–

ಈ ಸಂಧಿಯ 11–12 ನೆಯ ಪದ್ಯಗಳಲ್ಲಿ ಹೇಳಿದ ಪ್ರಕಾರ, ತನ್ನ ಸ್ವಾತಂತ್ರ್ಯದ ಅರ್ಧಾಂಶವನ್ನು ಭಾಗಮಾಡಿ 52, 48, 20, 15, 10, ಈ ಪ್ರಕಾರ ಸ್ವಾತಂತ್ರ್ಯ ಭಾಗಗಳನ್ನು, ಬ್ರಹ್ಮ, ವಾಯು, ರುದ್ರ, ಇಂದ್ರ, ಮೊದಲಾದವರಿಗೆ ಕೊಟ್ಟು, ಆ ಸ್ವಾತಂತ್ರ್ಯದ ತಾರತಮ್ಯ ವನ್ನನುಸರಿಸಿ, ಅವರೊಳಗಿದ್ದು, ಅವರವರ ಯೋಗ್ಯತಾನುಸಾರ ಜ್ಞಾನ ಭಕ್ತಿ ಗಳನ್ನು ಕೊಡಿಸಿ, ಆ ತಾರತಮ್ಯ ಪ್ರಕಾರವೇ ಮುಕ್ತಿಯಲ್ಲಿ ಆನಂದವನ್ನು ಕೊಡಿಸುವನು ಅಂದರೆ ಬ್ರಹ್ಮದೇವರಿಗೆ 52 ಭಾಗ ಸ್ವಾತಂತ್ರ್ಯವಿದ್ದುದ ರಿಂದ ಅವರು ಹೆಚ್ಚಿನ ಸಾಧನೆಯನ್ನು ಮಾಡುವರು. ರುದ್ರದೇವರಿಗೆ 20 ಭಾಗಗಳು, ಇಂದ್ರ ಕಾಮರಿಗೆ 15 ಭಾಗಗಳು ಕೊಟ್ಟ ಪ್ರಯುಕ್ತ, ಆ ತಾರತಮ್ಯ ಪ್ರಕಾರ ಅವರವರ ಸಾಧನವಾಗುವವು. ಇದರಂತೆಯೇ ಸ್ವಾತಂತ್ರ್ಯ ಭಾಗಗಳನ್ನು ಅನುಸರಿಸಿ, ಆನಂದದಲ್ಲೂ ಹೆಚ್ಚು ಕಮ್ಮಿಯಾಗು ವುದು. ಪರಮಾತ್ಮನ ಸ್ವರೂಪದಲ್ಲಿ ಭೇದವಿಲ್ಲದಿದ್ದರೂ, ಸ್ವತಂತ್ರರೂಪ ದಿಂದ ಬ್ರಹ್ಮಾದಿಗಳಲ್ಲಿರುವಾಗ ತೇಜೋವಿಶೇಷದಲ್ಲೂ ಜ್ಞಾನಾದಿಗಳನ್ನು

ಪ್ರದರ್ಶನ ಮಾಡುವುದರಲ್ಲೂ ಹೇಗೆ ದೀಪದಲ್ಲಿ ಒಂದೇ ಬತ್ತಿ ಹಾಕಿದರೆ ಅದಕ್ಕೆ ತಕ್ಕ ಪ್ರಕಾಶವೂ, 10 ಬತ್ತಿಗಳನ್ನು ಹಾಕಿದರೆ ಅದಕ್ಕೆ ತಕ್ಕ ಪ್ರಕಾಶವೂ ಏರ್ಪಡುವುದೋ, ಹಾಗೆಯೇ ಬಲ ಜ್ಞಾನಾದಿಗಳಲ್ಲಿ ತಾರತಮ್ಯ ವನ್ನು ತೋರ್ಪಡಿಸುತ್ತಾ, ಬ್ರಹ್ಮಾದಿಗಳಲ್ಲಿರುವನು. ಅದರಂತೆ ಸಾಧನಗಳನ್ನು ಮಾಡಿಸುವನು. ಸಾಧನಾನುಸಾರ ಆನಂದದಲ್ಲಿ ತಾರತಮ್ಯವನ್ನು ಏರ್ಪಡಿಸಿ, ಅವರವರ ಯೋಗ್ಯತಾನುಸಾರವಾಗಿಯೇ ಸುಖವನ್ನು ಕೊಡಿಸುವನೆಂಬ ತಾತ್ಪರ್ಯ. ॥೨೦॥

### ೩. ಭಾವದರ್ಪಣ :-

ಸ್ವರ್ಧುನಿ = ಗಂಗಾ, ಕಪರ್ದಿ = ರುದ್ರ. ॥೨೦॥

### ೪. ಶ್ರೀವ್ಯಾಸದಾಸ ಸಿದ್ಧಾಂತ ಕೌಮುದೀ :-

"ಪುಣ್ಯಕರ್ಮಾಥವಾ ಪಾಪಂ ಯಜ್ಜೀವಃ ವಿದಧಾತ್ಯಯಮ್ । ಸ್ವಾತಂತ್ರ್ಯ ಮನುಸೃತ್ಯೈವ ತತ್ಫಲೇ ಭಾಗಕಲ್ಪನಮ್" ಇತ್ಯಸ್ಯ ಅಭಿಪ್ರಾಯಂ ಆಹ– 'ಅರ್ಧ' ಇತಿ. ॥೨೦॥

## ಕನ್ನಡಾರ್ಥ

"ಜೀವನು ಪುಣ್ಯಕರ್ಮ ಅಥವಾ ಪಾಪಕರ್ಮಗಳನ್ನೆಲ್ಲ ಆ ಸ್ವಾತಂತ್ರ್ಯ ವನ್ನು ಅನುಸರಿಸಿಯೇ ಮಾಡುತ್ತಾನೆ. ಅದರ ಫಲದಲ್ಲಿಯೂ ಸ್ವಾತಂತ್ರ್ಯದ ಭಾಗವನ್ನು ಹಂಚುತ್ತಾನೆ (ಈಶನು)." ಈ ಅಭಿಪ್ರಾಯವನ್ನು 'ಅರ್ಧ' ಈ ಪದ್ಯದಿಂದ ಹೇಳುತ್ತಾರೆ. ॥೨೦॥

### ೫. ಶ್ರೀ ಗುರುಹೃದಯ ಪ್ರಕಾಶಿಕೆ :-

ಅರ್ಧ ಸ್ವಾತಂತ್ರ್ಯ ಭಾಗವನ್ನು ದೇವರು ತನ್ನಲ್ಲಿಟ್ಟುಕೊಂಡು, ಉಳಿದ ರ್ಧಭಾಗವನ್ನು ಎರಡು ನೂರು ಭಾಗಮಾಡಿ, ವೃಜಿನಾರ್ದನನೆಂಬ ಭಕ್ತರ ಪಾಪ ಪರಿಹಾರಕ ಗಂಗಾಜನಕಸ್ವಾಮಿಯು ಆಯಾಯಾ ಜೀವರ ಸುಖಾದಿ ಸ್ವಭಾವ ಸಾಧನದಿಂದ, ಪೂರ್ಣತ್ವರೂಪ ವೃದ್ಧಿಯಾಗುವುದಕ್ಕೋಸ್ಕರ ಪೂರ್ವದಲ್ಲಿ ಸ್ವಾತಂತ್ರ್ಯವನ್ನು ಕೊಟ್ಟಂತೆ, ಜೀವರ ತತ್ತದ್ಯೋಗ್ಯತೆಯನ್ನು ತಿಳಿದು, ಬ್ರಹ್ಮಾ ವಾಯು ಕರ್ಪದಿ ಎಂಬ ಶಿವ ಮೊದಲಾದವರಲ್ಲಿದ್ದು, ಸರ್ವರ ಸಾಧನೆಯನ್ನು ವ್ಯಕ್ತಿಮಾಡಿಕೊಡುವನು. ॥೨೦॥

## ಸರ್ವವ್ಯಾಖ್ಯಾನಸಾರಸಂಗ್ರಹ

ಪೂರ್ವೋಕ್ತ ಪದ್ಯಗಳಲ್ಲಿ ವಿವರಿಸಿರುವಂತೆ, ಸ್ವಾತಂತ್ರ್ಯವಿಭಾಗ ಕ್ರಮವನ್ನು ಸಂಪುಟಾಕಾರವಾಗಿ ತಿಳಿಸುತ್ತಾರೆ.

ಶ್ರೀಹರಿಯು ತನ್ನ ಅಪಾರ ಸ್ವಾತಂತ್ರ್ಯವೆಂಬ ಗುಣರಾಶಿಯಲ್ಲಿ 400 ಭಾಗತೆಗೆದು, ಅದರಲ್ಲಿ ಅರ್ಧವನ್ನು ತಾನೇ ಇಟ್ಟುಕೊಂಡನು.

ಅದರಲ್ಲಿ ಶ್ರೀ ರಮಾದೇವಿಯರಲ್ಲಿ ಇಟ್ಟಿದ್ದು $= 67\frac{1}{4}$ ಭಾಗ

ತನ್ನಲ್ಲಿ ಇಟ್ಟುಕೊಂಡಿದ್ದು $= 132\frac{3}{4}$ ಭಾಗ

= ಅಲ್ಲಿಗೆ 200 ಭಾಗ ಗಳಾಯಿತು

ಉಳಿದ 200 ಭಾಗಗಳಲ್ಲಿ ವಿಭಾಗಮಾಡಿ, ಬ್ರಹ್ಮರುದ್ರಾದಿಗಳಿಗೆ ಹಂಚಿದನು.

| | | |
|---|---|---|
| 1. | ಬ್ರಹ್ಮನಲ್ಲಿ | = 52 ಭಾಗ |
| 2. | ವಾಯುವಿನಲ್ಲಿ | = 48 ಭಾಗ |
| 3. | ರುದ್ರನಲ್ಲಿ | = 20 ಭಾಗ |
| 4. | ಇಂದ್ರ ಕಾಮರಲ್ಲಿ | = 15 ಭಾಗ |
| 5. | ತತ್ತ್ವದೇವತೆಗಳಲ್ಲಿ | = 10 ಭಾಗ |
| 6. | ಸರ್ವಸುಜೀವರಲ್ಲಿ | = 10 ಭಾಗ |
| 7. | ಕಲ್ಯಾದಿ ದೈತ್ಯರಲ್ಲಿ, ನಿತ್ಯಸಂಸಾರಿಗಳಲ್ಲಿ | = 45 ಭಾಗ |

ಅಲ್ಲಿಗೆ ಉಳಿದ = 200 ಭಾಗಗಳ ಮೊತ್ತವಾಯಿತು.

## ಪದ್ಯ-೨೧

ಮೂಲ:–

ಹಲಧರಾನುಜ ಮಾಳ್ಪ ಕೃತ್ಯವ ।
ತಿಳಿಯದಾಹಂಕಾರದಿಂದೆ ।
ನ್ನಳಿದು ವಿಧಿಯು ನಿಷೇಧಪಾತ್ರರು ಇಲ್ಲ ಎಂಬುವನಿಗೆ ॥

**ಫಲಗಳ ದ್ವಯ ಕೊಡುವ ದೈತ್ಯರಿ ।**
**ಕಲುಷ ಕರ್ಮವ ಬಿಟ್ಟು ಪುಣ್ಯವ ।**
**ಸೆಳೆದು ತನ್ನೊಳಗಿಟ್ಟು ಕ್ರಮದಿಂ ಕೊಡುವ ಭಕ್ತರಿಗೆ ॥**
**॥೨೦॥**

**ಅವತರಣಿಕೆ :-**

ವಿಧಿ ನಿಷೇಧಗಳನ್ನು ಅಹಂಕಾರದಿಂದ ಮದೋನ್ಮತ್ತರಾಗಿ ಕರ್ಮಗಳನ್ನು ಮಾಡುವ ದೈತ್ಯರಿಗೆ ಫಲದ್ವಯಗಳನ್ನು ಕೊಡುತ್ತಾನೆಂದು ತಿಳಿಸುತ್ತಾರೆ. ॥೨೦॥

**ಪ್ರತಿಪದಾರ್ಥ :-**

**ಹಲಧರಾನುಜ** = ಬಲರಾಮನ ತಮ್ಮನಾದ ಶ್ರೀಕೃಷ್ಣನು, **ಮಾಳ್ಪ** = ದೇಹೇಂದ್ರಿಯಗಳಲ್ಲಿ ಬಿಂಬನಾಗಿ ಇದ್ದು ಮಾಡುವ, **ಕೃತ್ಯವ** = ವ್ಯಾಪಾರರೂಪವಾದ ಕರ್ಮಗಳನ್ನು, **ತಿಳಿಯದೆ** = ಅರಿಯದೆ, **ಅಹಂಕಾರದಿಂದ** = ಅಹಂಕರ್ತೃತ್ವಾಭಿಮಾನರೂಪವಾದ ಅಹಂಕಾರದಿಂದ ಯುಕ್ತನಾಗಿ, **ಎನ್ನುಳಿದು** = ತನ್ನನ್ನು ಬಿಟ್ಟು, **ಪಾತ್ರರು** = ಸತ್ಪಾತ್ರರು, **ಇಲ್ಲ ಎಂಬುವನಿಗೆ** = ಇತರರ್ಯಾರೂ ಇಲ್ಲವೆಂದು ಹೇಳುವ ತಮೋಯೋಗ್ಯನಾದ ಜೀವನಿಗೆ, **ವಿಧಿ** = ಶಾಸ್ತ್ರಸಮ್ಮತವಾದ ಪುಣ್ಯ ಕರ್ಮಗಳೇನು, **ನಿಷೇಧ** = ಶಾಸ್ತ್ರದಿಂದ ನಿಷಿದ್ಧವಾದ ಪಾಪಕರ್ಮಗಳೇನು, **ದೈತ್ಯರ** = ತಮೋಯೋಗ್ಯ ಚೇತನರ, **ಕಲುಷ ಕರ್ಮವ** = ದುಷ್ಕರ್ಮಗಳನ್ನು, **ಬಿಟ್ಟು** = ಆ ದೈತ್ಯರಲ್ಲಿಯೇ ಬಿಟ್ಟು, **ಪುಣ್ಯವ ಸೆಳೆದು** = ಅವರಿಂದ ಕೃತ ಪುಣ್ಯಕರ್ಮಗಳ ಫಲಗಳನ್ನು ಅವರಿಂದ ಅಪಹರಿಸಿ, **ತನ್ನೊಳಗಿಟ್ಟು** = ತನ್ನ ಸ್ವಾಧೀನ ಪಡಿಸಿದವನಾಗಿ, **ಭಕ್ತರಿಗೆ** = ನಿಜ ಭಕ್ತಜನರಿಗೆ, **ಕ್ರಮದಿಂ** = ಅವರಿಂದ ಕೃತ ಪಾಪ ಕರ್ಮಗಳ ಜನಿತ ಪಾಪ ಫಲಗಳನ್ನು ಪರಿಹರಿಸಲೋಸುಗ, ದೈತ್ಯರ ಪುಣ್ಯ

ವನ್ನು ಅವರವರ ಯೋಗ್ಯತಾನುಸಾರ, **ಕೊಡುವ** = ಕೊಡುವವನಾಗುತ್ತಾನೆ, **ಫಲಗಳ ದ್ವಯವ ಕೊಡುವ** = ಹೀಗೆ ಪುಣ್ಯ-ಪಾಪ ಕರ್ಮಗಳ ಫಲವನ್ನು ವಿನಿಮಯ ಮಾಡುವನು. ॥೨೧॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ದೈತ್ಯರಿಗೆ ಫಲದ್ವಯಗಳ ಕೊಡತಾನೆ-ಎಂತ ಹೇಳತಾರೆ.

ನೇಗಿಲು ಆಯುಧನಾದ ಬಲರಾಮದೇವರ ತಮ್ಮನಾದ ಶ್ರೀಕೃಷ್ಣ, ದೇಹೇಂದ್ರಿಯಾದಿಗಳಲ್ಲಿ ಬಿಂಬನಾಗಿದ್ದು ಮಾಡತಕ್ಕ ತನ್ನ ಕ್ರಿಯಾದ್ವಾರಾ ಜೀವನಾದವನ ದೇಹೇಂದ್ರಿಯಾದಿಗಳಿಂದ ಮಾಡಸತಕ್ಕ ವ್ಯಾಪಾರರೂಪವಾದ ಕರ್ಮವ ದೇಹಧಾರಿಯಾದ ಜೀವನು, ತಿಳಿಯದೆ ಅಹಂಕಾರದಿಂದ ಯುಕ್ತನಾಗಿ ನನ್ನ ಹೊರತು ಸತ್ಪಾತ್ರರು ಬ್ಯಾರೆ ಇಲ್ಲ, ನಾನೇ ದೇವರು, ನಾನೇ ಸತ್ಪಾತ್ರ, ನನ್ನ ವ್ಯತಿರಿಕ್ತ ಬ್ಯಾರೇ ಇಲ್ಲ ಎಂಬ ತಮೋಯೋಗ್ಯನಾದವನಿಗೆ ಎರಡು ಪ್ರಕಾರವಾದ ದುಃಖಫಲಗಳ ಕೊಡೋವನಾಗತಾನೆ. ಆ ಎರಡು ಫಲಗಳು ದಾವವೆಂದರೆ, ಅಹಂ ಬ್ರಹ್ಮ-ಎಂಬ ದೈತ್ಯರಿಂದ ಮಾಡಲ್ಪಟ್ಟ ಶಾಸ್ತ್ರನಿಷಿದ್ಧವಾದ ಅಹಂ ಬ್ರಹ್ಮ-ಎಂಬ ಪಾಪಕರ್ಮವೇನು, ತದನ್ಯವಾದ ಇತರ ಪಾಪಕರ್ಮಗಳೇನು-ಈ ಉಭಯ ಕರ್ಮಸಮೂಹವ ಅವರಲ್ಲೇ ಬಿಟ್ಟು, ಭಗವದ್ಭಕ್ತರು ಮಾಡಿದ ಪಾಪಕರ್ಮಗಳನ್ನು ಅವರಲ್ಲಿ ಇದ್ದದ್ದರನ್ನ ತೆಗೆದು, ಅದರನ್ನ ದೈತ್ಯರಲ್ಲಿ ಇಟ್ಟು, ಅಂತು ಎರಡು, ಎರಡು ಪ್ರಕಾರ ದುಃಖಗಳ ಕೊಡುವನು. ಅನಾದಿ ಕರ್ಮವನನುಸರಿಸಿ, ಶಾಸ್ತ್ರವಿಧಿಯನ್ನು ಅನುಸರಿಸಿ, ದೈತ್ಯರು ಮಾಡಿದ ಪುಣ್ಯ ಫಲಗಳನ್ನು ತೆಗೆದುಕೊಂಡು ತನ್ನ ಸ್ವಾಧೀನದಲ್ಲಿಟ್ಟುಕೊಂಡವನಾಗಿ, ತನ್ನ ಭಕ್ತರಿಗೆ ದಾರದಾರಿಗೆ ಎಷ್ಟೆಷ್ಟು ವಿಭಾಗ ಮಾಡಿಕೊಡಬೇಕೋ ಅವರವರ ಯೋಗ್ಯತಾತಾರತಮ್ಯಾನುಸಾರ

ಕೊಡತಾನೆ. ಭಕ್ತರು ತಾವು ಮಾಡಿದ ಪುಣ್ಯ ಒಂದು, ದೈತ್ಯರ ಪುಣ್ಯ ಒಂದು ಅಂತು ಎರಡು, ಎರಡಕ್ಕೂ ಎರಡು ಪ್ರಕಾರ ಸುಖಫಲಗಳ ಕೊಡ ತಾನೆ. ಮುಕ್ತಿಯೋಗ್ಯರಾದ ಕಾಲಕ್ಕೂ ಅಹಂಮಮತಾದಿಗಳಿಂದ ಮಾಡಿದ ಸತ್ಕಾರ್ಯವನ್ನ ಅದರಿಗೆ ಸರ್ಪಪಮಾತ್ರ ನಿಲ್ಲಿಸಿ, ಉಳದದ್ದು ಪರಮಾತ್ಮ ಅಪ ಹರಿಸಿ, ಬಿಂಬಕ್ರಿಯಾನುಸಂಧಾನ ಉಳ್ಳವರಿಗೆ ಸೇರಿಸಿ, ಅವರ ಪಾಪಗಳ ದೈತ್ಯರಿಗೆ ಕೊಡತಾನೆ.

ಪ್ರಮಾಣ :-

**ಯೇ ಸ್ಯುರ್ವಿಧಿನಿಷೇದೇಭ್ಯೋ ಬಹಿರ್ಭೂತಾಃ ಸುರಾದಯಃ ।**
**ತೇಷಾಂ ಸುಖಸ್ಯ ಭೋಕ್ತಾರೋ ವಿಷ್ಣ್ವಾದ್ಯಾ ಭಾಗಶೋಖಿಳಾಃ॥**

**ದೈತ್ಯಾನಾಂ ತತ್ರ ನೈವಾಸ್ತಿ ಪುಣ್ಯಕರ್ಮವಿಭಾಗಕಃ ।**
**ಪುಣ್ಯಭಾಗಂ ಹರತ್ಯೇಷಾಂ ಸ್ವಯಮೇವ ಜನಾರ್ದನಃ ॥ ॥೨೦॥**

೨. ಭಾವಪ್ರಕಾಶಿಕೆ :-

ಶ್ರೀಪರಮಾತ್ಮನು ನಮ್ಮೊಳಗಿದ್ದು, ಪುಣ್ಯಪಾಪಾದಿ ಕರ್ಮಗಳನ್ನು ಮಾಡಿಸುವುದನ್ನು ತಿಳಿಯದೆ, ಅಹಂಕಾರದಿಂದ ವಿಧಿ ನಿಷೇಧಕಾರ್ಯಗಳನ್ನು ನಾನೇ ಮಾಡುವೆನು; ಪುಣ್ಯ ಮಾಡುವವನೂ, ಪಾಪ ಮಾಡುವವನೂ ನಾನೇ-ಎಂದು ಹೇಳುವವನಿಗೆ ಪರಮಾತ್ಮನು, ಅಂತಹವನು ಮಾಡಿದ ಪಾಪಕರ್ಮದ ಫಲವನ್ನು ಅವನಿಗೇ ಕೊಡುವದಲ್ಲದೆ, ಭಕ್ತರು ಮಾಡುವ ಪಾಪ ಕರ್ಮದ ಫಲವನ್ನೂ ಅವನಿಗೆ ಕೊಡುವನು. ದೈತ್ಯರು ಮಾಡಿದ ಪಾಪಕರ್ಮಗಳನ್ನು ದೈತ್ಯರಲ್ಲೇ ಉಳಿಸಿ, ಅವರು ಮಾಡಿದ ಪುಣ್ಯಕರ್ಮ ಗಳನ್ನು ತಾನು ತೆಗೆದು ತನ್ನೊಳಗಿಟ್ಟುಕೊಂಡು, ಭಕ್ತರಿಗೆ ಕ್ರಮಕ್ರಮವಾಗಿ ಹಂಚಿಕೊಡುವನು. ॥೨೦॥

## ೩. ಭಾವದರ್ಪಣ :–

ಸತ್ಯಸಂಕಲ್ಪನಾದ ಶ್ರೀಹರಿ ಜೀವರ ಕರ್ಮಾನುಸರಿಸಿ ತಾನು ಕರ್ಮ ಮಾಡಿಸಿದ ಕಾರಣ ಆ ವಿಧಿ ನಿಷೇಧಕ್ಕೆ ನಾವು ಪಾತ್ರರಲ್ಲ ಎಂದವರಿಗೆ ಇಂಥ ಫಲ ಆಗತದೆಂದು ಹೇಳುತ್ತಾರೆ. ಹಲಧರಾನುಜ = ಶ್ರೀಕೃಷ್ಣ. ॥೨೧॥

## ೪. ಶ್ರೀ ವ್ಯಾಸದಾಸ ಸಿದ್ಧಾಂತ ಕೌಮುದೀ :–

"ಅಹಂಕಾರ ಸಮಾವಿಷ್ಟಃ ಸರ್ವಕರ್ತೇತಿ ಮನ್ಯತೇ ॥ ಅಜ್ಞಾನೇನ ವಿಮೂಢಾತ್ಮಾ ನ ಜಾನಾತಿ ಪರಾತ್ಮತಾಮ್ ॥ ವಿಧೀನಾಂ ಚ ನಿಷೇಧಾನಂ ಪಾತ್ರಂ ತಸ್ಮಾದಯಂ ಸ್ಮೃತಃ ॥ ಇತ್ಯೇತದಾಹ– 'ಹಲ' ಇತಿ ॥ 'ಫಲ' ಇತಿ ॥ ತತ್ತ್ರಪುಣ್ಯಫಲಂ ಸ್ವೇ ಸಂಸ್ಥಾಪ್ಯ ಭಕ್ತೇಭ್ಯಃ ಪಾಪ ಫಲಂ ತೇಷಾಂ ಇತಿ ಫಲದ್ವಯಮ್ ॥ ದೈತ್ಯಾನಾಂ ತತ್ರ ನೈವಾಸ್ತಿ ಪುಣ್ಯಕರ್ಮ ವಿಭಾಗತಃ ॥ ಪುಣ್ಯಭಾಗಂ ಹರತ್ಯೇಷಾಂ ಸ್ವಯಮೇವ ಜನಾರ್ದನಃ ॥ ಬ್ರಹ್ಮಾದಿಕೇಷು ಪುಣ್ಯಸ್ಯ ಯಥಾಭಾಗಂ ಭವೇತ್ ಫಲಂ. ॥೨೧॥

### ಕನ್ನಡಾರ್ಥ

"ಅಹಂಕಾರಾವೇಶದಿಂದ ತನ್ನನ್ನು (ಜೀವನು) ಸರ್ವಕರ್ತನೆಂದು ತಿಳಿದುಕೊಳ್ಳುತ್ತಾನೆ. ಅಜ್ಞಾನದಿಂದ ಬುದ್ಧಿ ಮೋಹವನ್ನು ಹೊಂದಿ, ಸರ್ವೋತ್ತಮನಾದ ಹರಿಯನ್ನು ಮರೆತು ಬಿಡುತ್ತಾನೆ. ಅದರಿಂದ ವಿಧಿ ನಿಷೇಧಗಳಲ್ಲಿ ಸಿಲುಕುತ್ತಾನೆ" ಈ ಅಭಿಪ್ರಾಯವನ್ನು –"ಹಲಧರಾನುಜ"– ಈ ಪದ್ಯದಿಂದ ಹೇಳುತ್ತಾರೆ.

ಆಯಾ ಪುಣ್ಯಕರ್ಮಗಳಿಂದ ಆಗುವ ಪುಣ್ಯರೂಪಫಲ. ಪಾಪ ಕರ್ಮಗಳಿಂದ ಆಗುವ ಪಾಪರೂಪ ಫಲ- ಹೀಗೆ ಎರಡು ಫಲ. ಇವುಗಳಲ್ಲಿ ಭಕ್ತರಲ್ಲಿ ಪುಣ್ಯಫಲವನ್ನು ಇಡುತ್ತಾನೆ. ದೈತ್ಯರಲ್ಲಿ ಪುಣ್ಯಭಾಗವನ್ನು ಹಂಚುವುದಿಲ್ಲ. ಅವರ ಪುಣ್ಯಭಾಗವನ್ನು ಹರಿಯು ಅಪಹರಿಸುತ್ತಾನೆ.

ಅದನ್ನು ಯಥಾಯೋಗ್ಯವಾಗಿ ಭಾಗಿಸಿ, ಬ್ರಹ್ಮಾದಿಗಳಲ್ಲಿ ಕೊಡುತ್ತಾನೆ." ಹೀಗೆ ಹೇಳಿದ ಅಭಿಪ್ರಾಯವನ್ನು –ಈ ಪದ್ಯದಲ್ಲಿ ತಿಳಿಯಬೇಕು. ॥೨೦॥

## ೫. ಶ್ರೀ ಗುರುಹೃದಯ ಪ್ರಕಾಶಿಕೆ :–

ಹಲಧರನೆಂಬ ಬಲರಾಮನ ತಮ್ಮ ಶ್ರೀಕೃಷ್ಣನು ಸರ್ವರಲ್ಲಿಯೂ ವ್ಯಾಪ್ತನಾಗಿದ್ದು, ತತ್ತತ್ಕ್ರಿಯದ ವ್ಯಕ್ತಿ ಮಾಡುವುದನ್ನು ತಿಳಿಯದೆ, ಅಹಂಕಾರದಿಂದ ನನ್ನನ್ನು ಬಿಟ್ಟು ವಿಧಿ ನಿಷೇಧ ಪಾತ್ರರು ಇಲ್ಲವೆಂಬುವನಿಗೆ, ಅಂದರೆ, ದೇಹ ಬಂದಿರುವ ಮಾತ್ರಕ್ಕೆ ತಾನೇ ಸ್ವತಂತ್ರನೆಂದು ಅಹಂಕಾರ ಪಡುತ್ತಾ, ವಿಧಿ ಎಂಬ ನ್ಯಾಯವೂ, ನಿಷೇಧವೆಂಬ ಅನ್ಯಾಯವೂ ಪಾತ್ರನೆಂಬ ನ್ಯಾಯಾನ್ಯಾಯಾ ಹೊಂದುವ ಜೀವರೂ ಸಹ ಇಲ್ಲವೆಂಬ ಚಾರ್ವಾಕನಿಗೆ ಪಾಪಫಲಗಳೆಂಬ ದುಃಖಗಳನ್ನು, ದ್ವಯ ಅಂದರೆ, ಇಹ ಪರದಲ್ಲಿಯೂ ಕೊಡುವನು. ಆ ದೈತ್ಯರ ಕಲುಷವೆಂಬ ಪಾಪಕರ್ಮವನ್ನು ಅವರಲ್ಲೇ ಬಿಟ್ಟು, ಅವರು ಮಾಡಿದ ಪುಣ್ಯವನ್ನು ಸೆಳೆದು, ತನ್ನಲ್ಲಿಟ್ಟುಕೊಂಡು, ತಾರತಮ್ಯಕ್ರಮದಿಂದ ಯೋಗ್ಯರಾದ ಭಕ್ತರಿಗೆ ಕೊಡುವನು. ॥೨೦॥

**ಯೇ ಸ್ಯುರ್ವಿಧಿ ನಿಷೇಧೇಭ್ಯೋ ಬಹಿರ್ಭೂತಾಸ್ಸುರಾದಯಃ ।**
**ಏಷಾಂ ಸುಖಸ್ಯ ಭೋಕ್ತಾರೋ ವಿಷ್ಣ್ವಾದ್ಯಾ ಭಾಗಶೋಽಖಿಲಾಃ ॥**

**ದೈತ್ಯಾನಾಂ ತತ್ರ ನೈವಾಸ್ತಿ ಪುಣ್ಯಕರ್ಮ ವಿಭಾಗತಃ ।**
**ಪುಣ್ಯಂ ಭಾಗಂ ಹರತ್ಯೇಷಾಂ ಸ್ವಯಮೇವ ಜನಾರ್ದನಃ ॥**

ಎಂಬರ್ಥವು ವಿವರಿಸಲ್ಪಟ್ಟಿತು. ॥೨೦॥

# ಸರ್ವವ್ಯಾಖ್ಯಾನಸಾರಸಂಗ್ರಹ

ನೇಗಿಲನ್ನು ಆಯುಧವನ್ನಾಗಿ ಉಳ್ಳ ಬಲರಾಮನು ಹಲಧರನು. ಅವನ ತಮ್ಮನೇ ಶ್ರೀಕೃಷ್ಣನು. ಆ ಹಲಾಧರಾನುಜನು ನಮ್ಮಲ್ಲಿ ಬಿಂಬ

ನಾಗಿದ್ದು, ದೇಹಗತ ಸಕಲೇಂದ್ರಿಯಗಳಲ್ಲಿ ವ್ಯಾಪ್ತನಾಗಿದ್ದಾನೆ. ಆ ಇಂದ್ರಿಯಗಳ ದ್ವಾರಾ. ಜೀವರ ಸ್ವರೂಪಯೋಗ್ಯತೆ ಹಾಗೂ ಅನಾದಿ ಕರ್ಮವನ್ನನುಸರಿಸಿ, ಸರ್ವ ಶುಭ, ಮಿಶ್ರ, ಅಶುಭಕಾರ್ಯಗಳನ್ನು ಬಿಂಬಕ್ರಿಯಾದ್ವಾರಾ ತಾನೇ ಮಾಡಿ, ಇಂದ್ರಿಯಾಭಿಮಾನಿ ದೇವ ದೈತ್ಯರ ದ್ವಾರಾ ಮಾಡಿಸಿ, ಇಂದ್ರಿಯಗಳಲ್ಲಿ ಪ್ರಕಾಶತೋವ್ಯಾಪ್ತನಾದ ಜೀವನ ದ್ವಾರಾ ಮಾಡಿ ಮಾಡಿಸುತ್ತಾನೆ.

ಈ ಕರ್ಮದ ಮರ್ಮವನ್ನರಿಯದೇ, ಅಹಂಕರ್ತೃತ್ವಭಾವದಿಂದ ಸರ್ವಕರ್ಮಗಳಿಗೂ ನಾನೇ ಕರ್ತನು-ಎಂಬ ದುರಂಹಕಾರದಿಂದ ಮಾಡುವ ಸರ್ವಕರ್ಮಗಳ ಫಲಗಳನ್ನು ಜಗದ್ವಿಲಕ್ಷಣನಾದ ಜಗದೀಶನು ಎರಡು ಪ್ರಕಾರವಾಗಿ ವಿನಿಮಯ ಮಾಡುವನು. ಈ ಅಭಿಪ್ರಾಯವನ್ನೇ ದಾಸ ರಾಯರು "ಫಲಗಳ ದ್ವಯವ ಕೊಡುವ" –ಎಂದಿದ್ದಾರೆ.

ಶಾಸ್ತ್ರಸಮ್ಮತವಾದ ವಿಧಿ ಎಂಬ ಪುಣ್ಯಕರ್ಮಗಳು, ಶಾಸ್ತ್ರದಲ್ಲಿ ನಿಷೇಧಿಸಲ್ಪಟ್ಟಿರುವ ನಿಷೇಧರೂಪವಾದ ಪಾಪಕರ್ಮಗಳು– ಇಂತು. ದ್ವಂದ್ವಕರ್ಮಗಳನ್ನು ನಾನೇ ಮಾಡುತ್ತೇನೆ, ನಾನೇ ಸ್ವತಂತ್ರನು, ನಾನೇ ಬ್ರಹ್ಮಸ್ವರೂಪಿ–ಎಂಬ ದುರಂಹಕಾರ ಭಾವನೆಯಿಂದ ಯುಕ್ತರಾದ ಜೀವರ –ದುಷ್ಕರ್ಮಗಳ ಫಲರೂಪವಾದ ಪಾಪ ಫಲಗಳನ್ನು ಅವರಲ್ಲಿಯೇ ಬಿಡು ತ್ತಾನೆ.

ಅಜ್ಞಾನವಶದಿಂದಲಾಗಲೀ, ಕಲಿಯ ಬಾಧೆಯಿಂದಲಾಗಲೀ, ಮುಕ್ತಿ ಯೋಗ್ಯಚೇತನರು ಪ್ರಾಸಂಗಿಕವಾಗಿ ಮಾಡುವ ಪಾಪಕರ್ಮಗಳ ಫಲವನ್ನು ಅವರಿಂದ ತೆಗೆದು, ದೈತ್ಯರಲ್ಲಿ ವರ್ಗಾಯಿಸಿ ವಿನಿಮಯ ಮಾಡುವನು. ತಮೋಯೋಗ್ಯರಿಗೆ ಸಲ್ಲದ ಅವರ ಪುಣ್ಯಕರ್ಮಗಳ ಫಲವನ್ನು ಅವರಿಂದ ಅಪಹರಿಸಿ, ನಿಜಭಕ್ತರಿಗೆ ಕೊಡುವನು. ಈ ರೀತಿಯ ಕರ್ಮಫಲಗಳ ವಿನಿಮಯವೇ ಕರ್ಮಫಲದ್ವಯ.

ಪಾಪಕರ್ಮಗಳ ಫಲಾನುಭವವು ಸತ್ತ್ವಜೀವರ ಸ್ವರೂಪಲಕ್ಷಣ ದಲ್ಲಿಲ್ಲ. ಪುಣ್ಯಕರ್ಮಗಳ ಫಲಾನುಭೋಗವು ತಮೋಯೋಗ್ಯರಿಗೆ ಸಲ್ಲುವುದಿಲ್ಲ. ಜೀವರ ಸ್ವರೂಪಲಕ್ಷಣವು ಅನಾದಿ ಹಾಗೂ ನಿತ್ಯವಾದ್ದರಿಂದ, ಅದಕ್ಕನುಗುಣವಾದ ಫಲವನ್ನು ಕೊಡುವುದರಿಂದ, ಸರ್ವಕರ್ಮಪ್ರೇರಕನಾದ ಆ ಸರ್ವೇಶನಿಗೆ ವೈಷಮ್ಯ, ನೈರ್ಘೃಣ್ಯಾದಿ ದೋಷಗಳು ಉಂಟಾಗುವುದಿಲ್ಲ. ॥೨೧॥

## ಪದ್ಯ-೨೨

**ಮೂಲ :–**

**ತೋಯಜಾಪ್ತನ ಕಿರಣ:ವೃಕ್ಷ ।**
**ಚ್ಛಾಯ ವರ್ತಿಸುವಂತೆ ಕಮಲದ ।**
**ಳಾಯತಾಕ್ಷನು ಸರ್ವರೊಳು ವ್ಯಾಪಿಸಿದ ಕಾರಣದಿ ॥**
**ಹೇಯ ಸದ್ಗುಣ ಕರ್ಮ ತೋರ್ಪವು ।**
**ನ್ಯಾಯ ಕೋವಿದರಿಗೆ ನಿರಂತರ ।**
**ಶ್ರೀಯರಸ ಸರ್ವೋತ್ತಮೋತ್ತಮನೆಂದು ಪೇಳುವರು ॥ ॥೨೨॥**

**ಅವತರಣಿಕೆ :–**

ಭಗವದ್ಭಕ್ತರು ಶ್ರೀಹರಿಯೇ ಸರ್ವೋತ್ತಮನೆಂತಲೂ, ಬಿಂಬಕ್ರಿಯಾ ದ್ವಾರಾ ಜೀವರ ಸರ್ವಕಾರ್ಯಗಳೂ ನಡೆಯುತ್ತವೆ– ಎಂದು ತಿಳಿದಿರುತ್ತಾರೆಂದು ಹೇಳುತ್ತಾರೆ. ॥೨೨॥

**ಪ್ರತಿಪದಾರ್ಥ :-**

**ತೋಯಜಾಪ್ತನ ಕಿರಣ** = ಕಮಲಮಿತ್ರನಾದ ಸೂರ್ಯನ ಕಿರಣಗಳ ದೆಸೆಯಿಂದ, **ವೃಕ್ಷಚ್ಛಾಯ** = ಮರದ ನೆರಳು, **ವರ್ತಿಸುವಂತೆ** = ಅನುಸರಿಸಿ, ಬದಲಾಗುವಂತೆ, **ಕಮಲದಳಾಯತಾಕ್ಷನು** = ಕಮಲದ ದಳಗಳಂತೆ ವಿಸ್ತಾರವಾದ ನೇತ್ರಗಳುಳ್ಳ ಶ್ರೀಪರಮಾತ್ಮನು, **ಸರ್ವರೊಳು** = ಬ್ರಹ್ಮಾದಿ ತೃಣಾಂತ ಸಮಸ್ತ ತ್ರಿವಿಧಜೀವರಲ್ಲಿ, **ವ್ಯಾಪಿಸಿದಕಾರಣದಿ** = ಪರಿಪೂರ್ಣನಾಗಿ ತುಂಬಿರುವುದರಿಂದ, **ಹೇಯ** = ದುರ್ಗುಣ, **ಸದ್ಗುಣ** = ಸದ್ಗುಣ, **ಕರ್ಮ ತೋರ್ಪವು** = ಸಕಲ ಕ್ರಿಯಾದಿಗಳೂ ಅಭಿವ್ಯಕ್ತವಾಗಿ ಗೋಚರವಾಗುವುವು. **ನ್ಯಾಯ** = ಸಕಲ ಕ್ರಿಯೆಗಳೂ ಬಿಂಬಾಧೀನ, ಬಿಂಬಕ್ರಿಯಾದ್ವಾರಾ ಪ್ರವರ್ತಿತವಾಗಿ ಪ್ರತಿಬಿಂಬಭೂತರಾದ ಜೀವರ ದ್ವಾರಾ ಕ್ರಿಯಾಭಿವ್ಯಕ್ತಿ- ಎಂಬ ಬಿಂಬಕ್ರಿಯಾಜ್ಞಾನಾನುಸಂಧಾನವುಳ್ಳ, **ಕೋವಿದರಿಗೆ** = ಬ್ರಹ್ಮಜ್ಞಾನಿಗಳಿಗೆ, **ನಿರಂತರ** = ಅನಾದ್ಯನಂತಕಾಲಕ್ಕೂ **ಶ್ರೀಯರಸ** = ಇಂದಿರಾಪತಿಯಾದ ಶ್ರೀಹರಿಯು, **ಸರ್ವೋತ್ತಮ** = ಸಕಲ ಜೀವರುಗಳಿಂದ ಉತ್ತಮರಾದ ಬ್ರಹ್ಮದೇವರು ಅವರಿಗಿಂತ ಉತ್ತಮರಾದ ಶ್ರೀಲಕ್ಷ್ಮೀದೇವಿ, **ಉತ್ತಮನೆಂದು** = ಇವರುಗಳಿಗಿಂತ ಅನಂತ ಕೋಟಿ ಗುಣಗಳಿಂದ ಉತ್ತಮೋತ್ತಮನೆಂದು, **ಪೇಳುವರು** = ನ್ಯಾಯಕೋವಿದರಾದ ಭಗವದ್ಭಕ್ತರು ತಿಳಿದು, ಕೊಂಡಾಡುತ್ತಾರೆ. ॥೨೨॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ:-

ಭಗವದ್ಭಕ್ತರು ಪರಮಾತ್ಮ ಸರ್ವೋತ್ತಮ ಎಂತಲೂ, ಬಿಂಬಕ್ರಿಯಾದ್ವಾರಾ ಪ್ರತಿಬಿಂಬಕ್ರಿಯಾ ನಡಿಯುತದೆ-ಎಂತಲೂ ಹೇಳತಾರೆಂತ ಹೇಳತಾರೆ.

ಉದಕದಲ್ಲಿ ಜನಿತ ಕಮಲಗಳಿಗೆ ಸ್ನೇಹಿತನಾದ ಸೂರ್ಯನ ಕಿರಣಗಳ ದೆಸೆಯಿಂದ ನಾನಾ ವಿಧಗಳಾದ ವೃಕ್ಷಗಳ ನೆರಳುಗಳು ಹ್ಯಾಂಗೆ ತಿರಗತವೋ, ಹಾಂಗೆ, ವೃಕ್ಷಸದೃಶ ಜೀವರು, ಛಾಯಾ ಸದೃಶ ಜೀವರ ಅನಾದಿಭೂತ ಸ್ವಾತಂತ್ರ್ಯ; ಆ ಛಾಯಾ, ಕಾಲಭೇದದಿಂದ ಸ್ಥಾನಭೇದಗಳಲ್ಲಿ ಸಂಚರಿಸಿದಂತೆ, ಜೀವರ ಸ್ವರೂಪಭೂತಸ್ವಾತಂತ್ರ್ಯದಿಂದ ದೇಹೇಂದ್ರಿಯಾದಿಗಳಿಂದ ಮಾಡತಕ್ಕ ವ್ಯಾಪಾರ, ಪುಂಡರೀಕಾಕ್ಷಣನಾದ ಪರಮಾತ್ಮನೆಂಬೋ ಸೂರ್ಯ, ಸರ್ವವೃಕ್ಷ ಸದೃಶರಾದ ಬ್ರಹ್ಮಾದಿ ತೃಣಾಂತ ತ್ರಿವಿಧರಾದ ಸರ್ವ ಪ್ರಾಣಿಗಳೊಳಗೆ ಛಾಯಾ ಸದೃಶವಾಗಿ ಇರುವ ಸ್ವರೂಪಭೂತ ಸ್ವಾತಂತ್ರ್ಯ ಸೂರ್ಯನಕಿರಣಗಳು ಛಾಯಾವನ್ನ ವ್ಯಾಪಿಸಿದ ಕಾರಣದಿಂದ ಛಾಯಾಕ್ಕೆ ಹ್ಯಾಂಗೆ ಪ್ರವೃತ್ತಿ ಉಂಟಾಯಿತೋ, ತದ್ವತ್ ಪರಮಾತ್ಮನೆಂಬ ಸೂರ್ಯನ ಕಿರಣಗಳಿಗೆ ಸದೃಶವಾದ ಪರಮಾತ್ಮನ ಸ್ವಾತಂತ್ರ್ಯ ಛಾಯಾಸದೃಶರಾದ ಜೀವರ ಸ್ವರೂಪಭೂತ ಸ್ವಾತಂತ್ರ್ಯದಲ್ಲಿ ವ್ಯಾಪಿಸಿದ ಕಾರಣದಿಂದ, ವೃಕ್ಷ ಛಾಯಾವತ್ ಛಾಯಾ ಸದೃಶವಾದ ಜೀವರ ಸ್ವಾತಂತ್ರ್ಯಕ್ಕೆ ಪ್ರವೃತ್ತಿ ಉಂಟಾಯಿತು. ತತ್ಪೂರ್ವಕದಲ್ಲಿ ವೃಕ್ಷ ಛಾಯಾಕ್ಕೆ ವ್ಯಕ್ತಿವಿಲ್ಲದೇ ದಾವಾ ರೀತ್ಯಾ ಇತ್ತೋ, ಅದೇ ರೀತ್ಯಾ,ಛಾಯಾ ಸದೃಶವಾದ ಜೀವನ ಸ್ವಾತಂತ್ರ್ಯ ಅನಭಿವ್ಯಕ್ತವಾಗಿತ್ತು. ಸೂರ್ಯನಕಿರಣಗಳು ಹ್ಯಾಂಗೆ ಹ್ಯಾಂಗೆ ಚಲಿಸಿದರೆ ಅದರಂತೆ ಜೀವರ ಸ್ವಾತಂತ್ರ್ಯ ಚಲಿಸತದೆ. ಈ ರೀತ್ಯಾ ಬಿಂಬಕ್ರಿಯಾ ದ್ವಾರಾ ದೇಹೇಂದ್ರಿಯಾದಿಗಳಿಂದ ಕರ್ಮವ್ಯಾಪಾರಗಳು ನಡಿಯೋವಾಗತವೆ. ಕೆಟ್ಟ ಗುಣಗಳುಳ್ಳ ತಮೋಯೋಗ್ಯರು, ತಥಾ ನಿತ್ಯಸಂಸಾರಿಗಳು, ಸತ್ವ ಗುಣವುಳ್ಳ ಮುಕ್ತಿಯೋಗ್ಯರು-ಈ ಉಭಯರಲ್ಲಿ ಬಿಂಬಕ್ರಿಯಾದ್ವಾರಾ ಪ್ರತಿಬಿಂಬಕ್ರಿಯಾ ನಡೆದು, ತದ್ವಾರಾ ದೇಹೇಂದ್ರಿಯಾದಿಗಳಿಂದ ದ್ವಂದ್ವಕರ್ಮಗಳು ತೋರೋವಾಗತವೆ. ಬಿಂಬಕ್ರಿಯಾ ಇವನ ಕಣ್ಣಿಗೆ ಕಾಣದಿರುವುದರಿಂದ ಸರ್ವಕರ್ಮವೂ ತಾನೇ ಮಾಡಿದಂತೆ ತೋರತದೆ. ಸದಾ ಸರ್ವಕಾಲವೂ ಸಚ್ಛಾಸ್ತ್ರಾಭಿಜ್ಞರಾದ ಭಗವದ್ಭಕ್ತರಿಗೆ ನ್ಯಾಯವಾದ ಬಿಂಬಕ್ರಿಯಾದ್ವಾರಾ ಪ್ರತಿಬಿಂಬಕ್ರಿಯಾ ಎಂಬ-ಅನುಸಂಧಾನ ದೃಢವಾಗಿ ಇದ್ದು,ಅದರಂತೆ ಆಚರಣೆಯು ಇರತದೆ. ರಮಾಪತಿಯಾದ ಶ್ರೀಪರಮಾತ್ಮನು ಅಸ್ವತಂತ್ರ ಚೇತನರಾದ

ಬ್ರಹ್ಮಾದಿ ಸರ್ವದೇವತೆಗಳಿಗಿಂತಲೂ ಉತ್ತಮರಾದ ರಮಾದೇವೇರು, ಇವರಿಗಿಂತ ಬಿಂಬನಾದ ಶ್ರೀಪರಮಾತ್ಮ ಉತ್ತಮನೆಂದು ಭಕ್ತರಾದವರು ಹೇಳತಾರೆ. ದೈತ್ಯರು ಹೀಂಗೆ ಹೇಳೋದಿಲ್ಲ. ಅವರವರ ಸ್ವಭಾವ ಅಂಥಾದ್ದೇ. ತ್ರಿವಿಧ ಜೀವರಿಗೂ ಸ್ಥಿತಿಕಾಲದಲ್ಲೂ ಮೋಕ್ಷಾನಂತರದಲ್ಲೂ ಬಿಂಬಕ್ರಿಯಾ ಹೊರ್ತು ಪ್ರತಿಬಿಂಬರಾದ ಜೀವರಿಗೆ ಪೃಥಕ್ಕಾಗಿ ಕ್ರಿಯಾ ವಿಲ್ಲವೆಂತ ತಾತ್ಪರ್ಯ. ॥೨೨॥

೨. ಭಾವಪ್ರಕಾಶಿಕೆ :-

ಸೂರ್ಯನು ಪ್ರಕಾಶಿಸುತ್ತಿದ್ದರೆ, ಮರದನೆರಳು ಕಾಣುವಂತೆ, ಪರಮಾತ್ಮನು ಸರ್ವತ್ರವ್ಯಾಪ್ತನಾಗಿರುವುದರಿಂದಲೇ, ಜೀವನ ಪುಣ್ಯ ಪಾಪಾದಿ ಕರ್ಮಗಳು ಕಂಡು ಬರುವುವು. ಆದ್ದರಿಂದಲೇ ಜ್ಞಾನಿಗಳು ಇಂತಹ ಶ್ರೀ ಲಕ್ಷ್ಮೀಪತಿಯೇ ಬ್ರಹ್ಮದೇವರು ಮೊದಲಾದ ಸಕಲ ದೇವತೆಗಳಿಗೂ ಉತ್ತಮನೆಂದು ಹೇಳುವರು. ॥೨೨॥

೩. ಭಾವದರ್ಪಣ :-

ತೋಯಜಾಪ್ತ = ಸೂರ್ಯ. ॥೨೨॥

೪. ಶ್ರೀವ್ಯಾಸದಾಸ ಸಿದ್ಧಾಂತ ಕೌಮುದೀ :-

"ಯಥೈವ ಸೂರ್ಯಾತ್ ಪ್ರಭವಂತಿ ಗಾವಃ ಪುನಶ್ಚ ತಸ್ಮಿನ್ ಪ್ರವಿಶಂತಿ" ಇತ್ಯುಕ್ತ– ಮಾಹ–"ತೋಯ" ಇತಿ । "ಹೇಯ" – ಕರ್ಮ ॥ "ಸದ್ಗುಣ" ತತ್ಫಲದ. ಯದ್‌ಹರ್ಯಪ್ರಿಯಮ್ ತದ್ ಹೇಯಂ ॥ ಯದ್ ಪ್ರಿಯಂ ಸ ಗುಣಃ" ಇತ್ಯರ್ಥಃ ॥೨೨॥

## ಕನ್ನಡಾರ್ಥ

"ಸೂರ್ಯನಿಂದ ಹೊರಟ ಕಿರಣಗಳು ತಿರುಗಿ ಸೂರ್ಯನಲ್ಲಿಯೇ ಸೇರುವಂತೆ"– ಎಂಬ ದೃಷ್ಟಾಂತದಿಂದ ಹೇಳಿದ ಸಂಗತಿಯನ್ನು– "ತೋಯಜಾಕ್ಷನು" ಈ ಪದ್ಯದಿಂದ ಹೇಳುತ್ತಾರೆ. ಯಾವುದು ಹರಿಗೆ ಪ್ರೀತ್ಯಾಸ್ಪದವಲ್ಲವೋ ಅದು "ಹೇಯ" ವೆನಿಸುತ್ತದೆ. ಯಾವುದು ಹರಿಯ ಪ್ರೀತ್ಯಾಸ್ಪದವೋ ಅದು "ಗುಣ" ವೆನಿಸುತ್ತದೆ. ಹೀಗೆ ಇಲ್ಲಿಯ ಭಾವವನ್ನು ತಿಳಿಯಬೇಕು. ॥೨೨॥

### ೫. ಗುರುಹೃದಯಪ್ರಕಾಶಿಕೆ :–

ಜೀವಕ್ರಿಯಾ ಈಶ್ವರಾಧೀನವೆಂಬುದನ್ನ ಸದೃಷ್ಟಾಂತ ತಿಳಿಸುತ್ತಾರೆ– ತೋಯಜಾಪ್ತ ಎಂದು. ತೋಯಜಾಪ್ತನೆಂಬ ಕಮಲಮಿತ್ರ ಸೂರ್ಯನ ಕಿರಣವನ್ನನುಸರಿಸಿ ವೃಕ್ಷಾದಿಗಳ ನೆರಳು ತಿರುಗುವಂತೆ, ಕಮಲದಳಾಯತಾಕ್ಷನೆಂಬ ತಾವರೆದಳದಂತೆ ವಿಶಾಲನೇತ್ರ ದೇವರು ಸರ್ವರಲ್ಲೂ ವ್ಯಾಪಿಸಿ ಇರುವ ಕಾರಣ, ಹೇಯವೆಂಬ ತಮೋಗುಣಕಾರ್ಯ ಪಾಪವೂ, ಸದ್ಗುಣಕಾರ್ಯ ಪುಣ್ಯವೂ ನ್ಯಾಯದಲ್ಲಿ ಕುಶಲರಾದ ಸಜ್ಜನರಿಗೆ ವ್ಯಕ್ತಿಯಾಗಿ ತೋರುತ್ತಿರುವವು. ಅವರು ಶ್ರೀಯರಸನಾದ ದೇವರೇ ಸರ್ವೋತ್ತಮನೆಂದು ಸದಾ ತಿಳಿದು ಹೇಳುವರು. ॥೨೨॥

## ಸರ್ವವ್ಯಾಖ್ಯಾನಸಾರಸಂಗ್ರಹ

ವೃಕ್ಷಗಳ ಮೇಲೆ ಸೂರ್ಯನ ಬೆಳಕು ಬಿದ್ದಾಗ, ವೃಕ್ಷಗಳ ನೆರಳು ಉಂಟಾಗುವುದು. ವೃಕ್ಷಗಳ ಛಾಯಾ ಸೂರ್ಯನ ಅಧೀನವು. ಸೂರ್ಯನ ಸಂಚಾರಕ್ಕನುಗುಣವಾಗಿ, ವೃಕ್ಷದ ನೆರಳೂ ಸಹ ಅದನ್ನನುಸರಿಸಿ, ಸ್ಥಾನ ಬದಲಾಯಿಸುವುದು. ಈ ದೃಷ್ಟಾಂತದಲ್ಲಿ ಸಮಸ್ತ ತ್ರಿವಿಧಜೀವರೂ ವೃಕ್ಷಸದೃಶರು, ಜೀವರ ಸ್ವರೂಪಭೂತ ಕರ್ತೃತ್ವಶಕ್ತಿ ಛಾಯಾಸದೃಶವು.

ಸರ್ವಪ್ರೇರಕನಾದ ಬಿಂಬನು ಸೂರ್ಯನ ಸದೃಶ. ಸಮಸ್ತಜೀವರ ಸ್ವರೂಪಗತ ಲಕ್ಷಣಗಳೆಲ್ಲವೂ ಬಿಂಬಾಧೀನ. ಇದರಿಂದ ಜೀವಕೃತ ಸಕಲ ಕ್ರಿಯಾದಿಗಳೂ ಈಶ್ವರಾಧೀನವು

ಪುಂಡರೀಕದಳಾಯುತಾಕ್ಷನಾದ ಪುರುಷೋತ್ತಮನು ಸರ್ವಜೀವರಲ್ಲಿ ಬಿಂಬನಾಗಿ ವ್ಯಾಪಿಸಿರುವನು. ಈ ಕಾರಣದಿಂದ. ಜೀವರ ದೇಹೇಂದ್ರಿಯಗಳ ದ್ವಾರಾ ನಡೆಯುತ್ತಿರುವ ಸಕಲ ಸುಕರ್ಮ, ಮಿಶ್ರಕರ್ಮ, ದುಷ್ಕರ್ಮಗಳೂ ಬಿಂಬಕ್ರಿಯಾದ್ವಾರಾ ಪ್ರೇರಿತವಾಗಿ, ಗೋಚರವಾಗುತ್ತಿರುವುವು.

ಕರ್ಮದ ಮರ್ಮವನ್ನು ಅರಿತ ಸುಜ್ಞಾನಿಗಳು ನ್ಯಾಯಕೋವಿದರು. ಅಂತಹ ಸುಜ್ಞಾನಿಗಳು ಅನಾದ್ಯನಂತಕಾಲದಿಂದಲೂ ಶ್ರೀಹರಿಯೇ ಸರ್ವತಂತ್ರಸ್ವತಂತ್ರನು. ಸಮಸ್ತಜೀವರೂ ಭಗವದಧೀನರು. ಶ್ರೀಹರಿಯೇ ಅಸ್ವತಂತ್ರಚೇತನರಾದ ರಮಾ ಬ್ರಹ್ಮಾದಿ ತೃಣಾಂತ ಸಮಸ್ತಜೀವರಾಶಿಗಳಿಂದಲೂ ಉತ್ತಮೋತ್ತಮನು. ಸರ್ವಶ್ರೇಷ್ಠನಾದ ಆ ಸರ್ವೇಶನೇ ಸಕಲಕ್ಕೂ ನಿಯಾಮಕನು. ಸರ್ವಕರ್ಮ ಪ್ರೇರಕನು- ಎಂದು ತಿಳಿದು ಶ್ರೀಹರಿಯ ಪಾರಮ್ಯವನ್ನು ಜಗತ್ತಿಗೆ ಪ್ರತಿಪಾದಿಸುವರು. ॥೨೨॥

## ಪದ್ಯ -೨೩

**ಮೂಲ :-**

**ಮೂಲಕಾರಣ ಪ್ರಕೃತಿಯೆನಿಪ ಮ ।**
**ಹಾಲಕುಮಿ ಎಲ್ಲರೊಳಗಿದ್ದು ಸು ।**
**ಲೀಲೆಗೈಯುತ ಪುಣ್ಯ ಪಾಪಗಳರ್ಪಿಸಲು ಪತಿಗೆ ॥**

**ಪಾಲಗಡಲೊಳು ಬಿದ್ದ ಜಲ ಕೀ ।**
**ಲಾಲವೆನಿಪುದೆ ಜೀವಕೃತ ಕ ।**
**ರ್ಮಾಳಿ ತದ್ವತು ಶುಭವು ಎನಿಪುವು ಎಲ್ಲ ಕಾಲದಲಿ ॥ ॥೨೩॥**

**ಅವತರಣಿಕೆ :–**

ದ್ವಂದ್ವ ಕರ್ಮಗಳನ್ನು ಶ್ರೀಹರಿಗೆ ಅರ್ಪಿಸುವುದರಿಂದ, ಪಾಪಕರ್ಮಗಳು ಶುಭ ಕರ್ಮಗಳಾಗುವುವು-ಎಂಬ ತತ್ತ್ವವನ್ನು ತಿಳಿಸುತ್ತಾರೆ. ॥೨೩॥

**ಪ್ರತಿಪದಾರ್ಥ :–**

**ಮೂಲಕಾರಣ** = ಜಗತ್ತಿನ ಸೃಷ್ಟಿಗೆ ಕಾರಣಭೂತವಾದ, **ಪ್ರಕೃತಿಯೆನಿಪ** = ಮೂಲ ಪ್ರಕೃತಿಗೆ ಅಭಿಮಾನಿಯಾದ ಚಿತ್ಪ್ರಕೃತಿ ನಾಮಕಳಾದ, **ಮಹಾಲಕುಮಿ** = ಶ್ರೀ ಲಕ್ಷ್ಮೀದೇವಿಯು, **ಎಲ್ಲರೊಳಗಿದ್ದು** = ಬ್ರಹ್ಮಾದಿ ತೃಣಾಂತ ಸಕಲ ತ್ರಿವಿಧಜೀವರ ಸ್ವರೂಪದೇಹದಲ್ಲಿದ್ದು, **ಸುಲೀಲೆಗೈಯುತ** = ಜೀವರ ಸ್ಥೂಲ ದೇಹೇಂದ್ರಿಯಗಳಲ್ಲಿ ಬಿಂಬರೂಪನಾಗಿ ವ್ಯಾಪ್ತವಾಗಿರುವ ಶ್ರೀಹರಿಯು ಸಹಿತ ವಿಹಾರ ಮಾಡುತ್ತಾ, **ಪತಿಗೆ**= ಸ್ವಬಿಂಬನಾದ ಶ್ರೀಹರಿಗೆ, **ಪುಣ್ಯ ಪಾಪಗಳನರ್ಪಿಸಲು** = ಜೀವಕೃತ ಬಿಂಬಪ್ರೇರಿತ ಪುಣ್ಯ ಪಾಪಗಳನ್ನು (ದ್ವಂದ್ವಕರ್ಮಗಳನ್ನು) ಅರ್ಪಣೆ ಮಾಡಲು, **ಪಾಲಗಡಲೊಳು** = ಕ್ಷೀರಸಮುದ್ರದಲ್ಲಿ, **ಬಿದ್ದ ಜಲ**= ಬಿದ್ದ ನೀರು, **ಕೀಲಾಲವೆನಿಪುದೆ** = ನೀರು ಎಂತ ಕರೆಯಿಸುತ್ತದೆಯೇ? **ಜೀವಕೃತ** = ಬಿಂಬನಿಂದ ಪ್ರೇರಿತವಾಗಿ, ಜೀವನ ದ್ವಾರಾ ಮಾಡಲ್ಪಟ್ಟ, **ಕರ್ಮಾಳಿ** = ಕರ್ಮಸಮೂಹಗಳು, **ತದ್ವತು** = ಕ್ಷೀರದೊಡನೆ ಬೆರೆತ ನೀರಿನೋಪಾದಿಯಲ್ಲಿ, **ಎಲ್ಲ ಕಾಲದಲಿ** = ಸರ್ವದಾ, **ಶುಭವು ಎನಿಪುವು** = ಶುಭ ಫಲವನ್ನೇ ಕೊಡುವುವು. ॥೨೩॥

# ವ್ಯಾಖ್ಯಾನಗಳು

## ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ಭಗವದ್ಭಕ್ತರಾದವರು ದ್ವಂದ್ವಕರ್ಮಗಳ ಭಗವದರ್ಪಣ ಮಾಡಬೇಕೆಂತಲೂ, ಹಾಂಗೆ ಅರ್ಪಿಸೋಣದರಿಂದ ಪಾಪಕರ್ಮ ಶುಭಕರ್ಮ ಆಗತದೆಂತಲೂ ಹೇಳತಾರೆ.

ಸ್ಥೂಲದೇಹದಿಂದ ಕರ್ಮಗಳ ಮಾಡೋದಕ್ಕೆ ಇಚ್ಛಾರೂಪವಾದ ಪ್ರೇರಣಾದಿಗಳ ಪರಮಾತ್ಮ ಮಾಡಬೇಕಾದರೆ, ಪ್ರಥಮತಃ ಅನಾದಿ ಲಿಂಗಾಂತರ್ಗತನಾದ ಅಣುವಾದ ಜೀವನೇ ಮೂಲ. ಇಲ್ಲಿ ಪ್ರಥಮತಃ ಮೂಲಭೂತನಾದ ಜೀವಾಂತರ್ಗತನಾದ ಬಿಂಬ ಜೀವೇಂದ್ರಿಯಾದಿಗಳಿಗೆ ಪ್ರೇರಿಸತಾನೆ. ಆದಕ್ಕೆ ಎರಡನೇಯದಾದ ಮೂಲ ಜೀವರ ಲಿಂಗಗತ ಅನಾದಿಕರ್ಮ, ಮೂರನೇದು ಜೀವನ ಪ್ರಯತ್ನ, ಮೂರೂ ಮೂಲಭೂತಗಳು. ಇವು ಮೂರಕ್ಕೆ ಪ್ರೇರಣ ಮಾಡೋದಕ್ಕೆ ಕಾರಣನಾದ ಜೀವಾಂತರ್ಗತ ಬಿಂಬರೂಪಿ ಪರಮಾತ್ಮ. ಈ ಪರಮಾತ್ಮ ಪ್ರಕೃತಿ ಎನಿಸತಕ್ಕ, ಅಸ್ವತಂತ್ರ ಚೇತನರೊಳಗೆ ಶ್ರೇಷ್ಠಳಾದ ಲಕ್ಷ್ಮೀದೇವೇರಿಂದ ಸಹಿತನಾಗಿ ಬ್ರಹ್ಮಾದಿ ತೃಣಾಂತ ತ್ರಿವಿಧ ಜೀವರ ಅಣುಸ್ವರೂಪದೊಳಗಿದ್ದು, ಸ್ಥೂಲದೇಹದಿಂದ ಮಾಡತಕ್ಕ ಕರ್ಮಗಳಿಗೆ ಆದಿಯಲ್ಲಿ ಜೀವನ ಸ್ವರೂಪೇಂದ್ರಿಯಗಳಿಗೆ ಇಚ್ಛಾ ಉಂಟುಮಾಡಿ, ಸ್ಥೂಲದೇಹದಲ್ಲಿ ಪ್ರಕಾಶತೋವ್ಯಾಪ್ತನಾದ ಆ ಜೀವಗೆ ಇಚ್ಛಾ ಹುಟ್ಟಿಸಿ, ಸ್ಥೂಲೇಂದ್ರಿಯಾದಿಗಳಲ್ಲಿ ತದಾಕಾರನಾಗಿ, ಸ್ಥೂಲತ್ವೇನ ಬಿಂಬನಾಗಿದ್ದು, ನಿರ್ದೋಷನಾದ ಸ್ಥೂಲಾಕಾರ ಬಿಂಬ ತನ್ನ ಕ್ರಿಯಾರೂಪವಾದ ಆಟಗಳ ಆಡಸತಾ ಇರ್ತಾನೆ. ಈ ಪ್ರಕಾರವಾದ ಪಾಪ ಪುಣ್ಯಕರ್ಮಗಳ ಜೀವನಾದವ ದೇಹದಿಂದ ಮಾಡತಾನೆಂಬೋ ಅನುಷ್ಠಾನ ಅಹಂ ಮಮತಾದಿಗಳ ತ್ಯಾಗಪೂರ್ವಕವಾಗಿ ಮಾಡತಾ, ಲಕ್ಷ್ಮೀದೇವೇರಿಗೆ ಪತಿಯಾದ, ತನಗೆ (ಬಿಂಬನಾದ ಪರಮಾತ್ಮಗೆ) ಪುಣ್ಯವೆಂಬೋ ಕ್ಷೀರ, ಪಾಪವೆಂಬೋ

ಉದಕ ಎರಡೂ ಅರ್ಪಣ ಮಾಡಿದರೆ, ಎರಡೂ ಪುಣ್ಯಗಳೇ ಆಗತವೆ. ಇದಕ್ಕೆ ದೃಷ್ಟಾಂತ – ಕ್ಷೀರ ಸಮುದ್ರದೊಳು ಬಿದ್ದ ಜಲ– ಜಲವೆಂತ ಕರಸೋದೆ ? ಅದು ಕ್ಷೀರರೂಪವಾದ ಪುಣ್ಯವೇ ಆಗೋದಾಗತದೆ. ತದ್ವತ್ ಬಿಂಬಕ್ರಿಯಾ ಪ್ರತಿಬಿಂಬಕ್ರಿಯಾ ಅನುಸಂಧಾನದಿಂದ, ಅಹಂ ಮಮತಾದಿಗಳಿಂದ ರಹಿತರಾಗಿ ಜೀವರಿಂದ ಮಾಡಲ್ಪಟ್ಟ ಪಾಪ ಪುಣ್ಯಗಳೆಂಬ ಪಂಕ್ತಿಗಳು, ಕ್ಷೀರ ಸಮುದ್ರವಾದ ಪರಮಾತ್ಮಗೆ ಕ್ಷೀರಸದೃಶ ಪುಣ್ಯ, ಉದಕ ಸದೃಶ ಪಾಪ-ಎರಡನ್ನೂ ಅರ್ಪಿಸಲು, ಪೂರ್ವೋಕ್ತ ದೃಷ್ಟಾಂತದೋಪಾದಿಯಲ್ಲಿ, ಪಾಪಪುಣ್ಯಗಳೆರಡೂ ಶುಭ ಫಲ ಕೊಡತಕ್ಕ ಕರ್ಮಗಳೆಂತಲೇ ಎನಿಸೋವಾಗತವೆ. ಆದ್ದರಿಂದ ಸದಾ ಕಾಲದಲ್ಲಿ ಅಹಂ ಮಮತಾದಿಗಳ ಬಿಟ್ಟು, ಬಿಂಬಕ್ರಿಯಾನುಸಂಧಾನ ಮಾಡತಾ, ದ್ವಂದ್ವಕರ್ಮಗಳ ಅರ್ಪಿಸೋವನಾಗಬೇಕು. ॥೨೩॥

**ಪ್ರಮಾಣ :–**

**ಕ್ಷೀರಾಬ್ಧೌ ಪತಿತಂ ತೋಯಂ ಯಥಾಕ್ಷೀರತ್ವಮಶ್ನುತೇ ।**
**ಜೀವಕರ್ಮ ಸುಖಂ ತದ್ವದ್ಧರಾವಾನಂದತಾಂ ಭಜೇತ್ ॥**
**ಸುಖಮೂರ್ತಿರಯಂ ವಿಷ್ಣುಃ ಇತಿ ಶ್ರುತಿಷು ಗೀಯತೇ ॥**
ಎಂಬ ಪ್ರಮಾಣಾರ್ಥ ವಿವರಿಸಿತು. ॥೨೩॥

**೨. ಭಾವಪ್ರಕಾಶಿಕೆ :–**

ಜಗತ್ತಿಗೆ ಕಾರಣಭೂತರಾದ, ಮೂಲಪ್ರಕೃತಿಯೆನಿಸುವ ಲಕ್ಷ್ಮೀ ದೇವಿಯರು, ಪತಿಯೊಂದಿಗೆ ಎಲ್ಲರಲ್ಲಿಯೂ ಇದ್ದು, ಪ್ರಕೃತಿಸಂಬಂಧವಾದ ಸತ್ವರಜಸ್ತಮೋಗುಣ ಕಾರ್ಯಗಳನ್ನು ಮಾಡಿಸುತ್ತಾ, ಅವರಿಂದ ಮಾಡಿಸಲ್ಪಟ್ಟ ಪುಣ್ಯಪಾಪಗಳನ್ನು ಪತಿಯಾದ ಪರಮಾತ್ಮನಿಗೆ ಅರ್ಪಿಸುವರು. ಆದರೆ ಜೀವಕೃತ ಪಾಪ ಕರ್ಮವು ಪರಮಾತ್ಮನಿಗೆ ಅರ್ಪಿಸುವುದರಿಂದ, ಪರಮಾತ್ಮನಿಗೆ ಪಾಪಲೇಪದಿಂದ ದುಃಖ ಸಂಬಂಧವಾಗುವುದೆಂಬ ಶಂಕೆಯನ್ನು

ದೃಷ್ಟಾಂತದಿಂದ ಪರಿಹರಿಸುತ್ತಾರೆ:- ಕ್ಷೀರಸಮುದ್ರದಲ್ಲಿ ನೀರು ಬಿದ್ದರೆ, ಸಮುದ್ರದ ಹಾಲು ಕೆಡುವುದೆ ! ಇಲ್ಲ. ನೀರು ಮಾತ್ರ ಹಾಲೇ ಆಗುವುದು. ಗಂಗಾದಿ ಮಹಾನದಿಗಳೆಲ್ಲವೂ ಲವಣ ಸಮುದ್ರದಲ್ಲಿ ಸೇರಲು, ಸಮುದ್ರದ ನೀರು ಸಿಹಿಯಾಗಬಲ್ಲುದೆ ! ಮಹಾನದಿಯ ನೀರು ಮಾತ್ರ ಉಪ್ಪಾಗುವುದು. ಅದರಂತೆಯೇ ಕ್ಷೀರಸಮುದ್ರದಲ್ಲಿ ಬಿದ್ದ ನೀರೆಲ್ಲವೂ ಹಾಲೇ ಆಗುವುದು. ಹಾಗೆಯೇ ಪರಮಾತ್ಮನಲ್ಲಿ ಸೇರಿದ ಪಾಪಕರ್ಮಗಳೂ ಸಹ ಶುಭವೇ ಆಗುವುವು. ॥೨೩॥

೩. ಭಾವದರ್ಪಣ :

ಸಮಸ್ತರಲ್ಲಿ ಮೂಲಕಾರಣ ಪ್ರಕೃತಿ-ಎಂದರೆ ಶ್ರೀದೇವಿ,ನಿಂತು ಸಕಲ-ಕರ್ಮಮಾಡಿ ತನ್ನ ಪತಿಗೆ ಅರ್ಪಿಸಲು, ಸಮಸ್ತ ಶುಭವೇ ಎನಿಸುತ್ತದೆಂದು ಸದೃಷ್ಟಾಂತ ಹೇಳುತ್ತಾರೆ. ಮೂಲಕಾರಣ । ಪಾಲಗಡಲ = ಕ್ಷೀರ ಸಮುದ್ರ. ॥೨೩॥

೪. ಶ್ರೀವ್ಯಾಸದಾಸ ಸಿದ್ಧಾಂತ ಕೌಮುದೀ :-

"ಮೂಲ ಪ್ರಕೃತಿ ದೇವತಾ" ॥ "ಪುಣ್ಯ ಪಾಪಫಲಂ ಯಸ್ಮಾತ್ ಅರ್ಪಯೇತಾಖಿಲಂ ಹರೌ ॥ ಕ್ಷೀರಾಬ್ಧಿಂ ಪತಿತಂ ತೋಯಂ ಯಥಾ ಕ್ಷೀರತ್ವ ಮಶ್ನುತೇ ॥ ಜೀವ ಕರ್ಮಸುಖಂ ತದ್ವತ್ ಹರಾವನಂತತಾಂ ವ್ರಜೇತ್॥ " ಇತ್ಯುಕ್ತಮಾಹ -"ಮೂಲ" ಇತಿ. ॥೨೩॥

## ಕನ್ನಡಾರ್ಥ

"ಮೂಲ ಪ್ರಕೃತಿಯ ದೇವತೆ ಎನಿಸಿರುವ ಶ್ರೀಮಹಾಲಕ್ಷ್ಮೀದೇವಿಯು ಪುಣ್ಯಪಾಪ ಫಲಗಳನ್ನೆಲ್ಲಾ ಪರಮಾತ್ಮನಲ್ಲಿ ಸಮರ್ಪಿಸುವಳು. ಕ್ಷೀರ ಸಮುದ್ರದಲ್ಲಿ ಬೆರಸಿದ (ಬಿದ್ದ) ನೀರು ಕ್ಷೀರವಾಗುವಂತೆ, ಜೀವರ ಕರ್ಮಫಲ

ಗಳು (ಪರಮಾತ್ಮನಲ್ಲಿ ಸಮರ್ಪಿತವಾಗಲೂ) ಅನಂತವಾಗುವುವು"– ಹೀಗೆ ಹೇಳಿದ ಸಂಗತಿಯನ್ನು – "ಮೂಲ ಪ್ರಕೃತಿ" ಈ ಪದ್ಯದಿಂದ ತಿಳಿಸುತ್ತಾರೆ. ॥೨೩॥

### ೫. ಶ್ರೀಗುರುಹೃದಯ ಪ್ರಕಾಶಿಕೆ :–

ತ್ರಿಗುಣಕ್ಕೆ ಮೂಲಕಾರಣಳಾದ ಜಡಪ್ರಕೃತಿ ಅಭಿಮಾನಿ ಶ್ರೀ ಲಕ್ಷ್ಮೀಯು ಎಲ್ಲರಲ್ಲೂ ಇದ್ದು, ಸುಮನೋಹರ ಜಗತ್ಕ್ರೀಡೆಯಾಡುತ್ತಾ, ಪುಣ್ಯ ಪಾಪಗಳೆಂಬ ಸತ್ತ್ವರಜಸ್ತಮೋಗುಣ ಕ್ರಿಯೆಗಳನ್ನು ತನ್ನ ಪತಿಯಾದ ಶ್ರೀಹರಿಗೆ ಇದೆಲ್ಲಾ ನಿಮ್ಮಾಧೀನವೆಂದು ತಿಳಿದು ಒಪ್ಪಿಸಲು, ಪಾಲಗಡಲೆಂಬ ಕ್ಷೀರಸಮುದ್ರದಲ್ಲಿ ಒಳ ಬಿದ್ದ ಜಲ, ಎಂದರೆ ಮಳೆ ಹನಿ ನೀರು ಕೀಲಾಲವೆಂಬ ನೀರೆನ್ನಿಸಿಕೊಳ್ಳದೆ ಹಾಲೇ ಆಗುವಂತೆ, ಜೀವಕೃತಕರ್ಮಸಮೂಹ ಫಲವೆಲ್ಲಾ ದೇವರಿಗೆ ಸದಾ ಶುಭವಾಗಿಯೇ ಇರುವುದು.

**ಕ್ಷೀರಾಬ್ಧೌ ಪತಿತಂ ತೋಯಂ ಯಥಾ ಕ್ಷೀರತ್ವಮಶ್ನುತೇ ।**
**ಜೀವಕರ್ಮ ಸುಖಂ ತದ್ವದ್ಧರಾವಾನಂದತಾಂ ಭಜೇತ್ ॥**
**ಸುಖಮೂರ್ತಿರಯಂ ವಿಷ್ಣುರಿತಿ ಶ್ರುತಿಷು ಗೀಯತೇ ॥**
ಎಂಬುದರ ಅರ್ಥ ವಿವರಿಸಿತು. ॥೨೩॥

## ಸರ್ವವ್ಯಾಖ್ಯಾನಸಾರಸಂಗ್ರಹ

ಜಗಜ್ಜನಿಯಾದ ಮಹಾಲಕುಮಿಯು ಶ್ರೀಮನ್ನಾರಾಯಣನ ಸಹಿತ ಸಕಲ ಜೀವರ ಸ್ವರೂಪದೇಹದಲ್ಲಿ ಸಹ ವ್ಯಾಪ್ತಳಾಗಿರುವಳು.

ಶ್ರೀ ರಮಾಗೆ ಬಿಂಬನಾದ ಶ್ರೀ ರಮಣನು ಲಕ್ಷ್ಮೀದ್ವಾರಾ ತ್ರಿಗುಣಗಳ ವ್ಯಾಪಾರರೂಪವಾದ ಸಕಲ ಪುಣ್ಯ–ಪಾಪ–ಮಿಶ್ರಗಳನ್ನು ತಾನೇ ಮಾಡಿ, ಲಕ್ಷ್ಮೀದ್ವಾರಾ ಮಾಡಿಸಿ, ಜೀವನ ದ್ವಾರಾ ಮಾಡಿ ಮಾಡಿಸಿ, ಆ ಕರ್ಮ

ಗಳ ಫಲಭೋಗಗಳನ್ನು ಜೀವರ ಅನುಭವಕ್ಕೆ ತಂದೀಯುವನು. ಇದೇ ರಮಾರಮಣನಾದ ಶ್ರೀಹರಿಯ ಲೀಲಾವಿಲಾಸ. ಅದೇ ಅವನ ಕ್ರೀಡೆಯು.

ಮಹಾಲಕ್ಷ್ಮೀಯು ಜೀವಕೃತ ಸಕಲಕರ್ಮಗಳನ್ನು ಸ್ವಬಿಂಬನಾದ ಶ್ರೀ ಲಕ್ಷ್ಮೀಪತಿಗೆ ಅರ್ಪಿಸುವಳು. ಜೀವಕೃತ ದ್ವಂದ್ವಕರ್ಮಗಳ ಸಮರ್ಪಣೆ ಪ್ರಥಮತಃ ಶ್ರೀವಾಯುದೇವರಿಂದ ಶ್ರೀ ಲಕ್ಷ್ಮೀನಾರಾಯಣರಿಗೆ. ತದನಂತರ, ಶ್ರೀ ಲಕ್ಷ್ಮೀಯು ಬಿಂಬರೂಪಿಯಾದ ಶ್ರೀಹರಿಗೆ–ಈ ರೀತಿ ದ್ವಂದ್ವ ಕರ್ಮಗಳ ಸಮರ್ಪಣಾರೂಪವಾದ ಕ್ರಿಯಾಸರಣಿ.

ಇದನ್ನು ದಾಸರಾಯರು ಸುಂದರವಾದ ದೃಷ್ಟಾಂತದಿಂದ ವಿವರಿಸುತ್ತಾರೆ. ಕ್ಷೀರಸಮುದ್ರವು ಅಪಾರ ಮತ್ತು ಅನಂತ. ಅದರಲ್ಲಿ ಬಿದ್ದ ನೀರು ಹಾಲಿನೊಡನೆ ಬೆರೆತು ಹಾಲೇ ಆಗುವುದು. ಹಾಗೆ ಬಿದ್ದ ನೀರನ್ನು ಯಾರೂ ಪ್ರತ್ಯೇಕವಾಗಿ ಜಲವೆನ್ನುವುದಿಲ್ಲ.

ಈ ದೃಷ್ಟಾಂತದಲ್ಲಿ, ಶ್ರೀಹರಿಯು ಕ್ಷೀರಸಾಗರ ಸದೃಶನು.

ಕ್ಷೀರವು ಪುಣ್ಯ ಕರ್ಮಗಳ ಸದೃಶವು. ನೀರು ಪಾಪ ಹಾಗೂ ಮಿಶ್ರಕರ್ಮಗಳ ಸದೃಶವು.

ಹಾಲಿನ ಸಮುದ್ರದಲ್ಲಿ ಬಿದ್ದ ನೀರು ಹಾಲಿನ ರೂಪವನ್ನೇ ಹೊಂದುವಂತೆ, ಶ್ರೀ ಮಹಾಲಕುಮಿಯು ಸ್ವಬಿಂಬನಾದ ತನ್ನ ಪತಿಗೆ ಅರ್ಪಿಸುವ ಸಜ್ಜನರ ಪಾಪಕರ್ಮಗಳೂ, ಪುಣ್ಯಕರ್ಮಗಳೆನಿಸುವುವು. ॥ ೨೩ ॥

## ಪದ್ಯ - ೨೪

ಮೂಲ :-

ಜ್ಞಾನ ಸುಖ ಬಲಪೂರ್ಣ ವಿಷ್ಣು ವಿ ।
ಗೇನ ಮಾಳ್ಪವು ತ್ರಿಗುಣಕಾರ್ಯ ಕೃ ।
ಶಾನುವಿನ ಕ್ರಿಮಿಕವಿದು ಭಕ್ಷಿಪುದುಂಟೆ ಲೋಕದೊಳು ॥
ಈ ನಳಿನಜಾಂಡವನು ಬ್ರಹ್ಮೇ ।
ಶಾನ ಮುಖ್ಯ ಸುರಾಸುರರ ಕಾ ।
ಲಾನಳನವೋಲ್ ನುಂಗುವವಗೀ ಪಾಪಗಳ ಭಯವೆ ॥ ॥೨೪॥

ಅವತರಣಿಕೆ :-

ದ್ವಂದ್ವ ಕರ್ಮ, ಭಗವದರ್ಪಣ ಮಾಡುವುದರಿಂದ ಜ್ಞಾನಾನಂದ ಪರಿಪೂರ್ಣನಾದ ಶ್ರೀಪರಮಾತ್ಮನಿಗೆ ಅದರಿಂದ ಯಾವ ಬಾಧಕವೂ ಇಲ್ಲ ವೆಂದು ತಿಳಿಸುತ್ತಾರೆ. ॥೨೪॥

ಪ್ರತಿಪದಾರ್ಥ :-

**ಜ್ಞಾನ ಸುಖ ಬಲಪೂರ್ಣ** = ಅಸದೃಶವಾದ ಹಾಗೂ ಅಪರಿಮಿತವಾದ ಜ್ಞಾನ, ಆನಂದ, ಬಲ, ವೀರ್ಯಾದಿಗಳಿಂದ ಪರಿಪೂರ್ಣನಾದ, **ವಿಷ್ಣುವಿಗೆ** = ಪರಬ್ರಹ್ಮನಾದ ವಿಷ್ಣುವಿಗೆ, **ತ್ರಿಗುಣಕಾರ್ಯ** = ಜೀವಕೃತ ತ್ರಿಗುಣಜನಿತವಾದ ಪಾಪ ಪುಣ್ಯ ಕರ್ಮಗಳು, **ಏನ ಮಾಳ್ಪವು** = ಏನು ಬಾಧಕ ಮಾಡುವುವು ? ಅಂದರೆ ಅವುಗಳಿಂದ ಅಬಾಧಿತನು- ಎಂದರ್ಥ, **ಲೋಕದೊಳು** = ಜಗತ್ತಿನಲ್ಲಿ, **ಕೃಶಾನುವಿನ** = ಅಗ್ನಿಯನ್ನು, **ಕ್ರಿಮಿರವಿದು** = ಗೆಜ್ಜಲು ಹುಳು ಮುತ್ತಿಕೊಂಡು, **ಭಕ್ಷಿಪುದುಂಟೇ**

= ಭಕ್ಷಿಸುವುದು ಎಲ್ಲಾದರೂ ಸಾಧ್ಯವೇ ? **ಈ ನಳಿನಜಾಂಡವನು** = ವರ್ತಮಾನ ಬ್ರಹ್ಮಾಂಡವನ್ನು, **ಬ್ರಹ್ಮ** = ಬ್ರಹ್ಮದೇವರು, **ಈಶಾನ ಮುಖ್ಯ** = ರುದ್ರಾದಿಗಳೇ ಮೊದಲಾದ, **ಸುರ** = ದೇವತೆಗಳ (ತೃಣಾಂತ ಮುಕ್ತಿಯೋಗ್ಯಜೀವರು), **ಅಸುರರ** = ತಮೋಯೋಗ್ಯ ಹಾಗೂ ನಿತ್ಯ ಸಂಸಾರಿಜೀವರ, **ಕಾಲಾವಳಿವೋಲ್** = ಪ್ರಳಯಕಾಲದ ಅಗ್ನಿಯಂತೆ (ಕಾಲು = ಪ್ರಳಯ ಅವಳ = ಅಗ್ನಿ), **ನುಂಗುವಗೆ** = ನುಂಗತಕ್ಕ ಲಯಕಾಕರನಾದ ಶ್ರೀಹರಿಗೆ, **ಈ ಪಾಪಗಳ ಭಯವೆ** = ಜೀವರಿಂದ ಅರ್ಪಿತವಾದ ಪಾಪ ಕರ್ಮಗಳ ಭಯವು ಎಂದಿಗಾದರೂ ಇದೆಯೇ ? ಸರ್ವಥಾ ಇಲ್ಲವೆಂದು ತಾತ್ಪರ್ಯ, ॥೨೪॥

## ವ್ಯಾಖ್ಯಾನಗಳು

### ೧. ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ

ದ್ವಂದ್ವಕರ್ಮ ಭಗವದರ್ಪಣ ಮಾಡೋದರಿಂದ, ಪರಮಾತ್ಮಗೆ ಏನಾದರೂ ಬಾಧಕ ಉಂಟೇ-ಎಂದರೆ, ಬಾಧಕ ಒಂದೂ ಇಲ್ಲಾ-ಎಂತ ಹೇಳತಾರೆ.

ಸಮಾನರಹಿತವಾದ ಜ್ಞಾನವೇನು, ಸುಖವೇನು, ಬಲವೇನು, ಇವುಗಳೇ ಶರೀರವಾಗಿವುಳ್ಳ, ಇವುಗಳಿಂದಲೇ ಪರಿಪೂರ್ಣನಾದ, ವ್ಯಾಪ್ತನಾದ ಶ್ರೀಪರಮಾತ್ಮಗೆ ಜೀವರು ಮಾಡತಕ್ಕ, ಜೀವರಿಂದ ಅರ್ಪಿತವಾದ ತ್ರಿಗುಣ ಜನಿತವಾದ ಪಾಪಕರ್ಮಗಳು ಏನಾದರೂ ಬಾಧಿಸೋಣವೇ-ಎಂದರೆ, ಬಾಧಿಸಲಾರವು ಎಂಬೋಣದರಿಂದ ಜೀವರಿಗೇನು, ಪರಮಾತ್ಮ ಅಸದೃಶ ಮಹಿಮನಾದ್ದರಿಂದ ಅವರಿಗೇನು ಉಭಯರಿಗೂ ತದ್ಬಾಧಾ ಇಲ್ಲ ಎಂತ ಅರ್ಥ. ಇದಕ್ಕೆ ದೃಷ್ಟಾಂತ-ಪ್ರಪಂಚದಲ್ಲಿ ಅಗ್ನಿಯನ್ನು ಚದುಲು (ಗೆಜ್ಜಲು) ಹುಳು ಸುತ್ತಿಕೊಂಡು ಭಕ್ಷಿಸೋದು ಉಂಟಾ ಹಾಂಗೆ- ಅಂದರೆ ಇಲ್ಲಾ ಎಂತ ತಾತ್ಪರ್ಯ. ಇದರಂತೆ ಪಾಪ ಸಾಂಕೇತವಾದ ಚದುಲು ಹುಳುಗಳು ಅಗ್ನಿ

ಸಾಂಕೇತನಾದ ಪರಮಾತ್ಮನ್ನ ಸೇರೋಣದರಿಂದ ಭಸ್ಮವಾಗಿ, ಜೀವ ಪರಮಾತ್ಮ ಇಬ್ಬರಿಗೂ ಬಾಧಿಸೋದಿಲ್ಲ. ಅರ್ಪಿಸಿದವಗೆ ದೋಷವೂ ಇಲ್ಲ. ಪರಮಾತ್ಮನಲ್ಲಿರುವ ಪತಿತಪಾವನನೆಂಬೋ ಗುಣೋಪಾಸನ ಮಾಡಿ, ಅಧಿಕ ಫಲವೇ ಹೊಂದತಾನೆ. ಈ ವರ್ತಮಾನ ಬ್ರಹ್ಮಾಂಡವನ್ನು ಬ್ರಹ್ಮ ರುದ್ರ ಇವರೇ ಮೊದಲಾದ ದೇವತೆಗಳ, ತೃಣಾಂತ ಮುಕ್ತಿಯೋಗ್ಯಜೀವರ, ತಮೋಯೋಗ್ಯ, ನಿತ್ಯಸಂಸಾರಿ ತೃಣಾಂತ ಜೀವರ, ಇವರನ್ನ ಪ್ರಳಯ ಕಾಲದ ಅಗ್ನಿ, ನಿಷಿದ್ಧಾನಿಷಿದ್ಧಗಳ ಭಸ್ಮಮಾಡಿ, ತದ್ಭಯವಿಲ್ಲದೆ ಅಶುಭಗಳನ್ನು ಕೂಡಾ ಪವಿತ್ರ ಮಾಡತದೆ. ಇಂಥಾ ಅಗ್ನಿಸದೃಶನಾದ ಪರಮಾತ್ಮ, ಈ ತನ್ನ ಭಕ್ತರು ಕೊಟ್ಟ ಪಾಪ ಸಮೂಹಗಳ ನುಂಗತಕ್ಕ (ನಾಶ ಮಾಡತಕ್ಕ) ಪರಮಾತ್ಮಗೆ, ಪಾಪಗಳ ತನಗೆ ಅರ್ಪಿಸತಾರೆ- ಎಂತ ಭಯವೇನಾದರೂ ಉಂಟೇ-ಎಂದರೆ,ಸರ್ವಾತ್ಮನಾ ಇಲ್ಲ-ಎಂತ ತಾತ್ಪರ್ಯ. ಪತಿತ ಪಾವನ ಶಬ್ದದಿಂದಲೇ ಪಾಪಗಳ ಅರ್ಪಿಸಿದರೆ, ಅದರನ್ನ ಸ್ವೀಕಾರ ಮಾಡಿ, ಜೀವರನ್ನ ಶುದ್ಧರನ್ನಾಗಿ ಮಾಡತಾನೆ ಎಂತ. ಇದು ಒಂದು ದೃಷ್ಟಾಂತ. ॥೨೪॥

೨. ಭಾವಪ್ರಕಾಶಿಕೆ :–

ಸಂಪೂರ್ಣ ಜ್ಞಾನಾನಂದ ಸ್ವರೂಪನಾದ ಶ್ರೀ ವಿಷ್ಣುವಿಗೆ ಪ್ರಕೃತಿ ಸಂಬಂಧವಾದ ಸತ್ವರಜಸ್ತಮೋಗುಣ ಕಾರ್ಯಗಳು ಏನು ಮಾಡುವುವು ! ಲೋಕದಲ್ಲಿ ಬೆಂಕಿಯನ್ನು ಹುಳುಗಳು ಮುತ್ತಿ ತಿನ್ನುವುದುಂಟೆ ! ಬೆಂಕಿಯಲ್ಲಿ ಬಿದ್ದು ತಾವು ಪ್ರಾಣವನ್ನು ಕಳೆದುಕೊಳ್ಳುವುವು. ಅದರಂತೆ ತ್ರಿಗುಣ ಸಂಬಂಧವಾದ ಕರ್ಮಗಳು ಪರಮಾತ್ಮನನ್ನು ಏನು ಮಾಡುವವು ! ಕರ್ಮಗಳು ಮಾತ್ರ ಸುಟ್ಟು ಹೋಗುವವು. ಬ್ರಹ್ಮ ರುದ್ರ ಮೊದಲಾದ ಸ್ಥಾವರ ಜಂಗಮಾತ್ಮಕವಾದ ಈ ಬ್ರಹ್ಮಾಂಡವನ್ನೇ ಪ್ರಳಯ ಕಾಲದಲ್ಲಿ ಕಾಲಾಗ್ನಿಯಂತೆ ನುಂಗುವ ಶ್ರೀಹರಿಗೆ ಈ ಅಲ್ಪವಾದ ಪಾಪಗಳ ಭಯವೂ ಉಂಟೇ ! ಎಂದಿಗೂ ಇಲ್ಲವೆಂಬ ತಾತ್ಪರ್ಯ. ॥೨೪॥

**೩. ಭಾವದರ್ಪಣ :–**

ಪಾಪಪುಣ್ಯಾರ್ಪಣದಿಂದ ಪರಮಾತ್ಮಗೆ ಏನು ಬಾಧಕವಿಲ್ಲವೆಂದು ಸದೃಷ್ಟಾಂತ ಹೇಳುತ್ತಾರೆ. । ಜ್ಞಾನಸುಖ । ತದುಕ್ತಂ ಸೂತ್ರಭಾಷ್ಯೇ ಯೇ ದೋಷಾ ಇತರತ್ರಾಪಿ ತೇ ಗುಣಾಃ ಪರಮೇ ಮತಾಃ । ನ ದೋಷಃ ಪರಮೇ ಕಶ್ಚಿದ್ಗುಣಾ ಏವ ನಿರಂತರಾ । ಇತಿ । ಕೃಶಾನು = ಅಗ್ನಿ, ಕೃಮಿ = ಹುಳ, ಕವಿದು = ಮುಚ್ಚಿ, ಈಶಾನ = ರುದ್ರ. ॥೨೪॥

**೪. ಶ್ರೀ ವ್ಯಾಸದಾಸ ಸಿದ್ಧಾಂತ ಕೌಮುದೀ :–**

"ಉಭಯಾರ್ಪಣೇದಿ ನಲೇಪಃ ಆಭ್ಯಾಮ್" ಇತ್ಯೇತತ್ ನಿದರ್ಶನೇನೈವ ವಕ್ತುಂ ತತ್ಪ್ರಯೋಜಕಂ – "ಸುಖಮೂರ್ತಿರಯಂ ವಿಷ್ಣುರಿತಿ ಶ್ರುತಿಷು ಗೀಯತೇ" ಇತ್ಯುಕ್ತಮಾಹ–"ಜ್ಞಾನ" ಇತಿ ॥ ಕೃಶಾನು= ಅಗ್ನಿ, ಪೊಲು = ತದ್ವತ್. ॥೨೪॥

## ಕನ್ನಡಾರ್ಥ

ಪುಣ್ಯಪಾಪಗಳೆರಡನ್ನೂ ಸಮರ್ಪಿಸಿದರೆ, ಅವುಗಳ ಲೇಪವು ಶ್ರೀಹರಿಗೆ ಇಲ್ಲ. ಈ ವಿಷಯವನ್ನು ದೃಷ್ಟಾಂತ ಮುಖದಿಂದ ಹೇಳಲು ಲೇಪವಾಗದಿರುವ ಕಾರಣವನ್ನು –"ಸುಖಮೂರ್ತಿ ಎಂದು ಶ್ರೀಹರಿಯು ಶ್ರುತಿಯಲ್ಲಿ ಪ್ರತಿಪಾದಿತನು" ಎಂಬುದಾಗಿ ಹೇಳಿದ ಸಂಗತಿಯನ್ನು "ಜ್ಞಾನ" ಈ ಪದ್ಯದಿಂದ ಹೇಳುತ್ತಾರೆ. "ಕೃಶಾನು"–ಅಗ್ನಿ, "ಪೊಲು"–ಅದಂತೆ. ॥೨೪॥

**೫. ಶ್ರೀಗುರುಹೃದಯ ಪ್ರಕಾಶಿಕೆ :-**

ಜ್ಞಾನಸುಖಬಲಪೂರ್ಣನಾದ ಶ್ರೀ ವಿಷ್ಣುವಿಗೆ ತ್ರಿಗುಣ ಕರ್ಮಫಲಗಳು ಕೃಶಾನು ಎಂಬ ಅಗ್ನಿಯನ್ನು ಕ್ರಿಮಿಗಳು ಮುಚ್ಚಿ ಹೇಗೆ ಭಕ್ಷಿಸಲಾರವೋ, ಹಾಗೆ ಏನೂ ಬಾಧಕ ಮಾಡಲಾರವು. ಈ ನಳಿನಜಾಂಡವೆಂಬ ಬ್ರಹ್ಮಾಂಡವನ್ನು ಬ್ರಹ್ಮೇಶಾನ ಮುಖ್ಯರಾದ ದೇವತೆಗಳನ್ನೂ, ಅಸುರರನ್ನೂ ಸಹ ಕಾಲಾನಳವೆಂಬ ಪ್ರಳಯಾಗ್ನಿಯು ಹೇಗೆ ಭಸ್ಮ ಮಾಡುವುದೋ, ಹಾಗೆ ನುಂಗುವಗೆ–ಅಂದರೆ, ಸಂಹರಿಸಿ ಉದರದಲ್ಲಿಟ್ಟುಕೊಳ್ಳುವ ದೇವರಿಗೆ ಈ ಪಾಪಗಳ ಭಯ ಉಂಟಾಗಲಾರದು. ॥೨೪॥

**ತಮಸೂರ್ಯೋ ಯಥಾ ನೈವ ಪಶ್ಯೇತ್ತದ್ವದ್ಧರಿಂ ನ ಹಿ ।**
**ಪಾಪಕರ್ಮ ನಿರೀಕ್ಷೇತ ತದ್ದೂರಾದ್ದೇವ ನಶ್ಯತಿ ॥**

ಎಂಬುದರ ಅರ್ಥ ವಿವರಿಸಿತು. ॥೨೪॥

## ಸರ್ವವ್ಯಾಖ್ಯಾನಸಾರಸಂಗ್ರಹ

ಶ್ರೀಹರಿಯು ಅಪ್ರಾಕೃತವಾದ, ಸಮಸ್ತದೋಷರಹಿತವಾದ ಜ್ಞಾನ, ಆನಂದ, ಬಲ, ವೀರ್ಯಾದಿ ಗುಣಗಳನ್ನೇ ಸ್ವರೂಪವನ್ನಾಗಿ ಉಳ್ಳ ಪರಿಪೂರ್ಣನು. ಸರ್ವತ್ರವ್ಯಾಪಕನೂ, ಪರಿಪೂರ್ಣನೂ, ಪರಬ್ರಹ್ಮನೂ ಆದ ಶ್ರೀಹರಿಯೇ ವಿಷ್ಣುನಾಮಕನು.

ಮೂಲಪ್ರಕೃತಿಯ ಸಹಜ ಧರ್ಮಗಳಾದ ಸತ್ತ್ವ, ರಜ, ತಮ- ಎಂಬ ತ್ರಿಗುಣಗಳ ಕಾರ್ಯರೂಪವಾದ ಕರ್ಮಗಳು ಜಗದ್ವಿಲಕ್ಷಣನೂ, ಸರ್ವತಂತ್ರ ಸ್ವತಂತ್ರನೂ ಆದ ಶ್ರೀವಿಷ್ಣುವಿಗೆ ಏನೇನೂ ಬಾಧಕವನ್ನುಂಟುಮಾಡ

ಲಾರವು. ಪ್ರಾಕೃತಗುಣಗಳಿಂದ ಅತೀತನಾದ ಶ್ರೀಪರಮಾತ್ಮನು ಜೀವಕೃತ ಸಮಸ್ತಕರ್ಮಸಮೂಹಗಳಿಂದ ನಿರ್ಲಿಪ್ತನು.

ಗೆಜ್ಜಲು ಹುಳುವಿಗೆ ಕ್ರಿಮಿಕವೆಂದು ಹೆಸರು. ಅದು ಬೆಂಕಿಗೆ ಮುತ್ತಿ ಕೊಂಡಾಗ, ಸುಟ್ಟು ಭಸ್ಮವಾಗುವುದು. ಶ್ರೀಪರಮಾತ್ಮನು ಅಗ್ನಿಸದೃಶ. (ಕೃಶಾನು) ಜೀವಕೃತ ಪಾಪಕರ್ಮಗಳು ಕ್ರಿಮಿಕ ಸದೃಶ. ಪತಿತಪಾವನ ನಾದ ಶ್ರೀಹರಿಯ ನಾಮಸ್ಮರಣೆ ಮಾತ್ರದಿಂದ ಸಕಲ ಪಾಪಗಳ ಪರಿಹಾರ ಎಂದ ಮೇಲೆ, ನಿರ್ದೋಷನಾದ ಆ ನಿರಂಜನಗೆ ಪಾಪಕರ್ಮಗಳಿಂದ ಬಾಧಕವೇನೇನೂ ಆಗಲಾರದು. ॥೨೪॥

## ಪದ-೨೫

ಮೂಲ :–

ಮೋದ ಶಿರ ದಕ್ಷಿಣಪಕ್ಷ ಪ್ರ ।
ಮೋದ ಉತ್ತರ ಪಕ್ಷವೆಂದು ಖು ।
ಗಾದಿ ಶ್ರುತಿಗಳು ಪೇಳುವುವು ಆನಂದಮಯ ಹರಿಗೆ ॥
ಮೋದ ವೈಷಿಕಸುಖ ವಿಶೇಷ ಪ್ರ ।
ಮೋದ ಪಾರತ್ರಿಕ ಸುಖಪ್ರ ದ ।
ನಾದ ಕಾರಣದಿಂದ ಮೋದ ಪ್ರಮೋದ ಎನಿಸುವನು ॥ ॥೨೫॥

ಅವತರಣಿಕೆ :–

ಮೋದ ಪ್ರಮೋದನಾಮಕನಾದ ಶ್ರೀಹರಿಯ ಸುಲಕ್ಷಣಗಳನ್ನು ಹೇಳುತ್ತಾರೆ. ॥೨೫॥

**ಪ್ರತಿಪದಾರ್ಥ :–**

**ಆನಂದಮಯ** = ಆನಂದವೇ ಶರೀರವಾಗಿ ಸುಖ ಪರಿಪೂರ್ಣನಾದ, **ಹರಿಗೆ** = ಬಿಂಬರೂಪಿಯಾದ ಶ್ರೀಪರಮಾತ್ಮಗೆ, **ಮೋದ** = ಅಪ್ರಾಕೃತ ವಾದ ನಿರ್ದೋಷವಾದ ಆನಂದವೆಂಬುದೇ, **ಶಿರ** = ಶಿರಸ್ಸಿಗೆ, **ದಕ್ಷಿಣ ಪಕ್ಷ** = ಬಲಪಾರ್ಶ್ವ, **ಪ್ರಮೋದ** = ಪ್ರಮೋದ ಎಂಬುದೇ, **ಉತ್ತರ ಪಕ್ಷವೆಂದು** = ಎಡಪಾರ್ಶ್ವ ಎಂತಲೂ, **ಋಗಾದಿ ಶ್ರುತಿಗಳು** = ಋಗ್ವೇದಾದಿ ಶ್ರುತಿಗಳು (ತೈತ್ತರೀಯೋಪನಿಷತ್ತಿನಲ್ಲಿ), **ಪೇಳುವುವು** = ಪ್ರತಿಪಾದಿಸುವುವು. **ಮೋದ** = ಮೋದವೆಂಬುದೇ. **ವೈಷಿಕಸುಖ ವಿಶೇಷ** = ವಿಷಯಾದಿಗಳಿಂದ ಉಂಟಾಗುವ ಆನಂದವಿಶೇಷಗಳು, **ಪ್ರಮೋದ** = ಎಂಬುದೇ, **ಪಾರತ್ರಿಕ ಸುಖ** = ಪರಲೋಕಗಳಾದ ಶ್ವೇತದ್ವೀಪಾದಿ ಮುಕ್ತಿಧಾಮತ್ರಯಗಳಲ್ಲಿ ಅನುಭವಿಸುವ ಸುಖ, **ಪ್ರದನಾದ ಕಾರಣದಿಂದ** = ಈ ಪ್ರಕಾರ ಐಹಿಕ ಹಾಗೂ ಪಾರತ್ರಿಕ ಪಾಹಿ-ಎಂಬ ಎರಡು ವಿಧವಾದ ಸುಖ ಭೋಗಗಳನ್ನು ಜೀವರಿಗೆ ಕೊಡುವವನಾದ ಕಾರಣದಿಂದ, **ಮೋದ ಪ್ರಮೋದ ಎನಿಸುವನು** = ಮೋದ ನಾಮಕನೆಂತಲೂ, ಪ್ರಮೋದ ನಾಮಕನೆಂತಲೂ- ಋಗಾದಿ ವೇದಗಳಲ್ಲಿ ಕರೆಯಲ್ಪಡುತ್ತಾನೆ. ॥೨೫॥

## ವ್ಯಾಖ್ಯಾನಗಳು

### ೧. ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ :–

ಜ್ಞಾನಪೂರ್ವಕದಿಂದ ದ್ವಂದ್ವಕರ್ಮ ಅರ್ಪಣೆ ಮಾಡಿದವರಿಗೆ, ಐಹಿಕದಲ್ಲೇನು, ಉಭಯತ್ರ ಸುಖಗಳ ಕೊಡತಕ್ಕವ ಪರಮಾತ್ಮನೇ- ಎಂತ ಹೇಳತಾರೆ.

ಆನಂದವೇ ಶರೀರವಾಗಿ, ಆನಂದದಿಂದ ಪೂರ್ಣನಾದ ಬಿಂಬರೂಪಿಯಾದ ಪರಮಾತ್ಮಗೆ ಮೋದ ಎನತಕ್ಕದ್ದೇ ಶಿರಸ್ಸಿಗೆ ದಕ್ಷಿಣಭಾಗವಾಗಿ ಅದೆ. ಪ್ರಮೋದ ಎಂಬುದೇ ಶಿರಸ್ಸಿಗೆ ಉತ್ತರ ಭಾಗವಾಗಿ ಅದೆ, ಎಂತಲೂ ಮೋದ ಎಂಬುದೇ ವಿಶೇಷ ವಿಶೇಷವಾಗಿ ವಿಷಯಾದಿಗಳಿಂದ ಆಗತಕ್ಕ ಸುಖ. ಪ್ರಮೋದ ಎಂಬುದೇ ಪರಲೋಕಗಳಾದ ಶ್ವೇತದ್ವೀಪಾದಿ ಮೂರು ಸ್ಥಾನಗಳಲ್ಲಿ ಲಿಂಗಭಂಗಾನಂತರ ಭೋಗಮಾಡತಕ್ಕ ಸುಖ. ಈ ಎರಡು ವಿಧ ಸುಖಗಳನ್ನು ಜೀವರಿಗೆ ಕೊಡತಾನೆ. ಈ ಕಾರಣದ ದೆಶೆಯಿಂದ ಪರಮಾತ್ಮ **ಮೋದ** ಎಂತಲೂ, **ಪ್ರಮೋದ** ಎಂತಲೂ-ಈ ಪ್ರಕಾರ ಕರಸೋವನಾಗತಾನೆ- ಎಂತ ಋಗ್ವೇದಾದಿ ಶ್ರುತಿಗಳು (ತೈತ್ತರೇಯೋಪನಿಷತ್ತಿನಲ್ಲಿ) ಹೇಳೋವಾಗತವೆ.

ಪ್ರಮಾಣ :- ವಿಷ್ಣುರಹಸ್ಯೇ-

**ಸುಖಮೂರ್ತಿರಯಂ ವಿಷ್ಣುಃ ಇತಿ ಶ್ರುತಿಷು ಗೀಯತೇ ।**
**ಅಯಮಸ್ಯ ಶಿರೋ ಮೋದೋ ದಕ್ಷಿಣಃ ಪಕ್ಷ ಉಚ್ಯತೇ ॥**

**ಪ್ರಮೋದ ಉತ್ತರ ಪಕ್ಷಃ ಆತ್ಮಾ ಆನಂದ ಈರಿತಃ ।**
**ವಸ್ತುವಿಜ್ಞಾನಜಂ ಸೌಖ್ಯಮಾನಂದ ಇತಿ ಕೀರ್ತಿತಃ ॥**

**ಮೋದೋ ವಿಶೇಷಜಂ ಸೌಖ್ಯಂ ಪ್ರಮೋದಃ ಸಂಪ್ರಕೀರ್ತಿತಃ ।**
**ಮೋದೋ ವಿಶೇಷಜಂ ಸೌಖ್ಯಂ ತತ್ರ ವಸ್ತು ವಿಶೇಷತಃ ॥**

**ಯಸ್ಮಾದ್ವಿಶೇಷತಃ ಸೌಖ್ಯಂ ಉಪಕಾರಕೃತೇ ಯತ್ತಾಸ್ಯತ್ಸುಖಂ**
**ತತ್ಪ್ರಿಯಮುಚ್ಯತೇ ॥**

ದಕ್ಷಿಣಾಯನ ಸಾಂಕೇತದಿಂದ ದಕ್ಷಿಣ ಪಕ್ಷಕ್ಕೆ ಎಡಭಾಗ ಸಾಂಕೇತವೂ, ಉತ್ತರಾಯಣ ಸಾಂಕೇತದಿಂದ ಉತ್ತರ ಪಕ್ಷ ಬಲಭಾಗ ಸಾಂಕೇತವು. ಈ ಸಾಂಕೇತವನ್ನನುಸರಿಸಿ, **ಮೋದ** ಎಂಬುದು ದಕ್ಷಿಣ ಪಕ್ಷ-ಎಂತಲೂ

**ಪ್ರಮೋದ** ಎಂಬುದು ಉತ್ತರಪಕ್ಷ ಎಂತಲೂ ಸಾಂಕೇತ. ಮೂಲರೂಪಿ ಶ್ರೀನಾರಾಯಣನ ಶಿರದ ದಕ್ಷಿಣಪಾರ್ಶ್ವದಿಂದ ಅಂಶಗಳು ಹೊರಟು, ಜೀವನ ದಕ್ಷಿಣ ಭಾಗದಲ್ಲಿ ಪ್ರವೇಶವಾಗಿ ಅವೆ. ಅದೇ ಪ್ರಕಾರ ಪರಮಾತ್ಮನ ಶಿರದ ಉತ್ತರ ಪಾರ್ಶ್ವದಿಂದ ಅಂಶಗಳು ಹೊರಟು,ಜೀವನ ಉತ್ತರ ಪಾರ್ಶ್ವದಲ್ಲಿ ಪ್ರವೇಶವಾಗಿ ಅವೆ. ಮೋದರೂಪವಾದ ವೈಷಯಿಕಸುಖ ದಕ್ಷಿಣ ಭಾಗಗತ ರೂಪಗಳಿಂದಲೂ, ಪ್ರಮೋದ ರೂಪವಾದ ಸುಖ ಉತ್ತರಭಾಗ ಗತರೂಪದಿಂದಲೂ ಕೊಡತಾನೆ. ವೈಷಯಿಕ ಸುಖಸಾಧನ ದಕ್ಷಿಣಭಾಗ ಗತರೂಪಗಳಿಂದಲೂ, ಪ್ರಮೋದ ಸುಖ ಸಾಧನ ಉತ್ತರ ಭಾಗಗತರೂಪ ಗಳಿಂದಲೂ, ಮಾಡಿಸಿ, ಮೋದ ಪ್ರಮೋದಗಳ ಕೊಡತಾನೆ. 1. ಮೋದ (ದಕ್ಷಿಣ, ಬಲಭಾಗ), ವೈಷಯಿಕಸುಖ ಪುರುಷರಿಗೆ. 2. ಪ್ರಮೋದ (ಉತ್ತರ, ಎಡಭಾಗ) ಪರಲೋಕ ಸುಖ ಸ್ತ್ರೀಯರಿಗೆ. ಇದರ ವ್ಯತ್ಯಾಸದಿಂದಲೇ ಪುರುಷರಿಗೆ ಶ್ಲೋಕದಲ್ಲಿ ಉತ್ತರವಾದ ದಕ್ಷಿಣೋತ್ತರ ಗಳು ಸ್ತ್ರೀಯರ ವಿವಕ್ಷಾ, ಅಸುರರಿಗೆ, ನಿತ್ಯಸಂಸಾರಿಗಳಿಗೆ ವೈಷಯಿಕ ಸುಖ ಇರೋದಾಗಿ ಅದೆ. ಪ್ರಮೋದ ಸುಖಕ್ಕೆ ಪ್ರತ್ಯಾಮ್ನಾಯ ಅಂಧಂ ತಮ ದುಃಖಪ್ರದವೆಂದು ತಾತ್ಪರ್ಯ. ॥೨೫॥

## ೨. ಭಾವಪ್ರಕಾಶಿಕೆ :–

ಪರಮಾತ್ಮನು ಆನಂದಸ್ವರೂಪನೆಂದು ಶ್ರುತಿಸ್ಮೃತಿ ಸಿದ್ಧವಾಗಿರುವುದು. "ಅಸ್ಯಪ್ರಿಯಮೇವ ಶಿರದ ಮೋದೋ ದಕ್ಷಿಣ ಪಕ್ಷಃ । ಪ್ರಮೋದ ಉತ್ತರ ಪಕ್ಷಃ । ಆನಂದ ಆತ್ಮಾ ।" ಎಂದು ತೈತ್ತರಿಯೋಪನಿಷತ್ತಿನಲ್ಲಿ ಹೇಳಿರುವರು. ಮತ್ತು ವಿಷ್ಣು ರಹಸ್ಯ ೨೧ನೆಯ ಅಧ್ಯಾಯದಲ್ಲಿ "ಪ್ರಿಯ ಮಸ್ಯ ಶಿರೋಮೋದೋ ದಕ್ಷಿಣ ಪಕ್ಷ ಉಚ್ಯತೇ । ಪ್ರಮೋದ ಉತ್ತರಃಪಕ್ಷ ಆತ್ಮಾನಂದ ಇತೀರಿತಃ । ವಸ್ತುವಿಜ್ಞಾನಜಂ ಸೌಖ್ಯಮಾನಂದ ಇತಿ ಕೀರ್ತಿತಃ ಮೋದ ವಿಷಯಜಂ ಸೌಖ್ಯಂ ತತ್ರವಸ್ತು ವಿಶೇಷತಃ । ಯತ್ಸಾಮ್ಯದ್ವಿಶೇಷತಃ ಸೌಖ್ಯಂ ಪ್ರಮೋದಃ ಸ ಪ್ರಕೀರ್ತಿತಃ । ಉಪಕಾರೇ ಕೃತೇಯತ್ಸ್ಯಾತ್ಸುಖಂ ತತ್ಪ್ರಿಯ ಉಚ್ಯತೇ"–ಎಂದು ಹೇಳಿರುವರು. ಇದೇ ಅರ್ಥವನ್ನೇ ಈ ಪದ್ಯ

ದಲ್ಲಿ ಹೇಳಿರುತ್ತಾರೆ. ಆನಂದ ಸ್ವರೂಪನಾದ ಶ್ರೀಹರಿಗೆ ಪ್ರಿಯವೇ ಶಿರಸ್ಸು. ಮೋದವು ಬಲದ ಭಾಗವು. ಪ್ರಮೋದವು ಎಡದ ಭಾಗವು. ಆನಂದವೇ ಆತ್ಮ. ಆನಂದವೆಂದರೆ, ವಸ್ತುಗಳ ಜ್ಞಾನದಿಂದಾಗುವ ಸುಖವು. ಪರಮಾತ್ಮನಿಗೆ ಪ್ರಪಂಚದ ಸಕಲ ವಸ್ತುವಿನ ಜ್ಞಾನವಿರುವುದರಿಂದ ಆನಂದ ಸ್ವರೂಪನೆಂದು ಪ್ರಸಿದ್ಧನಾದನು. ಮೋದವೆಂದರೆ, ವಿಷಯಭೋಗದಿಂದಾಗುವ ಸುಖವು. ಪ್ರಮೋದವೆಂದರೆ ಹೊಸ ವಸ್ತು ಲಾಭದಿಂದಾಗುವ ವಿಶೇಷ ಸುಖವು. ಈ ಸುಖವು ಪರಲೋಕದಲ್ಲೇ ದೊರಕುವುದು. ಆದ್ದರಿಂದ ದಾಸಾರ್ಯರು ಪ್ರಮೋದವೆಂದರೆ ಪಾರತ್ರಿಕಸುಖವೆಂದು ಹೇಳಿರುವರು. ಮತ್ತೊಬ್ಬರಿಗೆ ಉಪಕಾರ ಮಾಡುವುದರಿಂದ ಆಗುವ ಸುಖಕ್ಕೆ ಪ್ರಿಯವೆಂದು ಹೆಸರು. ಆನಂದ ಸ್ವರೂಪನಾದ ಪರಮಾತ್ಮನಿಗೆ ಪ್ರಿಯ, ಮೋದ, ಪ್ರಮೋದ, ಮೊದಲಾದವು ಅಂಗಗಳಾಗಿರುವವು. ಹೀಗೆ ಪರಮಾತ್ಮನನ್ನು ತಿಳಿದು, ಉಪಾಸನೆ ಮಾಡುವವರಿಗೆ ಪ್ರಿಯ, ಮೋದ, ಪ್ರಮೋದ ಮೊದಲಾದ ಸುಖವನ್ನು ಕೊಡುವುದರಿಂದ ಮೋದ, ಪ್ರಮೋದ–ಮೊದಲಾದ ಹೆಸರು– ಪರಮಾತ್ಮನಿಗೆ ಇರುವವೆಂಬ ಭಾವ. ॥೨೫॥

**೩. ಭಾವದರ್ಪಣ :-**

"ಪ್ರಿಯಮಸ್ಯ ಶಿರೋ ಮೋದೋ ದಕ್ಷಿಣಃ ಪಕ್ಷ ಉಚ್ಯತೇ । ಪ್ರಮೋದ ಉತ್ತರ ಪಕ್ಷ ಆತ್ಮಾನಂದ ಇತೀರಿತಃ ॥ ವಸ್ತುವಿಜ್ಞಾನಜಂ ಸೌಖ್ಯಮಾನಂದ ತ್ಮಾನ ಇತಿ ಕೀರ್ತಿತಃ । ಮೋದೋ ವಿಷಯಜಂ ಸೌಖ್ಯಂ ತತ್ರವಸ್ತು ವಿಶೇಷತಃ ॥ಯತ್ಸ್ಯಾದ್ವಿಶೇಷತಃ ಸೌಖ್ಯಂ ಪ್ರಮೋದಃಸ ಪ್ರಕೀರ್ತಿತಃ । ಉಪಕಾರೇ ಕೃತೇ ಯತ್ಸ್ಯಾತ್ಸುಖಂ ತತ್ಪ್ರಿಯಮುಚ್ಯತೇ"-ಇತಿ ವಿಷ್ಣುರಹಸ್ಯೋಕ್ತೇಃ ॥೨೫॥

## ೪. ಶ್ರೀವ್ಯಾಸದಾಸ ಸಿದ್ಧಾಂತ ಕೌಮುದೀ :–

ನಾಮ್ನೈಕದೇಶವ್ಯಾಯೇನ "ಸು" ಇತ್ಯಸ್ಯ ಸುಖಮರ್ಥಮಭಿಪ್ರೇತ್ಯ "ಪ್ರಿಯಂ ಶಿರಂ" ಇತ್ಯರ್ಥ ವಿವಕ್ಷುಃ, "ಪ್ರಿಯಮಸ್ಯ ಮೋದೋ ದಕ್ಷಿಣಃ ಪಕ್ಷಃ ಉಚ್ಯತೇ ॥ ಪ್ರಮೋದ ಉತ್ತರಃ ಪಕ್ಷಃ ಆತ್ಮಾನಂದ ಇತೀರಿತಃ ॥ ವಸ್ತುವಿಜ್ಞಾನಜಂ ಸೌಖ್ಯಂ ಆನಂದ ಇತಿ ಕೀರ್ತಿತಃ ॥ ಮೋದೋ ವಿಷಯಜಂ ಸೌಖ್ಯಂ ತತ್ರವಸ್ತು ವಿಶೇಷತಃ ॥ ಯತ್ಸ್ಯಾದ್ ವಿಶೇಷತಃ ಸೌಖ್ಯಂ ಪ್ರಮೋದಃ ಸಂಪ್ರಕೀರ್ತಿತಃ ॥ ಉಪಕಾರೇ ಕೃತೇ ಯತ್ ಸ್ಯಾತ್ ಸುಖ್ಯಂ ತತ್ಪ್ರಿಯ ಮುಚ್ಯತೇ ॥ ಇತ್ಯಸ್ಯ ತಾತ್ಪರ್ಯಂ ಕಥಯತಿ—"ಮೋದ" ॥ ಇತಿ. ॥೨೫॥

### ಕನ್ನಡಾರ್ಥ

ನಾಮದ ಒಂದು ಅಂಶವನ್ನು ಗ್ರಹಿಸಿದರೆ, ಎಲ್ಲ ನಾಮವನ್ನು ಗ್ರಹಿಸಿದಂತೆ ಆಗುತ್ತದೆ– ಎಂಬ ಯುಕ್ತಿಯಿಂದ "ಸು" ಎಂಬ ಪದಕ್ಕೆ "ಸುಖ"ವೆಂಬ ಅಭಿಪ್ರಾಯ (ಅರ್ಥ)ವಿರುತ್ತದೆ. "ಪ್ರಿಯ"ವು"ಶಿರಸ್ಸು" ಎಂದು ಹೇಳಲು —"ಆನಂದಮಯನ ಶಿರಸ್ಸು "ಪ್ರಿಯ". ಮೋದವು ದಕ್ಷಿಣಪಕ್ಷ. ಪ್ರಮೋದವು ಉತ್ತರಪಕ್ಷ. ಆನಂದವು ಆತ್ಮ. ವಸ್ತುವಿಜ್ಞಾನವು ಆನಂದವೆನಿಸಿರುತ್ತದೆ. ವಿಷಯದಿಂದಾಗುವ ಸೌಖ್ಯವು "ಮೋದ". ಅದರಲ್ಲೂ ವಿಶೇಷವಾದ ಸೌಖ್ಯವು "ಪ್ರಮೋದ"– ಉಪಕಾರ ಮಾಡುವುದರಿಂದ ಉಂಟಾದ ಸುಖವು "ಪ್ರಿಯ"ವೆನಿಸಿದೆ. ಉಪನಿಷತ್ತಿನ ವಿಷಯವನ್ನು— "ಮೋದ" ಈ ಪದ್ಯದಿಂದ ಹೇಳುತ್ತಾರೆ. ॥೨೫॥

## ೫. ಶ್ರೀಗುರುಹೃದಯ ಪ್ರಕಾಶಿಕೆ :–

ಮೋದ ಶಿರ ಎಂದರೆ,ಶಬ್ದ ಸ್ಪರ್ಶಾದಿ ಜನ್ಯ ವೈಷಯಿಕ ಸುಖದಲ್ಲಿರುವ ದೇವರ ಸಂಪತ್ಕರ ಸ್ವರೂಪವಿಶೇಷ ಸುಖವು, ಅತಿಶಯಾನಂದ ಸ್ವರೂಪನಿಗೆ

ಬಲಭಾಗ ಶರೀರವೆಂತಲೂ, ಪ್ರಮೋದವೆಂಬ ಪರಲೋಕದಲ್ಲಿರುವ ಸುಖ ದೇವರ ಸ್ವರೂಪಸುಖವು ಆ ಸ್ವಾಮಿಗೆ ಉತ್ತರಪಕ್ಷವೆಂದರೆ, ಎಡಭಾಗ ಶರೀರವೆಂತಲೂ ಋಗ್ವೇದ, ಯಜುರ್ವೇದ ಮೊದಲಾದ ವೇದಗಳಲ್ಲೂ, ಪುರಾಣಗಳಲ್ಲಿಯೂ ಹೇಳುವುವು. ॥೨೫॥

## ಸರ್ವವ್ಯಾಖ್ಯಾನಸಾರಸಂಗ್ರಹ

ಪರರಿಗೆ ಮಾಡಿದ ಉಪಕಾರದಿಂದ ಉಂಟಾಗುವ ಸುಖಕ್ಕೆ **ಪ್ರಿಯ** ಎಂದು ಹೆಸರು. ತನ್ನಧೀನರಾದ ಜೀವರಿಗೆ ಸದಾಪೇಕ್ಷರಹಿತನಾಗಿ ಆಪ್ತ ಬಂಧುವಿನಂತೆ ಸುಖವನ್ನು ಕೊಡುವುದರಿಂದ– ಶ್ರೀಪರಮಾತ್ಮನಿಗೆ **ಪ್ರಿಯ**ನೆಂತ ನಾಮ.

ಪ್ರಿಯವೆಂಬುದೇ ಶ್ರೀಹರಿಯ ಶಿರಸ್ಸು. ಅದಕ್ಕೆ ಬಲಪಾರ್ಶ್ವದಲ್ಲಿರುವುದು ದಕ್ಷಿಣಪಕ್ಷವು. ಇದನ್ನು **ಮೋದ** ಎಂದು ಕರೆಯುವರು.

ಶ್ರೀಹರಿಯ ಶಿರಸ್ಸಿನ ಎಡ ಪಾರ್ಶ್ವವೇ ಉತ್ತರ ಪಕ್ಷವು. ಇದು **ಪ್ರಮೋದ** ಎಂತ ಕರೆಯಲ್ಪಡುವುದು.

ಶ್ರೀಪರಮಾತ್ಮನ ಮೋದ ಮತ್ತು ಪ್ರಮೋದಗಳೆಂಬ ಸನ್ನಾಮಗಳು ಋಗಾದಿ ಶ್ರುತಿಗಳಲ್ಲಿ ಹೇಳಲ್ಪಟ್ಟಿವೆ. ಇವು ತೈತ್ತಿರಿಯೋಪನಿಷತ್ತಿನ ವಚನಗಳು.

ಗಂಧ, ರಸ, ರೂಪ, ಸ್ಪರ್ಶ, ಶಬ್ದಾದಿ ವಿಷಯಗಳಿಂದ ಇಂದ್ರಿಯಗಳ ದ್ವಾರಾ ಜೀವನಿಗೆ ಉಂಟಾಗುವ ಆನಂದವೇ **ಮೋದ**ವೆನಿಸುವುದು. ಇದು ವೈಷಿಕಸುಖವು.

ವಿರಜಾನದಿಯ ಸ್ನಾನಾನಂತರ ಲಿಂಗಭಂಗ ದ್ವಾರಾ, ಜೀವರಿಗೆ ಆಗುವ ಕರ್ಮಬಂಧವಿಮೋಚನೆ ತನ್ಮೂಲಕ ಶ್ರೀವಾಸುದೇವನ ಪರ

ಮಾನುಗ್ರಹದಿಂದ ಪ್ರಾಪ್ತವಾಗುವ ಸ್ವರೂಪಗತ ಆನಂದದ ಆವಿರ್ಭಾವ ರೂಪವಾದ ನಿತ್ಯಾನಂದರೂಪವಾದ ಮೋಕ್ಷಸುಖ ಹಾಗೂ ಮುಕ್ತರು ಹೊಂದುವ ಸಕಲವಿಧವಾದ ಆನಂದಗಳು ಪಾರತ್ರಿಕ ಸುಖಗಳು. ಅವೇ ಪ್ರಮೋದವೆನಿಸುವುವು. ಅಂದರೆ, ವಿಶೇಷವಾದ ಸುಖವೆಂದರ್ಥ.

ಮೂಲರೂಪೀ ಶ್ರೀಮನ್ನಾರಾಯಣನ ಶಿರದ ದಕ್ಷಿಣಪಾರ್ಶ್ವದಿಂದ ಹೊರಟ ಅಂಶಗಳು ಪ್ರತಿಬಿಂಬನಾದ ಜೀವನ ದಕ್ಷಿಣಭಾಗಗಳಲ್ಲಿ ಪ್ರವೇಶ ವಾಗುವುವು. ಇವು ಐಹಿಕಸುಖಕ್ಕೆ ಕಾರಣವು.

ಬಿಂಬನ ಉತ್ತರ ಪಾರ್ಶ್ವದಿಂದ ಹೊರಟ ಅಂಶಗಳು ಜೀವನ ಉತ್ತರ ಪಾರ್ಶ್ವವನ್ನು ಪ್ರವೇಶಿಸುವುವು. ಇವು ಪಾರತ್ರಿಕ ಆನಂದಕ್ಕೆ ಕಾರಣವಾಗಿವೆ.

ಇಂತು, ಬಿಂಬನು ಪ್ರತಿಬಿಂಬಭೂತರಾದ ಜೀವರಿಗೆ ಐಹಿಕ ಹಾಗೂ ಆ ಮುಷ್ಮಿಕ ಸುಖಪ್ರದನಾದ ಕಾರಣದಿಂದ **ಪ್ರಿಯನಾಮಕನು.** ಅವನೇ ಮೋದ ಮತ್ತು ಪ್ರಮೋದನೆಂತಲೂ ಕರೆಯಿಸಲ್ಪಡುತ್ತಾನೆ. ॥೨೫॥

## ಪದ್ಯ—೨೫

**ಮೂಲ :–**

ಎಂದಿಗಾದರು ವೃಷ್ಟಿಯಿಂದ ವ ।
ಸುಂಧರೆಯೊಳಿಪ್ಪಖಿಳ ಜಲದಿಂ ।
ಸಿಂಧು ವೃದ್ಧಿಯನೈದುವುದೆ ಬಾರದಿರೆ ಬರಿದಹುದೆ ॥

**ಕುಂದುಕೊರತೆಗಳಿಲ್ಲದಿಹ ಸ್ವಾ ।**
**ನಂದಸಂಪೂರ್ಣ ಸ್ವಭಾವಗೆ ।**
**ಬಂದು ಮಾಡುವುದೇನು ಕರ್ಮಾಕರ್ಮ ಜನ್ಯ ಫಲ ॥ ॥೨೬॥**

**ಅವತರಣಿಕೆ :–**

ಸರ್ವದೋಷವಿವರ್ಜಿತನಾದ ಸರ್ವೋತ್ತಮನಾದ ಶ್ರೀಪರಮಾತ್ಮನಿಗೆ ಕರ್ಮಾಕರ್ಮಜನ್ಯವಾದ ಯಾವ ಫಲಗಳೂ ಲೇಪವಾಗುವುದಿಲ್ಲ. ಆ ಫಲಭೋಗ ಜೀವನಿಗೆ ಹೊರತು, ಸರ್ವಕರ್ಮ ಪ್ರೇರಕನಾದ ಶ್ರೀಪರಮಾತ್ಮನಿಗೆ ಎಂದೆಂದಿಗೂ ಇಲ್ಲವೆಂದು-ದೃಷ್ಟಾಂತಪೂರ್ವಕ ತಿಳಿಸುತ್ತಾರೆ. ॥೨೬॥

**ಪ್ರತಿಪದಾರ್ಥ :–**

**ವೃಷ್ಟಿಯಿಂದ** = ಸುರಿಯಲ್ಪಟ್ಟ ಮಳೆಯಿಂದ, **ವಸುಂಧರೆಯೊಳಿಪ್ಪ** = ಭೂಮಿಯಲ್ಲಿ ಹರಿಯುವ ನದಿಗಳು, **ಅಖಿಳ ಜಲದಿಂ** = ಎಲ್ಲಾ ವಿಧವಾದ ನೀರುಗಳಿಂದ, **ಸಿಂಧು** = ಸಮುದ್ರವು, **ಎಂದಿಗಾದರು** = ಯಾವ ಕಾಲದಲ್ಲಾದರೂ, **ವೃದ್ಧಿಯನು ಐದುವುದೆ** = ಅಭಿವೃದ್ಧಿಯಾಗುವುದೇ ? **ಬಾರದಿರೆ** = ಆ ನೀರು ಸಮುದ್ರಕ್ಕೆ ಸೇರದಿದ್ದರೆ, **ಬರಿದಹುದೆ** = ಉದಕಾಭಾವದಿಂದ ಬರಿದಾಗಿ ಒಣಗುತ್ತದೆಯೋ ? **ಕುಂದುಕೊರತೆಗಳಿಲ್ಲದಿಹ** = ಯಾವ ವಿಧವಾದ ಅಭಾವವಾಗಲೀ, ನ್ಯೂನತೆಗಳಾಗಲೀ ಇಲ್ಲದಿರುವ ಸಮಸ್ತ ದೋಷವಿದೂರನಾದ, **ಸ್ವಾನಂದ ಸಂಪೂರ್ಣ ಸ್ವಭಾವಗೆ** = ಜ್ಞಾನಾನಂದಾದಿ ಸಕಲ ಅನಂತಕಲ್ಯಾಣಗುಣಗಣ ಪರಿಪೂರ್ಣನಾದ, ಅನಾದ್ಯನಂತಕಾಲದಿಂದಲೂ ತನ್ನಲ್ಲಿಯೇ ಇರುವ ಸ್ವಾಭಿನ್ನಸುಖಪರಿಪೂರ್ಣನಾದ ಸ್ವಭಾವವುಳ್ಳ ಶ್ರೀಪರಮಾತ್ಮನಿಗೆ, **ಕರ್ಮ** = ಭಕ್ತರು ಅರ್ಜಿಸುವ ಪುಣ್ಯ ಕರ್ಮಗಳಾಗಲೀ, **ಅಕರ್ಮ** = ಪಾಪ ಕರ್ಮಗಳಾಗಲೀ, **ಜನ್ಯಫಲ** = ಶುಭಾಶುಭ, ಕರ್ಮಗಳಿಂದ

ಉಂಟಾದ ಫಲಗಳು, **ಬಂದು** = ಶ್ರೀಪರಮಾತ್ಮನಲ್ಲಿ ಸೇರಿ, **ಮಾಡು ವುದೇನು** = ಯಾವ ವಿಧವಾದ ವಿಕಾರಗಳನ್ನು ಮಾಡುವುದಿಲ್ಲ. ॥೨೬॥

## ವ್ಯಾಖ್ಯಾನಗಳು

### ೧. ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ :-

ಕರ್ಮಾಕರ್ಮಗಳೆರಡೂ ಜೀವಪರಮಾತ್ಮರು ಉಭಯರೂ ಸೇರಿ ಮಾಡಿದಾಗ್ಯೂ,ಫಲಭೋಗ ಜೀವಗೇ ಹೊರ್ತು, ಪರಮಾತ್ಮಗೆ ಇಲ್ಲ-ಎಂತ ಹೇಳತಾರೆ.

ಮಳೆಯಿಂದ ಸುರಿಸಲ್ಪಟ್ಟ ಭೂಮಿಯೊಳು ಇರತಕ್ಕ ಸಮಸ್ತವಾದ ನದೀ ಜಲಗಳು ಸಮುದ್ರ ಸೇರೋಣದರಿಂದ ದಾವ ಕಾಲದಲ್ಲಾದರೂ ಸಮುದ್ರವು ಪೂರ್ವದ ಸ್ಥಿತಿಗಿಂತಲೂ ಜಲದಿಂದ ಅಭಿವೃದ್ಧಿಯಾಗುವುದೇ ? ನದ್ಯಾದಿ ಉದಕಗಳು ಸಮುದ್ರಕ್ಕೆ ಬಂದು ಸೇರದೆ ಇದ್ದರೆ, ಸಮುದ್ರದಲ್ಲಿ ಉದಕವಿಲ್ಲದೇ ಬರೀದಾಗತದೆಯೋ- ಎಂದರೆ, ಉದಕಗಳು ಬರೋಣದರಿಂದ ಅಭಿವೃದ್ಧಿಯೂ, ಬಾರದೇ ಇರೋಣದರಿಂದ, ಕೊರತೆಯಾಗಿ ಒಣಗಿ ಹೋಗೋಣವಾಗಲೀ-ಎರಡೂ ಇಲ್ಲದೇ ತನ್ನ ಸ್ವಭಾವವಾದ ಉದಕದಿಂದ ಪೂರ್ಣವಾಗಿರತದೆ. ಇದರೋಪಾದಿಯಲ್ಲಿ ಸಮುದ್ರಸದೃಶವಾದ ಪರಮಾತ್ಮ ಸಮುದ್ರಗತ ಜಲಸದೃಶ ಸ್ವಕೀಯವಾದ ಜ್ಞಾನ, ಆನಂದ, ಬಲ ಇವುಗಳಿಂದ ಪೂರ್ಣನಾಗಿ ಇದ್ದಾನೆ. ಇಂಥಾ ಸಮುದ್ರ ದೃಷ್ಟಾಂತದೋಪಾದಿಯಲ್ಲಿ ಸ್ವಭಾವವುಳ್ಳ ಪರಮಾತ್ಮಗೆ, ನದೀ ಜಲಗಳು ಸಮುದ್ರ ಸೇರೋದಕ್ಕೆ ಸದೃಶವಾಗಿ ಅಧಿಕಾರಿಗಳು ಭಗವದರ್ಪಣ ಮಾಡಿದ ಪುಣ್ಯ ಕರ್ಮಗಳು, ಈ ಪುಣ್ಯ ಕರ್ಮಗಳಿಂದ ಜನಿತವಾದ ಫಲಗಳು ಪರಮಾತ್ಮನೆಂಬೋ ಸಮುದ್ರ ಸೇರೋಣದರಿಂದ ಆನಂದ ಅಭಿವೃದ್ಧಿ ಆಗೋಣವೇನು, ಅರ್ಪಣರೂಪದಿಂದ ಪರಮಾತ್ಮನಲ್ಲಿ ಸೇರದೇ ಹೋದರೆ,ಆನಂದ ಮಹಾತ್ಮೆ

ಕಡಿಮೆ ಆಗೋಣವೇನು, ಪಾಪಕರ್ಮ. ತಜ್ಜನ್ಯಕರ್ಮ ಅರ್ಪಿಸೋಣದರಿಂದ ಅದು ಪರಮಾತ್ಮನಲ್ಲಿ ಸೇರಿ ಮಹಾತ್ಮ್ಯ ಆನಂದಗಳ ಕೆಡಿಸಿ, ಸಮುದ್ರ ಸದೃಶನಾದ ಪರಮಾತ್ಮನಲ್ಲಿ ಆನಂದ ಮಹಾತ್ಮ್ಯಗಳು ಇಲ್ಲದಂತೆ ಆಗೋಣ ವೇನು-ಇವು ಎರಡೂ ಇಲ್ಲ. ಮತ್ತು ಸಮುದ್ರದೋಪಾದಿಯಲ್ಲಿ ಕುಂದು ಕೊರತೆಗಳು ಇಲ್ಲದೇ ಸ್ವಕೀಯವಾದ ಅನಂದಾಖ್ಯಜಲದಿಂದ ಪೂರ್ಣವಾಗಿ ಇರತಕ್ಕ ಸಮುದ್ರಸದೃಶ ಪರಮಾತ್ಮನಲ್ಲಿ ಭಕ್ತರಾದವರಿಂದ ಕೊಡಲ್ಪಟ್ಟ ಕರ್ಮಾಕರ್ಮಗಳು ತಜ್ಜನ್ಯ ಫಲಗಳು ಪರಮಾತ್ಮನೆಂಬೋ ಸಮುದ್ರದಲ್ಲಿ ಬಂದು ಸೇರಿ ಮಾಡತಕ್ಕ ಕಾರ್ಯವೇನೂ ಇಲ್ಲ. ಸಮುದ್ರದಲ್ಲಿ ನದಿಗಳು ಏಕದೇಶದಲ್ಲಿ ಸೇರಿಕೊಂಡು ಇದ್ದಂತೆ, ಅವುಗಳೂನೂ ಒಂದು ಪ್ರದೇಶದಲ್ಲಿ ಇರುತ್ತವೇ. ಎಂದರೆ, ದ್ವಂದ್ವಕರ್ಮಗಳ ಅರ್ಪಣ ಮಾಡೋದರಿಂದ ಫಲಭೋಜನ, ಪ್ರಯೋಜನ ಜೀವರಿಗೇ ಹೊರ್ತು ಪರಮಾತ್ಮಗೆ ಏನೂ ಇಲ್ಲ. ಅದರ ಸಾಧಕ ಬಾಧಕಗಳು ಈಶ್ವರಗೆ ಇಲ್ಲ-ಎಂತ ತಾತ್ಪರ್ಯ. ॥೨೬॥

**ಪ್ರಮಾಣ :–**

**ಭೂಮಿಸ್ಥಿತಂ ಜಲಂ ನೇತುಮಬ್ಧಿಂ ಪ್ರತಿ ನ ಯತ್ಯತೇ ಸ್ವಭಾ ವೇನ ಗತೇ ತಸ್ಮಿನ್ ಸಮುದ್ರೋ ನೈವ ವರ್ಧತೇ । ನೋ ಸತಾ ತದಭಾವೇನ ತದ್ವಿಷ್ಣೋಽಸ್ಯ ಸುಖಸ್ಯ ಚ ॥**

ಎಂಬ ಅರ್ಥ ವಿವರಿಸಿತು. ॥೨೬॥

## ೨. ಭಾವಪ್ರಕಾಶಿಕೆ

ಲೋಕದಲ್ಲಿ ಮಳೆ ಬಂದು, ಮಹಾನದಿಗಳಲ್ಲಿ ಪೂರ್ಣಪ್ರವಾಹ ಬಂದು, ಸಮುದ್ರದಲ್ಲಿ ಸೇರಿದ ಪ್ರಯುಕ್ತ ಸಮುದ್ರದ ನೀರು ಹೆಚ್ಚುವುದೇ ಆಗಲಿ, ಸೇರದೇ ಹೋದರೆ, ಸಮುದ್ರವು ನೀರಿಲ್ಲದೆ ಬತ್ತಿ ಹೋಗುವುದೇ ಆಗಲಿ, ಎಂತಿಲ್ಲವೋ ಅದರಂತೆ, ಆನಂದಸ್ವರೂಪನಾದ ಪರಮಾತ್ಮನಿಗೆ, ಜೀವ

ಕೃತ ಪುಣ್ಯಪಾಪಫಲಗಳಿಂದ ಆಗುವ ಲಾಭ ನಷ್ಟಗಳೇನೂ ಇಲ್ಲ ! ಇದರಿಂದ ಜೀವರು ತಮ್ಮ ಸಾಧನಕ್ಕಾಗಿ ಪುಣ್ಯಪಾಪಗಳನ್ನು ಸಮರ್ಪಣೆ ಮಾಡಬೇಕೇ ಹೊರತು,ಪರಮಾತ್ಮನಿಗೇನೂ ಆಗಬೇಕಾದುದಿಲ್ಲವೆಂದು ಭಾವ. ॥೨೬॥

## ೩. ಭಾವದರ್ಪಣ :–

ಪೂರ್ಣಸದ್ಗುಣ ಸಮುದ್ರನಾದ ಶ್ರೀಹರಿಗೆ ನಾವು ಅರ್ಪಣಮಾಡ ತಕ್ಕ ಕರ್ಮದಿಂದ ಏನೂ ಕೂಡಿ ಬರೋದಿಲ್ಲವೆಂತಲೂ ಭವಸಾಗರ ದಾಟೋ ಉದ್ದಿಶ್ಯ ಪರಮಾತ್ಮಗೆ ಜೀವರು ಅರ್ಪಣ ಮಾಡಬೇಕೆಂತಲೂ-ಭಾವ ತೋರಿ ಸುತ್ತಾರೆ. । ಎಂದಿಗಾದರು । ತದುಕ್ತಂ । "ಸ್ವಾನಂದ ಸಂಪೂರ್ಣಾಬ್ಧೇಃ ಸ್ವಭಾವಾದಾಗತೇ ಸುಖೇ । ನಾಧಿಕ್ಯಂ ತದಭಾವೌ ದ್ವಾ ಇತಿ" ಚ. ॥೨೬॥

## ೪. ಶ್ರೀ ವ್ಯಾಸದಾಸ ಸಿದ್ಧಾಂತ ಕೌಮುದೀ :–

"ಭೂಮಿ ಸ್ಥಿತಂ ಜಲಂ ನೇತುಂ ಅಬ್ಧಿಂಪ್ರತಿ ನಯತ್ನಾತೇ ॥ ಸ್ವಭಾವೇನ ಗತೇ ತಸ್ಮಿನ್ ಸಮುದ್ರೋ ನೈವ ವರ್ಧತೇ ॥ನ್ಯೂನತಾ ತದಾಭಾವೇನ ತದ್ವಿದ್ವಿಷ್ಣೋಃ ಸುಖಸ್ಯ ಚ ॥ ಸ್ವಾನಂತಾನಂದ ಪೂರ್ಣಾಬ್ಧೇಃ ಸ್ವಭಾವಾ ದಾಗತೇ ಸುಖೇ । ನಾಧಿಕ್ಯಂ ತದಭಾವಾದ್ವಾ ಸುಖ ನೂನತ್ವಮಿಷ್ಯತೇ ।" ಇತ್ಯುಕ್ತಮಾಹ-"ಎಂದು" ಇತಿ.॥ ॥೨೬॥

## ಕನ್ನಡಾರ್ಥ

ಭೂಮಿಯಲ್ಲಿಯೇ ಇರುವ ನೀರನ್ನು ಪಡೆಯಲು ಸಮುದ್ರಕ್ಕೆ ಹೋಗಿ ಪ್ರಯತ್ನವನ್ನು ಮಾಡುವುದಿಲ್ಲ. ನದಿಯು ಸ್ವಾಭಾವಿಕವಾಗಿ ಸಮುದ್ರವನ್ನು ಸೇರಿರುತ್ತದೆ. ಇದರಿಂದ ಸಮುದ್ರದ ಅಭಿವೃದ್ಧಿಯಾಗುವುದಿಲ್ಲ. ನದಿಯು ಸೇರದಿದ್ದರೆ, ಸಮುದ್ರಕ್ಕೆ ನ್ಯೂನತೆಯೂ ಇರುವುದಿಲ್ಲ. ಇದರಂತೆ ತನ್ನ ಸ್ವಾಭಾವಿಕಾನಂತ ಆನಂದ ಪೂರ್ಣನಾದ ಶ್ರೀಹರಿಯಲ್ಲಿ ಸುಖವು (ಪುಣ್ಯಫಲ ಗಳು) ಸೇರಿದರೆ, ಹೊಸ ಅಭಿವೃದ್ಧಿಯಾಗಲೀ, ಸೇರದಿದ್ದರೆ, ನ್ಯೂನತೆ

ಯಾಗಲೀ ಯಾವುದೂ ಉಂಟಾಗುವುದಿಲ್ಲ." ಈ ಪ್ರಕಾರ ಪ್ರಮಾಣೋಕ್ತವಾದ ಪ್ರಮೇಯವನ್ನು "ಎಂದಿಗಾದರೂ" ಈ ಪದ್ಯದಿಂದ ಹೇಳುತ್ತಾರೆ. ||೨೬||

**೫. ಶ್ರೀ ಗುರುಹೃದಯ ಪ್ರಕಾಶಿಕೆ :–**

ವೃಷ್ಟಿ ಎಂಬ ಮಳೆಯಿಂದ ಬಂದ, ವಸುಂಧರೆಯೆಂಬ ಭೂಮಿಯಲ್ಲಿರುವ ಸಮಸ್ತ ಜಲದಿಂದಲೂ ಸಮುದ್ರವು ಹೇಗೆ ತುಂಬಿ ಕೋಡಿ ಹರಿಯುವುದಿಲ್ಲವೋ, ಹಾಗೆ ಮಳೆಯ ನೀರು ಬಾರದಿದ್ದರೆ ಹೇಗೆ ಒಣಗುವುದಿಲ್ಲವೋ ಹಾಗೆ ಕುಂದೆಂಬ ನಾಶವೂ, ಕೊರತೆಯೆಂಬ ಕಡಿಮೆಯಾಗುವುದೂ ಮೊದಲಾದ ದೋಷವಿಲ್ಲದ ಅಪ್ರಾಕೃತಸ್ವರೂಪಾನಂದನಾದ ದೇವರಿಗೆ ಕರ್ಮಾಕರ್ಮವೆಂಬ ಪುಣ್ಯ ಪಾಪಾದಿಗಳಿಂದ ಹುಟ್ಟಿದ ಸುಖ–ದುಃಖಗಳೂ ಏನೂ ಮಾಡಲಾರವು. ||೨೬||

**ತಸ್ಯ ಪ್ರಿಯಮೇವ ಶಿರಃ ಮೋದೋ ದಕ್ಷಿಣಃ ಪಕ್ಷಃ । ಪ್ರಮೋದಃ ಉತ್ತರಃ ಪಕ್ಷಃ ಆನಂದ ಆತ್ಮಾ ||** ಎಂಬ **ಶ್ರುತಿ.**

**ವಸ್ತು ವಿಜ್ಞಾನಜಂ ಸೌಖ್ಯಂ ಆನಂದ ಇತಿ ಕೀರ್ತಿತಃ ಮೋದೋ ವಿಷಯಜಂ ಸೌಖ್ಯಂ ತತ್ರವಸ್ತು ವಿಶೇಷತಃ ||**

**ಯತ್ಸ್ಯಾತ್ ವಿಶೇಷತ ಸೌಖ್ಯಂ ಪ್ರಮೋದಸ್ಸಂ ಪ್ರಕೀರ್ತಿತಃ ||**
**ಉಪಾಕಾರೇ ಕೃತೇ ಯತ್ಸ್ಯಾತ್ಸುಖಂ ತತ್ಪ್ರಿಯ ಮುಚ್ಯತೇ ||**
ಎಂಬ ವಿಷ್ಣು ರಹಸ್ಯ.

**ಭೂಮಿಸ್ಥಿತಂ ಜಲಂ ನೇತುಂ ಅಬ್ಧಿಂ ಪ್ರತಿನಯತ್ನತೇ ।**
**ಸ್ವಭಾವೇನ ಗತೇ ತಸ್ಮಿನ್ ಸಮುದ್ರೋ ನೈವ ವರ್ಧತೇ ||**
**ನ ನ್ಯೂನತಾ ತದಭಾವೇ ಚ ತದ್ವಿಷ್ಣೋ ಸ್ಸುಖಸ್ಯ ಚ || ||೨೬||**

# ಸರ್ವವ್ಯಾಖ್ಯಾನಸಾರಸಂಗ್ರಹ

ಜಲಪೂರ್ಣವಾಗಿರುವ ಲಕ್ಷಣವು ಸಮುದ್ರದ ಸ್ವಾಭಾವಿಕ ಗುಣವು. ಮಳೆಯಿಂದ ಸುರಿಯುವ ನೀರಾಗಲೀ, ಪೂರ್ಣಪ್ರವಾಹದಿಂದ ತುಂಬಿ ಹರಿಯುವ ನದಿಗಳ ನೀರಾಗಲೀ, ಸಮುದ್ರವನ್ನು ಸೇರುವುದರಿಂದ, ಸಮುದ್ರದ ಪೂರ್ವಸ್ಥಿತಿಯಲ್ಲಿರುವ ನೀರಿನ ಪ್ರಮಾಣವು ಅಭಿವೃದ್ಧಿಯಾಗುವುದಿಲ್ಲ. ಸಮುದ್ರವು ಸಹಜವಾಗಿಯೇ ಜಲಪೂರ್ಣವಾಗಿರುವುದು.

ಅಂತೆಯೇ, ಶ್ರೀಪರಮಾತ್ಮನು ಸ್ವಾನಂದಪೂರ್ಣನು. ಅನಾದ್ಯನಂತ ಕಾಲದಿಂದಲೂ ಜ್ಞಾನ, ಆನಂದ, ಬಲ, ವೀರ್ಯ, ಸೌಂದರ್ಯಾದಿ ಅನಂತ ಕಲ್ಯಾಣಗುಣಪರಿಪೂರ್ಣನು. ಇತರರಿಂದ ಅವನಿಗೆ ಜ್ಞಾನಾದಿಗಳ ಪ್ರಾಪ್ತಿ ಬೇಕಿಲ್ಲ. ತಾನೇ ಸ್ವಯಂಪೂರ್ಣನಾಗಿದ್ದಾನೆ.

ಈ ದೃಷ್ಟಾಂತದಲ್ಲಿ ಸಮಸ್ತದೋಷವಿದೂರನಾದ, ಶುಭಗುಣಗಣಧಾಮನಾದ ಆ ಶುಭಾಂಗನು, ಅಪಾರವಾದ ಜಲರಾಶಿಯಿಂದ ಪೂರ್ಣವಾದ ಸಮುದ್ರದ ಸದೃಶನು.

ಭಗವದ್ಭಕ್ತರು ಅರ್ಪಿಸುವ ದ್ವಂದ್ವಕರ್ಮಗಳು, ಸಮುದ್ರಕ್ಕೆ ಬಂದು ಸೇರುವ ನದಿಗಳ ಪ್ರವಾಹ ಸದೃಶ.

ಮಳೆಯ ನೀರು, ನದಿಗಳ ಪ್ರವಾಹ ಇತ್ಯಾಗಳಿಂದ, ಸಮುದ್ರದ ಜಲವು ವೃದ್ಧಿಯಾಗುವುದಿಲ್ಲ. ಅಂತೆಯೇ ಜೀವಕೃತ ಪುಣ್ಯಕರ್ಮಗಳ ಫಲಾರ್ಪಣೆಯಿಂದ, ಶ್ರೀಪರಮಾತ್ಮನ ಅನಂತಗುಣಗಳು ಅಭಿವೃದ್ಧಿ ಹೊಂದುವುದಿಲ್ಲ. ಅಂತೆಯೇ, ಪಾಪ ಕರ್ಮಗಳ ಸಮರ್ಪಣೆಯಿಂದ, ಅವನ ಅಪಾರ ಗುಣಗಳಿಗೆ ಯಾವ ಕೊರತೆಯೂ ಉಂಟಾಗುವುದಿಲ್ಲ. ಶಶ್ವದೇಕ ಪ್ರಕಾರವಾಗಿ ನಿರ್ವಿಕಾರನಾಗಿರುವನು. ಬಿಂಬರೂಪಿಯಾದ ಶ್ರೀಪರ

ಮಾತ್ಮನೇ ಜೀವರಲ್ಲಿ ನಿಂತು, ಕರ್ಮಗಳನ್ನು ಪ್ರೇರಿಸಿ, ಮಾಡಿ ಮಾಡಿಸಿ, ದ್ದಾಗ್ಯೂ, ಸ್ವಾನಂದಪರಿಪೂರ್ಣನಾದ ಶ್ರೀಪರಮಾತ್ಮನಿಗೆ ಆ ಕರ್ಮಗಳ ಫಲಭೋಕ್ತೃತ್ವವು ಎಂದೆಂದಿಗೂ ಇಲ್ಲ. ಕರ್ಮಗಳ ಫಲಾನುಭೋಗ ಜೀವರಿಗೇ ಹೊರ್ತು, ಶ್ರೀಪರಮಾತ್ಮನಿಗೆ ಎಂದೆಂದಿಗೂ ಇಲ್ಲ. ಸಮುದ್ರದ ನೀರಿನಿಂದ ಮೇಘಗಳ ಉತ್ಪತ್ತಿ. ತದ್ವಾರಾ ವೃಷ್ಟಿರೂಪದಿಂದ ಮಳೆಯ ನೀರು ಭೂಮಿಯ ಮೇಲೆ ಬಿದ್ದು, ನದಿಗಳು ಪೂರ್ಣ ಪ್ರವಾಹದಿಂದ ಹರಿಯುವುವು. ಸಮುದ್ರವು ನದಿಯ ನೀರಿಗೆ ಕಾರಣವೇ ಹೊರತು, ನದಿಯ ನೀರಿನಿಂದ ಸಮುದ್ರಕ್ಕೆ ಯಾವ ಪ್ರಯೋಜನವೂ ಇಲ್ಲ. ಬಿಂಬಕ್ರಿಯಾದ್ವಾರಾ, ಜೀವರಿಗೆ ಕರ್ಮಗಳ ಫಲಭೋಗ. ಈ ದೃಷ್ಟಾಂತದಿಂದ ಶ್ರೀ ಪರಮಾತ್ಮನ ಪರಿಪೂರ್ಣತೆಯನ್ನು ತಿಳಿಸುತ್ತಾರೆ. ॥೨೬॥

## ಪದ್ಯ-೨೭

ಮೂಲ :-

ದೇಹವೃಕ್ಷದೊಳೆರಡು ಪಕ್ಷಿಗ ।
ಳಿಹವು ಎಂದಿಗೂ ಬಿಡದೆ ಪರಮ ।
ಸ್ನೇಹದಿಂದಲಿ ಕರ್ಮಜಫಲಗಳುಂಬ ಜೀವ ಖಗ ॥
ಶ್ರೀಹರಿಯು ತಾ ಸಾರಭೋಕ್ತನು ।
ದ್ರೋಹಿಸುವ ಕಲ್ಯಾದಿ ದೈತ್ಯ ಸ ।
ಮೂಹಕೀವ ವಿಶಿಷ್ಟ ಪಾಪಕ್ಲೇಶವೆಲ್ಲರಿಗೆ ॥ ॥೨೭॥

**ಅವತರಣಿಕೆ :–**

ದೇಹಾಖ್ಯ ವೃಕ್ಷಗತ ಈಶಾಖ್ಯ ಪಕ್ಷಿ ಮತ್ತು ಜೀವಾಖ್ಯ ಪಕ್ಷಿಗಳ ವಿಚಾರವನ್ನು **ದ್ವಾಸುಪರ್ಣ ಶ್ರುತ್ಯನುಸಾರ** ತಿಳಿಸುತ್ತಾರೆ. ॥೨೭॥

**ಪ್ರತಿಪದಾರ್ಥ :–**

**ದೇಹವೃಕ್ಷದೊಳು** = ಸ್ಥೂಲಶರೀರವೆಂಬ ವೃಕ್ಷದಲ್ಲಿ, **ಎರಡು ಪಕ್ಷಿಗಳಿಹವು** = ಜೀವ ಮತ್ತು ಈಶ ನಾಮಕವಾದ ಎರಡು ಹಕ್ಕಿಗಳಿವೆ. **ಎಂದಿಗೂ ಬಿಡದೆ** = ಅವೆರಡಕ್ಕೂ ಅನಾದ್ಯನಂತಕಾಲದಿಂದಲೂ ವಿಯೋಗ ವಿಲ್ಲ. **ಪರಮ** = ಸರ್ವೋತ್ತಮನಾದ ಈಶಾಖ್ಯ ಪಕ್ಷಿ– ಎಂಬ ಶ್ರೀಪರ ಮಾತ್ಮನು, **ಸ್ನೇಹದಿಂದಲಿ** = ಜೀವಾಖ್ಯವೆಂಬ ಪಕ್ಷಿಗೆ ಆಪ್ತಸಖನಂತೆ ವಿಯೋಗರಹಿತನಾಗಿದ್ದಾನೆ. **ಜೀವಖಗ** = ಅಪೂರ್ಣನಾದ ಜೀವ ಎಂಬ ಪಕ್ಷಿಯು, **ಕರ್ಮಫಲಗಳೆಂಬ** = ತ್ರಿಗುಣಜನಿತವಾದ ಅನಾದಿ ಕರ್ಮಗಳ ಫಲಗಳನ್ನು ಭೋಜನ ಮಾಡುತ್ತಾನೆ. **ಶ್ರೀಹರಿಯು** = ಸ್ವಾಖ್ಯರಸ ಪರಿಪೂರ್ಣನಾದ ಈಶಾಖ್ಯ ಪಕ್ಷಿಯು, ಅಂದರೆ, ಸರ್ವಪಾಪ ಪರಿಹಾರಕನಾದ ಬಿಂಬರೂಪೀ ಶ್ರೀಹರಿಯು, **ತಾ ಸಾರಭೋಕ್ತನು** = ಕರ್ಮಾಂತರ್ಗತನಾಗಿದ್ದುಕೊಂಡು, ತದ್ಗತ ಸ್ವಾಖ್ಯರಸವನ್ನು ಮಾತ್ರ ಸ್ವೀಕರಿ ಸುವ ಆಪ್ತಕಾಮನು. **ದ್ರೋಹಿಸುವ** = ಶ್ರೀಹರಿಯಲ್ಲಿ ದ್ವೇಷ ಭಾವನೆ ಯಿಂದ ಜೀವೇಶರ ಐಕ್ಯವನ್ನು ಸಾಧಿಸುವ ದ್ರೋಹಿಗಳಾದ, **ಕಲ್ಯಾದಿ ದೈತ್ಯ ಸಮೂಹಕೆ** = ಕಲಿಯೇ ಪ್ರಾರಂಭಮಾಡಿ ತೃಣಾಂತ ತಮೋ ಯೋಗ್ಯಜೀವರ ವರ್ಗಕ್ಕೆ, **ವಿಶಿಷ್ಟ** = ಸಮಸ್ತವಾದ, **ಪಾಪಕ್ಲೇಶವ** = ಪಾಪಕರ್ಮಫಲರೂಪವಾದ ದುಃಖಗಳನ್ನು, **ಎಲ್ಲರಿಗೆ** = ನಿತ್ಯ ಸಂಸಾರಿಗಳಿಗೂ ಮತ್ತು ತಮೋಯೋಗ್ಯ ದೈತ್ಯರಿಗೂ **ಈವ** = ಅವರವರ ಸ್ವರೂಪಯೋಗ್ಯತಾನುಸಾರ ಕೊಡುವನು. ॥೨೭॥

# ವ್ಯಾಖ್ಯಾನಗಳು

## ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ಕರ್ಮಜನ್ಯ ಫಲಗಳು ಜೀವಭುಕ್ತ, ಪರಮಾತ್ಮ ಭುಕ್ತ. ಎರಡಕ್ಕೂ ಭೇದವೂನೂ, 'ದ್ವಾಸುಪರ್ಣಾ' ಶ್ರುತ್ಯರ್ಥವೂನೂ ಹೇಳುತಾರೆ.

ಶ್ರುತಿ ದಾವವೆಂದರೆ – **ದ್ವಾಸುಪರ್ಣಾ ಸಯುಜಾ ಸಖಾಯಾ ಸಮಾನಂ ವೃಕ್ಷಂಪರಿಷಸ್ವಜಾತೇ । ತಯೋರನ್ಯಃ ಪಿಪ್ಪಲಂ ಸ್ವಾದ್ವತ್ತ್ಯನಶ್ನನ್ನನ್ಯೋ ಅಭಿಚಾಕಶೀತಿ ॥** ಇದಕ್ಕೆ ಪದ್ಯರೂಪದಿಂದ ಅರ್ಥ.

ಸ್ಥೂಲದೇಹವೆಂಬ ವೃಕ್ಷದಲ್ಲಿ ಅಪೂರ್ಣನಾದ ಜೀವಾಖ್ಯ ಪಕ್ಷಿ ಒಂದು, ಗುಣಪೂರ್ಣನಾದ ಪರಮಾತ್ಮನೆಂಬೋ ಪಕ್ಷಿ ಇನ್ನೊಂದು. ಅಂತು,ಎರಡು ಪಕ್ಷಿಗಳು ಅಂಗಾಂಗಿ ಭಾವದಿಂದ ಇರೋವಾಗಿ ಅವೆ. ಮತ್ತೊಂದು ಅರ್ಥ– ಏನೆಂದರೆ, ಪಕ್ಷಿಗಳಂತೆ ಮೇಲೆ ಹೊರಟು ಹೋಗುವದ್ದರಿಂದ ಜೀವ ಪರಮಾತ್ಮರಿಗೆ ಪಕ್ಷಿಗಳೆಂತ ಹೆಸರು. ಅನಾದ್ಯನಂತಕಾಲಕ್ಕೂ ವಿಯೋಗವಿಲ್ಲದೇ, ಪರಮ = ಸರ್ವೋತ್ತಮನಾದ ಪರಮಾತ್ಮ, ಸ್ನೇಹದಿಂದಲಿ = ವಿಯೋಗವಿಲ್ಲದೆ ಅಂದರೆ, ವಿಯೋಗರಹಿತವಾದ ಲಕ್ಷಣೋಪೇತಸ್ನೇಹದಿಂದ ಇದ್ದಾನೆ. ದೇಹಾಖ್ಯ ವೃಕ್ಷಗತ ಪಕ್ಷಿದ್ವಯಗಳೊಳಗೆ ಅಪೂರ್ಣನಾದ ಜೀವ ಎನತತ್ಕ ಪಕ್ಷಿ, ತ್ರಿಗುಣ ಜನಿತವಾದ ಅನಾದಿ ಕರ್ಮವನ್ನನುಸರಿಸಿ, ದೇಹೇಂದ್ರಿಯಾದಿಗಳೆಂಬ ಶಾಖಾದಿಂದ ಜನಿತವಾದ ಪುಷ್ಪಗಳೆಂಬೋ ಕರ್ಮಗಳಿಂದ ಜನಿತವಾದ ಶುಭಾಶುಭಗಳೆಂಬ ಫಲಗಳ ಭೋಜನ ಮಾಡುತಾನೆ. ಶ್ರೀದೇವೇರಿಂದ ಸಹಿತನಾದ, ಸ್ವಾಖ್ಯ ಐಶ್ವರ್ಯದಿಂದ ಪೂರ್ಣನಾದ ಹರಿನಾಮಕ ಸರ್ವೋತ್ತಮನಾದ ಪಕ್ಷಿ ಸಾಂಕೇತನಾದ ಪರಮಾತ್ಮ ತಾನು ಜೀವಭುಕ್ತ ಫಲಗಳ ಭೋಜನ ಮಾಡದೆ, ಜೀವಭುಕ್ತ ಫಲಗಳಲ್ಲಿ ವಿದ್ಯಾಮಾನಗಳಾದ ತನಗೆ ಅಭಿನ್ನಗಳಾದ, ತನಗೆ ಸ್ವಾಖ್ಯಗಳಾದ ಸಾರಭೂತಗಳಾದ ಫಲಗಳ

ಭೋಗ ಮಾಡುವನು. ಜೀವಸಾಂಕೇತ ಪಕ್ಷಿಗಳು ತ್ರಿವಿಧ. ಈಶ ಸಾಂಕೇತ ಪಕ್ಷಿ ಒಂದು. ತ್ರಿವಿಧ ಪಕ್ಷಿಗಳೊಳಗೆ ಈಶನಲ್ಲಿ ದ್ರೋಹಚಿಂತನ ಸ್ವರೂಪ ಸ್ವಭಾವದಲ್ಲಿ ಉಳ್ಳ ಪಕ್ಷಿ ಸಮೂಹಗಳು ಎರಡೂ, ದ್ರೋಹಚಿಂತರಹಿತ ವಾದ ಪಕ್ಷಿ ಸಮೂಹ ಒಂದು, ಅಂತು ಮೂರು. ಸರ್ವೋತ್ತಮನಾದ ಪರಮಾತ್ಮ ಸರ್ವೋತ್ತಮ ಅಲ್ಲ– ಎಂತಲೂ, ನಾನೇ ಸರ್ವೋತ್ತಮ– ಎಂತಲೂ, ಈ ರೀತ್ಯಾ ದ್ರೋಹಿಸುವ ಕಲಿ ಮೊದಲಾದ ದೈತ್ಯರ ಗುಂಪಿಗೆ, ಸಮಸ್ತವಾದ ಪಾಪಫಲಗಳೇನು, ದುಃಖಗಳೇನು, ಭಗವದ್ಭಕ್ತಿಯುಳ್ಳ ಮುಕ್ತಿಯೋಗ್ಯರಾದ ಎಲ್ಲಾ ಭಕ್ತರಿಗೆ ವಿಶಿಷ್ಟಪುಣ್ಯಫಲ ಆನಂದ ಇವು ಗಳೇನು, ಮಿಶ್ರಜ್ಞಾನಿಗಳಾದ ನಿತ್ಯಸಂಸಾರಿಗಳಿಗೆ ಸುಖದುಃಖಾತ್ಮಕವಾದ ಏಕಕಾಲಾವಚ್ಛೇದೇನ ಕಷ್ಟ ಸುಖ ಫಲವೇನು ಪರಿಯವಸಾನಕ್ಕೆ ಕೊಡತಾನೆ. ಪರಿಯವಸಾನವಾದ ಜೀವನ್ಮುಕ್ತದಶಾದಲ್ಲಿ ದೈತ್ಯರ ಪುಣ್ಯ ಯಾವತ್ತೂ ತನ್ನ ಭಕ್ತರಿಗೆ, ಈ ಭಕ್ತರ ಪಾಪ ಯಾವತ್ತೂ ದೈತ್ಯರಿಗೆ ಕೊಟ್ಟುಬಿಡತಾನೆ ಪ್ರಾರಬ್ಧಕರ್ಮ ಅವರವರಿಗೆ ಭೋಗ. ಲಿಂಗಭಂಗಾನಂತರ ಮುಕ್ತರಿಗೆ ಸ್ವರೂಪಸುಖ; ತಮೋಯೋಗ್ಯರಿಗೆ ಸ್ವರೂಪದುಃಖಪ್ರದನೆಂತ ಅರ್ಥ. ॥ ೨೭ ॥

ಪ್ರಮಾಣಗಳು :–

ದೇಹವೃಕ್ಷೇ ಸಮಾಸೀನೌ ಸುಖಾಯ್ ಪಕ್ಷಿಣ್‌ಚಿರಂ ।
ತಯೋರ್ಮಧ್ಯೇತು ಯೋ ಜ್ಞಾಯಾತ್ ತಸ್ಯ ಸ್ವಾದೇವಪಿಪ್ಪಲಂ।
ಇತಿ ಪ್ರಾಹ ಶ್ರುತಿ ಸಾಕ್ಷಾತ್ಸಾರಭೋಕ್ತಾ ಹರಿಸ್ತತಃ ।
ಪಾಪಕರ್ಮವಿಭಾಗಸ್ತು ತತ್ತ್ವದೈತೇಷು ಭಾಗಶಃ ।
ತತ್ತ್ವದೈತೇಷು ಯತ್ಪಾಪಂ ತದ್ಭಾಗೀ ಕಲಿರೇವ ಹಿ ॥
ಸುಪರ್ಣಾವೇತೌ ಸದೃಶೌ ಸಖಾಯೌ ಯದೃಚ್ಛಯೈತೌ ಕೃತ
ನೀಡೌ ಚ ವೃಕ್ಷೇ ॥

**ಏಕಸ್ತಯೋಃ ಖಾದತಿ ಪಿಪ್ಪಲಾನ್ನಮನ್ಯೋ ನಿರನ್ನೋಽಪಿ ಬಲೇನ ಭೂಯಾನ್ ||**

ಭಾಗವತ ಏಕಾದಶಸ್ಕಂಧ (11 ನೇ ಅಧ್ಯಾಯ)

ಇದ್ಕೂ ಇದಕ್ಕೆ ಪ್ರಮಾಣವೆಂದರೆ, **ಪುರಂದರ ದಾಸರ ಪದ**–

ಜಯವದೆ ಜಯವದೆ ಈ ಮನೆತನಕೆ । ಬಿಡು ಬಿಡು ಬಿಡು ಬಿಡು ಮನಸಂಶಯವ ।

ಶುಕನೆಂಬ್ಹಕ್ಕಿ ಹೇಳುತದಪ್ಪಾ । ಖಗವೆಂಬೋ ಗಿಡ ಹುಟ್ಟೈತಣ್ಣ ।
ಹಣ್ಣುಗಳೆರಡು ಐದಾವಪ್ಪ । ಮೂರು ಬುಡದ ಗಿಡ ಕೇಳಣ್ಣ ।
ಹಣ್ಣಿನ ಒಳಗೆ ನಾಲ್ಕೂ ರಸವು । ಐದು ದೊಡ್ಡಹರೆ ಕಾಣಪ್ಪ ।
ಆರು ಬಗೆಯ ರಸವ, ಕೇಳು । ಏಳು ಬಗೆಯ ತೊಗಲುಂಟಣ್ಣ
ಸಣ್ಣ ಗರಿಗಳು ಎಂಟೈದಾವೆ । ಅಕ್ಷವು ಇದಕೆ ಒಂಭತ್ತೈತೆ ।
ಎಲೆಗಳು ಹತ್ತು ಐದಾವಪ್ಪ । ಒಂದೇ ಹಕ್ಕಿ ಹಣ್ತಿಂತೈತೆ ।
ಮತ್ತೊಂದ್ಹಕ್ಕಿ ನೋಡುತದಪ್ಪ । ಹಣ್ತಿಂದ್ಹಕ್ಕಿ ಬಡವಾಗೈತೆ ।
ತಿನ್ನದ ಹಕ್ಕಿ ಬಲಿತೈತಣ್ಣ । ಸುಳ್ಳಲ್ಲ ನೀ ಕೇಳೋ ತಮ್ಮ ।
**ದ್ವಾಸುಪರ್ಣದ ಶ್ರುತಿಯಲ್ಲೈತೆ** । ಒಂದೇ ಕುಲದ ಹಕ್ಯಲ್ಲಣ್ಣ ।
ಒಂದೇ ಕುಲವೆಂದು ತಿಳಿಯಲಿಬ್ಯಾಡಾ । ತಿಳಿದರೆ ನಿಮಗೆ ಕೇಡಾದೀತು ।

ಹಳೇವಸ್ತ್ರ ಬಿಸಾಡಣ್ಣ । ಹೊಸ ವಸ್ತ್ರ ನಿಮಗೆ ದೇವ ಕೊಟ್ಟಾನು ।
ಹಕ್ಕಿಯರಸ ಆಡಿದ ಮಾತು । ಉತ್ತಮ ಮಾರ್ಗವ ಹಿಡಿಯೋ ತಮ್ಮ ।
ಮಾರ್ಗವ ಕಟ್ಟಿ ಸುಲೀತಾರೆ । ಗಿರಿ ದುರ್ಗಗಳು ಐದಾವಪ್ಪ ।
ಮಾರನೆಂಬಾ ಕಳ್ಳೈದಾನೇ । ಸಮೀರನಾದರೆ ಹೊಡಟ್ಹೋಗ್ತಾನೆ ।

ಪುರಂದರನಾದರೆ ಬಿಡುವೋನಲ್ಲ । ಸುರಜ್ಯೇಷ್ಠನ ಸಂಗತಿ ಹಿಡಿಯೋ ।
ಕಣ್ಣು ಮೂಗು ಕಿವಿ ನಾಲಿಗೆಯಪ್ಪ । ಒಂದೊಂದೊಬ್ಬರ ಕೊಂದಾ
ವಣ್ಣ ।
ಕುರಂಗ ಮಾತಂಗ ಪತಂಗ ಕೇಳೋ । ಭೃಂಗಾ ಮೀನಾ ಹತವಾದ
ವಣ್ಣ ।
ಜ್ಞಾನ ಭಕ್ತಿಯೆಂಬ ಮಾರ್ಗವು ಎರಡು । ದೊಡ್ಡ ಮಾರ್ಗವ ಹಿಡಿ
ಬೇಕಣ್ಣ ।
ದೊಡ್ಡ ಸಂಗತಿ ಬರುವೋ ತನಕ । ಎರಡೂ ಮನೆಯಲ್ಲಿರಬೇಕಣ್ಣ ।
ದಾನದ ಕೈಯು ತೋರಿಸಬೇಕು । ಆದರಿಂದ ನದಿಯು ದಾಟುತಿಯಪ್ಪ ।
ನಿನ್ನ ಯೋಗ್ಯತೆ ತಿಳಿದ ಮೇಲೆ । **ಪುರಂದರವಿಠಲ** ಸ್ಥಳ ಕೊಟ್ಟಾನು ॥
**(ಜೋಗಿಪದ).** ॥೨೭॥

**೨. ಭಾವಪ್ರಕಾಶಿಕೆ :–**

ಜೀವರ ಸ್ವರೂಪದೇಹ ಸ್ಥೂಲದೇಹವೆಂಬೀರಡು ವೃಕ್ಷಪ್ರಾಯವಾಗಿರುವುವು. ಅನಾದಿಕಾಲದಿಂದಿರುವುದು ಸ್ವರೂಪದೇಹವು. ಸ್ಥೂಲದೇಹವು ನಶ್ವರವಾದುದು. **ದ್ವಾಸುಪರ್ಣಾ**–ಎಂಬ ಶ್ರುತಿಯಲ್ಲಿ ಅನಾದಿಕಾಲವನ್ನು ತೋರಿಸುವುದರಿಂದ,ಸ್ವರೂಪದೇಹವನ್ನೇ ಇಲ್ಲಿ ತೆಗೆದುಕೊಳ್ಳಬೇಕು. ದಾಸರಾಯರೂ ಸಹ ಎಂದಿಗೂ ಬಿಡದೆ– ಎಂಬೆರಡು ವಿಶೇಷಣಗಳಿಂದ ಅನಾದಿ ಲಕ್ಷಣವನ್ನೇ ತೋರಿಸಿರುವರು. ಇದರ ತಾತ್ಪರ್ಯ ಹೀಗೆ :– ಸ್ವರೂಪದೇಹವೆಂಬ ವೃಕ್ಷದಲ್ಲಿ ಹೃದಯಕಮಲವೆಂಬ ಗೂಡನ್ನು ಕಟ್ಟಿಕೊಂಡು, ಅನಾದಿ ಕಾಲದಿಂದಲೂ ಜೀವ ಪರಮಾತ್ಮರೆಂಬ ಎರಡು ಪಕ್ಷಿಗಳಿರುವವು. ಈ ಪಕ್ಷಿಗಳಲ್ಲಿ ಜೀವನ ಸ್ಥೂಲದೇಹ ಸಂಬಂಧದಿಂದ ಮಾಡುವ ಪುಣ್ಯಪಾಪ ಕರ್ಮಗಳ ಫಲಗಳನ್ನು ಜೀವನೆಂಬ ಪಕ್ಷಿಯು ಮಾತ್ರ ಭುಂಜಿಸುವುದು. ಪಕ್ಷಿಗಳು

ಹೇಗೆ ಒಂದು ವೃಕ್ಷದಲ್ಲಿ ಹಣ್ಣುಗಳಿಲ್ಲದಿದ್ದರೆ, ಮತ್ತೊಂದು ವೃಕ್ಷಕ್ಕೆ ಹೋಗಿ ಆಹಾರವನ್ನು ತೆಗೆದುಕೊಳ್ಳುವುವೋ, ಹಾಗೆ ಈ ಸ್ಥೂಲದೇಹ ಹೋದರೆ,ಮತ್ತೊಂದು ದೇಹವನ್ನು ಹೊಂದಿ, ಜೀವನು ಕರ್ಮಫಲವನ್ನನು ಭವಿಸುವನು. ಪರಮಾತ್ಮನೆಂಬ ಪಕ್ಷಿಯು ಮಾತ್ರ ಈ ಕರ್ಮಫಲವನ್ನು ಭುಂಜಿಸುವುದಿಲ್ಲ. ಜೀವರ ಕ್ಷೇಮಕ್ಕಾಗಿ ಪುಣ್ಯಫಲದ ಸಾರವನ್ನು ಮಾತ್ರ ಗ್ರಹಿಸುವನು. ಎಂದು **"ದ್ವಾಸುಪರ್ಣಾಸಯುಜಾ"** ಎಂಬ ಶ್ರುತಿಯು ಹೇಳುವುದು. ಈ ಶ್ರುತಿಯನ್ನು ದ್ವೈತಮತಕ್ಕೆ ಆಧಾರತ್ವೇನ ಭಾಷ್ಯಾದಿಗಳಲ್ಲಿ ಶ್ರೀಮನ್ಮಧ್ವಾಚಾರ್ಯರು ಉದಾಹರಿಸಿರುವರು. ಏಕೆಂದರೆ,ಈ ಶ್ರುತಿಯಲ್ಲಿ ಅನಾದಿಕಾಲದಿಂದಲೂ ಜೀವನೂ ಪರಮಾತ್ಮನೂ ಬೇರೆಯಾಗಿ ಇದ್ದೇ ಇರುವರೆಂತಲೂ, ಜೀವವಿಲಕ್ಷಣ ಪರಮಾತ್ಮನೆಂತಲೂ ಸ್ಪಷ್ಟವಾಗಿ ಹೇಳಿರುವುದು. ಇದರರ್ಥವನ್ನೇ ವಿಷ್ಣುರಹಸ್ಯ ೨೧ ನೆಯ ಅಧ್ಯಾಯದಲ್ಲಿ "ದೇಹವೃಕ್ಷೇ ಸಮಾಸೀನೌ ಸಖಾಯೌ ಪಕ್ಷಿಣೌ ಚರಂ ॥ ತಯೋರ್ಮಧ್ಯೇತು ಯೋಜ್ಯಾಯಾಂ ಸ್ತಸ್ಯಸ್ವಾದ್ವೇವ ಪಿಪ್ಪಲಂ ॥ ಇತಿ ಪ್ರಾಹ ಶ್ರುತಿಸ್ಸಾಕ್ಷಾತ್ಸಾರ ಭೋಕ್ತಾ ಹರಿಸ್ಮೃತಃ "– ದೇಹವೆಂಬ ವೃಕ್ಷದಲ್ಲಿ ಅನಾದಿಕಾಲವಾಗಿ ಎರಡು ಪಕ್ಷಿಗಳು ಸ್ನೇಹದಿಂದ ವಾಸಮಾಡುತ್ತಿರುವುವು. ಇವುಗಳಲ್ಲಿ ಯಾವುದು ಉತ್ತಮ ಪಕ್ಷಿಯೋ, ಅಂದರೆ ಪರಮಾತ್ಮನೆಂಬ ಪಕ್ಷಿ ಎಂದರ್ಥ, ಆ ಪಕ್ಷಿಗೆ ಪಿಪ್ಪಲವೆಂಬ ಕರ್ಮಫಲವು ಬಹು ಸ್ವಾದುವಾಗಿರುವುದು. (ಬಹು ರುಚಿಕರವಾಗಿರುವುದು) ಆದ್ದರಿಂದ ಪರಮಾತ್ಮನು ಸಾರಭೋಕ್ತನೆಂದು ಶ್ರುತಿಯು ಹೇಳುವುದೆಂದು ಹೇಳಿರುವರು. ಇರುವ ಎರಡು ಪಕ್ಷಿಗಳಲ್ಲಿ ಒಂದು ಪಕ್ಷಿಗೆ ಒಂದು ಆ ಫಲವು ರುಚಿಕರವಾಗಿದ್ದಿತು. ಆಂದಮೇಲೆ ಮತ್ತೊಂದು ಪಕ್ಷಿಗೆ ರುಚಿಕರವಾಗಿಲ್ಲವೆಂದು ಬೇರೇ ಹೇಳಬೇಕಾದುದೇ ಇಲ್ಲ ಇದರಿಂದ ಜೀವನು ಪಿಪ್ಪಲವೆಂಬ ಕರ್ಮಫಲವನ್ನು ಅನುಭವಿಸುವನೆಂದು ಸ್ಪಷ್ಟವಾದಂತಾಯಿತು. ಇದೇ ಅರ್ಥವನ್ನೇ ದಾಸಾರ್ಯರು ಈ ಪದ್ಯದಲ್ಲಿ ಹೇಳರುತ್ತಾರೆ :– ಪರಮಾತ್ಮನು ಜೀವನೊಂದಿಗೆ ದೇಹದೊಳಗಿದ್ದು,

ಪುಣ್ಯ ಪಾಪ ಕರ್ಮಗಳನ್ನು ಮಾಡಿಸಿ, ಶುಭವನ್ನು ತಾನು ಸ್ವೀಕರಿಸಿ, ಪುಣ್ಯ ಫಲವನ್ನು ಯೋಗ್ಯರಾದ ದೇವತೆಗಳಿಗೂ, ಮಿಶ್ರಫಲವನ್ನು ಮನುಷ್ಯರಿಗೂ, ಪಾಪಫಲವನ್ನು ದೈತ್ಯರಿಗೂ ಕೊಡುವನು. ॥೨೭॥

೩. ಭಾವದರ್ಪಣ :–

ದ್ವಾಸುಪರ್ಣಾ ಸಯುಜಾ ಸಖಾಯಾ ಸಮಾನಂ ವೃಕ್ಷಂ ಪರಿಷಸ್ವ ಜಾತೇ । ತಯೋರನ್ಯಃ ಪಿಪ್ಪಲಂ ಸ್ವಾದ್ವತ್ತ್ಯನಶ್ನನ್ನಾನ್ಯೋಽಭಿಪಾಕಶೀತಿ" । ಎಂಬ **ಶ್ರುತ್ಯರ್ಥವೇ** ಹೇಳುತ್ತಾರೆ । ದೇಹ । ತದುಕ್ತಂ **ವಿಷ್ಣುರಹಸ್ಯೇ** । "ದೇಹವೃಕ್ಷೇ ಸಮಾಸೀನೌ ಸಖಾಯೌ ಪಕ್ಷಿಣೌ ಚಿರಂ । ತಯೋರ್ಮಧ್ಯೇತು ಯೋ ಜೀವಸ್ತಸ್ಯ ಸ್ವಾದೇವ ಪಿಪ್ಪಲಂ । ಇತಿ ಪ್ರಾಹ ಶ್ರುತಿಃ ಸಾಕ್ಷಾತ್ಸಾರ ಭೋಕ್ತಾ ಹರಿಸ್ತತ" ಇತಿ. ॥೨೭॥

೪. ಶ್ರೀವ್ಯಾಸದಾಸ ಸಿದ್ಧಾಂತ ಕೌಮುದೀ :–

ದೇಹೇವೃಕ್ಷೇ ಸಮಾಸೀನೌ ಸಖಾಯೌ ಪಕ್ಷಿಣೌ ಚಿರಮ್ ॥ ತಯೋಃ ರ್ಮಧ್ಯೇಷು ಯೋಜೀ ಜೀವಃ ತಸ್ಯ ಸ್ವಾದ್ವೇವ ಪಿಪ್ಪಲಮ್ ॥ ಇತಿ ಪ್ರಾಹ ಶ್ರುತಿಃ ಸಾಕ್ಷಾತಾ ಸಾರಭೋಕ್ತಾ ಹರಿಃಸ್ತತಃ ॥ ಪಾಪಕರ್ಮತು ಯತ್ ಕಿಂಚಿತ್ ಜಾಯತೇ ಜೀವತಃ ದ್ವಿಜಾಃ ಯಥಾ ಭಾಗಂ ತತ್ರದೈತ್ಯಾಃ ಜೀವ ಶ್ಚಾಹಿ ವಿಭಾಗಶಃ-" ಇತ್ಯುಕ್ತಮಾಹ–'ದೇಹ' ಇತಿ. ॥೨೭॥

## ಕನ್ನಡಾರ್ಥ

"ದೇಹ ವೃಕ್ಷದಲ್ಲಿ ಎರಡು ಪಕ್ಷಿಗಳು ಬಹುಕಾಲದಿಂದ ಮಿತ್ರತ್ವದಲ್ಲಿ ಸೇರಿಕೊಂಡಿವೆ. ಅವುಗಳಲ್ಲಿ ಜೀವವೆಂಬ ಪಕ್ಷಿಯೇ ಪುಣ್ಯಪಾಪ ಫಲಗಳನ್ನು ಸವಿಯುವಂತಹದು. ಹೀಗೆ ಶ್ರುತಿಯು ಸಾರುತ್ತದೆ.— ಸಾರಭೋಕ್ತೃವು ಸಾಕ್ಷಾತ್ ಶ್ರೀಹರಿಯೇ ! ಜೀವನಿಂದ ಉಂಟಾಗುವ ಪಾಪಕರ್ಮದ ಫಲ

ವನ್ನು ಯಥಾಭಾಗವಾಗಿ ದೈತ್ಯರೂ, ಮಿಕ್ಕ ಜೀವರೂ ಅನುಭವಿಸುವರು" ಹೀಗೆ ಹೇಳಿದ ವಿಷಯುವನ್ನು 'ದೇಹ' ಈ ಪದ್ಯದಿಂದ ಹೇಳುತ್ತಾರೆ.

॥೨೭॥

## ೫. ಶ್ರೀಗುರುಹೃದಯಪ್ರಕಾಶಿಕೆ :–

ದೇಹವೆಂಬ ಒಂದು ವೃಕ್ಷದಲ್ಲೇ ಪುಣ್ಯ ಪಾಪಫಲಗಳಿಂದ ಸುಖ ದುಃಖ ಗಳನ್ನು ಅತ್ಯಾಸಕ್ತಿಯಿಂದ ಸುಖದ ಹಾಗೆ ಅನುಭವಿಸುವ ಜೀವನೆಂಬ ಪಕ್ಷಿ ಒಂದು, ತನ್ನ ಸ್ವರೂಪಸಾರ ಸುಖವನ್ನೇ ಸ್ವೀಕರಿಸುವ ಶ್ರೀಹರಿಯೆಂಬ ಪಕ್ಷಿಯೊಂದು ಸಹ ಎರಡು ಪಕ್ಷಿಗಳಿರುವುವು. ದ್ರೋಹಿಸುವ, ಎಂದರೆ ಅನಾದಿ ಸ್ವಭಾವ ದ್ವೇಷದಿಂದ ವಿರೋಧಾಪೇಕ್ಷೆಯಿರುವ ಕಲಿಯೇ ಮೊದಲಾದ ಅಸುರ ಸಮೂಹಕ್ಕೆ ಸಮಸ್ತ ಪಾಪಫಲ ಕ್ಲೇಶಗಳನ್ನು ದೇವರು ಕೊಡುವನು' ದೇವರೂ, ಜೀವನೂ ಪಕ್ಷಿಗಳಂತೆ ಮೇಲೆ ಹೊರಟು ಹೋಗುವುದರಿಂದ ಜೀವ ಪರಮಾತ್ಮರಿಗೆ ಪಕ್ಷಿಗಳೆಂಬ ಹೆಸರು. ॥೨೭॥

**ದೇಹವೃಕ್ಷೇ ಸಮಾಸಿನೌ ಸಖಾಯೌ ಪಕ್ಷಿಣೌ ಚಿರಂ ।**
**ತಯೋರ್ಮಧ್ಯೇ ತು ಯೋಜ್ಯಾಯಾನ್ ತಸ್ಯ ಸ್ವಾದ್ವೇವ**
**ಪಿಪ್ಪಲಂ । ಇತಿ ಪ್ರಾಹ ಶ್ರುತಿಃ ।**
**ಸಾಕ್ಷಾತ್ ಸಾರಭೋಕ್ತಾ ಹರಿಸ್ತಥಾ ॥**
**ಪಾಪಕರ್ಮ ವಿಭಾಗಸ್ತು ತತ್ತ್ವದೈತ್ಯೇಷು ಭಾಗಶಃ ।**
**ತತ್ತ್ವದೈತ್ಯೇಷು ಯತ್ಪಾಪಂ ತದ್ಭಾಗೀ ಕಲಿರೇವ ಹಿ ॥**

–ಎಂಬರ್ಥ ವಿವರಿಸಿತು. ॥೨೭॥

# ಸರ್ವವ್ಯಾಖ್ಯಾನಸಾರಸಂಗ್ರಹ

ಸ್ಥೂಲದೇಹವೆಂಬ ವೃಕ್ಷದಲ್ಲಿ ಜೀವ ಮತ್ತು ಈಶ-ಎಂಬ ಎರಡು ಪಕ್ಷಿಗಳು ವಾಸವಾಗಿವೆ. ಜೀವಾಖ್ಯಪಕ್ಷಿಯು ಅಪೂರ್ಣವಾದದ್ದು. ಈಶಾಖ್ಯ ಪಕ್ಷಿಯು ಪರಿಪೂರ್ಣವಾದದ್ದು.

ಇವೆರಡೂ ಪಕ್ಷಿಗಳೂ ಪರಸ್ಪರ ಮಿತ್ರತ್ವದಿಂದ ಇವೆ. ಈಶಾಖ್ಯ ಪಕ್ಷಿಯು ಸರ್ವೋತ್ತಮವಾಗಿದ್ದು, ಬಿಂಬರೂಪದಿಂದ ಇದೆ. ಜೀವಾಖ್ಯ ಪಕ್ಷಿಯು ಈಶಾಖ್ಯ ಪಕ್ಷಿಯ ಅಧೀನವಾಗಿದ್ದು, ಅದಕ್ಕೆ ಪ್ರತಿಬಿಂಬಭೂತವಾಗಿದೆ. ಈಶಾಖ್ಯ ಪಕ್ಷಿಯು ಜೀವಾಖ್ಯ ಪಕ್ಷಿಯನ್ನು ಎಡಬಿಡದೆ, ಅನಾದ್ಯನಂತಕಾಲದಿಂದಲೂ ಜೀವನಿಂದ ವಿಯೋಗರಹಿತವಾಗಿದೆ.

ಜೀವೇಶರ ಈ ಭೇದವನ್ನು ಹೇಳುವ **ದ್ವಾಸುಪರ್ಣಶ್ರುತಿಯೇ** ಇದಕ್ಕೆ ಪ್ರಮಾಣವು.

**ಪ್ರಮಾಣ :-**

"ದ್ವಾಸುಪರ್ಣಾ ಸಯುಜಾ ಸಖಾಯಾ ಸಮಾನಂ ವೃಕ್ಷಂ ಪರಿಷಸ್ವಜಾತೇ ।
ತಯೋರನ್ಯಃ ಪಿಪ್ಪಲಂ ಸ್ವಾದ್ವತ್ತ್ಯನಶ್ನನ್ನನ್ಯೋ ಅಭಿಚಾಕಶೀತಿ ॥"

**ಭಾವಪ್ರಕಾಶಿಕಾ ವ್ಯಾಖ್ಯಾನದಲ್ಲಿ**-ದೇಹವೃಕ್ಷವೆಂಬ ಪದಕ್ಕೆ ಸ್ವರೂಪದೇಹವೆಂದು ತೆಗೆದುಕೊಳ್ಳಬೇಕೆಂದು ಹೇಳಿರುವರು. ಅನಾದಿಕರ್ಮಜನ್ಯವಾದ ಫಲಗಳನ್ನು ಜೀವಾಖ್ಯ ಪಕ್ಷಿಯು ಭುಂಜಿಸುವುದು ಸ್ಥೂಲದೇಹದಲ್ಲಿ. ಲಿಂಗಭಂಗಾನಂತರ ಕರ್ಮವಿಮೋಚನೆ. ತದನಂತರ ಮುಕ್ತಿಸ್ಥಿತಿಯಲ್ಲಿ ಜೀವರು ಈಶಾಧೀನರಾಗಿ, ಮುಕ್ತಿ ಸುಖವನ್ನು ಅನುಭವಿಸುವರು. ಅಲ್ಲಿ ಪ್ರಾಕೃತ ಕರ್ಮಗಳ ಭೋಕ್ತೃತ್ವವಿಲ್ಲ. ಇದರಿಂದ ಸ್ಥೂಲದೇಹಾಖ್ಯವೃಕ್ಷ

ಗತ ಜೀವಾಖ್ಯ ಪಕ್ಷಿಗೆ ಕರ್ಮಫಲಾನುಭವ. ಮುಕ್ತಿಯಲ್ಲಿಯೂ ಸಹ ಜೀವಾಖ್ಯ ಪಕ್ಷಿಯು ಈಶಾಖ್ಯ ಪಕ್ಷಿಗೆ ಅಧೀನವಾಗಿದ್ದು, ಮುಕ್ತಿಸುಖವೆಂಬ ಫಲವನ್ನು ಉಣ್ಣುವುದು-ಎಂದು ಅನ್ವಯಮಾಡಿಕೊಳ್ಳಬೇಕು.

ತ್ರಿಗುಣಗಳ ಸಂಬಂಧದಿಂದ ಕರ್ಮಾನುಭವ. ಇದನ್ನೇ "ಕರ್ಮಜ ಫಲಗಳು"-ಎಂದಿದ್ದಾರೆ. ಕರ್ಮಫಲರೂಪವಾದ ಶುಭ, ಮಿಶ್ರ, ಅಶುಭ ಗಳೆಂಬ ಪಿಪ್ಪಲಫಲವನ್ನು ಈಶನು ಜೀವರಿಗೆ ಉಣಿಸುತ್ತಾನೆ. ತಿನ್ನುವ ಜೀವಾಖ್ಯ ಹಕ್ಕಿ ಬಡವಾಗಿದೆ. ಸರ್ವಸಾರಭೋಕ್ತನಾದ ಈಶಾಖ್ಯ ಪಕ್ಷಿ ಕರ್ಮ ಫಲಗಳನ್ನು ಉಣದೆ, ಕೇವಲ ಸಾಕ್ಷಿಯಾಗಿದೆ. ಅದು ಕೃಶವಾಗಿಲ್ಲ. ಶಶ್ವ ದೇಕಪ್ರಕಾರವಾಗಿದೆ.

ಜೀವೇಶರ ಭೇದಜ್ಞಾನಕ್ಕೆ ಇದಕ್ಕಿಂತಲೂ ಪ್ರಮಾಣ ಬೇಕೇ ? ॥೨೭॥

## ಪದ್ಯ-೨೮

ಮೂಲ:–

ದ್ಯುಮಣಿ ಕಿರಣವ ಕಂಡಮಾತ್ರದಿ ।
ತಿಮಿರವೋಡುವ ತೆರದಿ ಲಕ್ಷ್ಮೀ ।
ರಮಣ ನೋಡಿದ ಮಾತ್ರದಿಂದಘನಾಶ ಐದುವದು ॥
ಕಮಲಸಂಭವ ಮುಖ್ಯರೆಲ್ಲಾ ।
ಸುಮನಸರೊಳಿಹ ಪಾಪರಾಶಿಯು ।
ಅಮರಮುಖನಂದದಲಿ ಭಸ್ಮವ ಮಾಳ್ಪ ಹರಿ ತಾನು ॥ ॥೨೮॥

**ಅವತರಣಿಕೆ :-**

ಕರುಣಾಮಯನಾದ ಕಮಲನಾಭನು ತನ್ನ ಭಕ್ತರ ಪಾಪಗಳನ್ನು ಪರಿಹರಿಸುತ್ತಾನೆಂದು-ದೃಷ್ಟಾಂತಪೂರ್ವಕ ತಿಳಿಸುತ್ತಾರೆ. ॥೨೮॥

**ಪ್ರತಿಪದಾರ್ಥ :-**

**ದ್ಯುಮಣಿ ಕಿರಣವ** = ಸೂರ್ಯನ ಕಿರಣಗಳ ಪ್ರಕಾಶವನ್ನು, **ಕಂಡ ಮಾತ್ರದಿ** = ಕಂಡ ತಕ್ಷಣ, **ತಿಮಿರ ಓಡುವ ತೆರದಿ** = ಕತ್ತಲೆಯು ಪಲಾಯನ ಮಾಡುವಂತೆ, **ಲಕ್ಷ್ಮೀರಮಣ** = ಇಂದಿರಾಪತಿಯಾದ ಶ್ರೀಮನ್ನಾರಾಯಣನು, **ನೋಡಿದ ಮಾತ್ರದಿಂದ** = ತನ್ನ ಕೃಪಾಕಟಾಕ್ಷವೆಂಬ ನೋಟದಿಂದಲೇ, **ಅಘ** = ಸಂಚಿತಾಗಾಮಿಗಳೆಂಬ ಕರ್ಮರೂಪವಾದ ಪಾಪಗಳು, **ನಾಶ ಐದುವುದು** = ನಾಶವಾಗುತ್ತವೆ, **ಕಮಲಸಂಭವ** = ಶ್ರೀಪರಮಾತ್ಮನ ನಾಭೀಕಮಲದಲ್ಲಿ ಉತ್ಪನ್ನರಾದ ಬ್ರಹ್ಮದೇವರು, **ಮುಖ್ಯರು** = ಜೀವೋತ್ತಮರಾದ ಶ್ರೀವಾಯುದೇವರೇ ಆದಿಯಾಗಿ, **ಎಲ್ಲ ಸುಮನಸರೊಳು** ಇಹ = ಸಮಸ್ತದೇವತೆಗಳಲ್ಲಿ (ಮುಕ್ತಿಯೋಗ್ಯಚೇತನರಲ್ಲಿ) ಇರುವ, **ಪಾಪ ರಾಶಿಯ** = ಸಂಚಿತರೂಪವಾದ ಪಾಪ ಸಮೂಹಗಳನ್ನೇ, **ಹರಿ ತಾನು** = ಸಮಸ್ತ ಪಾಪ ಪ್ರಕ್ಷಾಳಕನಾದ ಹರಿ ನಾಮಕನು, **ಅಮರಮುಖನಂದದಲಿ** = ಅಗ್ನಿಯಂತೆ, ಅಗ್ನಿಗೆ "ಅಮರ ಮುಖ" ನೆಂತ ನಾಮ, **ಭಸ್ಮವ ಮಾಳ್ಪ** = ಸುಟ್ಟು ನಾಶಮಾಡುವನು. ॥೨೮॥

## ವ್ಯಾಖ್ಯಾನಗಳು

### ೧. ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ

ಶ್ರೀಪರಮಾತ್ಮ ತನ್ನ ಭಕ್ತರ ಪಾಪಗಳ ನಾಶ ಮಾಡತಾನೆ- ಎಂತ ಹೇಳತಾರೆ.

ಸೂರ್ಯನ ಕಿರಣಗಳ ತೇಜಸ್ಸಿನ ಕಾಣೋ ಮಾತ್ರದಿಂದ ಅಂಧಕಾರ ಪಲಾಯನ ಮಾಡೋಪಾದಿಯಲ್ಲಿ, ಸೂರ್ಯಸದೃಶನಾದ ಲಕ್ಷ್ಮೀಪತಿಯಾದ ನಾರಾಯಣದೇವರು ಕಟಾಕ್ಷವೀಕ್ಷಣವೆಂಬ ಕಿರಣಗಳಿಂದ ನೋಡೋ ಮಾತ್ರದಿಂದ ಆಗಾಮಿ ಸಂಚಿತಗಳೆಂಬ ಅಂಧಕಾರಸದೃಶವಾದ ಪಾಪಗಳು, ಆಗಾಮಿ ನಿರ್ಲೇಪದಿಂದಲೂ, ಸಂಚಿತ, ಅಗ್ನಿಸ್ಪರ್ಶವಾದ ತೂಲರಾಶಿವತ್ ನಾಶವಾಗೋವಾಗತವೆ. ಪ್ರಾರಬ್ಧ ಭೋಗದಿಂದಲೇ ನಾಶವಾಗಬೇಕು. (ಸಂಚಿತನಾಶ ಮುಂದೆ ಹೇಳತಾರೆ). ಜೀವೋತ್ತಮರಾದ ಬ್ರಹ್ಮದೇವರೇ ಮೊದಲಾದ ಎಲ್ಲಾ ದೇವತೆಗಳಲ್ಲಿ, ತೃಣಾಂತಮುಕ್ತಿಯೋಗ್ಯರಲ್ಲಿ ಇರತಕ್ಕ ಸಂಚಿತ ಪಾಪರಾಶಿಯು, ದೇವತೆಗಳಿಗೆ ಮುಖ್ಯಸ್ಥಾನಾಪನ್ನನಾದ ಅಗ್ನಿದೇವರು ಅನೇಕವಾದ ಕಾಷ್ಟಾದಿಗಳನ್ನು ದಹನಮಾಡಿ ಭಸ್ಮ ಮಾಡೋಪಾದಿಯಲ್ಲಿ, ಬಿಂಬರೂಪಿಯಾದ ಅಗ್ನಿಸದೃಶನಾದ ಶ್ರೀಪರಮಾತ್ಮನು ಭಸ್ಮಮಾಡಿ ಬಿಡೋವನಾಗತಾನೆ. ||೨೮||

**ತಾತ್ಪರ್ಯ :-**

**ತಮಃ ಸೂರ್ಯಂ ಯಥಾ ನೈವ ಪಶ್ಯೇತ್ತದ್ವದ್ಧರಿಂ ನಹಿ ||**
**ಪಾಪಕರ್ಮ ನಿರೀಕ್ಷೇತ ತದ್ದೂರಾದೇವ ನಶ್ಯತಿ |**
**ಬ್ರಹ್ಮಾದಿ ದೇವಭಾಗಾ (ಪಾಪಾಸ್ತು) ತೂಲವ್ದಹತೇ ಹರಿಃ ||**

ಎಂಬ ಪ್ರಮಾಣಗಳನ್ನನ್ನುಸರಿಸಿ, ಸಂಚಿತಕರ್ಮವನ್ನು ವೀಕ್ಷಣಾಖ್ಯಾಜ್ವಾಲದಿಂದ ದಹಿಸಿ ಬಿಡತಾನೆ. ಸೂರ್ಯದೃಷ್ಟಾಂತ ಆಗಾಮಿಗೆ, ಅಗ್ನಿದೃಷ್ಟಾಂತ ಸಂಚಿತಕ್ಕೆ ಎಂದು ತಿಳಿಯಬೇಕು. ಋಜುಗಣದವರಿಗೆ ಪಾಪವಿಲ್ಲ, ತನ್ನಾಶವೂ ಇಲ್ಲ. ಅವರ ಕರ್ಮಗಳು ಯಾವತ್ತೂ ಪುಣ್ಯಗಳೇ. ಇನ್ನೂ ಅಪರೋಕ್ಷಾತ್ಪೂರ್ವಕಾಲೀನ ಕರ್ಮ ಸಂಚಿತ ಎಂತಲೂ, ಅನಂತರ ಕಾಲೀನಕರ್ಮ ಆಗಾಮಿ ಎಂತಲೂ, ಅಪರೋಕ್ಷಾ ಆಗೀನೂ ಭೋಗಮಾಡತಾ ಇರುವ ಕರ್ಮ ಪ್ರಾರಬ್ಧ ಭೋಗದಿಂದಲೇ ನಾಶ ಎಂತಲೂ, ಇರುವ ನೇಮಾನುಸಾರ, ಋಜುಗಳಿಗೆ ಬಾಹ್ಯಆಗಾಮಿ, ಬಾಹ್ಯಸಂಚಿತ ಎರಡೂ ನಾಶ ನಿರ್ಲೇಪಗಳೆಂದು ತಾತ್ಪರ್ಯ. ||೨೮||

## ೨. ಭಾವಪ್ರಕಾಶಿಕೆ :–

'ತಮಸ್ಸೂರ್ಯಂ ಯಥಾನೈವ ಪಶ್ಯೇತ್ತದ್ವದ್ಧರಿಂ ನಹಿ । ಪಾಪಕರ್ಮ ನಿರೀಕ್ಷ್ಯೇತ ದೂರಾದೇವ ವಿನಶ್ಯತಿ ॥ ಬ್ರಹ್ಮಾದಿ ದೇವ ಭಾಗಾಂಸ್ತು ತೂಲವದ್ದಹತೇ ಹರಿಃ' ಕತ್ತಲು ಸೂರ್ಯನನ್ನು ಎಂದಿಗೂ ಹೇಗೆ ನೋಡದೋ, ಹಾಗೇ ಪಾಪಕರ್ಮವು ಪರಮಾತ್ಮನನ್ನು ನೋಡುವುದೇ ಇಲ್ಲ. ದೂರದಿಂದಲೇ ನಾಶ ಹೊಂದುವದು. ಬ್ರಹ್ಮಾದಿ ತತ್ವಾಭಿಮಾನಿದೇವತೆಗಳು, ಕಲಿ ಮೊದಲಾದ ದೈತ್ಯರಲ್ಲಿದ್ದು, ಮಾಡುವ ಪಾಪಗಳನ್ನು ಪರಮಾತ್ಮನು ಅಗ್ನಿಯು ಹಂಜಿಯನ್ನು ಸುಡುವಂತೆ ಸುಟ್ಟುಬಿಡುವನು ಎಂದು– **ವಿಷ್ಣು ರಹಸ್ಯ**ದಲ್ಲಿ ಹೇಳಿರುವರು. ಅದೇ ಅರ್ಥವನ್ನೇ ದಾಸಾರ್ಯರು ಇಲ್ಲಿ ಹೇಳಿರುತ್ತಾರೆ. ಬಿಸಿಲನ್ನು ಕಂಡ ಕೂಡಲೇ ಕತ್ತಲು ಹೇಗೆ ನಾಶ ಹೊಂದುವುದೋ, ಹಾಗೆ ಹರಿಯನ್ನು ಕಂಡಕೂಡಲೇ, ಪಾಪವು ನಾಶ ಹೊಂದುವುದು. ಬ್ರಹ್ಮಾದಿಗಳಲ್ಲಿರುವ ಪಾಪಗಳನ್ನು ಅಗ್ನಿಯಂತೆ ಪರಮಾತ್ಮನು ಸುಟ್ಟು ಬೂದಿಮಾಡುವನು. ॥೨೮॥

## ೩. ಭಾವದರ್ಪಣ :–

ಪರಮಾತ್ಮಗೆ ಜೀವರು ಅರ್ಪಣಮಾಡಿದ ಪಾಪಸಮೂಹ ಶ್ರೀಹರಿ ಸುಟ್ಟು ಹಾಕುತ್ತಾನೆಂದು ಹೇಳುತ್ತಾರೆ । ದ್ಯುಮಣೀತಿ । ಸೂರ್ಯ ತದುಕ್ತಂ ವಿಷ್ಣುರಹಸ್ಯೇ । "ತಮಃ ಸೂರ್ಯಂ ಯಥಾ ನೈವ ಪಶ್ಯೇತ್ತದ್ವದ್ಧರಿಂ ನಹಿ । ಪಾಪಕರ್ಮ ನಿರೀಕ್ಷ್ಯೇತ ದೂರಾದೇವ ವಿನಶ್ಯತಿ । ಬ್ರಹ್ಮಾದಿ ದೇವ ಭಾಗಾಂಸ್ತು ತೂಲವದ್ದಹತೇ ಹರಿ" ರಿತಿ ಚ. ॥೨೮॥

## ೪. ಶ್ರೀ ವ್ಯಾಸದಾಸ ಸಿದ್ಧಾಂತ ಕೌಮುದೀ :–

"ತಮಃ ಸೂರ್ಯಂ ಯಥಾನೈವ ಪಶ್ಯೇತ್ ತದ್ವತ್ ಹರಿಂ ನಹಿ । ಪಾಪಂ ಕರ್ಮ ನಿರೀಕ್ಷೇತ ದೂರಾದೇವ ವಿನಶ್ಯತಿ ॥ ಬ್ರಹ್ಮಾದಿ ದೇವಾ

ಭಾಗಾಂಸ್ತು ತೂಲವದ್ದಹತೇ ಹರಿಃ ||" ಇತ್ಯುಕ್ತಮಾಹ– 'ದ್ಯುಮಣಿ' ಇತಿ.

ಮುಖ್ಯೇತಿ "ಅತದ್ಗುಣ ಸಂವಿಜ್ಞಾನಃ ||" ತೇನ ಸ ಬ್ರಹ್ಮಣಃ ಪಾಪಮ್ ಅನ್ಯೇಷಾಂ ಪಾಪಪ್ರವರ್ತಕತ್ವಾತ್ ಪಾಪ ಸಂಭವಃ || 'ಅಮರ' ಮುಖ ಇತಿ || ಅಗ್ನಿಃ. ||೨೮||

## ಕನ್ನಡಾರ್ಥ

ಕತ್ತಲೆಯು ಸೂರ್ಯನನ್ನು ಹೇಗೆ ನೋಡುವುದಿಲ್ಲವೋ (ಸೂರ್ಯನನ್ನು ಕಂಡು ಓಡಿ ಹೋಗುವುದೋ) ಹಾಗೆ ಪಾಪಕರ್ಮವು ಹರಿಯನ್ನು ನೋಡಲಾರದು. ದೂರದಿಂದಲೇ ನಾಶ ಹೊಂದುತ್ತದೆ. ಹರಿಯು ಉಳಿದ ಬ್ರಹ್ಮಾದಿ ದೇವತೆಗಳ ಪಾಪಕರ್ಮಗಳನ್ನು, ಅರಳಿಯನ್ನು ಸುಡುವ ಅಗ್ನಿಯಂತೆ ಸುಡುವನು."– ಹೀಗೆ ಹೇಳಿದ ಸಂಗತಿಯನ್ನು 'ದ್ಯುಮಣಿ' ಈ ಪದ್ಯದಿಂದ ಹೇಳುತ್ತಾರೆ.

"ಕಮಲಸಂಭವ ಮುಖ್ಯ" ಇಲ್ಲಿ ಬಹುವ್ರೀಹಿಸಮಾಸವಾಗಿದೆ. ಬಹುವ್ರೀಹಿಸಮಾಸದಲ್ಲಿ ಎರಡುವಿಧ (1) ತದ್ಗುಣ ಸಂವಿಜ್ಞಾನ, (2) ಅತದ್ಗುಣ ಸಂವಿಜ್ಞಾನ. ಇಲ್ಲಿ ಅತದ್ಗುಣ ಸಂವಿಜ್ಞಾನ ಬಹುವ್ರೀಹಿ ಸಮಾಸವಿರುತ್ತದೆ. ಅಂದರೆ ಕಮಲಸಂಭವನನ್ನು (ಚತುರ್ಮುಖ ಬ್ರಹ್ಮ) ಬಿಟ್ಟು ಅವನೇ ಮುಖ್ಯವಾಗಿ ಉಳ್ಳ ದೇವತೆಗಳು–ಎಂಬ ಅರ್ಥವು ಇಲ್ಲಿ ಇರುತ್ತದೆ. ಹೀಗೆ ಇಲ್ಲಿಯ ಭಾವ.

ಹೀಗೆ ಸಮಾಸವನ್ನು ಬಿಡಿಸಿ, ಮೇಲೆ ತಿಳಿಸಿದಂತೆ ಅರ್ಥವನ್ನು ಹೇಳಿದರೆ ಚತುರ್ಮುಖ ಬ್ರಹ್ಮದೇವರಿಗೆ ಪಾಪವಿಲ್ಲ. ಉಳಿದವರಿಗೆ ಪಾಪ ಸಂಭವವಿದೆ. ಯಾಕೆಂದರೆ,ಅವರು ಪಾಪವನ್ನು ಎರಡನೆಯವರಿಗೆ ಪ್ರವರ್ತಿಸುವರು- ಎಂಬ ಶಾಸ್ತ್ರ ಸಂಗತಿಯನ್ನು ಅನುಸರಿಸಿದ್ದಾಗುತ್ತದೆ.

'ಅಮರಮುಖ' = ಅಗ್ನಿ. ||೨೮||

## ೫. ಶ್ರೀ ಗುರುಹೃದಯ ಪ್ರಕಾಶಿಕೆ :-

ದ್ಯುಮಣಿ ಎಂಬ ಸೂರ್ಯನ ಕಿರಣವನ್ನು ಕಂಡ ಮಾತ್ರದಿಂದ ತಿಮಿರ ವೆಂಬ ಕತ್ತಲೆ ಓಡಿಹೋಗುವಂತೆ, ಲಕ್ಷ್ಮೀರಮಣನಾದ ದೇವರು ನೋಡಿದ ಮಾತ್ರದಿಂದ ಅಘವೆಂಬ ಸಕಲ ಪಾಪವೂ ನಾಶವಾಗುವುದು. ಕಮಲ ಸಂಭವವೆಂಬ ಬ್ರಹ್ಮನೇ ಮುಖ್ಯವಾಗಿ ಉಳ್ಳ ದೇವತೆಗಳಲ್ಲಿ ಅಸುರಾವೇಶ ಪ್ರಯುಕ್ತ ಬರುವ ಪಾಪಗಳನ್ನೆಲ್ಲಾ ಅಮರಮುಖನೆಂಬ ಅಗ್ನಿಯಂತೆ ಸುಟ್ಟು ದೇವರು ಭಸ್ಮ ಮಾಡುವನು. ॥೨೮॥

**ತಮಸ್ಸೂರ್ಯಂ ಯಥಾ ನೈವ ಪಶ್ಯೇತ್ತದ್ವದ್ಧರಿಂ ನಹಿ ।**
**ಪಾಪಕರ್ಮ ನಿರೀಕ್ಷೇತ ತದ್ದೂರಾದೇವ ನಶ್ಯತಿ ॥**
**ಬ್ರಹ್ಮಾದಿ ದೇವ ಭಾಗಾಂಶ್ಚ ತೂಲವದ್ದಹತೇ ಹರಿಃ ।**
-ಎಂಬರ್ಥ ವಿವರಿಸಿತು. ॥೨೮॥

# ಸರ್ವವ್ಯಾಖ್ಯಾನಸಾರಸಂಗ್ರಹ

ಶ್ರೀಪದ್ಮನಾಭರೂಪೀಯಾದ ಶ್ರೀಹರಿಯು ನಾಭೀಕಮಲದಲ್ಲಿ ಉದ್ಭವರಾದ ಶ್ರೀ ಬ್ರಹ್ಮದೇವರು ಕಮಲಸಂಭವರು. "ಮುಖ್ಯ" ಶಬ್ದಕ್ಕೆ ಜೀವೋತ್ತಮರಾದ ಶ್ರೀವಾಯುದೇವರೆಂದರ್ಥ, ಬ್ರಹ್ಮ ವಾಯ್ವಾದಿ ಋಜುಗಣಸ್ಥರಿಗೆ ಪಾಪಲೇಪವು ಎಂದೆಂದಿಗೂ ಇಲ್ಲ. ಅವರು ಜಾತಾ ಪರೋಕ್ಷಿಗಳು. ಲಿಂಗದೇಹ ಅವರಿಗೆ ದಗ್ಧಪಟದಂತಿರುವುದು. ಸತ್ತ್ವ ಗುಣ ಪ್ರಾಚುರ್ಯವುಳ್ಳ ಅತಿರೋಹಿತ ವಿಮಲ ವಿಜ್ಞಾನಿಗಳು. ಈ ಕಾರಣ ದಿಂದ ಮುಖ್ಯರೆಲ್ಲಾ-ಎಂಬ ಶಬ್ದವನ್ನು ಪ್ರಯೋಗಿಸಿದ್ದಾರೆ ದಾಸವರ್ಯರು.

ಕಲ್ಯಾವಶೇಷವಿರುವ ಗರುಡ ರುದ್ರಾದಿ ದೇವತಾಸಮೂಹ, ಸಕಲ ಮುಕ್ತಿಯೋಗ್ಯ ಚೇತನರಲ್ಲಿರುವ ಸಕಲ ಪಾಪಗಳನ್ನು ಶ್ರೀಹರಿಯು ಅನು ಗ್ರವು ಪರಿಹರಿಸುವುದು. ಇದನ್ನು ವಿವರಿಸಲು ದಾಸರಾಯರು ಎರಡು ದೃಷ್ಟಾಂತಗಳನ್ನು ಕೊಡುತ್ತಾರೆ.

ಸೂರ್ಯನ ಬೆಳಕಿನಿಂದ ಕತ್ತಲೆಯು ಪರಿಹಾರವಾಗುವಂತೆ, ಶ್ರೀ ಹರಿಯು ಕೃಪಾಕಟಾಕ್ಷವೀಕ್ಷಣದಿಂದ ಆಗಾಮಿ ಕರ್ಮಜನಿತ ಪಾಪಗಳ ಪರಿ ಹಾರ. ಆಗಾಮಿಯು ಕರ್ಮದ ಲೇಪವು ಅಪರೋಕ್ಷ ಜ್ಞಾನಿಗಳಿಗಿಲ್ಲ.

ದೇವತೆಗಳಿಗೆ ಹವಿಸ್ಸನ್ನು ಮುಟ್ಟಿಸುವುದರಿಂದ, ಅಗ್ನಿಗೆ ಅಮರ ಮುಖವೆಂದು ಹೆಸರು. ಅಗ್ನಿಯು ಸಮಸ್ತ ವಸ್ತುಗಳನ್ನು ಸುಡುವುದು. ಅದರಂತೆ, ಭಕ್ತಜನರ ಸಂಚಿತ ಆಗಾಮಿ ಸಕಲಪಾಪಗಳನ್ನು ಶ್ರೀಹರಿಯು– ದರ್ಶನವು (ಬಿಂಬಾಪರೋಕ್ಷವು) ಸುಟ್ಟು ಭಸ್ಮ ಮಾಡುವುದು. ಪಾರಬ್ಧ ಕರ್ಮಭೋಗ ಮಾತ್ರ ಇರುವುದು. ॥೨೮॥

## ಪದ್ಯ-೨೯

ಮೂಲ :–

ಚತುರಶತಭಾಗದಿ ದಶಾಂಶ ದೊ ।
ಳಿತರ ಜೀವರಿಗೀವ ಲೇಶವ ।
ದಿತಿಜ ದೇವರ್ಕಳಿಗೆ ಕೊಡುವ ವಿಶಿಷ್ಟ ದುಃಖಸುಖ ॥
ಮತಿವಿಹೀನ ಪ್ರಾಣಿಗಳಿಗಾ ।
ಹುತಿಯು ಸುಖಮೃತಿ ದುಃಖವರ ಯೋ ।
ಗ್ಯತೆಯನರಿತು ಪಿಪೀಲ ಮಶಕಾದಿಗಳಿಗೀವ ಹರಿ ॥ ॥೨೯॥

**ಅವತರಣಿಕೆ :-**

ದೈತ್ಯರಿಗೂ, ದೇವತೆಗಳಿಗೂ, ಇರುವೆ, ನೊಣ-ಮುಂತಾದ ಅಲ್ಪ ಜೀವ ಜಂತುಗಳಿಗೂ ಶ್ರೀಹರಿಯು ಅವರವರ ಯೋಗ್ಯತೆ, ಶಕ್ತ್ಯನುಸಾರ ವಿಭಾಗಿಸಿ ಕೊಡುವ ಪುಣ್ಯಪಾಪ ಕರ್ಮಜನಿತ ಫಲಗಳ ವಿಷಯ ತಿಳಿಸುತ್ತಾರೆ. ॥೨೯॥

**ಪ್ರತಿಪದಾರ್ಥ :-**

**ಚತುರಶತಭಾಗದಿ** = ನಾನ್ನೂರು ಸಂಖ್ಯಾಕವಾದ ಸ್ವತಂತ್ರ ಭಾಗದೊಳಗೆ, **ದಶಾಂಶ** = ಹತ್ತು ಅಂಶವನ್ನು ತೆಗೆದುಕೊಂಡು, **ಇತರ ಜೀವರಿಗೆ** = ದೇವ ದೈತ್ಯರಿಗೆ, ಅನ್ಯರಾದ ದೇವತೆಗಳಿಗೆ, **ಲೇಶವ** = ಅತ್ಯಲ್ಪ ಪ್ರಮಾಣದ ಪಾಪಪುಣ್ಯ ಫಲಗಳನ್ನು, **ಈವ** = ಕೊಡುತ್ತಾನೆ, **ದಿತಿಜ** = ದೈತ್ಯರಿಗೆ, **ವಿಶಿಷ್ಟದುಃಖ** = ಪಾಪಕರ್ಮ ಜನಿತವಾದ ಮಹದ್ದುಃಖವನ್ನು, **ದೇವರ್ಕಳಿಗೆ** = ದೇವತಾಸಮೂಹಕ್ಕೆ, **ವಿಶಿಷ್ಟಸುಖ** = ಪುಣ್ಯಕರ್ಮಗಳ ಫಲರೂಪವಾದ ಆನಂದವನ್ನು, **ಕೊಡುವ** = ಕೊಡುತ್ತಾನೆ. **ಮತಿವಿಹೀನ ಪ್ರಾಣಿಗಳಿಗೆ** - ಅಜ್ಞಾನಿಗಳಾದ ಮೂಢಜೀವರಿಗೆ, **ಆಹುತಿಯು** = ಕಾಲಕಾಲಕ್ಕೆ ಆಹಾರವೇನು, **ಸುಖ** = ಆನಂದವೇನು, **ಮೃತಿ** = ಮರಣವೇನು, **ದುಃಖ** = ದುಃಖವೇನು, **ಅವರ ಯೋಗ್ಯತೆಯನರಿತು** = ಆಯಾಯಾ ಜೀವ ಜಂತುಗಳ ಸ್ವರೂಪಯೋಗ್ಯತೆ, ದೇಹಗತ ಶಕ್ತಿ ಸಾಮರ್ಥ್ಯ- ಇವುಗಳಿಗನುಸಾರವಾಗಿ, **ಪಿಪೀಲ** = ಇರುವೆ, **ಮಶಕ** = ನೊಣ, **ಅದಿಗಳಿಗೆ** = ಇವೇ ಮೊದಲಾದ ಅಲ್ಪಜಂತುಗಳಿಗೆ, **ಹರಿ** = ಬಿಂಬರೂಪನಾದ ಶ್ರೀಪರಮಾತ್ಮನು, **ಈವ** = ಕೊಡುತ್ತಾನೆ ॥೨೯॥

# ವ್ಯಾಖ್ಯಾನಗಳು

## ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ಪಾಪ ಪುಣ್ಯ ವಿಭಾಗಕ್ರಮವನ್ನ ಹೇಳತಾರೆ. ಪ್ರತೀ ಪ್ರತೀ ಪ್ರಾಣಿಗಳ ಸ್ಥೂಲ ಶರೀರಗಳಲ್ಲಿ ಜೀವ-ದೇವ-ದೈತ್ಯರು ಈ ತ್ರಯರೂ ಆವಾಸರಾಗಿದ್ದು, ಮೂರೂ ಮಂದಿ ದೇಹಾಭಿಮಾನಿಗಳು-ಎಂತ ಕರಸತಾರೆ.

ತ್ರಿವಿಧರು ಅವರವರ ಸಾಧನ ಉದ್ದಿಶ್ಯವಾಗಿ ಭಗವದಾಜ್ಞಾನದಿಂದ ಆವಾಸರಾಗಿದ್ದಾರೆ. ಈ ದೇಹದಿಂದ ಮಾಡಲ್ಪಡುವ ಪಾಪಪುಣ್ಯಗಳಿಗೆ ತ್ರಿವಿಧರೂನೂ ಅಭಿಮಾನಿಗಳಾಗಿದ್ದಾರೆ. ದಾವಾ ದಾವದಕ್ಕೆ ದಾರು ದಾರು ಎಂದರೆ, ಪಾಪಕ್ಕೆ ದೈತ್ಯರು, ಪುಣ್ಯಕ್ಕೆ ದೇವತೆಗಳು ಮತ್ತು ಪಾಪ ಪುಣ್ಯ ಉಭಯಕ್ಕೆ ದೇಹಸ್ಥನಾದ ಜೀವ. ದೇಹಸ್ಥನಾದ ಜೀವನ ಕಡಿಯಿಂದ ಪುಣ್ಯಕಾರ್ಯಗಳನ್ನು ದೇವತೆಗಳೂನೂ, ಪಾಪಕಾರ್ಯವನ್ನು ದೇವತೆಗಳೇ ದೈತ್ಯರ ಅಂತರ್ಗತರಾಗಿ ಇದ್ದು, ದೈತ್ಯರ ದ್ವಾರಾ ಮಾಡಸತಾರೆ. ಉಭಯಕರ್ಮ ದೇವ ದೈತ್ಯರ ದ್ವಾರಾ ಜೀವ ಮಾಡತಾನೆ. ತ್ರಿವಿಧರೂ ಮಾಡಿದವರಾದರು. ಆದ ಕಾರಣ ಜೀವನ ಕಡಿಯಿಂದ ಮಾಡಲ್ಪಟ್ಟ ಉಭಯಕರ್ಮಗಳಿಗೆ ತ್ರಿವಿಧರೂ ಬದ್ಧರಾದ ಕಾರಣ, ತ್ರಿವಿಧರಿಗೂ ಭಾಗ ವುಂಟು. ಅದು ಹ್ಯಾಂಗೆಂದರೆ—

ಚತುರಶತಭಾಗದಿ ದಶಾಂಶದೊಳಿತರ ಜೀವರಿಗೀವ– ಎಂದರೆ, ನಾನೂರು ಸ್ವತಂತ್ರಭಾಗದೊಳಗೆ ಸರ್ವರಿಗೆ ತಾರತಮ್ಯಾನುಸಾರ ವಿಭಾಗ ಮಾಡಿಕೊಟ್ಟದ್ದು. ಆದ್ದರಿಂದ ಚತುರಶತ ಅಂತ ಪ್ರಯೋಗವು. ಹತ್ತು ಅಂಶವನ್ನ ತೆಗೆದುಕೊಂಡು, ಇದರಲ್ಲಿ ದೇವ ದೈತ್ಯರಿಗೆ ಅನ್ಯನಾದ ದೇಹಸ್ಥನಾದ ಜೀವಗೆ ಅತ್ಯಲ್ಪ ಪಾಪ ಪುಣ್ಯವ ಕೊಡೋವನಾಗತಾನೆ. ದಶಾಂಶ ಸ್ವಾತಂತ್ರ್ಯವನ್ನು ಅಖಿಲ ನಿರಂಶ ಜೀವರಲ್ಲಿ ಇಟ್ಟ– ಎಂತ ಹೇಳಿರೋಣದ

ರಿಂದ ಹತ್ತು ಅಂಶ ಸ್ವಾತಂತ್ರ್ಯ ಯಾವತ್ತೂ ಜೀವರಿಗೆ ವಿಭಾಗ ಮಾಡಿದರೆ, ಪ್ರತಿ ಜೀವರ ಭಾಗಕ್ಕೆ ಬಂದ ಸ್ವಾತಂತ್ರ್ಯ ಎಷ್ಟು ಮಾತ್ರವೋ ತಾವತ್ಪರಿಮಿತಿ ಪಾಪಪುಣ್ಯಗಳ ದೇಹಸ್ಥ ಜೀವಗೆ ಕೊಡತಾನೆ. ಲೇಶ-ಎಂಬುದು ಈ ದೃಷ್ಟಾಂತದಂತೆ ತಿಳಿಯಬೇಕು. ಜೀವರಿಗೀವ- ಎಂಬ ಬಹುವಚನ ಪ್ರಯುಕ್ತ ಪ್ರತಿ ಪ್ರತಿ ಜೀವರಲ್ಲಿ ಇದೇ ನೇಮ- ಎಂತ ತಾತ್ಪರ್ಯ. ದಿತಿ ಪುತ್ರರಾದಂಥಾ ದೈತ್ಯರಿಗೆ ದುಃಖಕರಗಳಾದ ವಿಶಿಷ್ಟ ಪಾಪಗಳ ಯಾವತ್ತೂ ಕೊಡೋವನಾಗತಾನೆ. ಈ ದೇಹಗತ ದೇವತೆಗಳಿಗೆ ಸುಖಕರಗಳಾದ ಪುಣ್ಯಗಳು ಯಾವತ್ತೂ ಕೊಡತಾನೆ. ದೇಹಸ್ಥನಾದ ಜೀವಗೆ ಕೊಡಲ್ಪಟ್ಟ ಲೇಶವಾದ ಪಾಪ ಪುಣ್ಯಗಳು ಎರಡೂ ಭೋಗಿಸೋದಕ್ಕೆ ಯೋಗ್ಯತಾ ಇಲ್ಲದೆ, ಭೋಗಮಾಡಿದ್ದು ಹೋಗತಾ, ಅವಶಿಷ್ಟ ಉಳಿಯೋದಾಗಿ, ಅವರಲ್ಲೇ ಆಗಾಮಿ ಸಂಚಿತ-ಎಂತ ಎರಡು ಪ್ರಕಾರ ಕರಸೋದಾಗತವೆ. ಈ ಆಗಾಮಿ ನಿರ್ಲೇಪ, ಸಂಚಿತ ನಾಶ- ಎಂತ ಶಾಸ್ತ್ರದಲ್ಲಿ ವಿದಿತವಾಗಿದೆ. ಅಜ್ಞಾನಿಗಳಾದವರು ಜ್ಞಾನಿಗಳಾದವರನ್ನು ನಿಂದಾದಿಗಳನ್ನು ಮಾಡಿದರೆ, ನಿಂದಾಮಾಡಿಸಿಕೊಂಡ ಜ್ಞಾನಿಗಳು ಭೋಗಿಸತಕ್ಕ ಲೇಶಪಾಪದೊಳಗೆ ನಿಂದಾಮಾಡಿದ ಜೀವರಿಗೆ ಭಾಗಮಾಡಿ ಕೊಡತಾನೆ. ತದ್ವತ್ ಭೂಷಣ ಮಾಡೋಣದರಿಂದ ಪುಣ್ಯಭಾಗ ಮಾಡಿ ಅವರಿಗೆ ಕೊಡತಾನೆ. ಆದ್ದರಿಂದ ಭಗವದ್ಭಕ್ತರ ಭೂಷಣವೂ, ಮಾಡಬೇಕಂತ- ತಾತ್ಪರ್ಯ ಮತ್ತು ಪ್ರಾಣಿಗಳಿಗೆ ಎಂದರೆ, ಬ್ರಹ್ಮಾದಿ ತೃಣಾಂತ ತ್ರಿವಿಧ ಜೀವರಿಗೆ ಆಹಾರವೇನು, ಸುಖವೇನು, ಮರಣವೇನು, ದುಃಖವೇನು ಆಯಾ ಜೀವರ ಸ್ವರೂಪ ಯೋಗ್ಯತೆಯು ಮತ್ತು ಮಾಡಲ್ಪಟ್ಟ ಕರ್ಮಗಳ ಯೋಗ್ಯತೆಯು ಅರಿತವನಾಗಿ (ಪರಮಾತ್ಮನು) ಇರುವೆ, ನೊಣ ಮೊದಲಾದ ಪ್ರಾಣಿಗಳಿಗೆ ಬಿಂಬರೂಪಿ ಪರಮಾತ್ಮ ಕೊಡೋವನಾಗತಾನೆ. ॥೨೯॥

ಪ್ರಮಾಣ :-

ಚತುಂಶ್ಯತೇಷು ಭಾಗೇಷು ದಶಾಂಶಾ ಜೀವಶಕ್ತಿತಾ ।
ಪುಣ್ಯಪಾಪ ಫಲಂ ತಾವದಸ್ಯ ಸ್ಯಾದಿತಿ ನಿಶ್ಚಿತಂ ।

**ತಾವ ದೇವಾಲಮುಸ್ಯಾಸ್ತೀ ಕ್ಷುದ್ರತ್ವಾದಲ್ಪಶಕ್ತಿತಃ ।**
**ಯಥಾ ಹಿ ದೃಶ್ಯತೇ ಲೋಕೇ ಪಿಪೀಲ ಮಶಕಾದಯಃ ।**
**ಅಲ್ಪೇನೈವ ಹಿ ತುಷ್ಯಂತಿ ವ್ಯಥತೇ ಚಾಲ್ಪದುಃಖತಃ ।**
**ಪಾಪಕರ್ಮ ತು ಯತ್ಕಿಂಚಿತ್ ಜಾಯತೇ ಜೀವತೋ ದ್ವಿಜಾಃ ।**
**ಯಥಾ ಭಾಗಂ ತತ್ರ ದೈತ್ಯಾಃ ಜೀವಾಂಶ್ಚಾಪಿ ವಿಭಾಗಿನಃ ॥**

ಇನ್ನೂ

**ಯದಿ ಕಿಂಚೇಮಾಃ ಪ್ರಜಾಃ ಶುಭಮಾಚರಂತಿ ದೇವಾ ಏವ**
**ತದಾಚರಂತಿ ದೇವಾ ನಾಮೇವೈತದ್ಭವತಿ ಸ್ವಾಮೀ ಒ ಫಲಮ**
**ಶ್ನುತೇ ನಾ ಸ್ವಾಮೀ ಕರ್ಮ ಕುರ್ವಾಣಃ ॥**

–ಇತ್ಯಾದಿ ಪ್ರಮಾಣಗಳು ವಿವರಿಸಿದವು. ॥೨೯॥

೨. ಭಾವಪ್ರಕಾಶಿಕೆ :–

ಶ್ರೀಪರಮಾತ್ಮನು ತನ್ನ ಸ್ವಾತಂತ್ರ್ಯದ 400 ರಲ್ಲಿ 10 ಅಂಶವನ್ನು ಸಕಲ ಜೀವರಿಗೂ ಕೊಟ್ಟಿರುವನು. ಆ 10 ಅಂಶದಲ್ಲಿ ಅಲ್ಪಭಾಗವನ್ನು ಮಾತ್ರ ಪಶುಗಳು, ಇರುವೆ, ಗುಂಗಾಡು– ಮೊದಲಾದ ಅಜ್ಞಾನಿಪ್ರಾಣಿಗಳಿಗೆ ಕೊಟ್ಟಿರುವನು. ದೇವ ದೈತ್ಯರಿಗೆ ಅಧಿಕವಾದ ಸ್ವಾತಂತ್ರ್ಯವಿರುವುದರಿಂದ ಅಧಿಕವಾದ ಸುಖ ದುಃಖಗಳೆನ್ನನುಭವಿಸುವರು. ಅಲ್ಪ ಪ್ರಾಣಿಗಳಾದ ಪಶು ಪಕ್ಷಿ ಇರುವೆ-ಮೊದಲಾದವುಗಳಿಗೆ ಅವರ ಯೋಗ್ಯತಾನುಸಾರ ಆಹಾರವನ್ನು ಕಲ್ಪಿಸಿ, ಅವುಗಳಿಗೂ ಸುಖ, ದುಃಖ, ಜನನ, ಮರಣಾದಿಗಳನ್ನು ಕೊಡಿಸುವನು. (ಈ ವಿಷಯವನ್ನು ದತ್ತಸ್ವಾತಂತ್ರ್ಯಸಂಧಿಯ ವ್ಯಾಖ್ಯಾನದಲ್ಲಿ ವಿಷ್ಣುರಹಸ್ಯದ ಪ್ರಮಾಣ ಸಹಿತ ವಿವರಿಸಿರುತ್ತೆ). ॥೨೯॥

### ೩. ಭಾವದರ್ಪಣ :–

ಚತುಃಶತ । ಚತುಃಶತೇಷು ಭಾಗೇಷು ದಶಾಂಶಾ ಜೀವಶಕ್ತಿತಾ । ಪುಣ್ಯಪಾಪಫಲಂ ತಾವದಸ್ಯಸ್ಯಾದಿತಿ ನಿಶ್ಚಿತಂ । ತಾವ ದೇವಾಲಮೋ ತಸ್ಯ ಚಕ್ಷುದ್ರತ್ವಾದಲ್ಪಶಕ್ತಿತಃ। ಯಥಾ ಹಿ ದೃಶ್ಯತೇ ಲೋಕೇ ಪಿಪೀಲಸ್ಯ ಮಶಕಾದಯಃ । ಅಲ್ಪೇ ನೈವಹಿ ತುಷ್ಯಂತಿ ವ್ಯಥಂತೇ ಚಾಲ್ಪ ದುಃತ"–ಇತಿ ವಿಷ್ಣು ರಹಸ್ಯೋಕ್ತೇಃ ॥೨೯॥

### ೪. ಶ್ರೀ ವ್ಯಾಸದಾಸ ಸಿದ್ಧಾಂತ ಕೌಮುದೀ :–

"ಚತುಃಶ್ಯತೇಷು ಭಾಗೇಷು ದಶಾಂಶಾ ಜೀವ ಶಕ್ತಿ (ಕ್ತ್ರ) ತಾ ॥ ಪುಣ್ಯಂ ಪಾಪ ಮೂಲಂ ತಾವತ್ ಅಸ್ಯ ಸ್ಯಾತ್ ಇತಿ ನಿಶ್ಚಿತಂ ॥ ತಾವ ದೇವಾಲಮಸ್ಯ ಸ್ಯಾತ್ ಕ್ಷುದ್ರತ್ವಾತ್ ಅಲ್ಪ ಶಕ್ತಿತಃ ॥ ಯಥಾಹಿ ಲೋಕೇ ದೃಶ್ಯಂತೇ ಪಿಪೀಲ ಮಶಕಾದಯಃ ॥ ಅಲ್ಪೇಸ್ನೈವ ಹಿ ತುಷ್ಯಂತಿ ವ್ಯಥಂತೇ ಚಾಲ್ಪ ದುಃಖಿತಃ ॥" –ಇತ್ಯುಕ್ತಮಾಹ– 'ಚತುಃ ಶತ' ಇತಿ.

"ಸುಖ" ಇತಿ ಯಥಾಯೋಗ್ಯಮನ್ವೇತಿ ॥ "ತದಾಜ್ಞಯಾ ಪ್ರವೃತ್ತತ್ವಾತ್ ನ ತೇಷಾಂ ಅಪರಾಧನಮ್ ॥ ತತ್ವದೈತ್ಯವಿಭಾಗಸ್ತು ಕಲಾವೇವ ಭವಂತಿ ಹಿ. ॥೨೯॥

## ಕನ್ನಡಾರ್ಥ

"ನಾಲ್ಕುನೂರು ಭಾಗಗಳಲ್ಲಿ ಹತ್ತನೆಯ ಅಂಶವು ಜೀವರ ಶಕ್ತಿ. ಪಾಪ ಮೂಲವಾದ, ಪುಣ್ಯವು ಅಷ್ಟರಿಂದ ಅವನಿಗೆ ಆಗುತ್ತದೆ. ಅಲ್ಪ ನಾದುದರಿಂದ ಅಷ್ಟೇ ಶಕ್ತಿಯು ಆ ಜೀವರಿಗೆ ಸಾಕಾಗುವುದು. ಉದಾ :– ನೊಣ (ಮಶಕ) ನೊರಜು- ಮುಂತಾದವುಗಳ ಯೋಗ್ಯತೆಯು ಅಲ್ಪವಿದ್ದು,

ದರಿಂದ ಅಲ್ಪದರಿಂದಲೇ ಸಂತೋಷವನ್ನೂ, ದುಃಖವನ್ನೂ ಹೊಂದುತ್ತವೆ."– ಎಂಬ ಪ್ರಮಾಣಗಳಲ್ಲಿ ಹೇಳಿದ ವಿಷಯವನ್ನು "ಚತುಃಶತ"- ಈ ಪದ್ಯದಿಂದ ಹೇಳುತ್ತಾರೆ.

"ಸುಖ" ಶಬ್ದಕ್ಕೆ ಯಥಾಯೋಗ್ಯವಾದ ಸುಖವೆಂದು ಅರ್ಥ.

ಪರಮಾತ್ಮನ ಆಜ್ಞೆಯಿಂದ ಪ್ರವೃತ್ತರಾದುದರಿಂದ, ಶರೀರದಲ್ಲಿ ಪಾಪ ಕಾರ್ಯಗಳಾದರೂ ತತ್ವದೇವತೆಗಳಿಗೆ ದೋಷ – ಅಪರಾಧವಿಲ್ಲ. ಆದರೆ ತಾತ್ವಿಕ ದೈತ್ಯರೆಂಬ ವಿಭಾಗಗಳು ಕಲಿಯುಗದಲ್ಲಿಯೇ ಆಗುತ್ತದೆ. ॥೨೯॥

**೫. ಶ್ರೀಗುರುಹೃದಯ ಪ್ರಕಾಶಿಕೆ :–**

ಶ್ರೀಹರಿಯು ತನ್ನ ಸ್ವಾತಂತ್ರ್ಯದ ನಾನೂರು ಭಾಗದಲ್ಲಿ ದಶವೆಂಬ ಹತ್ತು ಅಂಶವನ್ನು ಎಲ್ಲಾ ಇತರ ಜೀವಿಗಳಿಗೆ ಕೊಟ್ಟಿರುವ ರೀತ್ಯಾ, ಅಷ್ಟೇ ಸುಖ ದುಃಖಗಳನ್ನು ಅಲ್ಪವಾಗಿ ಜೀವರಿಗೆ ಕೊಡುವನು. ತತ್ವಾಭಿಮಾನಿ ದೇವತೆಗಳಿಗೆ ಎಲ್ಲಾ ಜೀವರಲ್ಲಿ ನಡೆಯುವ ಪುಣ್ಯಫಲಗಳೆಂಬ ವಿಶಿಷ್ಟಸುಖವನ್ನು ತಾರತಮ್ಯಾನುಸಾರ ಕೊಡುವನು. ದೇವರು ತತ್ವಾಭಿಮಾನಿ ದೈತ್ಯರಿಗೆ ಎಲ್ಲರ ಪಾಪದುಃಖಗಳನ್ನು ಹಂಚಿಕೊಡುವನು. ಪಿಪೀಲವೆಂಬ ಇರುವೆ, ಮಶಕವೆಂಬ ಸೊಳ್ಳೆ, ಮೊದಲಾದ ಅಲ್ಪ ಪ್ರಾಣಿಗಳು ಅಲ್ಪಸುಖದಿಂದಲೇ ತೃಪ್ತಿ ಹೊಂದುವಂತೆ, ಮತಿವಿಹೀನರೆಂಬ ಅಧಿಕಜ್ಞಾನವಿಲ್ಲದ ಇತರ ಸಾಧಾರಣ ಜೀವರಿಗೆ, ದೇವತೆಗಳಿಗೆ ಸಹ ಆಹುತಿ ಎಂಬ ಆಹಾರ ಸುಖ, ವೃತ್ತಿ ಮೊದಲಾದದ್ದು ಅವರವರ ಯೋಗ್ಯತಾನುಸಾರವಾಗಿ ದೇವರು ಕೊಡುವನು. ॥೨೯॥

**ಚತಶ್ಶತೇಷು ಭಾಗೇಷು ದಶಾಂಶೋ ಜೀವ ಶಕ್ತಿತಾ ।**
**ಪುಣ್ಯಪಾಪಫಲಂ ತಾವತ್ ಅಸ್ಯಸ್ಯಾದಿನಿಶ್ಚಿತಂ ॥**

ತಾವದೇವ ಅಲಂತತ್ಸ್ಯಾತ್ ಕ್ಷುದ್ರತ್ವಾದಲ್ಪಶಕ್ತಿತಃ ।
ಯಥಾ ಹಿ ದೃಶ್ಯತೇ ಲೋಕೇ ಪಿಪೀಲ ಮಶಕಾದಯಃ ॥
ಅಲ್ಪೇ ನೈವ ಹಿ ತುಷ್ಯಂತಿ ವ್ಯಥಂತೇ ಚಾಲ್ಪದುಃಖತಃ ।
ಪಾಪಂಕರ್ಮತು ಯತ್ಕಿಂಚಿತ್ ಜಾಯತೇ ಜೀವತೋ ದ್ವಿಜಾಃ ॥
ಯಥಾ ಭಾಗಂ ತಥಾ ದೈತ್ಯಾಃ ಜೀವಾಶ್ಚಾಪಿ ವಿಭಾಗಿನಃ ।

ಯದುಕಿಂಚೇಮಾಃ ಪ್ರಜಾಃ ಶುಭಮಾಚರಂತಿ ದೇವಾ ಏವ ದಾಚರಂತಿ । ದೇವಾನಾಮೇವೈಕ ತದ್ಭವತಿ । ಸ್ವಾಮೀ ಹಿ ಫಲ ಮಶ್ನುತೇ । ನಾ ಸ್ವಾಮಿ ಕರ್ಮಕುರ್ವಾಣಃ ।– ಎಂಬ ಶ್ರುತ್ಯರ್ಥ ಸಹ ವಿವರಿಸಿತು. ॥೨೯॥

## ಸರ್ವವ್ಯಾಖ್ಯಾನಸಾರಸಂಗ್ರಹ

ಜೀವರ ಸ್ಥೂಲದೇಹದಲ್ಲಿ ಜೀವ, ದೇವ, ದೈತ್ಯರು– ಈ ಪ್ರಕಾರ ಮೂವರೂ ಆವಾಸರಾಗಿದ್ದು, ಸಾಧನಶರೀರವೆಂದೆನಿಪ ಸ್ಥೂಲದೇಹಗತ ಇಂದ್ರಿಯಗಳ ದ್ವಾರಾ ಬಿಂಬನ ಪ್ರೇರಣಾನುಸಾರ ಕರ್ಮಗಳನ್ನು ಮಾಡು ತ್ತಿರುವರು. ದೇವತೆಗಳ ದ್ವಾರಾ ಪುಣ್ಯ ಕರ್ಮಗಳೂ, ದೈತ್ಯರ ದ್ವಾರಾ ಪಾಪಕರ್ಮಗಳೂ ನಡೆಯುತ್ತಿರುವುವು. ದೇಹೇಂದ್ರಿಯಗಳಲ್ಲಿ ಪ್ರಕಾಶ ತೋವ್ಯಾಪ್ತನಾದ ಜೀವನ ದ್ವಾರಾ ಪುಣ್ಯ–ಪಾಪಗಳೆಂಬ ಮಿಶ್ರಕರ್ಮಗಳು ನಡೆಯುತ್ತಿರುವುವು. ಈ ಕಾರಣದಿಂದ ಜೀವ–ದೇವ–ದೈತ್ಯರು ಎಂಬ ತ್ರಿವಿಧರೂ ದೇಹಾಭಿಮಾನಿಗಳೆನಿಸುತ್ತಾರೆ. ಜೀವನ ದ್ವಾರಾ ಮಾಡಲ್ಪಟ್ಟ ಉಭಯಕರ್ಮಗಳಿಗೂ ತ್ರಿವಿಧರೂ ಬದ್ಧರಾದ ಕಾರಣದಿಂದ, ತ್ರಿವಿಧ ರಿಗೂ ಭಾಗವುಂಟೆಂದು ಹೇಳುತ್ತಾರೆ. ಆ ವಿಭಾಗದ ಕ್ರಮ ಹೇಗೆಂದರೆ–

ಸರ್ವತಂತ್ರಸ್ವತಂತ್ರನೂ, ಸರ್ವಕರ್ಮಪ್ರೇರಕನೂ, ಸರ್ವ ಕಾರ್ಯಕರ್ತೃನೂ ಆದ ಆ ಸರ್ವೇಶನು 400 ಭಾಗಗಳಲ್ಲಿ (ಚತುರಶತ

ಭಾಗದಿ) ದಶಾಂಶ (ಹತ್ತನೇ ಒಂದು ಭಾಗ) ತೆಗೆದು, ಅದರಲ್ಲಿ ಅಲ್ಪಾಂಶ ವನ್ನು ದೇವತೆಗಳಲ್ಲಿ, ಮತ್ತು ದೈತ್ಯರಲ್ಲಿ ಅವರವರ ಸ್ವರೂಪಯೋಗ್ಯ ತಾನುಸಾರ, ಶಕ್ತಿ ಸಾಮರ್ಥ್ಯಕ್ಕನುಗುಣವಾಗಿ, ಇಟ್ಟು, ದಿತಿಪುತ್ರ ರಾದ ದೈತ್ಯರ ದ್ವಾರಾ ಪಾಪ ಕರ್ಮಗಳನ್ನು ಮಾಡಿ ಮಾಡಿಸಿ, ತತ್ಫಲ ರೂಪವಾದ ವಿಶಿಷ್ಟದುಃಖವನ್ನು ಅವರಿಗೆ ನೀಡುವನು. ಮುಕ್ತಿಯೋಗ್ಯ ರಾದ ದೇವತಾವರ್ಗದ ದ್ವಾರಾ, ಪುಣ್ಯಕರ್ಮಗಳನ್ನು ಮಾಡಿ ಮಾಡಿ ಸುತ್ತಾ, ತತ್ಫಲರೂಪವಾದ ವಿಶಿಷ್ಟಸುಖವನ್ನು ಕೊಡುವನು.

ಜ್ಞಾನ, ವಿವೇಕ, ವಿವೇಚನಾಶಕ್ತಿಶೂನ್ಯರಾದ ಇರುವೆ, ನೊಣ, ಸೊಳ್ಳೆ-ಇತ್ಯಾದಿ ಅತ್ಯಲ್ಪ ಶಕ್ತಿಯುತ ಜಂತುಗಳಿಗೆ ಅದರದರ ದೇಹಶಕ್ತಿಗನು ಸಾರ, ಯೋಗ್ಯತೆಗನುಗುಣವಾಗಿ ಶಕ್ತಿಪ್ರದನಾಗಿದ್ದು, ತದ್ದ್ವಾರಾ, ಆಹಾರ ಸೇವನೆ, ಆನಂದಾನುಭವ, ದುಃಖಾನುಭೋಗ, ಮರಣ– ಇತ್ಯಾದಿ ವಿವಿಧವ್ಯಾಪಾರಗಳಿಗೆ ಮುಖ್ಯಪ್ರೇರಕನಾಗಿದ್ದಾನೆ. ॥೨೯॥

## ಪದ್ಯ-೩೦

ಮೂಲ :–

ನಿತ್ಯ ನಿರಯಾಂಧಾಖ್ಯ ಕೂಪದಿ ।
ಭೃತ್ಯರಿಂದೊಡಗೂಡಿ ಪುನರಾ ।
ವರ್ತಿವರ್ಜಿತ ಲೋಕವೈದುವ ಕಲಿಯು ದ್ವೇಷದಲಿ ॥
ಸತ್ಯಲೋಕಾಧಿಪ ಚತುರ್ಮುಖ ।
ತತ್ತ್ವದೇವರ್ಕಳ ಸಹಿತ ನಿಜ ।
ಮುಕ್ತಿಯೈದುವ ಹರಿಪದಾಬ್ಜವ ಭಜಿಸಿ ಭಕುತಿಯಲಿ ॥
॥೩೦॥

**ಅವತರಣಿಕೆ :–**

ಅವರವರ ಸಾಧನೆಗನುಗುಣವಾಗಿ ನಿಜ ಗತಿಯನ್ನು ಹೊಂದುವರು– ಎಂದು ತಮೋಯೊಗ್ಯವಾದ ಕಲಿ ಮತ್ತು ಜೀವೋತ್ತಮರಾದ ಚತುರ್ಮುಖ ಬ್ರಹ್ಮದೇವರು ಹೊಂದುವ ಗತಿವಿಶೇಷವನ್ನು ತಿಳಿಸುತ್ತಾರೆ. ॥೩೦॥

**ಪ್ರತಿಪದಾರ್ಥ :–**

**ನಿತ್ಯ** = ಮಹಾಪ್ರಳಯ ಕಾಲದಲ್ಲೂ ನಾಶವಾಗದೇ ಇರುವ ಶಾಶ್ವತ ವಾದ, **ಅಂಧಾಖ್ಯ** = ಅಂಧಂತಮಸ್ಸೆಂಬ ಹೆಸರಿನ, **ನಿರಯ** = ನರಕದ, **ಕೂಪದಿ** = ಆ ಲೋಕದಿಂದ ಪುನಃ ಮೇಲಕ್ಕೆ ಏಳಲಾರದ ಭಾವಿಯಲ್ಲಿ, **ಭೃತರಿಂದೊಡಗೂಡಿ** = ತನ್ನಿಂದ ಅವರರಾದ ದೈತ್ಯ ಕಿಂಕ ರರಿಂದ ಸಹಿತನಾಗಿ, **ಪುನರಾವರ್ತಿವರ್ಜಿತ** = ಪುನಃ ಜನನವೆಂಬುದೇ ಇಲ್ಲದ, **ಲೋಕವ** = ಅಂಧಂತಮವೆಂಬ ಲೋಕವನ್ನು, **ದ್ವೇಷದಲಿ** = ಶ್ರೀಹರಿಯಲ್ಲಿ ಹಾಗೂ, ಹರಿಭಕ್ತರಲ್ಲಿ ಮಹಾ ದ್ವೇಷಸಾಧಿಸಿದ ಕಾರಣ ದಿಂದ, **ಕಲಿಯು** = ನಿಚೋತ್ತಮನಾದ ಕಲಿಯು, **ಐದುವ** = ಹೊಂದುವನು. **ಸತ್ಯಲೋಕಾಧಿಪ** = ಸತ್ಯಲೋಕಕ್ಕೆ ಪ್ರಭುವಾದ, **ಚತುರ್ಮುಖ** = ಶ್ರೀಬ್ರಹ್ಮದೇವರು, **ತತ್ತ್ವದೇವರ್ಕಳ ಸಹಿತ** = ತನ್ನ ಸಂಗಡ ಮುಕ್ತರಾಗತಕ್ಕ ತತ್ತ್ವಾಭಿಮಾನಿದೇವತೆಗಳೊಡಗೂಡಿ, **ಹರಿಪದಾಬ್ಜವ** = ಶ್ರೀಹರಿಯ ಪಾದಕಮಲಗಳನ್ನು, **ಭಕುತಿಯಿಂದಲಿ** = ನೈಜವಾದ ಭಕ್ತಿಭಾವದಿಂದ, **ಭಜಿಸಿ** = ಕೊಂಡಾಡುತ್ತಾ, **ನಿಜ ಮುಕ್ತಿಯನು** = ನೈಜವಾದ ಸ್ವಸ್ವರೂಪಗತ ಆನಂದದ ಆವಿರ್ಭಾವ ರೂಪವಾದ ನಿತ್ಯಾನಂದರೂಪವಾದ ಮುಕ್ತಿಸುಖವನ್ನು, **ಐದುವ** ಹೊಂದು ವನು. ॥೩೦॥

# ವ್ಯಾಖ್ಯಾನಗಳು

೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ:–

**ಯಥಾ ಬ್ರಹ್ಮ ವ್ರಜತ್ಯೇಶಃ ಪರಾಂತೇ ಮುಕ್ತಸಜ್ಜನೈಃ ।**

**ತಥೈವ ದುರ್ಜನೈಸ್ಸಾಕಂ ಪರಾಂತೇ ಕಲಿರೇಕ ಸಃ ।**

**ತಮೋಂಧಂ ಯಾತಿ ನೈಕೋಪಿ ಕದಾಚಿದ್ಬಹಿರಾವ್ರಜೇತ್ ।**

ಎಂಬ ವಾಕ್ಯವನ್ನನುಸರಿಸಿ–ಯಾವತ್ತೂ ಜೀವರೊಳಗೆ ತಮಸ್ಸಿಗೆ, ಹೋಗತಕ್ಕವರು ದಾರು, ಮುಕ್ತಿ ಎಂಬ ವೈಕುಂಠಕ್ಕೆ ಹೋಗತಕ್ಕವರು ದಾರು-ಎಂದರೆ, ಅವರನ್ನ ಹೇಳತಾರೆ.

ಮಹಾ ಪ್ರಳಯಕಾಲಕ್ಕೂ ನಾಶವಾಗದೆ ನಿತ್ಯವಾಗಿ ಇರತಕ್ಕ ಆ ಲೋಕಭಾಗದಲ್ಲಿ ಇರತಕ್ಕ ನರಕ ಎನತಕ್ಕ ಲೋಕದಲ್ಲಿ ವಿದ್ಯಮಾನವಾದ ಅಂಧತಮಸ್ಸು ಎಂಬ ನಾಮದಿಂದ ಪ್ರಸಿದ್ಧವಾದಂಥಾ ಭಾವಿಯಲ್ಲಿ, ತನಗೆ ಅವರರಾದ ದೈತ್ಯರಿಂದೊಡಗೂಡಿ, ಪುನಃ = ಮತ್ತು, ಆವರ್ತಿ ವರ್ಜಿತ = ಜನನಾ ಎಂಬುದು ಇಲ್ಲದ ಅಂಧಂತಮೋಲೋಕವನ್ನು ಹೊಂದುವ ಕಲಿಯಾದವಗೆ ಇಂಥಾ ಅಂಧಂತಮೋಲೋಕ ಯಾತರಿಂದ ಪ್ರಾಪ್ತವಾಯಿತೆಂದರೆ, ದ್ವೇಷದಿಂದ ಪ್ರಾಪ್ತವಾಗೋದಾಯಿತು. ದಾರಲ್ಲಿ ದ್ವೇಷ ಎಂದರೆ, ಶ್ರೀಪರಮಾತ್ಮನಲ್ಲೂ, ಅವನ ಭಕ್ತರಲ್ಲೂ ದ್ವೇಷ ಮಾಡೋ ಣದರಿಂದ– ಎಂತ ತಿಳೀಬೇಕು ಸತ್ಯಲೋಕಕ್ಕೆ ಅರಸನಾದ, ಚತುರಾಸ್ಯ ನಾದ ಬ್ರಹ್ಮದೇವರು ತತ್ತ್ವದೇವತೆಗಳ ಸಹಿತ, ಬ್ರಹ್ಮ ತನ್ನ ಸಂಗಡ ಮುಕ್ತಿರಾಗತಕ್ಕ ಯಾವತ್ತೂ ಜೀವರ ಸಹಿತನಾಗಿ, ಮಹಾಪ್ರಳಯಕಾಲ ದಲ್ಲೂ ನಿಜವಾಗಿ ಇರತಕ್ಕ ಅತ್ಯಂತ ಸುಖಕರವಾದ ಮುಕ್ತಿಸ್ಥಾನವಾದ

ವೈಕುಂಠಲೋಕವನ್ನು ಹೊಂದುವನು. ಮತ್ತು ನಿಜ ಎಂದರೆ, ನೈಜ ವಾದ ಸ್ವರೂಪಾನಂದಭೋಗವೆಂಬ ಮುಕ್ತಿ, ತನ್ನ ಪರಿವಾರಸಹಿತ ತಾನು ಐದುವನು. ತಾರತಮ್ಯಾನುಸಾರ ಅವರರಾದವರನ್ನು ಅವರವರ ಯೋಗ್ಯಸ್ಥಾನದಲ್ಲಿರಿಸಿ, ತನ್ನ ಯೋಗ್ಯಸ್ಥಾನವನ್ನು ತಾನು ಐದೋವನಾಗ ತಾನೆ. ಯಾತರಿಂದ ಇವು ಎಂದರೆ, ಭಗವಂತನಲ್ಲಿ ಅವನ ಭಕ್ತರಲ್ಲಿ ದ್ವೇಷದಿಂದ ರಹಿತನಾಗಿ ಬಿಂಬರೂಪೀ ಪರಮಾತ್ಮನ್ನ ಭಜಿಸೋಣದರಿಂದ ಆಗೋದಾಯಿತು. ಆ ಭಜನಿ ಎಂಬೋದು ಹ್ಯಾಂಗೆ ಮಾಡಿದರೆ- ಎಂದರೆ, ಏಕಾದಶೇಂದ್ರಿಯಗಳಿಂದ ಪರಮಾತ್ಮನಲ್ಲೇ ಸ್ನೇಹವಿಟ್ಟು, ಭಜಿಸೋಣದ ರಿಂದ ಆಯಿತು. ಆದ್ದರಿಂದ ಪರಮಾತ್ಮನಲ್ಲಿ, ಅವನ ಭಕ್ತರಲ್ಲಿ ದ್ವೇಷ ಮಾಡದೆ, ಪರಮಾತ್ಮನ್ನ ಭಕ್ತಿಯಿಂದ ಭಜಿಸಿದರೆ, ವೈಕುಂಠ ಪ್ರಾಪ್ತಿ. ತದ್ವಿಪರೀತರಿಗೆ ಅಂಧಂತಮ ಪ್ರಾಪ್ತಿ-ಎಂಬುದರಲ್ಲಿ ಲೇಶಾಂಶ ಸಂಶಯವಿಲ್ಲ- ಎಂತ ತಿಳೀಬೇಕು. ॥೩೦॥

**ವಿಶೇಷಾರ್ಥ :–**

ಒಂಭತ್ತು ಕೋಟಿ ದೇವತೆಗಳು ತತ್ತ್ವೇಶರು. ಒಂಭತ್ತು ಕೋಟಿ ದೈತ್ಯರು ತತ್ತ್ವೇಶರು- ಎಂದು ತಿಳೀಬೇಕು. ತಮೋಯೋಗ್ಯರು ಅಂಧಂತ ಮನಸ್ಸಿಲ್ಲಿ ದುಃಖತ್ವೇನ ಅನುಭವ ಮಾಡತಾರೇ ಹೊರ್ತು, ಸುಖತ್ವೇನ ಅನುಭವ ಮಾಡೋದಿಲ್ಲ. ಸುಖತ್ವೇನ ಅನುಭವ ಮಾಡಿದರೆ, ದುಃಖ ರೂಪ ಎಂಬ ವಾಕ್ಯ ಅನೃತವಾಗಬೇಕಾದೀತು. ವೈಕುಂಠಕ್ಕೆ ತಮಸ್ಸಿಗೆ ವೈಲಕ್ಷಣ್ಯ ಇಲ್ಲಧಾಂಗೆ ಆಗತದೆ, ತಮಸ್ಸು ದುಃಖಕರವೇ, ವೈಕುಂಠ ಸುಖ ಕರವೇ ಸರಿ. ಭಗವದ್ದ್ವೇಷಿಗಳಿಗೆ ದುಃಖವಾಗದೆ ಸುಖವೇ ಆಗೋ ಪಕ್ಷಕ್ಕೆ ತಮಸ್ಸು ಶಿಕ್ಷಾರೂಪವಾಗಲಿಲ್ಲ. ದೇವರು ತನ್ನ ಭಕ್ತರಿಗೆ ಅತಿ ಶ್ರಯವೇನೂ ಮಾಡಿಧಾಂಗೆ ಆಗಲಿಲ್ಲ. ಅಸುರರು ಸುಖಕರವಾದ ವೈಕುಂಠಾದಿ ಲೋಕಗಳಲ್ಲಿ ಇರಬಹುದು-ಇತ್ಯಾದಿ ಪೂರ್ವಪಕ್ಷಗಳು ಬರೋ ಛಾಗತವೆ, ಅತಿಏವ, ತಮಸ್ಸು ದುಃಖಕರವಾದದ್ದು. ತದ್ಗತರಾದ

ವರು ದುಃಖಾನುಭವ ಮಾಡತಕ್ಕವರಾಗೇ ಇರಬೇಕು. ಸುಖ ಲೇಶವೂ ಇಲ್ಲ. ಆದರೆ **ದುಃಖೇಪಿ ಸುಖಮಾನಿನಃ**– ಎಂಬ ವಚನಕ್ಕೆ ಸಾರ್ಥಕ್ಯ ವೇನೆಂದರೆ, ಇದರ ಪ್ರತೀತಾರ್ಥಃ ದುಃಖ ಭೋಗದಲ್ಲಿ ಆದರೂ, ಸುಖಾ ಭಿಮಾನದಿಂದ ಅನುಭವಿಸುತ್ತಾರೆಂದು ಅರ್ಥವಾಗತದೆ. ಎಂದರೆ, ಇದೇ ದುಃಖವೇ ತಮಗೆ ಸುಖ–ಎಂತ ಅನುಭವಿಸತಾರೆಂತ ತಾತ್ಪರ್ಯವಾಗತದೆ. ಅದು ಅಲ್ಲ. ದುಃಖೇ = ದುಃಖರೂಪವಾದ ಅಂಧಂತಮಸ್ಸಿನಲ್ಲಿ ಭೋಗಿ ಸತಕ್ಕ ದುಃಖದಲ್ಲಿ, ಅಪಿ = ಮತ್ತು,. ಸುಖ = ಸುಖಭೋಗ ಮಾಡ ಬೇಕೆಂಬ, ಮಾನಿನಃ = ಅಭಿಮಾನಿಗಳಾಗಿ ಇರ್ತಾರೆ. ಅದು ಹ್ಯಾಂಗೆ ದರೆ, ಸುಖಜ್ಞಾನ ಹೊರ್ತು ದುಃಖಜ್ಞಾನ ಆಗೋದಿಲ್ಲ. ಸುಖಪಟ್ಟ ಪುರುಷನಿಗೆ ದುಃಖಪ್ರಾಪ್ತವಾದರೆ ಸುಖ ಇಂಥಾದ್ದು, ದುಃಖ ಇಂಥಾದ್ದು ಎಂತ ಎರಡೂ ಜ್ಞಾನ ಸ್ವಾಭಾವದಿಂದ ಆಗೋದಾಗತದೆ. ಇದು ಪ್ರತ್ಯಕ್ಷಾನು ಭವ. ತದ್ವತ್ ತಮೋಯೋಗ್ಯರು ಸ್ಥಿತಿಕಾಲದಲ್ಲಿ ಮಹಾಸುಖ ಭೋಗ ಮಾಡಿರತಾರೆ. ತಮಸ್ಸಿನಲ್ಲಿ ದುಃಖ ಭೋಗ ಮಾಡೋಕಾಲದಲ್ಲಿ ಪೂರ್ವದ ಸುಖ ಸ್ಮೃತಿಗೆ ಬಂದು, ಆ ಅಂಧಂತಮದಲ್ಲಾದರೋ ಸುಖಮಾನಿನಃ, ದುಃಖ ಹೋಗಿ, ಪೂರ್ವದೋಪಾದಿಯಲ್ಲಿ ಸುಖವಾಗಬೇಕೆಂಬ ಅಭಿಮಾನಿ ಗಳಾಗಿ ಇರತಾರೆಂತ ತಾತ್ಪರ್ಯ. ಸುಖ ಸ್ಮರಣೆಗೆ ಬಂಧಾಂಗೆಲ್ಲಾ ದುಃಖ ಅಧಿಕವಾಗಿ ಭೋಗಿಸೋವರಾಗತಾರೆ. ಆದ್ದರಿಂದ ದುಃಖೇಪಿ ಸುಖ ಮಾನಿನಃ– ಎಂತ ಕರಸೋವರಾಗಿ, ದುಃಖ ದುಃಖತ್ವೇನ ಅನುಭವಸ್ತಾರೇ ಹೊರ್ತು, ಸುಖತ್ವೇನ ಅನುಭವಿಸೋದಿಲ್ಲ. ಅವರ ಸ್ವರೂಪವೇ ದುಃಖ ಸ್ವರೂಪವಾದ್ದರಿಂದ ತಮಸ್ಸಿನಾಗೇ ಇರಲಿ, ಪರಮಾತ್ಮನ ಉದರದಲ್ಲೇ ಇರಲಿ, ಸರ್ವದಾ ದುಃಖ ಭೋಗವೇ ಹೊರ್ತು ಸುಖವಿಲ್ಲ. ಮುಕ್ತರಿಗೆ ವೈಕುಂಠದಲ್ಲೇ ಇರಲಿ, ಪರಮಾತ್ಮನ ಉದರದಲ್ಲೇ ಇರಲಿ ಸರ್ವದಾ ಸುಖ ಹ್ಯಾಂಗೋ, ತದ್ವತ್ ಲಿಂಗಭಂಗರಾದ ಅಸುರರು ದುಃಖಜ್ಞಾನದಿಂದಲೇ ದುಃಖ ಭೋಗಿಸತಾರೆ.

**ಪ್ರಮಾಣ :–**

**ಯತ್ ನಿತ್ಯ ತಮೋ ನಿಷ್ಠಾಃ ಪಾಪರೂಪಾಃ ಸ್ವಭಾವತಃ ।**

**ಚೋರತ್ವೇ ಕಲ್ಪಯಾಮಾಸ ದಂಡಯಾಮಾಸ ತಾನಪಿ ॥**– ಇತಿ **ವಿಷ್ಣುರಹಸ್ಯೇ.** ಅರ್ಥ– ನಿತ್ಯ– ನಿತ್ಯವಾದ, ತಮಃ– ತಮಸ್ಸಿನಲ್ಲಿ, ನಿಷ್ಠಾಃ– ನಿಷ್ಠರಾದ, ಸ್ವಭಾವತಃ– ಸ್ವರೂಪ ಸ್ವಭಾವದೆಶೆಯಿಂದ, ಪಾಪರೂಪಾಃ– ಪಾಪರೂಪರಾದಂಥ, ಯತ್ – ದಾವ ಅಸುರರ, ಚೋರತ್ವೇ– ಶುದ್ಧ ಸತ್ವಸ್ವರೂಪರಾಗಿ ಮುಕ್ತರಾದವರ ಆದಿ ಸೃಷ್ಟಿಯಲ್ಲಿ ಸೃಷ್ಟಿಮಾಡಿ ಅವರ ಸಂಗಡ ಪರಮಾತ್ಮ ವಿಹಾರಕಾಲದಲ್ಲಿ, ಇವರನ್ನ ಹೊರತೆಗೆದು ಚೋರರನ್ನಾಗಿ ಕಲ್ಪನ ಮಾಡಿ, ಆ ಪಾಪಸ್ವರೂಪರ, ದಂಡಯಾಮಾಸ– ಶಿಕ್ಷಿಸೋವನಾಗತಾನೆ. ಶುದ್ಧಸತ್ತ್ವ ನಿರ್ಮಿತ ಪದಾರ್ಥ ಗಳ ನೋಡಿ ಸುಖಕ್ಕೆ ಯೋಗ್ಯವಾದದ್ದು- ಎಂಬ ಜ್ಞಾನದಿಂದ ಬಂದವರ ಶಿಕ್ಷಿ ಸತಾನೆ– ಎಂದಮ್ಯಾಲೆ, ಸುಖಜ್ಞಾನ ದುಃಖಜ್ಞಾನ ಅವರಿಗೆ ಎರಡೂ ಇರೋವಾಗಿ ಅವೆ. ದುಃಖಾನುಭವಕಾಲದಲ್ಲಿ 'ಕೃಷ್ಣನಿಂದ ಮಹಾದುಃಖ ಪ್ರಾಪ್ತವಾಯಿತು. ತಮಸ್ಸಿನಿಂದ ಹೊರಗೆ ಬರೋಣವೇ ಅವನ ನಿರ್ಮೂಲ ಮಾಡತೇನೆ'– ಎಂತ ಇಂಥಾ ದ್ವೇಷಾತಿಶಯವಾದ ಉಕ್ತಿಗಳ ಉಚ್ಚರಿಸತಾ ಇರ್ತಾರೆ. ಆದ್ದರಿಂದ ದುಃಖಜ್ಞಾನದಿಂದಲೇ ದುಃಖಾನುಭವವೆಂದು ಸಿದ್ಧವು. ದುಃಖಕರವಾದ ವಿಪರೀತ ಜ್ಞಾನದಲ್ಲಿ ಯಾಕೆ ಪ್ರವರ್ತಿಸತಾರೆ– ಎಂದರೆ, ಅವರ ಅನಾದಿಸ್ವರೂಪಸ್ವಭಾವ ಅಂಥಾದ್ದೇ ಆದ್ದರಿಂದ ವಿಪ ರೀತ ಜ್ಞಾನದಲ್ಲಿ ಪ್ರವರ್ತಿಯು. ದೃಷ್ಟಾಂತ– ಕ್ರಿಮಿವಿಶೇಷಗಳು ಅಗ್ನಿಗಳ ಜ್ವಾಲಾ ತಮಗೆ ದುಃಖಕರವಾದಾಗ್ಯೂ, ಆ ಜ್ವಾಲಾ ನೋಡಿ ಇದು ತಮಗೆ ಸುಖಕರವಾದದ್ದು-ಎಂತ ಆಶಾದಿಂದ ಅಗ್ನಿಯನ್ನ ಭಕ್ಷಿಸೋದಕ್ಕೆ ಬಂದು ದುಃಖ ಐದಿದಂತೆ, ತಮೋಯೋಗ್ಯರ ಸ್ವರೂಪಸ್ವಭಾವನ್ನನು ಸರಿಸಿ, ವಿಪರೀತಜ್ಞಾನ ತಮಗೆ ಸುಖ ಕೊಡತಕ್ಕದ್ದೆಂದು ಅದರಲ್ಲಿ ಪ್ರವೇಶಿಸಿ, ಪರಿಯವಸಾನದಲ್ಲಿ ದುಃಖ ಭೋಗಮಾಡತಾರೆ. ಹೀಂಗೆ ಯಾಕೆ ಆಗ

ಬೇಕೆಂದರೆ, ಈಶ್ವರನಿಂದ ರಚಿತವಲ್ಲದ ಅವರ ಅನಾದಿಸ್ವರೂಪ ಸ್ವಭಾವವೇ ಅಂಥಾದ್ದು. ಆದ್ದರಿಂದ, ಆದಕ್ಕೆ ಅನ್ಯಥಾ ಆಗೋದಿಲ್ಲ- ಎಂತ ತಾತ್ಪರ್ಯ. ॥೩೦॥

೨. ಭಾವಪ್ರಕಾಶಿಕೆ :-

ಕಲಿಯು ತನ್ನ ಅನುರಾಗದ ಶಂಬರ, ವಿಪ್ರಚಿತ್ತಿ ಮೊದಲಾದ ದೈತ್ಯರಿಂದೊಡಗೂಡಿ, ಪರಮಾತ್ಮನಲ್ಲಿ ದ್ವೇಷವನ್ನು ಮಾಡಿ, ದ್ವಿಪರಾರ್ಧಾವಸಾನವಾದ ಪ್ರಳಯಾರಂಭ ಕಾಲದಲ್ಲಿ ಹೋದರೆ ಹಿಂದಿರುಗದ, ಶಾಶ್ವತವಾದ ಲೋಕದೊಳಗಿನ ಅಂಧಂತಮಸ್ಸನ್ನು ಹೊಂದುವನು. ಬ್ರಹ್ಮದೇವರು ತಮ್ಮ ಅನುಗರಾದ ರುದ್ರಾದಿ ದೇವತೆಗಳಿಂದೊಡಗೂಡಿ,ಪರಮಾತ್ಮನಲ್ಲಿ ಅವಿಚ್ಛಿನ್ನವಾದ ಭಕ್ತಿಮಾಡಿ, ಅವನ ಪಾದಾರವಿಂದವನ್ನು ಭಜಿಸಿ, ದ್ವಿಪರಾರ್ಧಾವಸಾನದಲ್ಲಿ ಮುಕ್ತಿಯನ್ನು ಹೊಂದುವರು. ಮುಕ್ತಿಯೋಗ್ಯರೆಲ್ಲರಿಗೂ ಪ್ರಳಯಾರಂಭದಲ್ಲಿ ಬ್ರಹ್ಮದೇವರೊಂದಿಗೆ ವಿರಜಾನದಿಯ ಸ್ನಾನದಿಂದ ಲಿಂಗಶರೀರ ಭಂಗವಾಗಿ ಬ್ರಹ್ಮದೇವರೊಂಳಗೆ ವಿರಜಾನದಿಯ ಸ್ನಾನದಿಂದ ಲಿಂಗಶರೀರ ಭಂಗವಾಗಿ ಬ್ರಹ್ಮದೇವರೊಂದಿಗೆ ಮುಕ್ತಿಯಾಗುವುದು. ಇದರಂತೆ ತಮೋಯೋಗ್ಯರೆಲ್ಲರಿಗೂ ಅದೇ ದ್ವಿಪರಾರ್ಧಾವಸಾನಕಾಲದಲ್ಲಿ ಕಲಿಯೊಂದಿಗೆ ವಾಯುದೇವರ ಗದಾಪ್ರಹಾರದಿಂದ ಲಿಂಗಭಂಗವಾಗಿ, ಪುನರಾವರ್ತಿ ಇಲ್ಲದ ಲೋಕದಲ್ಲಿ ನಿತ್ಯದುಃಖಮಯವಾದ ಅಂಧಂತಮಸ್ಸನ್ನು ಕಲಿಯೊಂದಿಗೇನೇ ಹೊಂದುವರೆಂಬ ತಾತ್ಪರ್ಯ. ॥೩೦॥

೩. ಭಾವದರ್ಪಣ :-

ನಿತ್ಯನಿರಯ । ತದುಕ್ತಂ ವಿಷ್ಣುರಹಸ್ಯೇ । "ತಥೈವ ದುರ್ಜನ್ಯೈಃ ಸಾಕಂಪರಾಂತೇ ಕಲಿರೇಕಲಃ । ತಮೋಂಧಂ ಯಾತಿ ನೈಕೋಪಿ ಕದಾಪಿ ಬಹಿರಾವ್ರಜೇದಿತಿ" । ಚತುರ್ಮುಖ । "ಯಥಾ ಬ್ರಹ್ಮಾವ್ರಜತ್ಯೇಕಃ ಪರಾಂತೇ ಮುಕ್ತ ಸಜ್ಜನೈರಿತಿ" ಚ. ॥೩೦॥

## ೪. ಶ್ರೀವ್ಯಾಸದಾಸ ಸಿದ್ಧಾಂತ ಕೌಮುದೀ :-

"ತೇನಾತಿಪಾಪೀ ದುಷ್ಟಾತ್ಮಾ ಸ್ವೀಯೈಃ ಪರಿವೃತಃ ಅಖಿಲೈಃ ॥ಗತ್ವಾ ನಿತ್ಯ ತಮೋದ್ವಾರೀ ವಿಷ್ಣುದ್ವೇಷ್ಟಾ ಅವತಿಷ್ಠತೇ ॥ ವಾಯೋಃ ಗ್ರದಾ ಪ್ರಹಾರೇಣ ತೇಹಿ ಕಲ್ಯಾದಯೋಽಖಿಲಾಃ ॥ ಭಿನ್ನಲಿಂಗಾಃ ಪತಂತ್ಯಂಧೇ ಪುನರಾವೃತ್ತಿವರ್ಜಿತೇ ॥ ವಾಯೋರ್ಗದಾ ಪ್ರಹಾರೇಣ ತೇ ಹಿ ಕಲ್ಯಾದ ಯೋಽಖಿಲಾಃ ॥ ಅನಾದ್ಯನಂತೇ ತೀವ್ರೇಽಸ್ಮಿನ್ ಪಂಚಕಷ್ಟೇತಿ ದಾರುಣೇ ॥ ಯಥಾ ಬ್ರಹ್ಮಾ ಪ್ರಜತ್ಯೇಕಃ ಪರಾಂತೇ ಮುಕ್ತಸಜ್ಜನೈಃ ॥ ತಥೈವ ಸಾಕಂ ಪರಾಂತೇ ಕಲಿರೇಕಲಃ ॥ತಮೋಽಂಧಯಾತಿ ನೈಕೋಽಪಿ ಕದಾಽಪಿ ಬಹಿ ರಾವ್ರಜೇತ್ ॥ " ಇತ್ಯುಕ್ತಮಾಹ-"ನಿತ್ಯ" ಇತಿ. ॥೩೦॥

### ಕನ್ನಡಾರ್ಥ

"ಅತಿ ಪಾಪಿಷ್ಠನೂ ದುಷ್ಟಸ್ವರೂಪಿಯೂ, ವಿಷ್ಣುದ್ವೇಷಿಯೂ ಆದ ಕಲಿಯು ತನ್ನ ಸಕಲ ಪರಿವಾರದಿಂದ ಕೂಡಿಕೊಂಡು, ನಿತ್ಯತಮಸ್ಸಿನ ದ್ವಾರದಲ್ಲಿ ಬಂದು ನಿಲ್ಲುತ್ತಾನೆ. ವಾಯುದೇವರ ಗದಾಪ್ರಹಾರದಿಂದ ಕಲಿಯನ್ನು ಮೊದಲುಗೊಂಡು ಅವನ ಪರಿವಾರವೆಲ್ಲವೂ ಲಿಂಗಭಂಗವನ್ನು ಹೊಂದಿ, ಪುನರಾವೃತ್ತಿಯಿಲ್ಲದಿರುವ ಅಂಧತಮಸ್ಸಿನಲ್ಲಿ ಬೀಳುತ್ತಾರೆ. ಪರಾಂತ್ಯಕಾಲದಲ್ಲಿ ಚತುರ್ಮುಖನು ಮುಕ್ತಸಜ್ಜನರೊಡನೆ ಪ್ರವೇಶಿಸು ವಂತೆ, ಕಲಿಯು ತನ್ನ ಜನಗಳಿಂದ ಸಹಿತನಾಗಿ ಪರಾಂತ್ಯಕಾಲದಲ್ಲಿ ಅಂಧತಮಸ್ಸನ್ನು ಸೇರುತ್ತಾನೆ. ಆ ಅಂಧತಮಸ್ಸಿನಿಂದ ಯಾವನೂ ಎಂದೆಂದಿಗೂ ಹೊರಗೆ ಬರಲಾರನು."- ಹೀಗೆ ಹೇಳಿದ ವಿಷಯವನ್ನು- "ನಿತ್ಯ ನಿರಯಾಂಧಾಖ್ಯ ಕೂಪದಿ"-ಎಂಬ ಪದ್ಯದಿಂದ ನಿರೂಪಿಸಿರುವರು.

॥೩೦॥

## ೫. ಗುರುಹೃದಯಪ್ರಕಾಶಿಕೆ :–

ನಿತ್ಯ ನಿರಯವೆಂಬ ಶಾಶ್ವತ ಅಂಧಕೂಪವೆಂಬ ತಮಸ್ಸಿನಲ್ಲಿ ತನ್ನ ಭೃತ್ಯರಾದ ಅಸುರರಿಂದೊಡಗೂಡಿ, ತಿರುಗಿ ಜನ್ಮವಿಲ್ಲದ ಲೋಕವೆಂಬ ಅಂಧಂತಮಸ್ಸನ್ನೇ ಅನಾದಿ ಹರಿದ್ವೇಷ ನಿಮಿತ್ತದಿಂದ ಕಲಿಯು ಹೊಂದುವನು. ಸತ್ಯಲೋಕಾಧಿಪತಿಯಾದ ಚತುರ್ಮುಖ ಬ್ರಹ್ಮದೇವರು, ತತ್ತ್ವಾಭಿಮಾನಿದೇವತೆಗಳು ಮೊದಲಾದ ಸಮಸ್ತಮುಕ್ತಿಯೋಗ್ಯಜೀವರಿಂದ ಕೂಡಿ, ಅನಾದಿ ಸ್ವಾಭಾವಿಕವಾದ ಭಕ್ತಿಯೆಂಬ ಸ್ವರೂಪಾನಂದವನ್ನು ಹೊಂದುವರು. ॥೩೦॥

**ಯಥಾ ಬ್ರಹ್ಮಾ ವ್ರಜತ್ಯೇಕಃ ಪರಾಂತೇ ಮುಕ್ತಸಜ್ಜನೈಃ ।**
**ತಥೈವ ದುರ್ಜನೈಸ್ಸಾಕಂ ಪರಾಂತೇ ಕಲಿರೇಕಲಃ ॥**
**ತಮೋಂಧಂ ಯಾತಿ ನೈಕೋಽಪಿ ಕದಾಚಿದ್ಬಹಿರಾವ್ರಜೇತ್ ॥**

–ಎಂಬರ್ಥ ವಿವರಿಸಿತು. ॥೩೦॥

## ಸರ್ವವ್ಯಾಖ್ಯಾನಸಾರಸಂಗ್ರಹ

ಕಲಿಯು ತಮೋಯೋಗ್ಯಚೇತನರಲ್ಲಿ ಅತ್ಯಂತ ಶ್ರೇಷ್ಠನು. ನೀಚತಮನಾದ ಕಲಿಯು ಸದಾ ವಿಷ್ಣು ದ್ವೇಷ, ವಿಷ್ಣು ಭಕ್ತರ ದ್ವೇಷವನ್ನು ಸಾಧಿಸುತ್ತಿರುತ್ತಾನೆ. ಶ್ರೀಹರಿ ದ್ವೇಷ ಅವನ ಸ್ವರೂಪಭೂತವಾದದ್ದು. ಕಲಿ ಮತ್ತು ಅವನ ಅನುಚರರು ಪ್ರಳಯಕಾಲದಲ್ಲಿ ಶ್ರೀವಾಯುದೇವರ ಗದಾಪ್ರಹಾರದಿಂದ ಲಿಂಗಭಂಗವನ್ನು ಹೊಂದಿ, ನಿತ್ಯದುಃಖಾನುಭವರೂಪವಾದ ಅಂಧತಮಸ್ಸೆಂಬ ನರಕದ ಕೂಪದಲ್ಲಿ ಬೀಳುವರು. ಈ ಲೋಕವು ಮಹಾ ಪ್ರಳಯಕಾಲದಲ್ಲಿಯೂ ಸಹ ನಾಶವಾಗದೇ ಶಾಶ್ವತವಾಗಿರುವುದು.

ಚತುರ್ಮುಖ ಬ್ರಹ್ಮದೇವರು ಸತ್ಯಲೋಕಾಧಿಪರು. ಮಹಾ ಪ್ರಳಯಕಾಲಾನಂತರ ಬ್ರಹ್ಮದೇವರು ತಮ್ಮ ಜೊತೆಗೆ ಮುಕ್ತರಾಗುವ ಶೇಷಾದಿ ತತ್ತ್ವದೇವತೆಗಳು ಹಾಗೂ ಇತರ ಮುಕ್ತಿಯೋಗ್ಯಜೀವ ಸಮೂಹ ಸಹಿತ ವಿರಜಾನದಿಯ ಸ್ನಾನದ ದ್ವಾರಾ. ಲಿಂಗಭಂಗವನ್ನು ಹೊಂದಿ, ನಿತ್ಯ ಆನಂದಾನುಭವರೂಪವಾದ ವೈಕುಂಠಾದಿ ಮುಕ್ತಿಸ್ಥಾನ ಗಳನ್ನು ಹೊಂದುವರು. ಇದಕ್ಕೆ ಕಾರಣ– ಬ್ರಹ್ಮಾದಿ ತೃಣಾಂತಸಮಸ್ತ ಮುಕ್ತಿಯೋಗ್ಯಜೀವರು, ಸದಾ ಶ್ರೀಹರಿಯ ಪಾದಪದ್ಮಗಳಲ್ಲಿ ದೃಢ ವಾದ ಭಕ್ತಿಯಿಂದ ಶ್ರೀಪರಮಾತ್ಮನನ್ನು ಭಜಿಸುತ್ತಾ, ಶ್ರೀಶನ ಅನುಗ್ರಹಕ್ಕೆ ಪಾತ್ರರಾಗುವರು. ಶ್ರೀಹರಿ ಹಾಗೂ ಹರಿಭಕ್ತರಲ್ಲಿ ತಾರತಮ್ಯಾನುಸಾರ ಮಾಡುವ ಅವರ ಭಕ್ತಿಯೇ ಅವರ ಉತ್ತಮಗತಿಪ್ರಾಪ್ತಿಗೆ ಮುಖ್ಯ ಕಾರಣವು. ॥೩೦॥

## ಪದ್ಯ-೩೧

ಮೂಲ :–

ವಿಧಿ ನಿಷೇಧಗಳೆರಡು ಮರೆಯದೆ ।
ಮಧುವಿರೋಧಿಯ ಪಾದಕರ್ಪಿಸ ।
ಲದಿತಿ ಮಕ್ಕಳಿಗೀವ ಪುಣ್ಯವ ಪಾಪ ದೈತ್ಯರಿಗೆ ॥
ಸುದರ್ಶನಧರಗೀಯದಿರೆ ಬಂ ।
ದೊದಗಿ ಒಯ್ವರು ಪುಣ್ಯ ದೈತ್ಯರು ।
ಅಧಿಪರಿಲ್ಲದ ವೃಕ್ಷಗಳ ಫಲದಂತೆ ನಿತ್ಯದಲಿ ॥ ॥೩೧॥

**ಅವತರಣಿಕೆ :–**

ವಿಧಿ ನಿಷೇಧರೂಪಗಳಾದ ದ್ವಂದ್ವಕರ್ಮಗಳನ್ನು ಶ್ರೀಪರಮಾತ್ಮನಿಗೆ ಸಮರ್ಪಿಸದಿದ್ದರೆ, ಸಜ್ಜನರ ಪುಣ್ಯಗಳನ್ನು ದೈತ್ಯರು ಅಪಹರಿಸುವರೆಂದು ತಿಳಿಸುತ್ತಾರೆ. ॥೩೦॥

**ಪ್ರತಿಪದಾರ್ಥ :–**

**ವಿಧಿ ನಿಷೇಧಗಳೆರಡು** = ಶಾಸ್ತ್ರೋಕ್ತರೀತ್ಯಾ ಯಾವುದನ್ನು ಮಾಡಲೇ ಬೇಕು ಎಂಬ ವಿಧಿ, ಯಾವುದನ್ನು ಮಾಡಬಾರದೆಂಬ ನಿಷೇಧರೂಪಗಳಲ್ಲಿರುವ ದ್ವಂದ್ವಕರ್ಮಗಳನ್ನು, **ಮರೆಯದೆ** = ಶ್ರೀಹರಿಯೇ ಆ ದ್ವಂದ್ವಕರ್ಮಗಳಿಗೆ ಮುಖ್ಯಕರ್ತನೆಂಬ ವಿಷಯವನ್ನು ಮರೆಯದೆ, **ಮಧುವಿರೋಧಿಯ** = ಮಧುನಾಮಕ ದೈತ್ಯನನ್ನು ಸಂಹರಿಸಿದ ಶ್ರೀಪರಮಾತ್ಮನ, **ಪಾದಕರ್ಪಿಸಲು** = ಅನುಸಂಧಾನಪೂರ್ವಕ ಅಹಂಕರ್ತೃತ್ವವನ್ನು ಬಿಟ್ಟು, ಪಾದಪದ್ಮಗಳಿಗೆ ಅರ್ಪಣೆ ಮಾಡಿದರೆ, **ಅದಿತಿಮಕ್ಕಳಿಗೆ** = ಅದಿತೀದೇವಿಯ ಮಕ್ಕಳಾದ ದೇವತೆಗಳಿಗೆ, **ಪುಣ್ಯವ ಈವ** = ಪುಣ್ಯಭಾಗವನ್ನು ಕೊಡುತ್ತಾನೆ. **ದೈತ್ಯರಿಗೆ ಪಾಪ** = ದುಷ್ಟ ಸ್ವಭಾವದವರಾದ ದೈತ್ಯರಿಗೆ ಪಾಪ ಭಾಗವನ್ನು ಕೊಡುವನು. **ಸುದರ್ಶನಧರಗೆ** = ಸುದರ್ಶನವೆಂಬ ಚಕ್ರವನ್ನು ಹಿಡಿದಿರುವ ಆ ಚಕ್ರಪಾಣಿಗೆ, **ಈಯದಿರೆ** = ದ್ವಂದ್ವಕರ್ಮಗಳನ್ನು ಅರ್ಪಿಸದೇ ಇದ್ದಲ್ಲಿ, **ದೈತ್ಯರು** = ದೈತ್ಯರಾದವರು, **ಬಂದು** = ಆ ಸಮಯ ಕಾದಿದ್ದು, **ಒದಗಿ** = ಬಂದು, **ಪುಣ್ಯ ಒಯ್ವರು** = ಮಾಡಿದ ಪುಣ್ಯವನ್ನು ಚೋರರಂತೆ ಅಪಹರಿಸುವರು. **ಅಧಿಪರಿಲ್ಲದ** = ಒಡೆಯರು ಇಲ್ಲದ, **ವೃಕ್ಷಗಳ ಫಲದಂತೆ** = ಮರಗಳಲ್ಲಿ ಬಿಟ್ಟಿರುವ ಫಲಗಳನ್ನು ಕದ್ದೊಯ್ವಂತೆ, **ನಿತ್ಯದಲಿ** = ದ್ವಂದ್ವಕರ್ಮ ನಡೆಯುವಾಗಲೆಲ್ಲಾ ಅಪಹರಿಸುವರು. ॥೩೦॥

# ವ್ಯಾಖ್ಯಾನಗಳು

## ೧. ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ

ದ್ವಂದ್ವಕರ್ಮಗಳ ಪರಮಾತ್ಮಗೆ ಅರ್ಪಿಸದೇ ಹೋದರೆ, ಪುಣ್ಯವು ಉಳಿಯೋದಿಲ್ಲ, ಪಾಪವೂ ಅಳಿಯೋದಿಲ್ಲ. ಆದ್ದರಿಂದ ಪುಣ್ಯ ಉಳಿಯ ಬೇಕಾದರೂ,ಪಾಪ ಅಳಿಯಬೇಕಾದರೂ, ದ್ವಂದ್ವಕರ್ಮ ಪರಮಾತ್ಮಗೆ ಅರ್ಪಿಸ ಬೇಕೆಂದು ಹೇಳತಾರೆ.

ಪುಣ್ಯಕರ್ಮಗಳೇನು, ಪಾಪಕರ್ಮಗಳೇನು–ಇವುಗಳು ಎರಡೂನೂ, ದ್ವಂದ್ವ ಸಹನಾದಲ್ಲಿ ವಿಸ್ಮೃತನಾಗದೆ, ಮಧುನಾಮಕ ದೈತ್ಯಸಿಗೆ ವಿರೋಧಿ ಯಾದ ಪರಮಾತ್ಮನಾದ ಶ್ರೀಕೃಷ್ಣನ ಪಾದಗಳಿಗೆ ಅನುಸಂಧಾನದಿಂದ ಅರ್ಪಣೆ ಮಾಡಿದರೆ, ಪೂರ್ವೋಕ್ತಪ್ರಕಾರ ಜೀವನ ಯೋಗ್ಯತಾಕ್ಕೆ ಅನುಸರಿಸಿ ಕೊಟ್ಟಿದ್ದು ಹೋಗತಾ, ಉಳಿದ ಪುಣ್ಯವನ್ನು ಅದಿತಿ ಮಕ್ಕಳಾದ ದೇವತೆ ಗಳಿಗೆ ಕೊಡೋವನಾಗತಾನೆ. (ಎಷ್ಟು ಮಂದಿ ದೇವತೆಗಳು ಜೀವನ ಕಡಿ ಯಿಂದ ಪುಣ್ಯಕರ್ಮ ಮಾಡಸತಾರೋ, ಆ ಯಾವತ್ತೂ ಮಂದಿಗೆ ಪುಣ್ಯ ವಿಭಾಗ–ಎಂತ ತಾತ್ಪರ್ಯ). ಪೂರ್ವೋಕ್ತಪ್ರಕಾರ ಜೀವನಿಗೆ ಕೊಟ್ಟ ಪಾಪ ಹೋಗತಾ ಉಳದದ್ದು ದೈತ್ಯರಿಗೆ ಕೊಡತಾನೆ (ದಾವ ದೈತ್ಯರು ಜೀವನ ಕಡಿಯಿಂದ ಪಾಪಕರ್ಮ ಮಾಡಸತಾರೋ ಅವರಿಗೆ ವಿಭಾಗ ಎಂತ– ಅರ್ಥ. ಮತ್ತು ಜೀವರಿಗೆ ಉಳಿಸಿದ್ದು ಪೂರ್ವೋಕ್ತಶ್ಲೋಕಗಳಲ್ಲಿ ಹೇಳಿದ ಪ್ರಕಾರ, ನಾಶ ಪಡಿಸತಾನೆ) ಚಕ್ರಧಾರಿಯಾದ ಪರಮಾತ್ಮಗೆ (ಪುಣ್ಯವ) ಅನುಸಂಧಾನ ದಿಂದ ಅರ್ಪಣೆ ಮಾಡದೆ ಹೋದರೆ, ಮೆಲ್ಲ ಮೆಲ್ಲಗೆ ಸಮೀಪಕ್ಕೆ ದೈತ್ಯರೇ ಬಂದು ಪುಣ್ಯವನ್ನ ಅಪಹಾರ ಮಾಡತಾರೆ. ಜೀವನ ಭಾಗಕ್ಕೆ ಬಂದ ಲೇಶ ಪುಣ್ಯವಾದರೂ ಉಳಿಸೋದಿಲ್ಲ. ಅಂದರೆ, ಪರಿಮಳ ದ್ರವ್ಯ ಕಟ್ಟಿದ್ದ ವಸ್ತ್ರದಿಂದ ಪರಿಮಳ ದ್ರವ್ಯ ವೈದರೆ (ತೆಗೆದುಕೊಂಡು ಹೋಗಿಬಿಟ್ಟರೆ, ಬೇರ್ಪಡಿಸಿದರೆ) ದ್ರವ್ಯ ಅಪಹೃತವಾದರೂ, ಪರಿಮಳ ಹತ್ತಿದ್ದಂತೆ ಮಾತ್ರ

ಉಳಿದಿರ್ತದೆ, ಎಂತ ತಾತ್ಪರ್ಯ. ಹೀಂಗೆ ದೈತ್ಯರು ಅಪಹರಿಸಿದ ಪುಣ್ಯ ಅವರಿಗೆ ದಕ್ಕ ಕೊಡದೇ, ವಾಯುದೇವರು ಅಪಹರಿಸಿ, ಭಗವದರ್ಪಣೆ ಮಾಡತಾರೆ. ಭಗವಂತ ಸ್ವೀಕಾರ ಮಾಡಿ ಯಾವತ್ತೂ ದೇವಗಣಕ್ಕೆ ಯೋಗ್ಯತಾನುಸಾರ ವಿಭಾಗಮಾಡಿ ಕೊಡತಾನೆ. ಜೀವಗೆ ಪುಣ್ಯವೇ ಇಲ್ಲದಾಗಿ ಪೂರ್ವೋಕ್ತಪ್ರಕಾರ ಲೇಶ ಉಳಿಯೋದಾಯಿತು. ಪಾಪಗಳು ದೈತ್ಯರು ಅಪಹಾರ ಮಾಡೋದಿಲ್ಲ, ಆದ್ದರಿಂದ ಜೀವಗೆ ಪಾಪಗಳು ಉಳಿದೇ ಇರ್ತವೆ. ತನ್ನ ಭಾಗದ ಲೇಶ ಪಾಪವೇನು, ದೈತ್ಯರಿಗೆ ಭಾಗವಾಗಿ ಹೋಗತಕ್ಕ ಪಾಪವೇನು- ಎರಡೂ ಜೀವನ್ನ ಸುತ್ತಿಕೊಂಡು ಪರಿಹಾರವಾಗೋದಕ್ಕೆ ಮಾರ್ಗವಿಲ್ಲದಾಯಿತು. ಆದ್ದರಿಂದ ಪಾಪಕರ್ಮವ ಭಗವಂತಗೆ ಅರ್ಪಣೆ ಮಾಡಿದರೆ, ಲೇಶ ಭಾಗ ಜೀವಗೆ ಉಳಿಸಿ, ಉಳಿದ ಭಾಗ ದೈತ್ಯರಿಗೆ ವಿಭಾಗಮಾಡಿ ಕೊಡತಾನೆ. ಜೀವನ ಲೇಶಭಾಗ ಪಾಪವನ್ನ ತನ್ನ ಅನುಗ್ರಹದಿಂದ ನಾಶಮಾಡತಾನೆ. ಆದ್ದರಿಂದ ದ್ವಂದ್ವಕರ್ಮ ಅನುಸಂಧಾನಪೂರ್ವಕ ಭಗವಂತಗೆ ಅರ್ಪಣೆ ಮಾಡದೇ ಹೋದರೆ, ಪುಣ್ಯ ಲಾಭವಾಗೋದಿಲ್ಲ, ಪಾಪ ಪರಿಹಾರವಾಗೋದಿಲ್ಲ. ಆದ ಕಾರಣ ದ್ವಂದ್ವಕರ್ಮ ಅರ್ಪಣೆ ಮಾಡಬೇಕು ಎಂತ ತಾತ್ಪರ್ಯ. ಅಧಿಪರು ಅಥವಾ ನಾಥರು ಇಲ್ಲದಂಥಾಗಿಡದಲ್ಲಿ ಫಲಗಳ ಅನ್ಯರು ಅಪಹಾರ ಮಾಡಿದೋಪಾದಿಯುಲ್ಲಿ, ದೇಹಾಖ್ಯ ವೃಕ್ಷಗತ ಪುಣ್ಯ ಫಲಗಳ ಅನ್ಯರಾದ ದೈತ್ಯರು ಅಪಹಾರ ಮಾಡದಂತೆ ಅಧಿಪನಾದ ಪರಮಾತ್ಮನ ವಶಮಾಡಿ, ಕಾಪಾಡಬೇಕೆಂದು ಪ್ರಾರ್ಥನಾ ಮಾಡಿದರೆ, ಅನ್ಯರು ಅಪಹರಿಸದಂತೆ ಕಾವಲು ಇದ್ದು, ಆ ಫಲವನ್ನ ಜೀವಗೆ ಭೋಗಕ್ಕೆ ತಂದುಕೊಡತಾನೆ. ಇಲ್ಲದಿದ್ದರೆ, ಪ್ರತಿದಿನದಲ್ಲಿ ಮಾಡತಕ್ಕ ಪುಣ್ಯ ಫಲಗಳ ದೈತ್ಯರು ಅಪಹರಿಸುತ್ತಾರೆ. ಈ ಕಾರಣದಿಂದ ದ್ವಂದ್ವ ಕರ್ಮ ಭಗವದರ್ಪಣೆ ಮಾಡಬೇಕೆಂದು ಸಿದ್ಧವು. ॥೩೧॥

ಪ್ರಮಾಣ :–

ಯಥಾ ಹ್ಯನಾಥವೃಕ್ಷಾದಿಃ ಪೀಡ್ಯತೇ ನಿಖಿಳೈರಪಿ ।
ರಾಜ್ಞಾ ಪರಿಗೃಹೀತೋ ಯಸ್ತಸ್ಮಾನ್ನ ಪಶ್ಯತಿ ಕಶ್ಚನ ।
ಸಂಕೀರ್ಣ ನಾನಾವಿಧ ಪಾತಕಾನಾಂ ನಿವೃತ್ತಿಮಿಚ್ಛನ್ ಶರಣಂ
ವ್ರಜೇದ್ಧರಿಂ ।
ದಯಾಳುರೇತಾನಿ ನಿಬರ್ಹ್ಯ ಶೀಘ್ರಂ ಗುರೂಣಿ ಪಾಪಾನಿ
ಲಘೂ ಕರೋತಿ ।
ಪುಣ್ಯಪಾಪ ನಿವೃತ್ತಿಂ ಚ ತಾವತ್ಕುರ್ಯಾದ್ಧರಿಂ ಸ್ಮರನ್ ।
ತಸ್ಮಿನ್ ಅನರ್ಪಿತಂ ಪುಣ್ಯಂ ತದ್ವಿಲುಂಪಂತಿ ರಾಕ್ಷಸಾಃ ॥
—ಎಂಬ ತಾತ್ಪರ್ಯದ ಅರ್ಥ ವಿವರಿಸಿತು. ॥೩೦॥

೨. ಭಾವಪ್ರಕಾಶಿಕೆ

ವಿಧಿ– ಅಂದರೆ ಮಾಡಬೇಕೆಂದು ಶಾಸ್ತ್ರದಲ್ಲಿ ವಿಧಿಸಿರುವ ಕರ್ಮಗಳು. ನಿಷೇಧವೆಂದರೆ-ಶಾಸ್ತ್ರದಲ್ಲಿ ಮಾಡಬಾರದೆಂದು ಹೇಳಿರುವ ಕರ್ಮಗಳು. ಇವೆರಡರಲ್ಲಿ ವಿಧಿಯನ್ನು ಆಚರಿಸುತ್ತಾ, ನಿಷೇಧವನ್ನು ಬಿಡುವುದೇ ಪುಣ್ಯ ಕರ್ಮವು. ನಿಷೇಧವನ್ನು ಆಚರಿಸುವುದು, ವಿಧಿಯನ್ನು ಬಿಡುವುದು ಪಾಪಕರ್ಮವು. ಇಂತಹಾ ಪುಣ್ಯ ಪಾಪಗಳೇನು ಮಾಡಿದ್ದರೂ,ಮರೆಯದೇ ನಿತ್ಯದಲ್ಲೂ ಪರಮಾತ್ಮನ ಪಾದಾರವಿಂದಕ್ಕೆ ಅರ್ಪಿಸಬೇಕು. ಪರಮಾತ್ಮನು ಪುಣ್ಯವನ್ನು ದೇವತೆಗಳಿಗೂ, ಪಾಪಗಳನ್ನು ದೈತ್ಯರಿಗೂ ಹಂಚುವನು. ಪುಣ್ಯವನ್ನು ದೇವತೆಗಳಿಗೆ ಕೊಟ್ಟು ಬಿಟ್ಟರೆ, ನಮಗೆ ಪುಣ್ಯವೆಲ್ಲಿರುವುದೆರದು ಯೋಚಿಸಬಾರದು. ಸತ್ಪಾತ್ರದಲ್ಲಿ ಸ್ವಲ್ಪ ದಾನ ಮಾಡಿದರೂ ಅದು ಅಕ್ಷಯವಾಗುವುದು. ನಾವು ಸಂಪಾದಿಸಿರುವ ಹಣವನ್ನು ಮನೆಯಲ್ಲೇ ಇಟ್ಟು

ಕೊಂಡು ಇದ್ದರೆ ಕಳ್ಳರ ಭಯವಿರುವುದು. ಅದಕ್ಕಾಗಿ ಆ ದ್ರವ್ಯವನ್ನು ಬ್ಯಾಂಕು ಮೊದಲಾದ ಕಡೆಯಲ್ಲಿ ಇಟ್ಟಿದ್ದರೆ, ಹೇಗೆ ಬಡ್ಡಿಯೊಂದಿಗೆ ನಮಗೆ ದ್ರವ್ಯವು ಸಿಕ್ಕುವುದೋ, ಹಾಗೆಯೇ ಪರಮಾತ್ಮನು ನಾವು ಪುಣ್ಯವನ್ನು ಅವನಿಗೆ ಅರ್ಪಿಸುವುದರಿಂದ, ಅದನ್ನು ತಾನು ತತ್ವೇಶರಾದ ದೇವತೆಗಳಲ್ಲಿಟ್ಟು, ನಮಗೆ ಅದರ ಫಲವನ್ನು ಇಮ್ಮಡಿಮಾಡಿ ಕೊಡಿಸುವನು. ನಾವು ಪುಣ್ಯವನ್ನು ಪರಮಾತ್ಮನಿಗೆ ಅರ್ಪಿಸದಿದ್ದರೆ ಕಳ್ಳರಾದ ದೈತ್ಯರು, ಮನೆಯಲ್ಲಿರುವ ಹಣವನ್ನು ಕಳ್ಳರು ಕದಿಯುವಂತೆ ಅಪಹರಿಸುವರು. ಆದ್ದರಿಂದ ಪರಮಾತ್ಮನಿಗರ್ಪಿಸಬೇಕು. ಪಾಪಗಳನ್ನು ಮಾತ್ರ ದೈತ್ಯರಿಗೆ ಪರಮಾತ್ಮನು ಕೊಟ್ಟರೆ, ಅಯೋಗ್ಯರಲ್ಲಿ ಕೊಟ್ಟ, ಹಣವು ಮುಳುಗಿಹೋಗುವಂತೆ ಆ ಪಾಪಗಳೆಲ್ಲಾ ದೈತ್ಯರ ಪಾಲೇ ಆಗುವವು. ಆದ್ದರಿಂದ ಪುಣ್ಯ ಪಾಪಗಳೆರಡನ್ನೂ ಪರಮಾತ್ಮನಿಗೆ ಅರ್ಪಣೆ ಮಾಡಬೇಕೆಂಬ ತಾತ್ಪರ್ಯ.

॥೩೦॥

## ೩. ಭಾವದರ್ಪಣ :–

ವಿಧಿನಿಷೇಧ । "ಏವಂ ವಿಧಿ ನಿಷೇಧಾನಾಂಪಾತ್ರಂ ಜೀವಂ ಪ್ರಕಲ್ಪ್ಯ ಸಃ । ಉಪಾದಿ ಶನ್ನಿ ಚಾಜ್ಞೇತಿ ಹರಿಃ ಸಾಕ್ಷಾತ್ ಶ್ರುತಿಸ್ಮೃತಿ । ತಸ್ಮಾದ್ವಿಹಿತಂ ಕರ್ಮಕೃತ್ವಾತತ್ಕೇಶವೇsರ್ಪಯೇತ್" । ಇದರಿಂದ ಪುಣ್ಯ ಕರ್ಮವೇ ಶ್ರೀಹರಿಗೆ ಸಮರ್ಪಣ ಮಾಡಿ ಪಾಪಕರ್ಮಾರ್ಪಣ ಮಾಡಬೇಡೆಂಬರ್ಥವಲ್ಲ. "ವಿಷ್ಣುರ್ವಾಯುಂ ಪುರಸ್ಕೃತ್ಯ ಸರ್ವೇಷ್ಟೇತೇಷು ಸಂಚಿರನ್ । ಕರೋತಿ ಕಾರಯತ್ಯದ್ವಾ" ಎಂಬೋ **ಶಾಂಡಿಲ್ಯತತ್ವಾನುಸಾರ** ಮನಾದಿ ಕರ್ಣಗಳಲ್ಲಿ ಶ್ರೀಹರಿ ತತ್ವೇಶರ ಸಹಿತ ತಾನೇ ನಿಂತು, ದ್ವಂದ್ವ ಕರ್ಮಗಳ ಮಾಡಿ ಮಾಡಿಸುತ್ತಾ ಇರಲಿಕ್ಕೆ, ಪಾಪಾರ್ಪಣ ಮಾಡದೇ ಹೋದರೆ, ಆ ಪಾಪ ಜೀವನ್ನ ಬಹು ದುಃಖ ಬಡಿಸುತ್ತದೆ. ತತ್ರಯುಕ್ತ "ಗೃಣ್ಹಾತಿ ಶ್ರೀಹರಿಃ ಪುಣ್ಯಂ ಪಾಪಂ ಭಸ್ಮೀಕರೋತಿ ಚ ಸ್ವಸ್ಯಚ ದ್ರೋಹಿಣಃ ಕಿಂಚಿತ್ ಪಾಪಂಶಂ ಪ್ರದದಾತಿ ಸಃ" । ಎಂಬಂಥ ಇದೇ ವಿಷ್ಣು

ರಹಸ್ಯ ವಚನವೇ ಇರೋಣದರಿಂದ, ದ್ವಂದ್ವಕರ್ಮಾರ್ಪಣ ಮಾಡು-ಎಂದು ದಾಸರಾಯರ ತಾತ್ಪರ್ಯ ಸ್ಪಷ್ಟವಾಗಿ ಇರುತ್ತದೆ. ಹಾಗಿದ್ದಾಗ್ಯೂ ಭಯ ಪಟ್ಟು ಪಾಪಾರ್ಪಣೆ ಮಾಡದೆ ಬಿಟ್ಟಲ್ಲಿ, ದೇವರು ಪುಣ್ಯ ಸ್ವೀಕಾರ ಮಾಡದೆ ಉಪೇಕ್ಷಾ ಮಾಡುತ್ತಾನೆ. ದೈತ್ಯರು ಆ ಪುಣ್ಯ ಯಾವತ್ತೂ ಅಪಹಾರ ಮಾಡುತ್ತಾರೆ. । ತದುಕ್ತಂ । ತಸ್ಮಿನ್ನರ್ಪಿತಂ ಯತ್ತು ತದ್ವಿಲುಂಠಂತಿ ರಾಕ್ಷಸಾಃ । ಯಥಾ ಹ್ಯನಾಥೋ ವೃಕ್ಷಾದಿಃ ಪೀಡ್ಯತೇ ನಿಖಿಲೈರಪಿ । ರಾಜ್ಞಾ ಪರಿಗೃಹೀತೋಯಸ್ತಂ ನ ಪಶ್ಯಂತಿ ಕೇಚನೇತಿ ಚ । " ॥೩೦॥

## ೪. ಶ್ರೀ ವ್ಯಾಸದಾಸ ಸಿದ್ಧಾಂತ ಕೌಮುದೀ :–

"ತಸ್ಮಾದ್ ಯದ್ವಿಹಿತಂ ಕರ್ಮ ಕೃತ್ವಾ ತತ್ ಕೇಶವೇರ್ಪಯೇತ್ ॥ ತಸ್ಮಿನ್ ಅನರ್ಪಿತಂ ಯತ್ತು ತದ್ ವಿಲುಂಠಂತಿ ರಾಕ್ಷಸಾಃ ॥ –ಇತ್ಯುಕ್ತಂ ಬ್ರೂತೇ – "ವಿಧಿ" ಇತಿ. ॥೩೦॥

### ಕನ್ನಡಾರ್ಥ

"ಆದುದರಿಂದ ಯಾವ ಕರ್ಮವು ವಿಹಿತವೋ, ಆ ಕರ್ಮವನ್ನು ಮಾಡಿ (ಆಚರಿಸಿ) ಅದನ್ನು ಶ್ರೀಹರಿಯಲ್ಲಿ ಸಮರ್ಪಿಸಬೇಕು. ಶ್ರೀಹರಿಯಲ್ಲಿ ಸಮರ್ಪಿತವಾಗದಿರುವ ಕರ್ಮವನ್ನು (ಅದರ ಫಲವನ್ನು) ರಾಕ್ಷಸರು ಅಪಹರಿಸುವರು."– ಹೀಗೆ ಪುರಾಣೋಕ್ತ ವಿಷಯವನ್ನು –"ವಿಧಿ ನಿಷೇಧಗಳೆರಡು" ಈ ಪದ್ಯದಿಂದ ನಿರೂಪಿಸುತ್ತಾರೆ. ॥೩೦॥

## ೫. ಶ್ರೀಗುರುಹೃದಯ ಪ್ರಕಾಶಿಕೆ :–

ವಿಧಿ ನಿಷೇಧಗಳೆಂಬ ಪುಣ್ಯ ಪಾಪಗಳೆರಡೂ ದೇವರಧೀನವೆಂದು ತಿಳಿದು, ಮರೆಯದೆ ಮಧುನಾಮಕ ದೈತ್ಯಶತ್ರುವಾದ ಶ್ರೀಹರಿಯ ಪಾದಕ್ಕೆ ಸರ್ವವೂ ನಿನ್ನಾಧೀನವಾದ್ದರಿಂದ, ಈ ಎರಡರಿಂದಲೂ ನನ್ನನ್ನು ಬಿಡಿಸೆಂದು

ಪ್ರಾರ್ಥಿಸಿ ಒಪ್ಪಿಸಲು, ಅಧಿಕ ಪುಣ್ಯವನ್ನೆಲ್ಲಾ ಅದಿತಿಮಕ್ಕಳಾದ ದೇವತೆಗಳಿಗೆ ದೇವರು ಕೊಡುವನು. ಅಧಿಕ ಪಾಪವನ್ನು ದೈತ್ಯರಿಗೆ ಕೊಡುವನು. ಪುಣ್ಯವನ್ನು ಚಕ್ರಧರನಾದ ಶ್ರೀಹರಿಗೆ ಸಮರ್ಪಿಸದೆ ಹೋದರೆ, ದೈತ್ಯರು ಬಂದು ಒದಗಿ, ತ್ವರೆಯಿಂದ ಆ ಪುಣ್ಯವನ್ನು ತೆಗೆದುಕೊಂಡು ಅಧಿಪತಿ ಇಲ್ಲದ ವೃಕ್ಷದ ಫಲಗಳನ್ನು ಸಿಕ್ಕಿದವರು ತೆಗೆದುಕೊಂಡು ಹೋಗುವ ಹಾಗೆ ಹೋಗುವರು ಪಾಪವನ್ನು ದೇವರಿಗೆ ಹೇಳಿಕೊಂಡು ಪ್ರಾರ್ಥಿಸದೇ ಹೋದರೆ, ವಂಚಕತನ ಬಂದು,ಪಾಪ ಪರಿಹಾರವಾಗಲಾರದು. ಆದ್ದರಿಂದ, ಪಾಪವನ್ನು ಒಪ್ಪಿಸಿ ಪ್ರಾರ್ಥಿಸಬೇಕೆಂದರ್ಥ. ॥೩೧॥

**ಯಥಾ ಹ್ಯನಾಥ ವೃಕ್ಷಾದಿ ಪೀಡ್ಯತೇ ಸಕಲೈರಪಿ ।**
**ರಾಜ್ಞಾ ಪರಿಗೃಹೀತಂ ಯತ್ತನ್ನ ತತ್ಪಶ್ಯತಿ ಕಶ್ಚನ ॥**
**ಸಂಕೀರ್ಣ ನಾನಾವಿಧ ಪಾತಕಾನಾಂ ನಿವೃತ್ತಿನಿರ್ಬಿಚ್ಛ ಶರಣಂ ವ್ರಜೇದ್ಧರಿಂ ।**

**ದಯಾಳುರೇತಾನಿ ನಿಬರ್ಹ್ಯ ಶೀಘ್ರಂ ಗುರೂನಿ ಪಾಪಾನಿ ಲಘೂ ಕರೋತಿ । ಪುಣ್ಯಪಾಪ ನಿವೃತ್ಯರ್ಥಂ ತಾವತ್ಕುಯಾದ್ಧರಿಂ ಸ್ಮರನ್ । ತಸ್ಮಿನ್ ಅಸರ್ಪಿತಂ ಪುಣ್ಯಂ ತದ್ವಿಲುಂಪಂತಿ ರಾಕ್ಷಸಾಃ ॥**
–ಎಂಬುದರರ್ಥ ವಿವರಿಸಿತು. ॥೩೧॥

## ಸರ್ವವ್ಯಾಖ್ಯಾನಸಾರಸಂಗ್ರಹ

ಶಾಸ್ತ್ರಗಳಲ್ಲಿ ಹೇಳಿರುವಂತೆ, ಯಾವ ಕರ್ಮಗಳನ್ನು ಅತ್ಯಗತ್ಯವಾಗಿ ಮಾಡಬೇಕೋ. ಅವುಗಳಿಗೆ "ವಿಧಿ" ಎಂದು ಹೆಸರು. ಯಾವ ಕರ್ಮಗಳನ್ನು ಆಚರಿಸಬಾರದೋ. ಯಾವ ಕ್ರಿಯೆಗಳು ತ್ಯಾಜ್ಯವೋ, ಅವು

"ನಿಷೇಧ" ಗಳೆನಿಸುವುವು. ವಿಧಿಪೂರ್ವಕವಾದ ಕರ್ಮಾಚರಣೆಗಳಿಂದ ಪುಣ್ಯ ಪ್ರಾಪ್ತಿಯು, ನಿಷೇಧರೂಪವಾದ ಕರ್ಮಾಚರಣೆಗಳಿಂದ ಪಾಪವು ಲಭಿಸುವುದು.

ನಮ್ಮ ಸ್ಥೂಲಶರೀರಗತರಾಗಿ ತತ್ತ್ವಾಭಿಮಾನಿದೇವತೆಗಳ ದ್ವಾರಾ ವಿಧಿರೂಪವಾದ ಪುಣ್ಯಕರ್ಮಗಳನ್ನು ಬಿಂಬನಾದ ಶ್ರೀಹರಿಯು ಮಾಡಿ ಮಾಡಿಸುವನು. ಅದೇ ತತ್ತ್ವೇಶರು ದೈತ್ಯರಲ್ಲಿ ನೆಲೆಸಿದ್ದು, ಬಿಂಬನ ಪ್ರೇರಣಾನುಸಾರ ನಿಷೇಧರೂಪವಾದ ಪಾಪಗಳನ್ನು ಮಾಡಿಸುವರು.

ಈ ಕರ್ಮದ ಮರ್ಮವನ್ನು ಅರಿತು, ಜ್ಞಾನಾನುಸಂಧಾನಪೂರ್ವಕ ವಾಗಿ ಜೀವನು, –'ನನ್ನಲ್ಲಿ ನಡೆಯುವ ಸಮಸ್ತಕರ್ಮಗಳಿಗೂ ಶ್ರೀ ಹರಿಯೇ ಮುಖ್ಯಪ್ರೇರಕನು. ಅವನ ಪ್ರೇರಣಾನುಸಾರ ಸಕಲಪಾಪ ಪುಣ್ಯಗಳೆಂಬ ದ್ವಂದ್ವಕರ್ಮಗಳು ನಡೆಯುತ್ತಿರುವುವು. ಅವನೇ ಸಕಲ ಕರ್ಮಗಳಿಗೂ ಕರ್ತನೇ ಹೊರತು, ನಾನಲ್ಲ'– ಎಂಬ ಜ್ಞಾನದಿಂದ, ದ್ವಂದ್ವಕರ್ಮಗಳನ್ನು ಮಧುವೈರಿಯಾದ ಆ ಮದನಜನಕನ ಪಾದಾರವಿಂದ ಗಳಿಗೆ ಅರ್ಪಿಸಬೇಕು.

ಆಗ ಸರ್ವಕರ್ತೃವಾದ ಶ್ರೀಹರಿಯು, ಜೀವನಿಗೆ ಅವನ ಯೋಗ್ಯತೆ ಗನುಸಾರವಾಗಿ ಎಷ್ಟು ಪುಣ್ಯ ಸಲ್ಲಬೇಕೋ, ಅಷ್ಟು ಭಾಗವನ್ನು ಜೀವನಿಗೆ ಕೊಟ್ಟು, ಅವಶಿಷ್ಟಪುಣ್ಯವನ್ನು ತತ್ತ್ವದೇವತೆಗಳಿಗೆ ಕೊಡುವನು. ಪಾಪದ ಭಾಗವನ್ನು ಜೀವನಿಗೀಯದೆ, ದೈತ್ಯರಿಗೆ ಹಂಚುವನು. ಇದ ರಿಂದ ಜೀವನು ಪಾಪರಹಿತನಾಗುವನು. ಪುಣ್ಯಾತ್ಮನಾಗುವನು.

ದ್ವಂದ್ವಕರ್ಮಗಳ ಸಮರ್ಪಣೆ ಎಂದರೆ,– ಸಕಲ ಶುಭಾಶುಭಕರ್ಮ ಗಳನ್ನು ಸರ್ವಪ್ರೇರಕನಾದ ಬಿಂಬನೇ ಮಾಡಿಸುವನು. ಜಗದ್ವಿಲಕ್ಷಣ ನಾದ ಆ ಜಗದೀಶನಿಗೆ ಜೀವಕೃತ ಕರ್ಮಗಳ ಲೇಪವಿಲ್ಲ.– ಎಂಬ ಜ್ಞಾನಾ ನುಸಂಧಾನವು.

ತಾನೇ ಕರ್ತನೆಂಬ ಜೀವನ ಪುಣ್ಯಗಳನ್ನು ಚೋರಸದೃಶರಾದ ದೈತ್ಯರು ಕಾದಿದ್ದು, ಅಪಹರಿಸುವರು. ದ್ವಂದ್ವಕರ್ಮಸಮರ್ಪಣಾ ಭಾವವನ್ನು ತಿಳಿಯದಿದ್ದ ಜೀವರಿಗೆ ಪಾಪವೇ ಲಭಿಸುವುದು, ಪುಣ್ಯ ಲವ ಲೇಶವೂ ದಕ್ಕುವುದಿಲ್ಲ. ಫಲಗಳಿಂದ ತುಂಬಿರುವ ವೃಕ್ಷಗಳಿಗೆ ಯಜಮಾನ ನಿಲ್ಲದಿದ್ದರೆ, ಚೋರರು ಆ ಫಲಗಳನ್ನು ನಿರ್ಭೀತರಾಗಿ ಅಪಹರಿಸುವರು. ಇದರಂತೆ ಸಾಧನ ಶರೀರವು ವೃಕ್ಷ ಸದೃಶ ಪುಣ್ಯಗಳು ಫಲಸದೃಶ. ಸರ್ವಕರ್ತನಾದ ಜಗನ್ನಾಥನೇ ಕರ್ತೃ– ಪತಿಯು. ದೈತ್ಯರು ಚೋರರು. ದ್ವಂದ್ವಕರ್ಮಗಳ ಮರ್ಮವನ್ನು ಈ ಸುಂದರ ದೃಷ್ಟಾಂತದಿಂದ ವಿವರಿಸು ತ್ತಾರೆ. ॥೩೦॥

## ಪದ್ಯ–೩೧

**ಮೂಲ :–**

**ತಿಲಜ ಕಶ್ಮಲ ತ್ಯಜಿಸಿ ದೀಪವು ।**
**ತಿಳಿಯುತೈಲವ ಗ್ರಹಿಸಿ ಮಂದಿರ ।**
**ದೊಳಗೆ ವ್ಯಾಪಿಸಿಯಿಪ್ಪ ಕತ್ತಲೆ ಭಂಗಿಸುವ ತೆರದಿ ॥**
**ಕಲಿ ಮೊದಲುಗೊಂಡಖಿಳ ದಾನವ ।**
**ಕುಲಜರನುದಿನ ಮಾಳ್ಪ ಪುಣ್ಯಜ ।**
**ಫಲವ ಬ್ರಹ್ಮಾದ್ಯರಿಗೆ ಕೊಟ್ಟಲ್ಲಲ್ಲೆ ರಮಿಸುವನು ॥ ॥೩೧॥**

**ಅವತರಣಿಕೆ :-**

ಸ್ಥೂಲಶರೀರಗತ ಭಗವದ್ದ್ವೇಷಿಗಳಾದ ಕಲ್ಯಾದಿ ಸಮಸ್ತದೈತ್ಯರ ಪುಣ್ಯಭಾಗವನ್ನು ಬ್ರಹ್ಮಾದಿ ಸಕಲ ತತ್ತ್ವಾಭಿಮಾನಿದೇವತೆಗಳಿಗೆ ವಿನಿಮಯಮಾಡಿ, ಅವರಲ್ಲಿ ಕ್ರೀಡಿಸುವನು-ಎಂದು ತಿಳಿಸುತ್ತಾರೆ. ॥೩೨॥

**ಪ್ರತಿಪದಾರ್ಥ :-**

**ತಿಲಜ** = ಎಳ್ಳಿನಿಂದ ಉತ್ಪತ್ತಿಯಾದ ಎಣ್ಣೆಯು, **ಕಶ್ಮಲ** = ಎಣ್ಣೆಯಲ್ಲಿರುವ ಗಸಿಯನ್ನು, **ತ್ಯಜಿಸಿ** = ಬಿಟ್ಟು, **ದೀಪವು** = ಉರಿಯುತ್ತಿರುವ ದೀಪವು, **ತಿಳಿಯ ತೈಲವ** = ತಿಳಿಯಾದ ಎಣ್ಣೆಯನ್ನು ಮಾತ್ರ, **ಗ್ರಹಿಸಿ** = ಸ್ವೀಕರಿಸಿ, **ಮಂದಿರದೊಳಗೆ** = ಮನೆಯಲ್ಲಿ, **ವ್ಯಾಪಿಸಿ ಇಪ್ಪ ಕತ್ತಲೆ** = ಸುತ್ತಲೂ ವ್ಯಾಪಿಸಿಕೊಂಡಿರುವ ಕತ್ತಲೆಯನ್ನು, **ಭಂಗಿಸುವ ತೆರದಿ** = ಪರಿಹರಿಸುವಂತೆ, **ಕಲಿ ಮೊದಲುಗೊಂಡು** = ಕಲಿ ಆರಂಭಮಾಡಿ, **ಅಖಿಳದಾನವ** = ತೃಣಾಂತ ಸಕಲದೈತ್ಯರ, **ಕುಲಜರನು** = ವಂಶದಲ್ಲಿ ಉತ್ಪತ್ತಿಯಾದ ದಾನವರು, **ಅನುದಿನ ಮಾಳ್ಪ** = ಪ್ರತಿಕ್ಷಣದಲ್ಲಿ ಮಾಡುವ, **ಪುಣ್ಯಜಫಲವ** = ಪುಣ್ಯಕರ್ಮಗಳಿಂದ ಜನಿತವಾದ ಸತ್ಫಲಗಳನ್ನು, **ಬ್ರಹ್ಮಾದ್ಯರಿಗೆ** = ಆ ದೈತ್ಯರ ದೇಹಗತಬ್ರಹ್ಮಾದಿ ಸಮಸ್ತತತ್ತ್ವದೇವತೆಗಳಿಗೆ, **ಕೊಟ್ಟು** = ವಿನಿಮಯಿಸಿ ಕೊಟ್ಟು, **ಅಲ್ಲಲ್ಲೆ** = ಆಯಾಯಾ ದೇವತೆಗಳಲ್ಲಿಯೇ, **ರಮಿಸುವನು** = ಬಿಂಬಕ್ರಿಯಾದ್ವಾರಾಕ್ರೀಡಿಸುವನು. ॥೩೨॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ಭಗವದ್ದ್ವೇಷಿಗಳ ದೇಹಗತ ತತ್ತ್ವನಿಯಾಮಕ ಬ್ರಹ್ಮಾದಿದೇವತೆಗಳಿಗೆ ಪುಣ್ಯಭಾಗ ವಿಚಾರ ಹೇಳತಾರೆ.

ದೀಪವಾದುದು ಏನು ಮಾಡತದೆ–ಎಂದರೆ, ಎಳ್ಳಿನಿಂದ ಉತ್ಪನ್ನವಾದದ್ದು ಒಳ್ಳೇ ಎಣ್ಣೆ. ಇದರಲ್ಲಿ ಕಶ್ಮಲ ಸಾಂಕೇತವಾದ ಗಸಿ, ತಿಳೀ ಎಣ್ಣೆ ಎರಡೂ ಕಲತು ಅವೆ. ಹಾಂಗೆ ಕಲೆತುಯಿದ್ದದರೊಳಗೆ ಕಶ್ಮಲವಾದ ಎಣ್ಣೆಯನ್ನು ಬಿಟ್ಟು, ಎಣ್ಣೆ ಮಾತ್ರ ಸ್ವೀಕಾರಮಾಡಿ, ಮನಿಯೊಳಗೆ ಪ್ರಕಾಶರೂಪದಿಂದ ವ್ಯಾಪಿಸಿ ಇರತಕ್ಕ ಅಂಧಕಾರವನ್ನು ಪರಿಹಾರ ಮಾಡುವೋಪಾದಿಯಲ್ಲಿ, ಕಲಿ ಆರಂಭ ಮಾಡಿ ಸಮಸ್ತದೈತ್ಯರು ಮತ್ತು ಈ ದೈತ್ಯರ ಕುಲದಲ್ಲಿ ಉತ್ಪನ್ನರಾದ, ದೇವಯೋನಿಜರಾದ ಆಜಾನಜದೇವತೆಗಳೊಳಗೆ ಸದೃಶರಾದ ಅಸುರರು, ಈ ಯಾವತ್ತೂ ಮಂದಿ ದೈತ್ಯರು ಪ್ರತಿ ದಿನ ಪ್ರತಿ ಕ್ಷಣದಲ್ಲಿ ಮಾಳ್ಪ, ಉಪಲಕ್ಷಣಯಾ, ದೃಷ್ಟಾಂತ ಲಕ್ಷಣ್ಯಯಾ ದೀಪಸದೃಶ ಪರಮಾತ್ಮ ; ಈ ಪರಮಾತ್ಮನೆಂಬೋ ದೀಪ, ಗಸಿ ಸದೃಶರಾದ ದೈತ್ಯರ ಪಾಪಗಳ ತಾನು ಸ್ವೀಕಾರ ಮಾಡದೆ, ಅವರಿಗೆ ಉಳಿಸಿ, ದೈತ್ಯರಿಂದ ಅನಾದಿಕರ್ಮವನುಸರಿಸಿ ಮಾಡಿಸಿದ ಪುಣ್ಯಕರ್ಮದಿಂದ ಜನಿತವಾದ, ತೈಲಸದೃಶವಾದ ಪುಣ್ಯಫಲಗಳ ತಾನು ಆಕರ್ಷಣ ಮಾಡಿ, ಆ ದೈತ್ಯರ ದೇಹಗತ ಬ್ರಹ್ಮಾದಿ ತತ್ತ್ವದೇವತೆಗಳಿಗೆ ಕೊಡೋವನಾಗಿ' ಆಯಾ ದೇವತೆಗಳಲ್ಲೇ ರಮಿಸತಾ ಇರತಾನೆ.

ದೀಪಸದೃಶನಾದ ಪರಮಾತ್ಮ, ದೇವತೆಗಳ ದೇಹಾಖ್ಯಮನಿಯಲ್ಲಿ ತನ್ನ ಕಟಾಕ್ಷವೆಂಬ ಪ್ರಕಾಶದಿಂದ ಅಂಧಕಾರವೆಂಬ ಅಜ್ಞಾನ ಪರಿಹಾರ ಮಾಡಿ ರಮಿಸತಾನೆ. ಮನಿಯಲ್ಲಿ ದೀಪ ಇದ್ದರೂ,ಕೆಲವು ಕಡಿ ಭಿತ್ತ್ಯಾದಿ(ಗೋಡೆ) ಪ್ರತಿಬಂಧಕದಿಂದಲೂ, ದೂರದೋಷದಿಂದಲೂ, ದೀಪದಿಂದ ಅಂಧಕಾರ ಹ್ಯಾಂಗೆ ಪರಿಹಾರವಿಲ್ಲವೋ, ತದ್ವತ್ ದೈತ್ಯರಿಗೆ ಸ್ವರೂಪಭೂತ ಅಜ್ಞಾನ ಪ್ರತಿಬಂಧಕದಿಂದಲೂ, ಸಮೀಚೀನಜ್ಞಾನದಿಂದ ದೂರವಾಗಿಯೇ ಇರೋಣದರಿಂದಲೂ, ಪರಮಾತ್ಮನ ಕಟಾಕ್ಷಾಖ್ಯ ಪ್ರಕಾಶ ದೈತ್ಯರಿಗೆ ದೇಹಾಖ್ಯ ಗೃಹದಲ್ಲಿ ಪ್ರಸರಿಸದೆ, ಅಜ್ಞಾನರೂಪವಾದ ಅಂಧಕಾರವೇ ಧಾವಾಗ್ಯೂ ಇಂತದೆ. ಇವರ ಪಾಪದಲ್ಲಿ ದೇವತೆಗಳಿಗೆ ಭಾಗವಿಲ್ಲ. ಪುಣ್ಯ

ವಿಭಾಗ ಯಾವತ್ತೂ ದೇವತೆಗಳಿಗೆ ಸೇರಿ ಆತ್ಯಲ್ಪ ಉಳದದ್ದು, ಪ್ರತೀತ ದಲ್ಲಿ ಸುಖವಾಗಿ ತೋರತಾ ಇರಬೇಕು, ಭೋಗದಲ್ಲಿ ಸರ್ವವೂ ದುಃಖಕರ ವಾಗಿಯೇ ಇರಬೇಕು. ಅಂಥಾ ಫಲವನ್ನ ದೇವರು ಕೊಡತಾನಂತ ತಾತ್ಪರ್ಯ. ॥೩೨॥

## ೨. ಭಾವಪ್ರಕಾಶಿಕೆ :–

ಪ್ರಣತೆಯಲ್ಲಿ ಎಣ್ಣೆಯನ್ನು ಹಾಕಿ ದೀಪವಿಟ್ಟರೆ, ಆ ಎಣ್ಣೆಯಲ್ಲಿರುವ ಗಸಿ ಮೊದಲಾದ ಕಶ್ಮಲವನ್ನು ಆ ಪಾತ್ರೆಯಲ್ಲೇ ಬಿಟ್ಟು, ತಿಳೀ ಎಣ್ಣೆಯನ್ನು ಮಾತ್ರ ಗ್ರಹಿಸಿ. ತಾನು ಮನೆಯಲ್ಲೆಲ್ಲಾ ವ್ಯಾಪಿಸಿಕೊಂಡು, ಆ ಮನೆ ಯಲ್ಲಿ ವ್ಯಾಪಿಸಿಕೊಂಡಿದ್ದ ಕತ್ತಲೆಯನ್ನು ಓಡಿಸಿ, ತಾನೇ ತಾನಾಗಿ ಶೋಭಿ ಸುವಂತೆ ಶ್ರೀಹರಿಯು, ಕಲಿ ಮೊದಲಾದ ದೈತ್ಯಕುಲದವರು ಮಾಡುವ ಪಾಪರೂಪಕಲ್ಮಷವನ್ನು ಅಲ್ಲೇ ಬಿಟ್ಟು, ತಿಳೀಎಣ್ಣೆಯಂತಿರುವ ಪುಣ್ಯ ವನ್ನು ಮಾತ್ರ ಗ್ರಹಿಸಿ, ಮನೆಗಳಂತಿರುವ ಬ್ರಹ್ಮಾದಿಗಳಲ್ಲಿ ತಾನು ವ್ಯಾಪ್ತ ನಾಗಿ, ಅವರುಗಳಲ್ಲಿರುವ ಕತ್ತಲೆಗೆ ಸಮವಾದ ಪಾಪಗಳನ್ನು ನಾಶಗೊಳಿಸಿ, ತಾನು ಅಲ್ಲಲ್ಲೆ ಶೋಭಿಸುತ್ತಿರುವನೆಂಬ ಭಾವ. ॥೩೨॥

## ೩. ಭಾವದರ್ಪಣ :–

ದೈತ್ಯರ ಪುಣ್ಯ ದೇವತೆಗಳಿಗೆ ಕೊಡುತ್ತಾನೆಂದು— ಹೇಳುತ್ತಾರೆ. ತಿಲಜ. ॥೩೨॥

## ೪. ಶ್ರೀವ್ಯಾಸದಾಸ ಸಿದ್ಧಾಂತ ಕೌಮುದೀ :–

ಉಕ್ತಮುಪ ಸಂಹರನ್ ಪ್ರದೀಪ ಸೂತ್ರೋಕ್ತ ದೃಷ್ಟಾಂತಮಾಹ — "ತಿಲ"— "ಇತಿ". ॥೩೨॥

## ಕನ್ನಡಾರ್ಥ

ಹಿಂದಿನ ವಿಷಯಗಳನ್ನು ಉಪಸಂಹರಿಸಿ, "ಪ್ರದೀಪ ವದಾವೇಶಃ ತಥಾಹಿ ದರ್ಶಯತಿ"- ಈ ಸೂತ್ರದಲ್ಲಿ "ಯಥಾ ಪ್ರದೀಪಃ ದೀಪಿಕಾದಿಷು ಪ್ರವಿಷ್ಟಃ ತತ್ಸ್ಥಃ ತೈಲಾದ್ಯೇವ ಭುಂಕ್ತೇ ನ ತು ಕಾಷ್ಠಾರ್ದಿ"- ಎಂಬ ಭಾಷ್ಯೋಕ್ತ ದೃಷ್ಟಾಂತವನ್ನು "ತಿಲಜ" ಈ ಪದ್ಯದಿಂದ ಹೇಳುತ್ತಾರೆ.

॥೩೨॥

### ೫. ಶ್ರೀ ಗುರುಹೃದಯ ಪ್ರಕಾಶಿಕೆ :-

ದೈತ್ಯರ ಪುಣ್ಯ ದೇವರು ಅಪಹಾರ ಮಾಡಿದ್ದನ್ನು ಸದೃಷ್ಟಾಂತ ತಿಳಿಸುತ್ತಾರೆ- ತಿಲಜ ಎಂದು. ತಿಲಜ ಎಂಬ ಎಣ್ಣೆಯಲ್ಲಿರುವ ಕಲ್ಮಷವನ್ನು ಬಿಟ್ಟು, ದೀಪವು ತಿಳಿಎಣ್ಣೆಯನ್ನೇ ಗ್ರಹಿಸಿ, ಮನೆಯೊಳಗೆ ವ್ಯಾಪಿಸಿರುವ ಕತ್ತಲೆಯನ್ನು ಪರಿಹರಿಸುವಂತೆ, ಕಲಿ ಮೊದಲು ಸಮಸ್ತ ದಾನವಕುಲದವರು ಮಾಡುವ ಪುಣ್ಯಜನ್ಯ ಫಲವೆಂಬ ಸೌಖ್ಯವನ್ನು ತಾನು ತೆಗೆದುಕೊಂಡು, ಬ್ರಹ್ಮಾದಿ ದೇವತೆಗಳಿಗೆ ಕೊಟ್ಟು, ಸ್ವಾಮಿಯು ಅಲ್ಲಲ್ಲಿ ವಿಹರಿಸುತ್ತಿರುವನು.

॥೩೨॥

## ಸರ್ವವ್ಯಾಖ್ಯಾನಸಾರಸಂಗ್ರಹ

ತಿಲವೆಂದರೆ ಎಳ್ಳು ಎಂದರ್ಥ. ತಿಲದಿಂದ ಉತ್ಪನ್ನವಾದ ಎಳ್ಳೆಣ್ಣೆಯು ತಿಲಜವೆನಿಸುವುದು. ಎಣ್ಣೆಯಲ್ಲಿ ತಿಳಿಯಾದ ಶುದ್ಧಭಾಗ ಮತ್ತು ಗಸಿ ಎಂಬ ಕಶ್ಮಲಭಾಗ ಎರಡೂ ಸೇರಿರುವುದು. ಒಂದು ಪ್ರಣತಿಯಲ್ಲಿ ಒಳ್ಳೆಣ್ಣೆ ಹಾಕಿ, ಅದರಲ್ಲಿ ಬತ್ತಿಯಿಂದ ದೀಪವನ್ನು ಹೊತ್ತಿಸಿದರೆ, ದೀಪವು ಎಳ್ಳೆಣ್ಣೆಯಲ್ಲಿರುವ ತಿಳಿಯ ತೈಲಾಂಶವನ್ನು ಮಾತ್ರ ಸ್ವೀಕರಿಸಿ, ಪ್ರಕಾಶಮಾನವಾಗಿ ಉರಿಯುವುದು. ಗಸಿ ಎಂಬ ಕಶ್ಮಲಾಂಶವನ್ನು ಬಿಟ್ಟುಬಿಡು

ವುದು. ಉರಿಯುತ್ತಿರುವ ದೀಪದ ಪ್ರಕಾಶದಿಂದ ಮನೆಯಲ್ಲಿ ಸುತ್ತಲೂ ವ್ಯಾಪಿಸಿಕೊಂಡಿರುವ ಕತ್ತಲೆಯು ಪರಿಹಾರವಾಗುವುದು.

ಇದರಂತೆಯೇ, ಜೀವರ ಸ್ಥೂಲಶರೀರದಲ್ಲಿ ತತ್ತ್ವಾಭಿಮಾನಿದೇವತೆಗಳೂ ಮತ್ತು ತತ್ತ್ವಾಭಿಮಾನಿದೈತ್ಯರೂ ಆವಾಸವಾಗಿದ್ದಾರೆ. ದೇವತೆಗಳೇ ಆ ದೈತ್ಯರಲ್ಲಿ ತತ್ತ್ವಕಾರ್ಯ ಮಾಡಿಸುತ್ತಾರೆ. ಬಿಂಬನಾದ ಶ್ರೀಹರಿಯು ಜೀವರ ಅನಾದಿ ಕರ್ಮಾನುಸಾರ ದೇವತೆಗಳ ಪ್ರೇರಣೆಯಿಂದ ದೈತ್ಯರ ದ್ವಾರಾ ಪಾಪಕರ್ಮಗಳನ್ನು ಮಾಡಿ, ಮಾಡಿಸುತ್ತಾನೆ. ದೈತ್ಯರಿಗೆ ಸ್ವರೂಪಭೂತವಾದ ಸುಖಾನುಭವವಿಲ್ಲವಾದ ಕಾರಣದಿಂದ, ಅವರಿಂದ ಕೃತ ಪಾಪಕರ್ಮಗಳು ತಜ್ಜನಿತ ಪಾಪಕರ್ಮಗಳನ್ನು ಅವರಲ್ಲಿಯೇ ಬಿಡುತ್ತಾನೆ. ಆದರೆ, ದೈತ್ಯರ ಅನಾದಿಕರ್ಮಗತ ಸತ್ತ್ವಗುಣ ಪ್ರಾಚುರ್ಯದಿಂದ ಉಂಟಾದ ಪುಣ್ಯಕರ್ಮಗಳ ಫಲಗಳನ್ನು, ಅವರಿಂದ ಅಪಹರಿಸಿ, ದೈತ್ಯರ ದೇಹಗತರಾಗಿ ತತ್ತ್ವಕಾರ್ಯ ಮಾಡುತ್ತಿರುವ ಬ್ರಹ್ಮಾದಿ ಸಕಲ ತತ್ತ್ವೇಶರಿಗೆ ವಿನಿಮಯ ಮಾಡಿ ಕೊಡುವನು.

ಬಿಂಬನಾದ ಶ್ರೀಪರಮಾತ್ಮನು ದೀಪಸದೃಶನು. ಗಸಿ ರೂಪವಾದ ಕಶ್ಮಲಗಳು ದೈತ್ಯರ ಪಾಪ ಕರ್ಮಜನಿತ ಫಲಗಳ ಸದೃಶವು. ದೀಪವು ಗಸಿಯನ್ನು ತೈಲದಲ್ಲಿಯೇ ಬಿಡುವಂತೆ, ಬಿಂಬನು ಪಾಪಕರ್ಮಜನಿತ ಫಲವನ್ನು ದೈತ್ಯರಲ್ಲಿಯೇ ಬಿಡುವನು. ದೀಪವು ತಿಳಿಯಾದ ತೈಲಾಂಶವನ್ನು ಸ್ವೀಕರಿಸುವುದು. ಅದರಂತೆ ಬಿಂಬನಾದ ಶ್ರೀಹರಿಯು ದೈತ್ಯರ ಪುಣ್ಯಜಫಲವನ್ನು ತಾನು ಸ್ವೀಕರಿಸಿ, ಅವನ್ನು ಬ್ರಹ್ಮಾದಿ ದೇವತಾವರ್ಗಕ್ಕೆ ಹಂಚುವನು. ದೀಪವು ಪ್ರಕಾಶಮಾನವಾಗಿ ಉರಿಯುತ್ತಿದ್ದರೆ, ಕತ್ತಲೆ ಪರಿಹಾರವಾಗುವುದು. ಆದರೆ ಗೋಡೆ ಇತ್ಯಾದಿ ಪ್ರತಿಬಂಧಕವಸ್ತುಗಳು ಅಡ್ಡ ಇದ್ದರೆ, ಅವುಗಳ ಹಿಂದೆ ನೆರಳಿನ ರೂಪದಲ್ಲಿ ಕತ್ತಲು ಉಂಟಾಗುವುದು. ಹಾಗೆಯೇ, ತಮೋಗುಣವೆಂಬ ಪ್ರತಿಬಂಧಕಸಾಮಗ್ರಿಯು ದೈತ್ಯರ ಸ್ವರೂಪದಲ್ಲಿರುವುದರಿಂದ, ಅಲ್ಲಿ ಜ್ಞಾನ ಪ್ರಕಾಶವಿಲ್ಲ. ತತ್ಕಾರಣ

ದಿಂದ ದುಃಖಪ್ರಾಪ್ತಿಯೇ ಹೊರತು, ಪುಣ್ಯಕರ್ಮ ಮಾಡಿದ್ದಾಗ್ಯೂ ಆನಂದ ಭೋಗವಿಲ್ಲ. ಬಿಂಬನಾದ ಶ್ರೀಹರಿಯು ಬ್ರಹ್ಮಾದಿ ತತ್ತ್ವ ದೇವತೆಗಳಲ್ಲಿ ನೆಲೆಸಿದ್ದು, ವಿಹರಿಸುವನು. ॥೩೨॥

## ಪದ್ಯ-೩೩

**ಮೂಲ:–**

**ಇದ್ದಲೆಯು ನಿತ್ಯದಲಿ ಮೇಧ್ಯಾ ।**
**ಮೇಧ್ಯ ವಸ್ತುಗಳುಂಡು ಲೋಕದಿ ।**
**ಶುದ್ಧ ಶುಚಿ ಎಂದೆನಿಸಿಕೊಂಬನು ವೇದ ಸ್ಮೃತಿಗಳೊಳು ॥**
**ಬುದ್ಧಿಪೂರ್ವಕವಾಗಿ ವಿಬುಧರು ।**
**ಶ್ರದ್ಧೆಯಿಂದರ್ಪಿಸಿದ ಕರ್ಮನಿ ।**
**ಷಿದ್ಧವಾದರು ಸರಿಯೆ ಕೈಕೊಂಡುದ್ಧರಿಸುತಿಪ್ಪ ॥ ॥೩೩॥**

**ಅವತರಣಿಕೆ :–**

ಭಗವದ್ಭಕ್ತರು ತನಗೆ ಭಕ್ತಿ ಪೂರ್ವಕವಾಗಿ ದ್ವಂದ್ವಕರ್ಮಗಳನ್ನು ಅರ್ಪಿಸಿದರೆ, ಅದನ್ನು ಸ್ವೀಕರಿಸುತ್ತಾರೆಂದು ದೃಷ್ಟಾಂತ ಪೂರ್ವಕವಾಗಿ ತಿಳಿಸುತ್ತಾರೆ. ॥೩೩॥

ಪ್ರತಿಪದಾರ್ಥ :-

**ಇದ್ದಲೆಯು** = ಎರಡು ಶಿರಸ್ಸುಳ್ಳ ಅಗ್ನಿಯು, **ನಿತ್ಯದಲಿ** = ಯಾವಾಗಲೂ, **ಮೇಧ್ಯ** = ಶುದ್ಧವಸ್ತುಗಳೇನು, **ಅಮೇಧ್ಯ** = ಅಶುಚಿಯಾದ ಅಸಹ್ಯಕರ ಪದಾರ್ಥಗಳೇನು, **ವಸ್ತುಗಳನು** = ಮೇಧ್ಯಾಮೇಧ್ಯ ಎರಡು ವಿಧವಾದ ಪದಾರ್ಥಗಳನ್ನೂ, **ಉಂಡು** = ಸ್ವೀಕರಿಸಿ, **ಲೋಕದಿ** = ಈ ಜಗತ್ತಿನಲ್ಲಿ, **ಶುದ್ಧ ಶುಚಿ** = ನಿರ್ದೋಷನೂ, ನಿರ್ಮಲನೂ, **ಎಂದೆನಿಸಿಕೊಂಬನು** = ಈ ಪ್ರಕಾರ ಸರ್ವರಿಂದ ಕರಿಸಿಕೊಳ್ಳಲ್ಪಡುತ್ತಾನೆ. **ವಿಬುಧರು** = ಶ್ರೀಹರಿಯೇ ಸರ್ವಕರ್ತನು, ಸರ್ವಕರ್ಮಪ್ರೇರಕನೆಂದು ತಿಳಿದ ಜ್ಞಾನಿಗಳು, **ವೇದ ಸ್ಮೃತಿಗಳೊಳು** = ಅಪೌರುಷೇಯುವಾದ ವೇದಗಳು, ಪೌರುಷೇಯುವಾದ ಪುರಾಣಾದಿ ಶಾಸ್ತ್ರಗಳು ಇವುಗಳಲ್ಲಿ ಹೇಳಿದ ಪ್ರಕಾರ, **ಶ್ರದ್ಧೆಯಿಂದ ಅರ್ಪಿಸಿದ** = ಭಕ್ತಿಶ್ರದ್ಧಾಪೂರ್ವಕ ಶ್ರೀಹರಿಯೇ ಕರ್ತನೆಂಬ ಅನುಸಂಧಾನದಿಂದ ಅರ್ಪಣೆ ಮಾಡಿದ, **ಕರ್ಮ** ಕ್ರಿಯೆಗಳು, **ನಿಷಿದ್ಧವಾದದು ಸರಿಯೆ** = ನಿಷಿದ್ಧವಾದ ಪಾಪಕರ್ಮಗಳಾದರೂ ಸರಿಯೆ, **ಕೈಕೊಂಡು** = ಅಗ್ನಿಯೋಪಾದಿಯಲ್ಲಿ ನಿರ್ಲಿಪ್ತನಾಗಿದ್ದು, ಸ್ವೀಕರಿಸಿ, **ಉದ್ಧರಿಸುತಿಪ್ಪ** = ಪಾಪ ಕರ್ಮಗಳನ್ನು ಭಸ್ಮಮಾಡಿ, ಭಕ್ತಜನರನ್ನು ಪಾಪದಿಂದ ಮುಕ್ತರನ್ನಾಗಿ ಮಾಡಿ ಉದ್ಧರಿಸುವನು. ॥೩೩॥

## ವ್ಯಾಖ್ಯಾನಗಳು

### ೧. ಶ್ರೀ ಸಂಕರ್ಷಣಒಡೆಯರ ವ್ಯಾಖ್ಯಾನ

ಪರಮಾತ್ಮ ತನ್ನ ಭಕ್ತರು ಸಮರ್ಪಿಸಿದ ಪುಣ್ಯ–ಪಾಪಗಳನ್ನು ತಾನು ತೆಗೆದುಕೊಂಡು, ನಿರ್ದೋಷನಾಗಿರುವನೆಂದು-ಸದೃಷ್ಟಾಂತವಾಗಿ ಹೇಳತಾರೆ.

ಎರಡು ಶಿರಸ್ಸುಗಳುಳ್ಳ ಅಗ್ನಿದೇವರು ಪ್ರತಿದಿವಸದಲ್ಲಿ ಜನರಿಂದ ಹಾಕಲ್ಪಟ್ಟ ಸಮೀಚೀನವಾದ ಪದಾರ್ಥಗಳೇನು, ಅಸಹ್ಯಕರವಾದ ಪದಾರ್ಥಗಳೇನು, ಈ ಉಭಯ ದ್ರವ್ಯಗಳನ್ನ ಭೋಜನಮಾಡಿ, ಈ ಪ್ರಪಂಚ ಒಳ್ಳೇ ಶುಚಿ-ಆದವರು ಎಂತಲೂ, ನಿರ್ದೋಷಿ ಎಂತಲೂ,ಈ ಪ್ರಕಾರ ಸರ್ವರಿಂದ ಕರಸಿಕೊಳ್ಳಲ್ಪಡತಾರೆ. ಅತ್ಯಾಶದಿಂದ ಯುಕ್ತರಾಗಿ, ಪರಮಾತ್ಮನಲ್ಲಿ ಮಹಾತ್ಮ್ಯಜ್ಞಾನಪೂರ್ವಕ ಸುದೃಢಸ್ನೇಹದಿಂದ ಯುಕ್ತರಾಗಿ ಜ್ಞಾನಿಗಳು ಮನಸ್ಸಿಗೆ ಪಾಪ– ಎಂತ ತಿಳದು ಮಾಡತಾರೆ. ಅನಾದಿಕರ್ಮ ಪರಂಪರಾದಿಂದ ಕರ್ಮವೈಚಿತ್ರ್ಯ ಆ ರೀತಿಯಾಗಿರೋದ್ದರಿಂದ, ಅದನ್ನನುಸರಿಸಿ ಪಾಪಕರ್ಮಗಳು, ಜೀವರಿಗೆ ಅವು ಪಾಪಕರ್ಮಗಳೆಂದು ತಿಳಿಸಿ, ದೇಹದ್ವಾರಾ ಮಾಡಸತಾನೆ- ಇತ್ಯಾದಿ ಅನುಸಂಧಾನದಿಂದ ಅತ್ಯಂತ ಆದರದಿಂದ, ಅಪೌರುಷೇಯುವಾದ ವೇದವೇನು, ಪೌರುಷೇಯುವಾದ ಪುರಾಣಗಳೇನು ಇವುಗಳಲ್ಲಿ ಹೇಳಿದ ಪ್ರಕಾರ,ಅನುಸಂಧಾನಯುಕ್ತನಾಗಿ ಸಮರ್ಪಣೆ ಮಾಡಿದ ಕರ್ಮ (ಇದು ಪುಣ್ಯಕರ್ಮವಾದರೆ ವಿಚಾರವಿಲ್ಲ) ನಿಷಿದ್ಧವಾದ ಪಾಪಕರ್ಮವಾದರೂ ಸರಿಯೇ, ದಾವ ಕರ್ಮವಾದ ಕಾಲಕ್ಕೂ ಅಗ್ನಿಯೋಪಾದಿಯಲ್ಲಿ ತಾನು ಸ್ವೀಕಾರಮಾಡಿ, ತಾನು ವಿಕಾರ ಐದದೆ, ಅರ್ಪಿಸಿದವರಿಗೆ ಜ್ಞಾನ ಭಕುತಿ ವೈರಾಗ್ಯಗಳ ಅತಿಶಯ ಮಾಡತಾ ಅಜ್ಞಾನ– ಬಾಧಾ ಉದ್ಧಾರ ಮಾಡತಾ, ಜೀವನ ಸ್ಥೂಲದೇಹದಲ್ಲಿ ಇರೋವನಾಗಿದ್ದಾನೆ. (ಇವನಿಹ ಅನುಸಂಧಾನ ದಾರ್ಢ್ಯ ಹ್ಯಾಂಗೆ ಹ್ಯಾಂಗೆ ಅಭಿವೃದ್ಧಿ ಮಾಡತಾನೋ ಅದಕ್ಕೆ ಸಮತೂಕ ಪಾಪಗಳ ನಾಶಮಾಡತಾನೆ). ॥೩೩॥

## ೨. ಭಾವಪ್ರಕಾಶಿಕೆ :–

ಅಗ್ನಿಯು ಎರಡು ತಲೆಯುಳ್ಳವನೆಂದು "ಚತ್ವಾರಿ ಶೃಂಗ ತ್ರಯೋಸ್ಯ ಪಾದಾ ದ್ವೇಶೀಷೇ" ಎಂಬ **ಶ್ರುತಿಯಲ್ಲಿ** ಅಗ್ನಿಗೆ ನಾಲ್ಕು ಕೋಡುಗಳು, ಮೂರು ಪಾದಗಳು, ಎರಡು ತಲೆಗಳೆಂದು ಹೇಳಿರುವರು. ಇಂತಹಾ ಅಗ್ನಿಯು ಯಾಗಾದಿಗಳಲ್ಲಿ ಆಹುತಿಯನ್ನು ಸ್ವೀಕರಿಸುವನು ಮತ್ತು ಶವ

ದೇಹವನ್ನೂ ಸ್ವೀಕರಿಸುವನು. ಆದರೂ ಅಗ್ನಿಯು ನಿತ್ಯಶುದ್ಧನೆಂದು, ಶ್ರುತಿಗಳಲ್ಲೂ, ಸ್ಮೃತಿಗಳಲ್ಲೂ ಹೇಳಲ್ಪಡುವನು. ಅದರಂತೆ, ಪರಮಾತ್ಮನಿಗೆ, ದೇವತೆಗಳು ಬುದ್ಧಿಪೂರ್ವಕವಾಗಿ ಭಕ್ತಿ ಶ್ರದ್ಧೆಯಿಂದ ತಮ್ಮಲ್ಲಿರುವ ಕರ್ಮಗಳನ್ನರ್ಪಿಸಿದರೆ, ಪರಮಾತ್ಮನು ಅವು ನಿಷಿದ್ಧಕರ್ಮಗಳೆಂದು ಯೋಚಿಸದೆ, ಸ್ವೀಕರಿಸಿ ಅವರನ್ನುದ್ಧರಿಸುವನು. ಆ ಪಾಪಗಳನ್ನು ತಾನು ಭಸ್ಮ ಮಾಡುವನು. ಆದ್ದರಿಂದ ಪಾಪಸಂಬಂಧದಿಂದ ಪರಮಾತ್ಮನು ದೋಷಿಯೆಂದೆನಿಸದೆ, ನಿತ್ಯಾನಂದಸ್ವರೂಪನೆಂದು ಪ್ರಸಿದ್ಧನಾಗಿರುವನು.

॥೩೩॥

### ೩. ಭಾವದರ್ಪಣ :

ಪಾಪ ಪುಣ್ಯಾರ್ಪಣ ಮಾಡಿದಾಗ್ಯೂ ಶ್ರೀಹರಿಗೆ ಲೇಶ ಲೇಶವೂ ಬಾಧಕ ಆಗೋದಿಲ್ಲವೆಂದು ಸದೃಷ್ಟಾಂತ ಹೇಳುತ್ತಾರೆ. । ಇದ್ದಲೆ । ದ್ವಿಶೀರ್ಷ ಅಗ್ನಿ ಎಂಬರ್ಥ । "ಚತ್ವಾರಿಶೃಂಗಾ ತ್ರಯೋಸ್ಯ ಪಾದಾ ದ್ವೇಶೀರ್ಷೇ–ಸಪ್ತಹಸ್ತಾಸೋ ಅಸ್ಯೇತಿ ಶ್ರುತೇಃ" ॥೩೩॥

### ೪. ಶ್ರೀವ್ಯಾಸದಾಸ ಸಿದ್ಧಾಂತ ಕೌಮುದೀ :–

ಉಕ್ತಮೇವ ನಿಗಮಯತಿ–"ಇದ್ದಿಲೆಯು"– ಇತಿ ॥ ಅಗ್ನೇಃ (ಗ್ನಿ) 'ದ್ವೇ ಶೀರ್ಷೇ' ಇತಿ ಶ್ರುತೇಃ ॥೩೩॥

## ಕನ್ನಡಾರ್ಥ

ಹಿಂದೆ ಹೇಳಿದುದನ್ನೇ ಈ ಪದ್ಯದಿಂದ ನಿಗಮನಪೂರ್ವಕವಾಗಿ ತಿಳಿಸುತ್ತಾರೆ. "ಚತ್ವಾರಿ ಶೃಂಗಾಃ ತ್ರಯೋಽಸ್ಯ ಪಾದಾಃ ದ್ವೇಶೀರ್ಷ ಸಪ್ತ ಹಸ್ತಾಸೋ ಅಸ್ಯ"– ಎಂಬ ಶ್ರುತಿಯು ಅಗ್ನಿಗೆ ಎರಡು ಶಿರಸ್ಸುಗಳನ್ನು ಹೇಳುತ್ತದೆ. ॥೩೩॥

೫. ಶ್ರೀಗುರುಹೃದಯಪ್ರಕಾಶಿಕೆ :-

ಭಕ್ತರು ಸಮರ್ಪಿಸಿದ ಪುಣ್ಯ ಪಾಪಗಳನ್ನು ದೇವರು ತೆಗೆದುಕೊಂಡು, ನಿರ್ದೋಷಿಯಾಗಿರುವನೆಂದು ಸದೃಷ್ಟಾಂತ ತಿಳಿಸುತ್ತಾರೆ, ಇದ್ದಲೆ ಎಂದು. **ದ್ವೇ ಶೀರ್ಷಾ ಸಪ್ತ ಹಸ್ತಾಸೋಸ್ಯ**- ಎಂಬ **ಶ್ರುತಿ** ರೀತ್ಯಾ, ಎರಡು ತಲೆ ಉಳ್ಳ ಅಗ್ನಿದೇವರು ನಿತ್ಯದಲ್ಲೂ ಮೇಧ್ಯವೆಂಬ ಯಜ್ಞಯೋಗ್ಯ ಹವಿಸ್ಸನ್ನೂ. ಅಮೇಧ್ಯವೆಂಬ ಎಂಜಲು,ಒಣಗಿದ ಎಲೆ,ಮೊದಲಾದ ಅಯೋಗ್ಯ ವಸ್ತುಗಳನ್ನೂ ಸಹ ಉಂಡು ಎಂದರೆ ಸುಟ್ಟು, ತದ್ರಸ ಗ್ರಹಿಸಿ, **ಅಗ್ನಿಃ ಶುಚಿರ್ವ್ರತತಮಃ ಶುಚಿಃ** ಎಂಬ ಶ್ರುತಿ ರೀತ್ಯಾ ಪಾವನಕರನು- ಶುದ್ಧನು, ಎಂದು ಶ್ರುತಿಗಳಲ್ಲಿ ಹೇಳಿಸಿಕೊಳ್ಳುವಂತೆ, ಬುದ್ಧಿಪೂರ್ವಕವಾಗಿ, ಎಂದರೆ, ಪಾಪಕರ್ಮಗಳು ಪಾದುಕೆಗಳೆಂದೂ, ಸತ್ಪುಣ್ಯ ಗಂಧದಂತೆ-ಎಂದೂ ತಿಳಿದು, ಜ್ಞಾನಿಗಳು ಶ್ರದ್ಧೆ ಎಂಬ ಆಸ್ತಿಕ್ಯಬುದ್ಧಿಯಿಂದ ಸಮರ್ಪಿಸಿದ ಕರ್ಮಗಳು ನಿಷಿದ್ಧವಾದವಾದರೂ, ದೇವರು ಅಂಗೀಕರಿಸಿ, ಪಾಪ ಪರಿಹರಿಸಿ, ಉದ್ಧಾರ ಮಾಡುವನು. ||೩೩||

## ಸರ್ವವ್ಯಾಖ್ಯಾನಸಾರಸಂಗ್ರಹ

ಸರ್ವಭಕ್ಷಕನಾದ **ಅಗ್ನಿಗೆ**- ನಾಲ್ಕು ಕೋಡುಗಳು, ಏಳು ನಾಲಿಗೆಗಳು, ಮೂರು ಪಾದಗಳು ಮತ್ತು ಎರಡು ತಲೆಗಳಿವೆ-ಎಂದು **ಶ್ರುತ್ಯುಕ್ತಿ**.

ಇದರಿಂದ ಅಗ್ನಿಗೆ ಇದ್ದಲೆ, ಅಂದರೆ ಎರಡುತಲೆಯುಳ್ಳವನು- ಎಂದು ಕರೆಯುತ್ತಾರೆ.

ಯಜ್ಞ ಯಾಗಾದಿಗಳಲ್ಲಿ ಹವಿಸ್ಸು ಮುಂತಾದ ಅನಿಷಿದ್ಧವಸ್ತುಗಳನ್ನು ಅಗ್ನಿಯಲ್ಲಿ ಹಾಕುತ್ತಾರೆ. ಅಗ್ನಿಯು ಆ ವಸ್ತುಗಳನ್ನು ಸ್ವೀಕರಿಸಿ, ಹವಿರ್ಭಾಗವನ್ನು ಆಯಾಯಾ ದೇವತೆಗಳಿಗೆ ಕೊಂಡೊಯ್ಯುವನು. ಕಶ್ಮಲ

ಯುಕ್ತವಾದ ವಸ್ತುಗಳು, ಶವ ಇತ್ಯಾದಿ ಪದಾರ್ಥಗಳನ್ನು ಅಗ್ನಿಯು ಸ್ವೀಕರಿಸಿ, ಅವುಗಳನ್ನು ಸುಟ್ಟು ಭಸ್ಮ ಮಾಡುವನು. ಹೀಗೆ ಮೇಧ್ಯ ಅಮೇಧ್ಯ ವಸ್ತುಗಳನ್ನು ಸ್ವೀಕರಿಸಿದರೂ, ತತ್ಸಂಬಂಧವಾದ ಗುಣ ದೋಷ ಗಳು ಅಗ್ನಿಗೆ ಇಲ್ಲ. ಅಗ್ನಿಯು ನಿರ್ವಿಕಾರನಾಗಿ ನಿರ್ಲಿಪ್ತನಾಗಿರುವನು. ನಿತ್ಯದಲ್ಲೂ ಅಗ್ನಿಯು ನಿರ್ದೋಷಿ ಎನಿಸುವನು. (ಶುಚಿ) ಇದು ಅಪೌರು ಷೇಯವಾದ ವೇದಗಳಲ್ಲಿಯೂ, ಪೌರುಷೇಯವಾದ ಪುರಾಣಾದಿ ಶಾಸ್ತ್ರ ಗ್ರಂಥಗಳಲ್ಲಿ ಉಲ್ಲೇಖವಾಗಿದೆ.

ಅಂತೆಯೇ, ಸುಜ್ಞಾನಿಗಳು (**ವಿಬುಧರು**) ದ್ವಂದ್ವಕರ್ಮಗಳನ್ನು ಇಂದಿರಾರಮಣನ ಚರಣದ್ವಂದ್ವಗಳಿಗೆ ಅರ್ಪಿಸುವರು. "ನಾನು ಸ್ವತಂತ್ರ ಕರ್ತನಲ್ಲ. ಶ್ರೀಹರಿಯೇ ಸರ್ವತಂತ್ರಸ್ವತಂತ್ರನು. ಸರ್ವಕರ್ಮಪ್ರೇರ ಕನು. ಕರ್ಮರೂಪಿಯು ಮತ್ತು ಕರ್ಮನಾಮಕನು. ಶುಭ–ಮಿಶ್ರ — ಅಶುಭಕರ್ಮಗಳೆಲ್ಲವನ್ನೂ ಶ್ರೀಹರಿಯೇ ಮಾಡಿ ಮಾಡಿಸುತ್ತಿರುವನು"– ಎಂಬ ಉತ್ತಮಜ್ಞಾನಾನುಸಂಧಾನವೇ, **"ದ್ವಂದ್ವಕರ್ಮಸಮರ್ಪಣೆ"**– ಎಂದೆನಿಸುವುದು.

ಹಾಗೆ, ವಿಬುಧರು ಅರ್ಪಿಸಿದ ಕರ್ಮಗಳು ನಿಷಿದ್ಧವಾದರೂ ಸರಿ, ಆ ನಿರಂಜನನು ಅವುಗಳನ್ನು ಸ್ವೀಕರಿಸಿ, ಪಾಪರಾಶಿಗಳನ್ನು ಸುಟ್ಟು, ಅಗ್ನಿಯಂತೆ ನಿರ್ವಿಕಾರನಾಗಿ, ನಿರ್ಲಿಪ್ತನಾಗಿದ್ದು, ಸುಜ್ಞಾನಿಗಳಾದ ತನ್ನ ಭಕ್ತರನ್ನು ಉದ್ಧರಿಸುವನು. ಪಶ್ಚಾತ್ತಾಪದಿಂದ, ಅವರ ಪಾಪ ಸಮೂಹಗಳು ಶ್ರೀಹರಿಯು ಕಾರುಣ್ಯದಿಂದ ಬೆಂದುಹೋಗುವುವು.

॥೩೩॥

## ಪದ್ಯ-೩೪

**ಮೂಲ :-**

**ಒಡೆಯರಿದ್ದ ವನಸ್ಥ ಫಲಗಳ ।**
**ಬಡಿದು ತಿಂಬುವರುಂಟೆ ಕಂಡರೆ ।**
**ಹೊಡೆದು ಬಿಸುಟುವರೆಂಬ ಭಯದಿಂ ನೋಡಲಂಜುವರು ॥**
**ಬಿಡದೆ ಮಾಡುವ ಕರ್ಮಗಳು ಮನೆ ।**
**ಮಡದಿ ಮಕ್ಕಳು ಬಂಧುಗಳ ಕಾ ।**
**ರೊಡಲನಾಳುಗಳಿಂದ ಮಾತ್ರದಿ ಓಡುವುದು ದುರಿತ ॥**

॥೩೪॥

**ಅವತರಣಿಕೆ :-**

ಸರ್ವಜಗತ್ತಿಗೂ ಈಶ್ವರನಾದ ಶ್ರೀಪರಮಾತ್ಮನಿಗೆ ಮನೆ, ಮಡದಿ, ಪುತ್ರಾದಿಗಳು ಅಧೀನವೆಂದರಿತು, ಸರ್ವಕರ್ಮಗಳನ್ನು ಆ ಸರ್ವೇಶನಿಗೆ ಅರ್ಪಿಸುವುದರಿಂದ ಸಕಲದುರಿತಗಳ ಪರಿಹಾರವೆಂದು ತಿಳಿಸುತ್ತಾರೆ.

॥೩೪॥

**ಪ್ರತಿಪದಾರ್ಥ :-**

**ಒಡೆಯರಿದ್ದ** = ಯಜಮಾನರು (ಕಾವಲುಗಾರರು) ಇರುವ, **ವನಸ್ಥ ಫಲಗಳ** = ತೋಟದಲ್ಲಿರತಕ್ಕ ಫಲಗಳನ್ನು, **ಬಡಿದು ತಿಂಬುವರುಂಟೆ** = ಕೆಳಗೆ ಬೀಳಿಸಿ ತಿನ್ನುವವರು ಯಾರಾದರೂ ಇದ್ದಾರೆಯೇ ? **ಕಂಡರೆ** = ತೋಟದ ಯಜಮಾನರು ನೋಡಿದರೆ, **ಹೊಡೆದು** = ಆ

ಫಲ ಚೋರರನ್ನು ಪ್ರಹರಿಸಿ, **ಬಿಸುಟುವವರು ಎಂಬ** = ಓಡಿಸುವವರು ಎಂಬ, **ಭಯದಿಂ** = ಅಂಜಿಕೆಯಿಂದ, **ನೋಡಲು** = ವೃಕ್ಷದಲ್ಲಿ ಬಿಟ್ಟಿರುವ ಫಲಗಳನ್ನು ಕಣ್ಣಿಂದ ನೋಡಲು, **ಅಂಜುವರು** = ಹೆದರಿ ಕೊಳ್ಳುವರು, **ಬಿಡದೆ ಮಾಡುವ** = ಯಾವುದನ್ನೂ ಬಿಡದೇ ಆಚರಿಸುವ, **ಕರ್ಮಗಳು** = ಸಮಸ್ತವಾದ ಶುಭಾಶುಭಕರ್ಮಗಳನ್ನು, **ಮನೆ** = ತನ್ನ ಗೃಹ, **ಮಡದಿ** = ಹೆಂಡತಿ, **ಮಕ್ಕಳು** = ಪುತ್ರ ವರ್ಗ, **ಬಂಧುಗಳ**= ದೇಹಸಂಬಂಧಿಗಳಾದ ನೆಂಟರು-ಇತ್ಯಾದಿ ಪರಿವಾರ ವರ್ಗ, **ಕಾರೊಡಲನ** = ನೀಲವರ್ಣವಿಶಿಷ್ಟನಾದ ಶ್ರೀಕೃಷ್ಣನ (ಕಾರು-ಕಪ್ಪು, ಒಡಲು– ಹೊಟ್ಟೆ– ದೇಹ), **ಆಳುಗಳು ಎಂದ ಮಾತ್ರದಿ** = ಆಧೀನರಾದ ಭೃತ್ಯರು-ಎಂಬ ದೃಢಾನುಸಂಧಾನವುಳ್ಳ ಮಾತ್ರಕ್ಕೇ, **ದುರಿತ** = ಸಮಸ್ತಪಾಪರಾಶಿಗಳು, **ಓಡುವುದು** = ಭಕ್ತರನ್ನು ಬಿಟ್ಟು ತೊಲಗುವುವು. ॥೩೪॥

## ವ್ಯಾಖ್ಯಾನಗಳು

### ೧. ಶ್ರೀ ಸಂಕರ್ಷಣಒಡೆಯರ ವ್ಯಾಖ್ಯಾನ :–

ಪಾಪರಾಶಿಗಳು ಲೇಪವಾಗದೆ ಇರೋದಕ್ಕೆ ಅನುಸಂಧಾನ ಭೃತ್ಯರು ಪುಣ್ಯ ಅಪಹರಿಸದೇ ಇರೋದಕ್ಕೆ ದೃಷ್ಟಾಂತ-ಎರಡೂ ಹೇಳತಾರೆ.

ಯಜಮಾನನೂ, ಕಾವಲುಗಾರನೂ ಇರತಕ್ಕ ತೋಟಗಳಲ್ಲಿ ಇರತಕ್ಕ ಫಲಗಳನ್ನು ಹೊಡೆದಂಥಾವರಾಗಿ ಭಕ್ಷಿಸೋವರು ಉಂಟೆ ? ಎಂದರೆ, ಅದು ಒಂದು ಕಾಲಕ್ಕೂ ಆಗಲಾರದು. ಏತರಿಂದ ಅಂದರೆ, ತೋಟದ ಯಜಮಾನನಾಗಲೀ, ಕಾವಲುಗಾರನಾಗಲೀ ಕಂಡುಕೊಂಡರೆ, ಚೋರನ್ನ ಚೆನ್ನಾಗಿ ಪ್ರಹಾರ ಮಾಡಿ ಬಿಡೋವರಾಗತಾರೇ ಹೊರ್ತು, ಸುಮ್ಮನೆ ಅವನ್ನ ಬಿಡೋದಿಲ್ಲ– ಎಂಬ ಅಂಜಿಕೆಯಿಂದ, ತೋಟದಲ್ಲಿ ಇರತಕ್ಕ ಫಲಗಳನ್ನ ನೋಡೋ

ದಕ್ಕೆ ಸಹಾ ಅಂಜೋವರಾಗತಾರೆ. ತದ್ವತ್-ಪುಣ್ಯಕರ್ಮಗಳ ಭಗವ ದರ್ಪಣ ಮಾಡಿದರೆ, ಶ್ರೀಪರಮಾತ್ಮ ಕಾವಲು ಇದ್ದು, ದೈತ್ಯರು ಅಪಹರಿಸ ದಂತೆ ಮಾಡಿ ತಾನು ಸ್ವೀಕಾರ ಮಾಡತಾನೆ. ದೈತ್ಯರು ಅಪಹರಿಸೋದಕ್ಕೆ ಸಾಮರ್ಥ್ಯ ಅವರಿಗೆ ಇರೋದಿಲ್ಲ ಮತ್ತು ಮನಿಯೇನು, ಹೆಂಡತಿಯೇನು, ಮಕ್ಕಳೇನು, ಇನ್ನೂ ನೆಂಟರು ಇವರುಗಳ ಕುರಿತು ಮಾಡಿದ, ಇನ್ನೂ ಅನೇಕ ಕಾರಣಗಳಿಂದ ಮಾಡಿದ ಪಾಪಕರ್ಮಗಳ ಬಿಡದೇ ಮಾಡಿದ ಕಾಲಕ್ಕೂ, ತಾನೇನು ತನ್ನ ದಾರಾ ಪುತ್ರಾದಿ ಬಂಧು ಬಳಗವೇನು, ಸರ್ವಪ್ರಾಣಿ ಗಳೇನು, ಕಪ್ಪುವರ್ಣ ವಿಶಿಷ್ಟನಾದ ಶ್ರೀಕೃಷ್ಣನ ಅಧೀನರು-ಎಂತ ದೃಢಾನು ಸಂಧಾನದಿಂದ ಅಂಬೋಣವೇನು, ಸರ್ವಪಾಪಗಳ 'ಕೃಷ್ಣಾರ್ಪಣ' ಎಂತ ಅಂಬೋಣವೇನು, ಈ ಪ್ರಕಾರ ನಿರಭಿಮಾನರಾಗಿ ಅಂದ ಮಾತ್ರದಿಂದ ಪಾಪವು ಲೇಪವಾಗದೆ ತನಗೆ ಆಶ್ರಯವಿಲ್ಲ, ಎಂತ ತಿಳಿದು-ತನಗೆ ಆಶ್ರಯ ಸ್ಥಾನವಾದ ದೈತ್ಯರಲ್ಲಿ ಭಗವದಾಜ್ಞಾನದಿಂದ ಸೇರೋದಾಗತದೆ- ಎಂತ ತಾತ್ಪರ್ಯ. ॥೩೪॥

## ೨. ಭಾವಪ್ರಕಾಶಿಕೆ –

ವನರಕ್ಷಕನೊಬ್ಬನು ವನವನ್ನು ಕಾದಿದ್ದರೆ, ಜನರು ಆ ವನವನ್ನು ಕಣ್ಣೆತ್ತಿ ನೋಡಲು ಸಹ ಅಂಜುವರು. ಕಂಡರೆ, ತಮ್ಮನ್ನು ಹೊಡೆಯುವ ರೆಂದು ಹೆದರಿ ದೂರವಾಗಿ ಹೋಗುವರು. ಅದರಂತೆ, ನಾವು ಮಾಡುವ ಕರ್ಮಗಳು ನಮ್ಮ ಹೆಂಡಿರು ಮಕ್ಕಳು ಮೊದಲಾದವರೆಲ್ಲರೂ ಪರಮಾತ್ಮನ ಭೃತ್ಯರೆಂದು ಭಾವಿಸಿ, ಸರ್ವಸಮರ್ಪಣೆ ಮಾಡಿದರೆ, ನಮ್ಮ ಶತ್ರುಭೂತ ವಾದ ಪಾಪಗಳೆಲ್ಲವೂ ಓಡಿಹೋಗುವವು. ॥೩೪॥

## ೩. ಭಾವದರ್ಪಣ :–

। ಪಡಿಯು । ಯಜಮಾನ ಎಂಬರ್ಥ. ಮಡದಿ = ಹೆಂಡತಿ, ಕಾರೊಡಲ-ಎಂದರೆ-ಪಂಚಾಶತ್ಕೋಟಿ ವಿಸ್ತೀರ್ಣವಾದ ಬ್ರಹ್ಮಾಂಡವೇ ಉದರದಲ್ಲಿ ಉಳ್ಳವ-ಎಂಬರ್ಥ. ಪುಣ್ಯ ಪಾಪಪರ್ಣ ಮಾಡೆಂದು- ಫಲಿತಾರ್ಥ.

॥೩೪॥

೪. ಶ್ರೀ ವ್ಯಾಸದಾಸ ಸಿದ್ಧಾಂತ ಕೌಮುದೀ :–

ಯಥಾ ಹ್ಯನಾಥಃ ವೃಕ್ಷಾದಿಃ ಪೀಡ್ಯತೇ ನಿಖಿಲೈಃ ಅಪಿ ॥ ರಾಜ್ಞಾ ಪರಿಗೃಹೀತೋ ಯಃ ತಂ ನ ಪಶ್ಯಂತಿ ಕೇಚನ॥ ಸಂಕೀರ್ಣ ನಾನಾವಿಧ ಪಾತಕಾನಾಂ ನಿವೃತ್ತಿಮೀಪ್ಸುಃ ಶರಣಂ ವ್ರಜೇತ್ ಹರಿಮ್ ॥ ದಯಾಲುರೇತಾನಿ ನಿವೃತ್ಯ ಶೀಘ್ರಂ ಗುರೂಣಿ ಪಾಪಾನಿ ಲಘೂಕರೋತಿ ॥ ಇತ್ಯುಕ್ತಂ ವದತಿ- 'ಒಡೆಯರಿದ್ದ' ಇತಿ. ॥೩೪॥

## ಕನ್ನಡಾರ್ಥ

ಒಡೆಯರಿಲ್ಲದ ಗಿಡ ಬಳ್ಳಿ– ಮುಂತಾದವುಗಳನ್ನು ಎಲ್ಲರೂ ತರಿಯುವರು. ಆದರೆ ರಾಜನ ಸಂರಕ್ಷಣದಲ್ಲಿರುವ ಗಿಡ ಬಳ್ಳಿಯನ್ನು ಯಾವನೂ ಕಣ್ಣಿನಿಂದ ನೋಡಲೂ ಸಹ ಬಯಸುವುದಿಲ್ಲ. ಅದರಂತೆ, ಅನೇಕ ವಿಧ ಪಾತಕಗಳನ್ನು ತಪ್ಪಿಸಿಕೊಳ್ಳಲು ಬಯಸುವವನು, ಶ್ರೀಹರಿಯೆಂಬ ಒಡೆಯನಿಗೆ ಮೊರೆಹೋಗಬೇಕು. ಆ ದಯಾಮಯ ಹರಿಯು ಈ ಎಲ್ಲ ಪಾತಕಗಳನ್ನು ಕಳೆದು, ದೊಡ್ಡ ದೊಡ್ಡ ಪ್ರಾರಬ್ಧಗಳನ್ನೂ ಸಹ ಉಪಮರ್ದಿಸಿ, ಚಿಕ್ಕವುಗಳನ್ನಾಗಿ ಮಾಡುತ್ತಾನೆ. ಹೀಗೆ ಪುರಾಣೋಕ್ತವಾದ ವಿಷಯವನ್ನು 'ಒಡೆಯರಿದ್ದ'– ಈ ಪದ್ಯದಿಂದ ಹೇಳುತ್ತಾರೆ. ॥೩೪॥

೫. ಶ್ರೀ ಗುರುಹೃದಯ ಪ್ರಕಾಶಿಕೆ :–

ಒಡೆಯರಿದ್ದ ವನದಲ್ಲಿರುವ ಹಣ್ಣುಗಳನ್ನು ತೆಗೆದುಕೊಂಡರೆ,ನಮ್ಮನ್ನು ಹೊಡೆದುಹಾಕುವರೆಂದು ಭಯದಿಂದ ನೋಡುವುದಕ್ಕೂ ಸಹ ಅಂಜಿ, ಬಡಿದು ಹಣ್ಣನ್ನು ತಿನ್ನದೆ ಇರುವ ಹಾಗೆ, ಬಿಡದೆ ಸದಾ ಮಾಡುವ ತ್ರಿಗುಣ ಕರ್ಮಗಳನ್ನು ದೇವರ ಅಧೀನವೇ ಸರಿ– ಎಂದು ಅಭಿಮಾನ ವರ್ಜಿಸಿ, ಮನೆ ಮಡದಿ ಎಂದರೆ ಪತ್ನಿ, ಮಕ್ಕಳು ಬಂಧುಗಳು ಸರ್ವರೂ, ಕಾರೊಡಲನ

ಎಂದರೆ, ನೀಲಮೇಘಶ್ಯಾಮನಾದ ದೇವರ ಆಳುಗಳು, ಎಂದರೆ– ಸರ್ವರೂ ದೇವರ ಸೇವಕರು–ಎಂದು ಅಭಿಮಾನ ವರ್ಜಿಸಿ, ದೃಢಭಕ್ತಿಯಿಂದ ಇರುವ ಮಾತ್ರಕ್ಕೇ ಸಕಲದುರಿತಗಳೂ ಓಡಿಹೋಗುವುವು. ||೩೪||

## ಸರ್ವವ್ಯಾಖ್ಯಾನಸಾರಸಂಗ್ರಹ

ತೋಟದಲ್ಲಿರುವ ವೃಕ್ಷಗಳಲ್ಲಿ ಬಿಟ್ಟಿರುವ ಫಲಗಳನ್ನು ಚೋರರು ನೋಡಿ, ಅವುಗಳನ್ನು ಕದಿಯಲು ಯತ್ನಿಸುವರು. ಆದರೆ ಆ ತೋಟದ ಯಜಮಾನನಾಗಲೀ, ವನರಕ್ಷಕರು ಇದ್ದರೆ, ಅವರನ್ನು ಕಂಡು, ಹೆದರಿ ಫಲಗಳನ್ನು ಕದಿಯುವುದಿಲ್ಲ. ಒಂದು ವೇಳೆ ಕದಿಯಲು ಪ್ರಯತ್ನಿಸಿದರೆ, ಯಜಮಾನನಾಗಲೀ, ವನರಕ್ಷಕರಾಗಲೀ, ಅವರನ್ನು ಹಿಡಿದು ಶಿಕ್ಷಿಸುವರು.

ಅಂತೆಯೇ, ಸಜ್ಜನರು ಮಾಡಿದ ಪುಣ್ಯಕರ್ಮಗಳ ಫಲವನ್ನು ಅಪಹರಿಸಲು, ಪುಣ್ಯಫಲಶೂನ್ಯರಾದ ದೈತ್ಯರು ಪ್ರಯತ್ನಿಸಿದರೆ, ತಕ್ಷಣ ಆಪ್ತಬಂಧುವಾದ ಶ್ರೀಹರಿಯು ಅವರ ಅವಸರಕ್ಕೆ ಒದಗಿ, ಆ ದೈತ್ಯಚೋರರನ್ನು ಶಿಕ್ಷಿಸಿ; ಓಡಿಸುವನು. ತನ್ನ ಭಕ್ತರ ಪುಣ್ಯಕರ್ಮಜನಿತಫಲಗಳನ್ನು ಎಂದೆಂದಿಗೂ ದೈತ್ಯರ ಪಾಲಾಗದಂತೆ, ರಕ್ಷಿಸುವನು.

ಅಹಂಕರ್ತೃತ್ವಾಭಿಮಾನವನ್ನು ತ್ಯಜಿಸಿ, ಸಕಲಕರ್ಮಗಳಿಗೆ ಶ್ರೀಹರಿಯೇ ಮುಖ್ಯಕರ್ತನೆಂದವರಿಗೆ ಮಾತ್ರ ಸರ್ವಕರ್ಮಕರ್ತೃವಾದ ಆ ಸರ್ವೇಶ್ವರನು ರಕ್ಷಕನಾಗುವನು. ಅಹಂಕರ್ತೃತ್ವವನ್ನು ಹೊಂದಿ ಮಾಡುವ ಜನರ ಪುಣ್ಯಫಲಗಳು ದೈತ್ಯರ ಪಾಲಾಗುವುವು.

ತನ್ನ ಮನೆ, ಅಂದರೆ, ಸಾಧನಶರೀರವೆಂದಿಪ ತನ್ನ ಸ್ಥೂಲದೇಹ (ಬಿಂಬರೂಪೀ ಶ್ರೀಹರಿಯ ಮಂದಿರವು), ತನ್ನ ಪತ್ನಿ, ಪುತ್ರರು, ಬಂಧು

ಬಂಧುವರ್ಗದವರೇ ಮೊದಲಾದ ಸಕಲಪರಿವಾರವೂ. ನೀಲಮೇಘಶ್ಯಾಮನಾದ ಶ್ರೀಕೃಷ್ಣನ ಭೃತ್ಯರೆಂಬ ಉತ್ತಮ ಜ್ಞಾನಾನುಸಂಧಾನವನ್ನು ಹೊಂದಿ, ಸಕಲವನ್ನು ಸರ್ವೋತ್ತಮನ ಪಾದಪದ್ಮಗಳಿಗೆ ಅರ್ಪಿಸುವವರ ಸಕಲ ದುರಿತರಾಶಿಗಳನ್ನು ಕರುಣಾಮಯನಾದ ಕಂಜದಳಾಯತಾಕ್ಷನು ಓಡಿಸುವನು.

ಈ ದೃಷ್ಟಾಂತದಲ್ಲಿ ಸಕಲಇಂದ್ರಿಯಗಳಿಂದ ಯುಕ್ತವಾದ ಸಾಧನ ಶರೀರವೇ ತೋಟವು. ಭಗವದ್ಭಕ್ತರು ಶ್ರೀಹರಿಪ್ರೇರಣಾನುಸಾರ ಮಾಡುವ ಸತ್ಕರ್ಮಜನಿತ ಫಲಗಳೇ ವೃಕ್ಷಗತ ರಸಭರಿತ ಫಲಗಳು. ಜಗದೀಶನಾದ ಶ್ರೀಪರಮಾತ್ಮನೇ ಯಜಮಾನನು ಅಥವಾ ವನರಕ್ಷಕನು. ದೈತ್ಯರು ಆ ಫಲಗಳನ್ನು ಕದಿಯಲು ಪ್ರಯತ್ನಿಸುವ ಚೋರರು. ಕಾರೊಡಲ–ಎಂದರೆ ನೀಲಮೇಘಶ್ಯಾಮನೆಂದರ್ಥ (ಕಪ್ಪುವರ್ಣವಿಶಿಷ್ಟನಾದ ಶ್ರೀಕೃಷ್ಣನು). ಪಂಚಾಶತ್ಕೋಟಿ ವಿಸ್ತೀರ್ಣವಾದ ಬ್ರಹ್ಮಾಂಡವನ್ನು ಉದರದಲ್ಲಿ ಉಳ್ಳವನು– 'ಕಾರೊಡಲನು' ಎಂದು–**ಭಾವದರ್ಪಣ ಟೀಕಾಕಾರರ** ವಿವರಣೆ. ॥೩೪॥

## ಪದ್ಯ-೩೫

**ಮೂಲ :–**

**ಜ್ಞಾನ ಕರ್ಮೇಂದ್ರಿಯಗಳಿಂದೇ ।**
**ನೇನು ಮಾಡುವ ಕರ್ಮಗಳ ಲ ।**
**ಕ್ಷ್ಮೀನಿವಾಸನಿಗರ್ಪಿಸುತಲಿರು ಕಾಲಕಾಲದಲಿ ॥**

**ಪ್ರಾಣಪತಿ ಕೈಕೊಂಡು ನಾನಾ ।**
**ಯೋನಿಯೈದಿಸನೊಮ್ಮೆ ಕೊಡದಿರೆ ।**
**ದಾನವರು ಸೆಳೆದೊಯಿವರೆಲ್ಲಾ ಪುಣ್ಯರಾಶಿಗಳ ॥ ॥೩೫॥**

**ಅವತರಣಿಕೆ :–**

ದೇಹೇಂದ್ರಿಯಗಳ ದ್ವಾರಾ ನಡೆಯುತ್ತಿರುವ ಸಕಲಕರ್ಮಗಳನ್ನೂ ಶ್ರೀನಿವಾಸನಿಗರ್ಪಿಸದಿದ್ದರೆ, ದೈತ್ಯರು ಪುಣ್ಯರಾಶಿಗಳನ್ನು ಅಪಹರಿಸುವರು. ಆದರಿಂದ ಪುಣ್ಯ ನಷ್ಟ ಹಾಗೂ ಪಾಪಗಳು ಲೇಪವಾಗುತ್ತವೆ-ಎಂದು ತಿಳಿಸುತ್ತಾರೆ. ॥೩೫॥

**ಪ್ರತಿಪದಾರ್ಥ :–**

**ಜ್ಞಾನೇಂದ್ರಿಯಗಳು** = ಶ್ರವಣೇಂದ್ರಿಯಾದಿ ಪಂಚಜ್ಞಾನೇಂದ್ರಿಯಗಳ ದ್ವಾರಾ, **ಕರ್ಮೇಂದ್ರಿಯಗಳಿಂದ** = ಹಸ್ತಾದಿ ಪಂಚಕರ್ಮೇಂದ್ರಿಯಗಳ ದ್ವಾರಾ (ಮನಸ್ಸೂ ಸೇರಿ ಏಕಾದಶೇಂದ್ರಿಯಗಳ ದ್ವಾರಾ) **ಏನೇನು ಮಾಡುವ** = ನಡೆಯುವ ಸಕಲವಿಧವಾದ ಶುಭಾಶುಭ ರೂಪವಾದ, **ಕರ್ಮಗಳ** = ಕರ್ಮಗಳನ್ನು, **ಲಕ್ಷ್ಮೀನಿವಾಸನಿಗೆ** = ರಮಾವಲ್ಲಭನಾದ ಬಿಂಬರೂಪೀ ಶ್ರೀಪರಮಾತ್ಮನಿಗೆ, **ಕಾಲ ಕಾಲದಲಿ** = ಪ್ರತಿಕ್ಷಣದಲ್ಲಿಯೂ, **ಅರ್ಪಿಸುತಲಿರು** = ಸಮರ್ಪಣ ಮಾಡುತ್ತಿರುವವನಾಗು, **ಪ್ರಾಣಪತಿ** = ಜೀವೋತ್ತಮರಾದ ವಾಯುದೇವರಿಗೆ ಸ್ವಾಮಿಯಾದ ಶ್ರೀಹರಿಯು, **ಕೈಕೊಂಡು** = ತನಗರ್ಪಿಸಿದ ಸಕಲಕರ್ಮಗಳನ್ನೂ ಸ್ವೀಕರಿಸಿ, **ನಾನಾ ಯೋನಿಯ** = ನಾನಾ ಪ್ರಕಾರವಾದ ಜನ್ಮಗಳನ್ನು, **ಐದಿಸನು** = ಜೀವನಿಗೆ ಹೊಂದಿಸುವುದಿಲ್ಲ. **ಒಮ್ಮೆ ಕೊಡದಿರೆ** = ದ್ವಂದ್ವಕರ್ಮಗಳನ್ನು ಅರ್ಪಿಸದ ಪಕ್ಷದಲ್ಲಿ, **ಪುಣ್ಯರಾಶಿಗಳ** – ಅರ್ಜಿತ

ವಾಗದ ಸಮಸ್ತಪುಣ್ಯ ಸಮೂಹಗಳನ್ನು, **ದಾನವರು** = ದೇಹಗತ ದೈತ್ಯರು, **ಸೆಳೆದೊಯಿವರು** = ಅಪಹರಿಸಿಕೊಂಡು ಹೋಗುವರು. ॥೩೫॥

## ವ್ಯಾಖ್ಯಾನಗಳು

### ೧. ಶ್ರೀ ಸಂಕರ್ಷಣಒಡೆಯರ ವ್ಯಾಖ್ಯಾನ :–

ಮಾಡಿದ ಕರ್ಮಸಮೂಹಗಳು ಪರಮಾತ್ಮಗೆ ಅರ್ಪಣೆಮಾಡದೆ ಹೋದರೆ, ಪುಣ್ಯಗಳು ನಷ್ಟವಾಗಿ, ಪಾಪಲೇಪವಾಗತದೆ– ಅಂತ ಹೇಳತಾರೆ.

ಜ್ಞಾನೇಂದ್ರಿಯಗಳು ಐದು, ಮನಸ್ಸು ಒಂದು, ಕರ್ಮೇಂದ್ರಿಯಗಳು ಐದು, ಅಂತು ಹನ್ನೊಂದು ಇಂದ್ರಿಯಗಳಿಂದ, ಬಿಂಬಕ್ರಿಯಾದ್ವಾರಾ ಅನಾದಿಕರ್ಮಪರಂಪರಾ ಅನುಸರಿಸಿ, ಅನೇಕ ವಿಚಿತ್ರಗಳಾದ ಪಾಪ ಪುಣ್ಯ ರೂಪವಾದ ಯಾವತ್ತೂ ಕರ್ಮಗಳ ಮಾಡಿ, ಈ ಮಾಡಿದ ಕರ್ಮಗಳನ್ನ ರಮಾವಲ್ಲಭನಾದ, ಬಿಂಬನಾದ ಶ್ರೀಪರಮಾತ್ಮಗೆ ಕ್ಷಣೇ ಕ್ಷಣೇ ಸಮರ್ಪಣ ಮಾಡತಾ ಇರೋವನಾಗು. ಈ ಅರ್ಪಿಸಿದ ಯಾವತ್ತೂ ಕರ್ಮಗಳ ಜೀವೋತ್ತಮರಾದ ವಾಯುದೇವರಿಗೆ ಸ್ವಾಮಿಯಾದ ಶ್ರೀನಾರಾಯಣಾಭಿನ್ನ ಪರಮಾತ್ಮನು ಸ್ವೀಕಾರ ಮಾಡಿ, ಪಾಪಕರ್ಮದಿಂದ ಪ್ರಾಪ್ತವಾಗಬೇಕಾದ ನಾನಾ ಯೋನಿಗಳ–ಪಾಪ ಅರ್ಪಣಮಾಡೋದರಿಂದ, ಅದನ್ನ ಸ್ವೀಕಾರ ಮಾಡಿ–ಐದಿಸೋದಿಲ್ಲ. ಈ ಕಾರಣದಿಂದ ಪಾಪ ಅರ್ಪಿಸಬೇಕು. ಅರ್ಪಿಸೋದೆ ವಿಧಿ. ಪಾಪ ಅರ್ಪಿಸೋಣ ದೋಷವೆಂದು ಒಂದಾವರ್ತಿ ಕೊಡದೇ ಹೋದರೆ, ಆ ಪಾಪ ಅವನಲ್ಲೇ ನಿಂತು, ತತ್ಫಲ ನಾನಾ ಯೋನಿಗಳ ಭೋಗ ದ್ವಾರಾ ಕೊಡೋವನಾಗತಾನೆ. ಇದೇ ಪ್ರಕಾರ ಒಂದಾವರ್ತಿ ಪುಣ್ಯಕರ್ಮ ಅರ್ಪಣವೆಂದು ಕೊಡದೇ ಹೋದರೆ, ಅರ್ಪಿತವಾಗದ ಪುಣ್ಯರಾಶಿಗಳ

ದೈತ್ಯರು ಅಪಹರಿಸೋವರಾಗತಾರೆ. ಮೂರುಸದೃಶ ಪುಣ್ಯದಲ್ಲಿ ಸರ್ಷಪ ಮಾತ್ರ ಉಳಿದು ಸುಖಪ್ರದರ್ಶನ, ದುಃಖಭೋಗರೂಪವಾದ ಫಲ ವಾಗೋದಾಗತದೆ. ಮ್ಯಾಲಿನ ಶ್ಲೋಕಗಳಲ್ಲಿ ಚಂದಾಗಿ ಅನುಷ್ಠಾನಯುಕ್ತ ನಾಗಿ ದ್ವಂದ್ವಕರ್ಮಗಳ ಅರ್ಪಿಸಬೇಕಂತ ತಾತ್ಪರ್ಯ. ॥೩೫॥

### ೨. ಭಾವಪ್ರಕಾಶಿಕೆ :-

ಕಣ್ಣು ಮೊದಲಾದ ಜ್ಞಾನೇಂದ್ರಿಯಗಳಿಂದಲೂ, ಕೈಕಾಲು ಮೊದ ಲಾದ ಕರ್ಮೇಂದ್ರಿಯಗಳಿಂದಲೂ ಮಾಡುವ ಎಲ್ಲಾ ಕರ್ಮಗಳನ್ನು ಕಾಲ ಕಾಲಗಳಲ್ಲಿ ಪರಮಾತ್ಮನಿಗರ್ಪಿಸುತಲಿರು. ಪರಮಾತ್ಮನು ಸ್ವೀಕರಿಸಿ, ನಮಗೆ ಪುನರ್ಜನ್ಮವಿಲ್ಲದಂತೆ ಮಾಡುವನು. ಇಲ್ಲವಾದರೆ, ನಾವುಮಾಡುವ ಪುಣ್ಯ ರಾಶಿಗಳನ್ನು ದೈತ್ಯರು ಅಪಹರಿಸುವರು. ॥೩೫॥

### ೩. ಭಾವದರ್ಪಣ :-

ಪೂರ್ವದಲ್ಲಿ ಹೇಳಿದ ಮಾತನ್ನೇ ಪುನಃದಾರ್ಢ್ಯಾರ್ಥ ಹೇಳುತ್ತಾರೆ. ॥ ಜ್ಞಾನ ॥ . ॥೩೫॥

### ೪. ಶ್ರೀವ್ಯಾಸದಾಸ ಸಿದ್ಧಾಂತ ಕೌಮುದೀ :-

ಪುನಃ ಉಕ್ತಂ ದಾರ್ಢ್ಯಾಯ ಆಹ-'ಜ್ಞಾನ' ಇತಿ ॥ 'ಯತ್ಕರೋಷಿ' ಇತಿ ವಚನಾತ್. ॥೩೫॥

## ಕನ್ನಡಾರ್ಥ

ಹಿಂದೆ ಹೇಳಿದ ವಿಷಯವನ್ನೇ ಜನರಿಗೆ ದೃಢಪಡಿಸಲು ಮತ್ತೂ "ಜ್ಞಾನ ಕರ್ಮೇಂದ್ರಿಯಗಳಿಂದೇನು"-ಈ ಪದ್ಯದಿಂದ ಹೇಳುತ್ತಾರೆ.

ಯತ್ ಕರೋಷಿ ಯದಶ್ನಾಸಿ ಯಜ್ಜುಹೋಷಿ ದದಾಸಿ ಯತ್ । ಯತ್ತಪಸ್ಯಸಿ ಕೌಂತೇಯ ತತ್ ಕುರುಷ್ವ ಮದರ್ಪಣಮ್ ॥"-ಎಂಬ ಗೀತಾ ವಚನವಿರುವುದರಿಂದ ಕಾಲಕಾಲದಲ್ಲಿ ಮಾಡುವ ಸಕಲಕರ್ಮಗಳನ್ನು ಶ್ರೀಹರಿಯ ಅಡಿದಾವರೆಗಳಲ್ಲಿ ಸಮರ್ಪಿಸಬೇಕು. ॥೩೫॥

೫. ಶ್ರೀಗುರುಹೃದಯ ಪ್ರಕಾಶಿಕೆ :–

ಈ ಸರ್ವಸಮರ್ಪಣೆಯನ್ನೇ ಈ ಅಧ್ಯಾಯಾಂತ ವಿವರಿಸಿ, ಆರು ಪದ್ಯಗಳಿಂದ ಹೇಳುತ್ತಾರೆ- ಜ್ಞಾನವೆಂದು. ಜ್ಞಾನೇಂದ್ರಿಯ, ಕರ್ಮೇಂದ್ರಿಯಗಳಿಂದ ಸಹ ಏನೇನು ಕರ್ಮಗಳನ್ನು ಮಾಡುತ್ತಿರುವೆಯೋ, ಅವನ್ನೆಲ್ಲಾ ಲಕ್ಷ್ಮೀನಿವಾಸನಾದ ದೇವರಿಗೆ ಆಯಾಯ ಕಾಲದಲ್ಲಿ ಸಮರ್ಪಿಸುತ್ತಿರು. ಪ್ರಾಣಪತಿಯಾದ ಸ್ವಾಮಿ ಅಂಗೀಕರಿಸಿ, ಆ ಕರ್ಮಫಲರೂಪವಾದ ನಾನಾ ಯೋನಿಗಳೆಂಬ ನರಕಾದಿ ದುರ್ಜನ್ಮಗಳನ್ನು ಕೊಡದೆ ಉದ್ಧರಿಸುವನು. (ನಿಜವಾಗಿ ಅಭಿಮಾನವರ್ಜಿಸಿ ದೃಢಭಕ್ತಿ ಇದ್ದಲ್ಲಿ) ಹೀಗೆ ಒಪ್ಪಿಸದೇ ಹೋದರೆ, ಪುಣ್ಯಗಳನ್ನೆಲ್ಲಾ ಅಸುರರು ಅಪಹರಿಸುವರು. ಪಾಪಫಲವನ್ನು ಅಭಿಮಾನಿಜೀವನೇ ಅನುಭವಿಸುವನು ಎಂದು ತಿಳಿ– ಎಂಬುದಾಗಿ ಬೋಧಿಸುತ್ತಾರೆ. ॥೩೫॥

# ಸರ್ವವ್ಯಾಖ್ಯಾನಸಾರಸಂಗ್ರಹ

ಸ್ಥೂಲಶರೀರಗತ ಕಿವಿ, ಕಣ್ಣು, ಮೂಗು, ನಾಲಿಗೆ ಮತ್ತು ಚರ್ಮ- ಎಂಬ ಪಂಚಜ್ಞಾನೇಂದ್ರಿಯಗಳ ದ್ವಾರಾ, ಹಾಗೂ ಹಸ್ತದ್ವಯಗಳು, ಪಾದಯುಗ್ಮಗಳು, ವಾಗಿಂದ್ರಿಯ, ಗುದ ಮತ್ತು ಉಪಸ್ಥಗಳೆಂಬ ಪಂಚ ಕರ್ಮೇಂದ್ರಿಯಗಳ ದ್ವಾರಾ, ಮತ್ತು ಈ ದಶೇಂದ್ರಿಯಗಳನ್ನು ನಿಯಮಿಸುವ ಮನಸ್ಸೇಂದ್ರಿಯ ದ್ವಾರಾ, ಏನೇನು ಶುಭ,

ಅಶುಭ, ಮಿಶ್ರರೂಪವಾದ ಕರ್ಮಗಳು ನಡೆಯುವುವೋ, ಆ ಸಮಸ್ತ ಕ್ರಿಯೆಗಳನ್ನೂ ಸರ್ವಕರ್ಮಪ್ರೇರಕನಾದ ಶ್ರೀಪರಮಾತ್ಮನಿಗೆ ಅರ್ಪಿಸುತ್ತಿರಬೇಕೆಂದು ತಿಳಿಸುತ್ತಾರೆ.

ಜೀವೋತ್ತಮರಾದ ಶ್ರೀವಾಯುದೇವರಿಗೆ ಈಶನಾದ ಶ್ರೀಹರಿಗೆ **"ಪ್ರಾಣಪತಿ"** ಎಂತ ನಾಮ. ಆ ಪರಮೇಶ್ವರನು ಭಕ್ತರಿಂದ ಇಂದ್ರಿಯಗಳ ದ್ವಾರಾ ನಡೆಯುತ್ತಿರುವ ಸಮಸ್ತಕರ್ಮಗಳನ್ನು ಸ್ವೀಕರಿಸುವನು.

ತ್ರಿಗುಣಜನ್ಯಕರ್ಮಗಳನ್ನು ತಾನೇ ಮಾಡಿ ಮಾಡಿಸುತ್ತಿದ್ದಾಗ್ಯೂ, ತ್ರಿಗುಣಾತೀತನಾದ ಆ ತ್ರಿವಿಕ್ರಮನಿಗೆ ಆ ಕರ್ಮಫಲಗಳ ಲೇಪವಿಲ್ಲ. ಜಗದ್ವಿಲಕ್ಷಣನೂ, ಜೀವರಿಂದ ಅತ್ಯಂತ ಭಿನ್ನನೂ, ನಿರ್ಲಿಪ್ತನೂ, ನಿರಪೇಕ್ಷನೂ ಆದ ಆ ನಿರಂಜನನೇ ದ್ವಂದಕರ್ಮಗಳನ್ನು ತಾನೇ ಸ್ವೀಕರಿಸುವನು. ಭಕ್ತರು ಮಾಡಿದ ಪಾಪಗಳನ್ನು ತನ್ನ ಕಟಾಕ್ಷವೀಕ್ಷಣದಿಂದ ಭಸ್ಮ ಮಾಡುವನು. ಅವರ ಅನಾದಿಕರ್ಮಾನುಸಾರ ಮಾಡಿ ಮಾಡಿಸಿದ ಪಾಪವನ್ನು ತಮೋಯೋಗ್ಯರಾದ ದೈತ್ಯರಿಗೆ ಕೊಡುವನು.

**ವಿಶೇಷಾಂಶ :–**

"ದ್ವಂದ್ವಕರ್ಮ ಸಮರ್ಪಣೆ"– ಎಂದರೆ, ಜೀವನು ಕರ್ತನಲ್ಲ. ಸರ್ವತಂತ್ರಸ್ವತಂತ್ರನಾದ ಶ್ರೀಹರಿಯೇ ಮುಖ್ಯಕರ್ತನು. ಅವನೇ ಸಮಸ್ತಕರ್ಮಗಳನೂ ಪ್ರೇರಕನು–ಎಂಬ ಉತ್ತಮಜ್ಞಾನಾನುಸಂಧಾನವು.

ಪುಣ್ಯಗಳ ಅರ್ಪಣೆಯಿಂದ, ಅವುಗಳನ್ನು ಅನಂತಮಡಿ ಮಾಡಿ ಪ್ರಸಕ್ತಜನ್ಮದಲ್ಲೂ ಮುಂಬರುವ ಜನ್ಮಗಳಿಗೂ ಮೀಸಲಾಗಿಟ್ಟು, ಪುಣ್ಯಫಲಪ್ರದನಾಗುವನು.

ಪಾಪಕರ್ಮಗಳ ಅರ್ಪಣೆಯಿಂದ, ಅವುಗಳ ನಾಶ, ತಜ್ಜನಿತ ಫಲರೂಪವಾದ ನಾನಾ ಯೋನಿಗಳ ಪ್ರಾಪ್ತಿಯಾಗದಿರುವುದು, ಪಾಪ

ರಾಶಿಗಳು ತನ್ನಲ್ಲಿಯೇ ಉಳಿಯದಿರುವುದು ಮತ್ತು ಪಾಪಗಳನ್ನು ದೈತ್ಯರಿಗೆ ವಿನಿಮಯ ಮಾಡುವುದು- ಈ ಫಲಸಿದ್ಧಿಗಳುಂಟಾಗುವುವು. ಪಾಪಕರ್ಮಗಳ ಅರ್ಪಣೆ ಮಾಡದಿದ್ದರೆ, ಅವಶಿಷ್ಟರಾಗಿ ಉಳಿದಿರುವ ಪಾಪಗಳ ಫಲವಾಗಿ ಜೀವನು ನಾನಾಜನ್ಮಗಳನ್ನು ಎತ್ತಿ, ದುಃಖಾನುಭವವನ್ನು ಹೊಂದಬೇಕಾಗುವುದು. ॥೩೫॥

## ಪದ್ಯ-೩೬

**ಮೂಲ :-**

**ಶ್ರುತಿ ಸ್ಮೃತ್ಯರ್ಥವ ತಿಳಿದಹುಂ ।**
**ಮಿತಿ ವಿಶಿಷ್ಟನು ಕರ್ಮಮಾಡಲು ।**
**ಪ್ರತಿಗ್ರಹಿಸನು ಪಾಪಗಳ ಕೊಡುತಿಪ್ಪ ನಿತ್ಯ ಹರಿ ॥**
**ಚತುರದಶಭುವನಾಧಿಪತಿ ಕೃತ ।**
**ಕೃತ ಕೃತಜ್ಞ ನಿಯಾಮಕನು ಎನೆ ।**
**ಮತಿಭ್ರಂಶ ಪ್ರಮಾದ ಸಂಕಟ ದೋಷವವಗಿಲ್ಲ ॥ ॥೩೬॥**

**ಅವತರಣಿಕೆ :-**

ಶ್ರುತಿ ಸ್ಮೃತಿಗಳ ಅರ್ಥವನ್ನು ತಿಳಿದಿದ್ದರೂ, ಶಾಸ್ತ್ರಾರ್ಥಗತ ತತ್ತ್ವಗಳ ಅರಿವಿದ್ದರೂ, ಅಹಂ ಮಮಕಾರಾದಿಗಳಿಂದ ಗ್ರಸ್ತರಾದವರು ಮಾಡಿದ ಕರ್ಮಗಳನ್ನು ಸರ್ವದೋಷವಿವರ್ಜಿತನಾದ ಶ್ರೀಪರಮಾತ್ಮನು ಸ್ವೀಕರಿಸುವುದಿಲ್ಲವೆಂದು- ತಿಳಿಸುತ್ತಾರೆ. ॥೩೬॥

**ಪ್ರತಿಪದಾರ್ಥ :-**

**ಶ್ರುತಿ** = ಅಪೌರುಷೇಯವಾದ ವೇದಗಳು, **ಸ್ಮೃತಿ** = ಪೌರುಷೇಯವಾದ ಪುರಾಣಾದಿ ಸಚ್ಛಾಸ್ತ್ರಗಳು, **ಅರ್ಣವ** = ಅವುಗಳ ಅಧ್ಯಯನ ದ್ವಾರಾ, ತದ್ಗತ ಪ್ರಮೇಯಾರ್ಥಗಳನ್ನು, **ತಿಳಿದು** = ಅರಿತು, **ಅಹಂ ಇತಿ ವಿಶಿಷ್ಟನು** = ಅಹಂಕಾರ, ಮಮಕಾರಗ್ರಸ್ತನಾದ ಜೀವನು, **ಕರ್ಮಮಾಡಲು** = ಕರ್ಮಗಳನ್ನು ಮಾಡಿ, ಅವುಗಳನ್ನು ಅರ್ಜಿಸಲು, **ಪ್ರತಿಗ್ರಹಿಸನು** = ಶ್ರೀಪರಮಾತ್ಮನು ಸ್ವೀಕರಿಸುವುದಿಲ್ಲ, **ನಿತ್ಯ** = ಸದಾ, **ಹರಿ** = ಬಿಂಬರೂಪೀ ಶ್ರೀಪರಮಾತ್ಮನು, **ಪಾಪಗಳ ಕೊಡುತಿಪ್ಪ** = ಪಾಪಫಲಗಳನ್ನೇ ಕೊಡುತ್ತಾನೆ. **ಚತುರದಶಭುವನಾಧಿಪತಿ** = ಹದಿನಾಲ್ಕುಲೋಕಾಂತರ್ಗತವಾದ ಬ್ರಹ್ಮಾಂಡಕ್ಕೆ ಒಡೆಯನಾದ ಪರಬ್ರಹ್ಮನು, **ಕೃತ** = ಬಿಂಬಕ್ರಿಯಾದ್ವಾರಾ ತನ್ನಿಂದಲೇ ಮಾಡಲ್ಪಟ್ಟ, **ಕೃತ** = ಪ್ರತಿಬಿಂಬಭೂತವಾದ ಜೀವನ ದ್ವಾರಾ ಮಾಡಿಸಲ್ಪಟ್ಟ, **ಕೃತಜ್ಞ** = ಸರ್ವಕರ್ಮಗಳಲ್ಲಿ ಅಂತರ್ಗತನಾದ ಪರಮಾತ್ಮನನ್ನು ಅನುಸಂಧಾನದಿಂದ ತಿಳಿದವನಾಗಿ, **ನಿಯಾಮಕನು ಎನೆ** = ಸರ್ವಕರ್ಮಗಳಿಗೂ ಅವನೇ ಮುಖ್ಯನಿಯಾಮಕನೆಂದು ತಿಳಿಯಲು, **ಮತಿಭ್ರಂಶ** = ಬುದ್ಧಿಭ್ರಮಣದಿಂದಲೂ, **ಪ್ರಮಾದ** = ಆಗಬಾರದ ಕಾರ್ಯದಿಂದಲೂ, **ಸಂಕಟ** = ದುಃಖದಿಂದಲೂ, **ದೋಷ** = ಇತ್ಯಾದಿ ದೋಷಸಮೂಹಗಳು, **ಅವನಿಗಿಲ್ಲ** = ಅವನಿಗೆ ಲೇಪವಿಲ್ಲ. ॥೩೬॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣಒಡೆಯರ ವ್ಯಾಖ್ಯಾನ :-

ಅಹಂ ಮಮತಾದಿಗಳಿಂದ ಮಾಡಿದ ಕರ್ಮಗಳ ಪರಮಾತ್ಮ ಸ್ವೀಕಾರ ಮಾಡೋದಿಲ್ಲ-ಎಂತ ಹೇಳತಾರೆ.

ವೇದ, ಶ್ರುತಿ. ಇದು ಅಪೌರುಷೇಯುವಾದದ್ದು. ಪೌರುಷೇಯು ವಾದ ಶ್ರೀವೇದವ್ಯಾಸರು ಮಾಡಿದ ಪುರಾಣಗಳು, ಹಾಂಗೇ ಸರ್ವಮೂಲ, ಟೀಕಾ ಟಿಪ್ಪಣಿ ಆದಿಯಾಗಿ ಸಚ್ಛಾಸ್ತ್ರಗಳು, ಇವುಗಳನ್ನ ಓದಿ ಪಾಠ— ಪ್ರವಚನಾದಿಗಳಿಂದ ಅಧಿಕಾರಿ, ಅನುಷ್ಠಾನ ಮಾಡತಕ್ಕ ಪ್ರಮೇಯುಗಳ ತಿಳಿದು, ದೋಷಾದೋಷಗಳ ತಿಳದೂನೂ ಸರ್ವಪುಣ್ಯಗಳ ನಷ್ಟ ಮಾಡ ತಕ್ಕ, ಪಾಪ ಫಲಗಳ ಕೊಡತಕ್ಕ, ಪ್ರಬಲದೋಷವಾದ ಅಹಂಮಮತಾ, ಎಂಬ ದೋಷಯುಕ್ತನಾದ ಶಾಸ್ತ್ರಜ್ಞನಾದ ಅಧಿಕಾರಿ. ಪುಣ್ಯಕರ್ಮಗಳ ಮಾಡಿ,ಭಗವದರ್ಪಣ ಮಾಡಲು ಪರಮಾತ್ಮ ಸ್ವೀಕರಿಸೋದಿಲ್ಲ. ಶ್ರೀಪರ ಮಾತ್ಮನು ಪ್ರತಿದಿನದಲ್ಲಿ ಮಾಡಿದ ಪುಣ್ಯಗಳಿಗೆ ಪಾಪ ಫಲಗಳೇ ಅವರಿಗೆ ಕೊಡತಾ ಇರತಾನೆ. ತನ್ನ ಅಂತರ್ಗತನಾದ ಬಿಂಬರೂಪಿ ಪರಮಾತ್ಮ ಈ ಹದಿನಾಲ್ಕು ಲೋಕಕ್ಕೆ ಸ್ವಾಮಿ ಎಂತಲೂ, ಏಕಾದಶೇಂದ್ರಿಯುಗಳಲ್ಲಿ ಇದ್ದು, ತನ್ನ ಕ್ರಿಯಾದ್ವಾರಾ ಮಾಡಲ್ಪಟ್ಟ ಯಾವತ್ತೂ ಕರ್ಮಗಳ ಪ್ರತಿಬಿಂಬನಾದ, ಅಸ್ವತಂತ್ರನಾದ ಜೀವನಾದ ನಾನು ಮಾಡೋವನಾಗತೇನೆ- ಎಂತ ಅಹಂ ಮಮತಾದಿಗಳ ತ್ಯಜಿಸಿ, ಮಾಡತಕ್ಕ ದ್ವಂದ್ವಕರ್ಮಗಳಲ್ಲಿ ಈ ಅನುಸಂಧಾನ ವೇನೂ, ಸರ್ವಕರ್ಮಗಳಲ್ಲಿ ಅಂತರ್ಗತ ಪರಮಾತ್ಮನ್ನ ಅನುಸಂಧಾನದಿಂದ ತಿಳಿದವನಾಗಿ, ಸರ್ವೇಂದ್ರಿಯುನಿಯಾಮಕ ಬಿಂಬರೂಪಿ ಪರಮಾತ್ಮನು ಎಂತ ತ್ರಿಕರಣಶುದ್ಧಿಯಾಗಿ, ಅಂದರೆ ಇಂಥಾ ಅಧಿಕಾರಿಗೆ ಬುದ್ಧಿಭ್ರಮಣ ದಿಂದಲೂ, ಮಹಾಪ್ರಮಾದದಿಂದಲೂ ನಿರ್ಬಂಧಾದಿ ಸಂಕಟದಿಂದ ಪ್ರಾಪ್ತ ವಾದ ದೋಷಸಮೂಹವು, ಪೂರ್ವೋಕ್ತ ಕಾರಣಗಳಿಂದ ಅರ್ಪಣವಿಷ ಯುದಲ್ಲಿ ವಿಸ್ಮೃತನಾದ ಕಾಲಕ್ಕೂ, ಅಹಂಮಮತಾದಿಗಳಿಂದ ದೂರನಾಗಿ ಇರೋಕಾರಣದರಿಂದ ಈ ಪಾಪಗಳು ಅವಗೆ ಲೇಪವಿಲ್ಲ-ಎಂತ ತಾತ್ಪರ್ಯ.

॥೩೬॥

## ೨. ಭಾವಪ್ರಕಾಶಿಕೆ

ಶ್ರುತಿಗಳು, ಸ್ಮೃತಿಗಳು ಇವುಗಳರ್ಥವನ್ನು ತಾನು ತಿಳಿದು, ಪರ ಕೀಯುರಿಗೆ ಬೋಧನೆ ಮಾಡುವ ಶಕ್ತಿಯುಳ್ಳವನಾದರೂ, ತಾನು- ತನ್ನದು

ಎಂಬಭಿಮಾನವನ್ನು ಬಿಡದಿರುವನು, ಯಾವ ಸತ್ಕರ್ಮಗಳನ್ನು ಮಾಡಿದರೂ ಆ ಕರ್ಮಗಳನ್ನು ಸತ್ಕರ್ಮಗಳೆಂದು ಪರಮಾತ್ಮನು ಒಪ್ಪಿಕೊಳ್ಳುವುದಿಲ್ಲ. ಆದ್ದರಿಂದ ಆ ಪುಣ್ಯಕರ್ಮಗಳಿಗೆ ಫಲವಿಲ್ಲ ಮತ್ತೂ ಸಜ್ಜನರಲ್ಲಿ ಇರುವ ಪಾಪಗಳನ್ನು ಮಾತ್ರ ಈತನಿಗೆ ಹಂಚಿಕೊಡುವನು. ಹದಿನಾಲ್ಕುಲೋಕಗಳಿಗೂ ಧೊರೆಯಾದ, ಯಜ್ಞನಾಮಕನಾದ ಶ್ರೀಹರಿಯು, ಸತ್ಕರ್ಮವನ್ನು ಮಾಡುವವರೂ, ಮಾಡಿಸುವವರೂ, ಇವರೆಲ್ಲರೂ ನಿಂತು ಮಾಡಿ ಮಾಡಿಸುವನೆಂದು- ಉಪಾಸನೆ ಮಾಡುವವರಿಗೆ ಯಾವಾಗಲೂ ಬುದ್ಧಿಯು ಕೆಡುವುದಿಲ್ಲ. ಅನ್ಯಥಾಜ್ಞಾನ ಹುಟ್ಟುವುದಿಲ್ಲ, ಯಾವ ವಿಧವಾದ ಸಂಕಟವೂ ಬರುವುದಿಲ್ಲ. ಕೃತ-ಕೃತಜ್ಞ ಎಂಬೆರಡು ಪದಗಳಿಗೆ ಅರ್ಥ :- **ಕೃತ**-ಎಂದರೆ ಮಾಡಲ್ಪಟ್ಟ ಎಂದರ್ಥ. ಸತ್ಕರ್ಮಗಳನ್ನು ಮಾಡುವವನೆಂಬ ತಾತ್ಪರ್ಯ. ಇಂತಹಾ ಸತ್ಕರ್ಮಗಳನ್ನು ಮಾಡುವವನು ಪರಮಾತ್ಮನ ಪ್ರೇರಣೆಯಿಂದಲೇ ಮಾಡುವನೆಂದು ತಿಳಿದುಕೊಳ್ಳುವವನೇ **ಕೃತಜ್ಞನೆಂದು** ತಿಳಿಯಬೇಕು. ಆ ಜ್ಞಾನವು ಹುಟ್ಟಬೇಕಾದರೂ ಭಗವದನುಗ್ರಹದಿಂದಲೇ ಆಗುವದೆಂದು ತಿಳಿದು ಉಪಾಸನೆ ಮಾಡಬೇಕೆಂದು ತಾತ್ಪರ್ಯ.

॥೩೬॥

### ೩. ಭಾವದರ್ಪಣ :-

ಸಮಸ್ತಶಾಸ್ತ್ರಾರ್ಥ ತಿಳಿದಾಗ್ಯೂ, ನಾನೇ ಕರ್ತಾ- ಎಂದು ಅರ್ಪಣ ಮಾಡಿದವನ ಕರ್ಮ ಸ್ವೀಕರಿಸನೆಂತಲೂ, ಅವಗೆ ಪಾಪವೇ ಕೊಡುತ್ತಾನೆ ಎಂತಲೂ ನೀನೇ ಕರ್ತಾ- ಎಂದವಗೆ ದಾವ ಸಂಕಟ ಇಲ್ಲೆಂತ ಹೇಳುತ್ತಾರೆ । ಶ್ರುತೀತಿ. ॥೩೬॥

### ೪. ಶ್ರೀವ್ಯಾಸದಾಸ ಸಿದ್ಧಾಂತ ಕೌಮುದೀ :-

“ಶ್ರುತಿ” ಇತಿ ॥ “ಧನಶ್ರುತಕುಲಮದ್ಯೈಃ ಯೋ”- ಇತಿ ವಚನಾತ್, “ನ ಭಜತಿ ಕುಮನೀಷಿಣಾಂ ಸ ಇಜ್ಯಾಂ”- ಇತ್ಯುಕ್ತೇಃ ಚ ॥

ಕ್ರತುಃ – "ತಸ್ಮಾದಹಮ್ಯೃಜೀಷಹಮಾ ಸಖ್ಯುಃ ಶೂರಮಾವಿದಮಾ ಪುತ್ರಸ್ಯ ಪ್ರಭಾವಸೋ ॥ ಆವೃತ್ತ್ವದ್ಭೂತು ತೇ ಮನಃ ಕೇತುಮರ್ಯಾಃ॥ ಬೃ. ಸ. ಕರೋತಿ ಭಕ್ತಜನಸ್ಯ ಸುಖಮಿತಿ ಕ್ರತುಃ ॥

ಕೃತಜ್ಞಃ – ಓಂ × "ಓಜಸಾ ಯದಗ್ರಃ ಸ್ಥಿರೋರಣಾಮಸಂಸ್ಕೃತಃ॥ ಯದಿ ಸ್ತೋತುರ್ಮಘವಾ ಶೃಣವದ್ ಹವಂನೇಂದ್ರೋಯೋಷತ್ಯಾಗ ಮತ್ ॥ ಓಂ × ಬೃ–ಸ ॥ "ಕೃತಂ"– ಹ ವಂ–ಭಕ್ತಾಹ್ವಾನಂ ಜಾನಾತೀತಿ ಕೃತಜ್ಞಃ ॥೩೬॥

## ಕನ್ನಡಾರ್ಥ

ವಿದ್ಯಾ,ಧನ,ಕುಲ ಮುಂತಾದ ಮದಗಳಿಂದ ಯಾರು ಪೂಜಿಸುವರೋ ಅಂಥ ಕುಮತಿಗಳ ಆ ಪೂಜೆಯನ್ನು ಹರಿಯು ಸ್ವೀಕರಿಸುವುದಿಲ್ಲವೆಂದು ಪುರಾಣದಲ್ಲಿ ಹೇಳಿದುದನ್ನು "ಶ್ರುತಿಸ್ಮೃತ್ಯರ್ಥವ ತಿಳಿದು" ಈ ಚರಣದಿಂದ ಹೇಳುತ್ತಾರೆ.

**ಕ್ರತುಃ**–ಭಕ್ತ ಜನರಿಗೆ ಸುಖವನ್ನುಂಟುಮಾಡುವವನು. "**ಕೃತಜ್ಞಃ**" ಭಕ್ತರು ಮಾಡುವ ಆಹ್ವಾನವನ್ನು (ಕರೆಯನ್ನು) ತಿಳಿಯುವವನು (ಲಾಲಿಸುವವನು). ॥೩೬॥

## ೫. ಶ್ರೀಗುರುಹೃದಯ ಪ್ರಕಾಶಿಕೆ :–

ಶ್ರುತಿ ಸ್ಮೃತ್ಯರ್ಥ ತಿಳಿದು, ಅಹಂಮತಿವಿಶಿಷ್ಟನೆಂಬ ಕರ್ತೃತ್ವಾಭಿಮಾನ ಉಳ್ಳವನು, ಕರ್ಮಗಳನ್ನು ಮಾಡಿ ಸಮರ್ಪಿಸಿದಾಗ್ಯೂ, ಪಾಪ ಫಲಗಳನ್ನೇ ಅವನಿಗೆ ದೇವರು ಕೊಡುವನು. ತಾನು ಅಂಗೀಕರಿಸನು. ಹದಿನಾಲ್ಕು ಲೋಕಕ್ಕೂ ಸ್ವಾಮಿಯಾದ ಶ್ರೀಹರಿಯು **ಕ್ರತು** ಎಂದರೆ, ಸರ್ವಕರ್ತ, **ಕೃತಾಕೃತಜ್ಞ**–ಎಂದರೆ, ಮಾಡಿದ್ದೂ, ಮಾಡದೆ ಇದ್ದದ್ದೂ ಸಹ

ಬಲ್ಲವನು. ನಿಯಾಮಕನು– ಅಂದರೆ, ಸರ್ವವನ್ನೂ ನಿಬಂಧನೆ ಮಾಡು ವಂಥವನು– ಎಂದು ಅಭಿಮಾನ ವರ್ಜಿಸಿ, ದೃಢಭಕುತಿಯಿಂದ ಇದ್ದವಗೆ, ಮತಿಭ್ರಂಶವೆಂಬ ಭ್ರಾಂತಿಯೂ, ಪ್ರಮಾದವೆಂಬ ಅಜ್ಞಾನವೂ, ಸಂಕಟ ವೆಂಬ ಕಷ್ಟವೂ ಸಹ ಇಂತಹ ಉಪಸನಾ ಮಾಡುವ ಮಹಾತ್ಮರಿಗೆ ಇಲ್ಲ ವೆಂದರ್ಥ. ॥೩೬॥

## ಸರ್ವವ್ಯಾಖ್ಯಾನಸಾರಸಂಗ್ರಹ

ಅಪೌರುಷೇಯವಾದ ವೇದರಾಶಿಗಳು **ಶ್ರುತಿ** ಎಂತ ಕರೆಯುಪಲ್ಪಡು ತ್ತವೆ. ಶ್ರುತ್ಯನುಸಾರಿಯಾದ ಪುರಾಣಾದಿ ಸಚ್ಛಾಸ್ತ್ರಗಳು ಪೌರುಷೇಯ ಗ್ರಂಥರತ್ನಗಳು. ಇವುಗಳು **ಸ್ಮೃತಿಗಳೆಂದು** ಕರೆಯಲ್ಪಡುತ್ತವೆ.

ಶ್ರುತಿಗಳಲ್ಲಿ ಹಾಗೂ ಸ್ಮೃತಿಗಳಲ್ಲಿ ಹೇಳಿದ ವಚನಗಳನ್ನು ಗುರೂಪ ದೇಶ ದ್ವಾರಾ ತಿಳಿದು, ಅಧ್ಯಯನ ಪಾಠ–ಪ್ರವಚನಾದಿಗಳಿಂದ ಸ್ಪಷ್ಟ– ಪಡಿಸಿಕೊಂಡರೂ ಸಹ, ಅಹಂಮಮಕಾರಗಳು ನಮ್ಮನ್ನು ಬಿಡುವುದಿಲ್ಲ.

"ನಾಹಂ ಕರ್ತಾ, ಹರಿಃ ಕರ್ತಾ" – ಎಂದು ಹೇಳುತ್ತೇವೆ. ಈ ಉಕ್ತಿಯು ಕೇವಲ ಔಪಚಾರಿಕವಾಗಿರಬಾರದು. ಈ ಭೋದೆ ಅನ್ಯರಿಗೆ, ನನಗಲ್ಲ- ಎಂಬ ಭಾವನೆ ಸರ್ವಥಾ ಸಲ್ಲದು. ಅದು ಪರೋಪದೇಶ ಪಾಂಡಿ ತ್ಯವಾಗುವುದು.

ಅಹಂಕರ್ತೃತ್ವಭಾವವನ್ನು ಹೊಂದಿ, ಅಹಂಕಾರ ಮಮಕಾರಗ್ರಸ್ತ ನಾದವನು ಅರ್ಪಿಸಿದ ಪುಣ್ಯಕರ್ಮಗಳನ್ನು ಶ್ರೀಹರಿಯು ಎಂದೆಂದಿಗೂ ಸ್ವೀಕರಿಸುವುದಿಲ್ಲ. ಅದರ ಪ್ರತಿಯಾಗಿ ಅವರಿಗೆ ಪಾಪಫಲಗಳನ್ನು ಕೊಡು ವನು. ಇದು ವೈಷಮ್ಯವಾಗಲಿಲ್ಲವೇ–ಎಂಬ ಶಂಕಾ ಬರಬಹುದು. ಈ ಶಂಕೆಗೆ ಆಧಾರವಿಲ್ಲ. ಅಹಂಕಾರ ಮಮಕಾರಗಳು ತಮೋಯೋಗ್ಯಚೇತ

ನರ ಲಕ್ಷಣಗಳು. ಅವು ಮಹಾ ದೋಷಗಳೇ ಆಗುವುವು. ದೋಷಗ್ರಸ್ತರಾದ ಜೀವರಿಂದ ಆಚರಿಸಲ್ಪಟ್ಟ ಪುಣ್ಯಕರ್ಮಗಳು ಪಾಪ ಫಲಗಳಿಗೇ ಕಾರಣವಾಗುವುವು.

ಅಹಂ ಮಮಕಾರ ಶೂನ್ಯನಾದ ಭಕ್ತರ ಅನುಸಂಧಾನ ಈ ಪ್ರಕಾರವಿರುವುದು– ಬಿಂಬಕ್ರಿಯಾದ್ವಾರಾ ಶ್ರೀಹರಿಯೇ ಮಾಡಿಸುವ ಸಕಲಕರ್ಮಗಳೂ ಕೃತಿ ಎನಿಸುವುವು. ಪ್ರತಿಬಿಂಬಭೂತರಾದ ಜೀವರ ದ್ವಾರಾ ಶ್ರೀಹರಿಯಿಂದ ಮಾಡಿಸಲ್ಪಟ್ಟ ಸಕಲಕ್ರಿಯೆಗಳು **"ಕೃತ"**ವೆನಿಸುವುವು. **"ಕೃತ"** ಶಬ್ದವು ಬಿಂಬ–ಪ್ರತಿಬಿಂಬದ ಅನ್ಯೋನ್ಯ ಸಂಬಂಧವನ್ನು ಸೂಚಿಸುವುದು. ಬಿಂಬನಿಂದ ಕೃತ ಕರ್ಮಗಳು ಪ್ರತಿಬಿಂಬನಿಂದ ಕೃತವಾಗುವುವು. ಈ ಅನುಸಂಧಾನವನ್ನು ಉಳ್ಳವನೇ **"ಕೃತಜ್ಞನು."** ಅಂದರೆ, ಶ್ರೀಹರಿಯು ಬಿಂಬಕ್ರಿಯಾರೂಪವಾದ ವ್ಯಾಪಾರವನ್ನು ಬಲ್ಲವನು." ಹೇ ಪ್ರಭು, ನೀನೇ ಸರ್ವನಿಯಾಮಕನು, ಸರ್ವಪ್ರೇರಕನು- ಎಂಬ ಉತ್ತಮಜ್ಞಾನಾನುಸಂಧಾನ ಉಳ್ಳವರಿಗೆ ಬುದ್ಧಿ ಭ್ರಮಣೆಯಾಗಲೀ, ಪ್ರಮಾದಗಳಾಗಲೀ, ದುಃಖಾದಿ ದೋಷಗಳಾಗಲೀ ಇಲ್ಲ-ಎಂದು ತಿಳಿಸುತ್ತಾರೆ. ॥೩೬॥

## ಪದ-೩೭

ಮೂಲ :–

ವಾರಿಜಾಸನ ಮುಖ್ಯ ರಾಜ್ಞಾ ।
ಧಾರಕರು ಸರ್ವಸ್ವತಂತ್ರರ ।
ವ್ಯಾರಮಣನೆಂದರಿದು ಇಷ್ಟಾನಿಷ್ಟ ಕರ್ಮಫಲ ॥

**ಸಾರಭೋಕ್ತನಿಗರ್ಪಿಸಲು ಸ್ವೀ ।**
**ಕಾರ ಮಾಡುವ ಪಾಪಫಲವ ಕು ।**
**ಬೇರನಾಮಕ ದೈತ್ಯರಿಗೆ ಕೊಟ್ಟವರ ನೋಯಿಸುವ ॥ ॥೩೭॥**

**ಅವತರಣಿಕೆ :-**

ಬ್ರಹ್ಮಾದಿ ಸಕಲದೇವತಾವರ್ಗಕ್ಕೆ ಪುಣ್ಯಕರ್ಮಗಳ ಫಲಗಳನ್ನೂ, ಭಗವದ್ವೇಷಿಗಳಾದ ದೈತ್ಯರಿಗೆ ಪಾಪಕರ್ಮಗಳ ಫಲಗಳನ್ನೂ ವಿಭಾಗ ಮಾಡಿ ಕೊಡುತ್ತಾನೆಂದು ತಿಳಿಸುತ್ತಾರೆ. ॥೩೭॥

**ಪ್ರತಿಪದಾರ್ಥ :-**

**ವಾರಿಜಾಸನ** = ಕಮಲಪೀಠಸ್ಥರಾದ ಬ್ರಹ್ಮದೇವರು, **ಮುಖ್ಯ** = ಇವರೇ ಮೊದಲಾದವರು ("ಮುಖ್ಯ" ಶಬ್ದಕ್ಕೆ ಜೀವೋತ್ತಮರಾದ ಶ್ರೀವಾಯುದೇವರು ಎಂದರ್ಥ). **ಆಜ್ಞಾಧಾರಕರು** = ಶ್ರೀಹರಿಯ ಆಜ್ಞೆಯನ್ನು ಶಿರಸಾವಹಿಸಿ, ನಡೆಯುವ ಕಿಂಕರರು, **ಸರ್ವಸ್ವತಂತ್ರ** = ಪರಾಧೀನವಲ್ಲದ ಸ್ವಸ್ವರೂಪಗತವಾದ ಸ್ವತಂತ್ರನಾದವನು, **ರಮಾ ರಮಣನು** = ರಮಾಪತಿಯಾದ ಶ್ರೀಹರಿಯು, **ಎಂದರಿತು** = ಎಂದು ಶಾಸ್ತ್ರದ್ವಾರಾ. ಗುರೂಪದೇಶ ದ್ವಾರಾ ತಿಳಿದು, **ಇಷ್ಟ** = ವಿಧಿಪೂರ್ವಕ ವಾದ ಪುಣ್ಯಕರ್ಮಗಳು, **ಅನಿಷ್ಟ** = ನಿಷಿದ್ಧರೂಪವಾದ ಪಾಪಕರ್ಮ ಗಳು, **ಕರ್ಮಫಲ** = ಈ ಉಭಯವಿಧ ಕರ್ಮಜನಿತಫಲಗಳನ್ನು, **ಸಾರಭೋಕ್ತನಿಗೆ** = ಸರ್ವಕರ್ಮಗಳಲ್ಲಿ ಅಂತರ್ಗತನಾಗಿರುವ ಭಗವ ದ್ರೂಪಗತಸ್ವಾಖ್ಯರೂಪವಾದ ಸಾರವನ್ನು ಸ್ವೀಕರಿಸುವ ಬಿಂಬನಾದ ಶ್ರೀಹರಿಗೆ (ಸ್ವರತನಿಗೆ), **ಅರ್ಪಿಸಲು** = ದ್ವಂದ್ವಕರ್ಮಫಲಗಳನ್ನು ಸಮರ್ಪಣೆ ಮಾಡಲು, **ಸ್ವೀಕಾರ ಮಾಡುವ** = ಸ್ವಾಖ್ಯರಸವನ್ನು ಮಾತ್ರ ತೆಗೆದುಕೊಂಡು, **ಪಾಪಫಲವ** = ಪಾಪಕರ್ಮಗಳಿಂದ ಜನಿತ ವಾದ ಫಲಗಳನ್ನು, **ಕುಬೇರನಾಮಕ** = ದೈತ್ಯರಿಗೆ ಬಿಂಬನಾಗಿ ಪ್ರೇರಣೆ

ಮಾಡುವುದರಿಂದ ಶ್ರೀಪರಮಾತ್ಮನಿಗೆ **"ಕುಬೇರ"** ಎಂತ ನಾಮ. ಅಂತಹ ಕುಬೇರನಾಮಕ ಶ್ರೀಹರಿಯು, **ದೈತ್ಯರಿಗೆ ಕೊಟ್ಟು** = ದೇಹಗತರಾದ ಇಂದ್ರಿಯಾಭಿಮಾನಿ ದೈತ್ಯರಿಗೆ ನೀಡಿ, **ಅವರ ನೋಯಿಸುವ** = ಅವರ ಪಾಪವರ್ಧನೆ ಮಾಡಿ, ತದ್ದ್ವಾರಾ ಅವರನ್ನು ದುಃಖಭಾಜನರನ್ನಾಗಿ ಮಾಡುವನು. ॥೩೭॥

# ವ್ಯಾಖ್ಯಾನಗಳು

## ೧. ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ

ದೇವರು ಕರ್ಮವಿಭಾಗ ಮಾಡಿ ದೇವ-ದೈತ್ಯರಿಗೆ ಕೊಡತಾನೆ- ಎಂತ ಹೇಳತಾರೆ

ಜೀವೋತ್ತಮರಾದ ಕಮಲಾಸನರಾದ ಬ್ರಹ್ಮದೇವರೇ ಮೊದಲಾದ ದೇಹಗತತತ್ತ್ವದೇವತೆಗಳು, ಚರಾಚರಸರ್ವಜಗತ್ತಿನೊಳಗೆ ಪರಾಧೀನನಲ್ಲದ ಸ್ವತಂತ್ರನಾದವ, ಸರ್ವಪೂಜ್ಯನಾದವ, ರಮಾಪತಿಯಾದ ಶ್ರೀಬಿಂಬರೂಪಿ ಪರಮಾತ್ಮನು. ಈ ದೇವರ ಆಜ್ಞಾಧಾರಕರು. ಪರಾಧೀನ ಸ್ವಾತಂತ್ರ್ಯಉಳ್ಳವರು ತತ್ತ್ವದೇವತೆಗಳು. ಈ ತತ್ತ್ವದೇವತೆಗಳ ಆಜ್ಞಾಧಾರಕರು ಸರ್ವಪ್ರಾಣಿಗಳು. ಆಯಾ ತತ್ತ್ವದೇವತೆಗಳಿಗೆ, ಅವರಿಗೆ ಸ್ವೋತ್ತಮರಾದ ದೇವತೆಗಳು ತತ್ತ್ವನಿಯಾಮಕರಾಗಿ, ಅವರವರ ಆಜ್ಞಾಧಾರಕರಾಗಿ ಇರ್ತಾರೆ. ಈ ರೀತ್ಯಾ, ಸ್ವೋತ್ತಮರು ಸ್ವಾವರರಿಗೆ ನಿಯಾಮಕರಾಗಿಯೂ, ಸ್ವಾವರರು ಆಜ್ಞಾಧಾರಕರಾಗಿಯೂ ಇರತಾರೆ. ರಮಾಆರಭ್ಯ ತೃಣಾಂತ ಸರ್ವರೂ ಸ್ವೋತ್ತಮರಿಂದ ಆಜ್ಞಾಧಾರಕರು- ಎಂತ ಗುರುಮುಖದಿಂದ ಸತ್‌ಶಾಸ್ತ್ರದಲ್ಲಿ ಉಕ್ತವಾದ ಕ್ರಮವನ್ನು ಅರಿತವನಾಗಿ, ಪುಣ್ಯಕರ್ಮಗಳು ಪಾಪಕರ್ಮಗಳು- ಈ ಉಭಯವಿಧ ಕರ್ಮಜನಿತ ಫಲವೇನು, **ಈ** ಪುಣ್ಯ-ಪಾಪಗಳಲ್ಲಿ ತಜ್ಜನಿತಫಲಗಳಲ್ಲಿ ವಿದ್ಯಮಾನ

ವಾದ ತದಾಕಾರವಾದ ತನ್ನ ಸ್ವಾಖ್ಯರೂಪವಾದ ಸಾರವನ್ನ ಭೋಜನ ಮಾಡತಕ್ಕ ಬಿಂಬನಾದ ಶ್ರೀಹರಿಗೆ ಅನುಸಂಧಾನದಿಂದ ಅರ್ಪಣಮಾಡಲು ಕೈಗೊಂಡು, ತನ್ನ ಸ್ವಾಖ್ಯವನ್ನು ಸ್ವೀಕಾರಮಾಡಿ, ತದನ್ಯವಾದ ಪಾಪ ಕರ್ಮಜಫಲವನ್ನ **ಕುಮತೇರೀರಣಾತ್ಸರ್ವಸಾನ್ವತೇಃ ಸ ಕುಬೇರಕಃ**– ಎಂಬ **ವಿಷ್ಣುರಹಸ್ಯೋಕ್ತರೀತ್ಯಾ** ಅಂದರೆ, ದೈತ್ಯರಿಗೆ ಬಿಂಬನಾಗಿ ಪ್ರೇರಣಾದಿಗಳ ಮಾಡತಾನಾದ ಕಡಿಯಿಂದ **ಕುಬೇರ** ಎಂತ ನಾಮಾಂಕಿತನಾದ ಪರಮಾತ್ಮ, ದೇಹಗತರಾದ ದೈತ್ಯರಿಗೆ ಕೊಟ್ಟವನಾಗಿ, ಅವರನ್ನ ದುಃಖ ಪಡಿಸೋವನಾಗತಾನೆ.

**ತಾತ್ಪರ್ಯ :–** ಜೀವರಿಗೆ ಉಳಿದ ಅಲ್ಪಪಾಪಗಳು ದಾವವದೆ ಅವನ್ನು ಭಗವದರ್ಪಣೆ ಮಾಡೋಣದರಿಂದ ಪರಿದೃಶ್ಯಮಾನದಲ್ಲಿ ಲೋಗರಿಗೆ ದುಃಖದೋಪಾದಿಯಲ್ಲಿ ದುಃಖವಾಗಿ ತೋರತಾ ಇರೋಣ, ಭೋಗ ಮಾಡತಕ್ಕ ಅಧಿಕಾರಿಗೆ ಜ್ಞಾನಾತಿಶಯದಿಂದ ಪರಮ ಸುಖವಾಗಿ ಇರೋಣ, ಇಂಥಾ ಫಲ ಕೊಡೋವನಾಗತಾನೆ. ಲೋಗರಿಗೆ ಸುಖವಾಗಿ ತೋರೋಣ ವಿಷಯಸುಖ ; ಆ ವಿಷಯಸುಖದಲ್ಲಿ ಹೇಯತಾಬುದ್ಧಿ ಹುಟ್ಟಿಸಿ ನಿಸ್ಸಂಗನ್ನ ಮಾಡತಾನೆ. ಪುಣ್ಯತಾರತಮ್ಯಾನುಸಾರ ದೇಹಗತತತ್ತ್ವ ದೇವತೆಗಳಿಗೆ ವಿಭಾಗವಾದದ್ದು ಹೋಗತಾ, ಉಳಿದ ಜೀವನ ಭಾಗದ ಪುಣ್ಯಕ್ಕೆ ಜ್ಞಾನಪೂರ್ವಕವಾದ ಐಶ್ವರ್ಯ ಕೊಟ್ಟು, ಅದರಿಂದ ಭೋಗ ಪಡಿಸತಾ, ಪದ್ಮಪತ್ರಗತ ಉದಕದೋಪಾದಿಯಲ್ಲಿ ಲಿಪ್ತನ್ನ ಮಾಡದೇ, ಸರ್ವದಾ ಭಗವದರ್ಪಣಬುದ್ಧಿಯನ್ನು ಕೊಟ್ಟು, ಸುಖಪಡಿಸತಾನೆ– ಎಂತ ಭಾವವು. ॥೩೭॥

೨. **ಭಾವಪ್ರಕಾಶಿಕೆ :–**

ಬ್ರಹ್ಮದೇವರು ಮೊದಲಾದವರೆಲ್ಲರೂ ಪರಮಾತ್ಮನ ವಶದಲ್ಲಿದ್ದು, ಅವನ ಅಪ್ಪಣೆಯಂತೆ ನಡೆಯುಕೊಳ್ಳುವರು. ಪರಮಾತ್ಮನೊಬ್ಬನೇ ಸರ್ವ ಸ್ವತಂತ್ರನೆಂದು ತಿಳಿದು ನಾವು ಮಾಡಿದ ಪುಣ್ಯ ಪಾಪಗಳನ್ನು ಪರಮಾತ್ಮ

ನಿಗರ್ಪಿಸಿದರೆ, ಪರಮಾತ್ಮನು ಸ್ವೀಕರಿಸಿ, ಪುಣ್ಯಫಲದ ಸಾರವನ್ನು ತಾನುಂಡು ತನಗೆ ಅರ್ಪಿಸಿದವರಿಗೆ ಇಮ್ಮಡಿ ಮಾಡಿಕೊಟ್ಟು ಸುಖಪಡಿಸುವನು. ಕುಬೇರನೆಂಬ ಹೆಸರುಳ್ಳ ಪರಮಾತ್ಮನು ತನಗೆ ಅರ್ಪಿಸಿದ ಪಾಪಫಲವನ್ನು ದೈತ್ಯರಿಗೆ ಕೊಟ್ಟು, ಅವರನ್ನು ದುಃಖಪಡಿಸುವನು. ॥೩೭॥

**೩. ಭಾವದರ್ಪಣ :–**

ಬ್ರಹ್ಮಾದಿಗಳು ಪರಮಾತ್ಮನ ಅಧೀನರೂ, ಸರ್ವಸ್ವತಂತ್ರ ನೀನೇ ಎಂದೂ, ಕರ್ಮಾರ್ಪಣ ಮಾಡಿದರೆ, ಇವರ ಪಾಪಗಳು ಕುಬೇರನಾಮಕನು ದೈತ್ಯರಿಗೆ ಕೊಡುತ್ತಾನೆಂದು ಹೇಳುತ್ತಾರೆ. । ವಾರಿಜಾಸನ. ॥೩೭॥

**೪. ಶ್ರೀ ವ್ಯಾಸದಾಸ ಸಿದ್ಧಾಂತ ಕೌಮುದೀ :–**

"ವಾರಿಜ" ಇತಿ ॥ "ಕುಬೇರ" – ತದ್ದೈತ್ಯಸ್ಥಃ , ಸ್ವೀಕೃತ್ಯ ತಾನ್ ವ್ಯಥಯತಿ. ಇತ್ಯರ್ಥಃ ॥೩೭॥

**ಕನ್ನಡಾರ್ಥ**

ಕುಬೇರನಾಮಕ ದೈತ್ಯರಿಗೆ ಪಾಪಫಲವನ್ನು ಕೊಟ್ಟು, ಅವರಲ್ಲಿದ್ದು ವ್ಯಥೆಗೊಳಿಸುವನೆಂಬುದು ಈ ಪದ್ಯದ ಭಾವ. ॥೩೭॥

**೫. ಶ್ರೀಗುರುಹೃದಯ ಪ್ರಕಾಶಿಕೆ :–**

ವಾರಿಜಾಸನನೆಂಬ ಬ್ರಹ್ಮ ಮೊದಲಾದವರು, ದೇವರ ಆಜ್ಞಾಧಾರಕರಾಗಿ ಈ ದೇಹದಲ್ಲಿ ಕರ್ಮಪ್ರೇರಕರಾಗಿ ಇದ್ದಾರೆ. ಅವರೆಲ್ಲರಿಗೂ ಮುಖ್ಯ ಸ್ವತಂತ್ರನು ರಮಾರಮಣನಾದ ಸ್ವಾಮಿ [illegible]

ಪುಣ್ಯಪಾಪಫಲಗಳನ್ನು ಸ್ವರಸಭೋಕ್ತೃವಾದ ದೇವರಿಗೆ ಸಮರ್ಪಿಸುತ್ತಿರಲು, ಸ್ವೀಕಾರ ಮಾಡಿ, ಪಾಪಫಲವನ್ನು ಕುಬೇರನಾಮಕದೇವರು ದೈತ್ಯರಿಗೆ ಕೊಟ್ಟು, ಅವರವರಿಗೆ ಯೋಗ್ಯದುಃಖವನ್ನು ಕೊಡುವನು. ॥೩೭॥

## ಸರ್ವವ್ಯಾಖ್ಯಾನಸಾರಸಂಗ್ರಹ

ಚತುರ್ಮುಖ ಬ್ರಹ್ಮದೇವರು, **ಮುಖ್ಯ**-ಶಬ್ದದಿಂದ ಜೀವೋತ್ತಮರಾದ ಶ್ರೀವಾಯುದೇವರನ್ನು ತೆಗೆದುಕೊಳ್ಳಬೇಕು. ಹೀಗೆ, ಬ್ರಹ್ಮ, ವಾಯ್ವಾದಿಗಳು ಶ್ರೀಹರಿಯ ಆಜ್ಞೆಯನ್ನು ಶಿರಸಾವಹಿಸಿ, ಜಗತ್ಕಾರ್ಯದಲ್ಲಿ ತೊಡಗುವರು. ಶ್ರೀಹರಿಯ ಪ್ರೇರಣೆ ಶ್ರೀಲಕ್ಷ್ಮೀದೇವಿಗೆ. ರಮಾನಿಂದ ಪ್ರೇರಿತರು ಬ್ರಹ್ಮಾದಿ ತತ್ತ್ವದೇವತೆಗಳು. ಹೀಗೆ ಅವರರಾದ ದೇವತೆಗಳು ಸ್ವೋತ್ತಮರಾದ ದೇವತೆಗಳ ಆಜ್ಞಾಧಾರಕರು. ಈ ತಾರತಮ್ಯದ ಪರಂಪರೆ- ತದನುಗುಣವಾದ ಕ್ರಿಯಾಸರಣಿಯನ್ನು ಅರಿಯುವುದೇ ನಿಜವಾದ ತತ್ತ್ವದ ಮರ್ಮವು.

ಹೀಗೆ ಬಿಂಬ–ಪ್ರತಿಬಿಂಬ ಸಂಬಂಧವನ್ನರಿತು, ವಿಧಿರೂಪವಾದ ಇಷ್ಟಕರ್ಮಫಲಗಳನ್ನು, ಅಂದರೆ, ಪುಣ್ಯಕರ್ಮಜನಿತ ಫಲಗಳನ್ನು, ಹಾಗೆಯೇ ನಿಷೇಧರೂಪವಾದ ಅನಿಷ್ಟಕರ್ಮಫಲಗಳನ್ನು, ಅಂದರೆ, ಪಾಪಕರ್ಮಜನ್ಯಫಲಗಳನ್ನು, ಆ ಜಗದೀಶ್ವರನಿಗೆ ಉಭಯಕರ್ಮಗಳನ್ನು ಅರ್ಪಿಸಬೇಕೆಂದು ತಿಳಿಸುತ್ತಾರೆ.

ಆಗ ಸ್ವರಮಣನಾದ ಜಗನ್ನಾಥನು ಸರ್ವಕರ್ಮಗತಸ್ವಾಖ್ಯರೂಪವಾದ ಸಾರವನ್ನು ಸ್ವೀಕರಿಸುವನು. ಅಂದರೆ, ಕರ್ಮಾಂತರ್ಗತ ಭಗವದ್ರೂಪಗಳಲ್ಲಿ ತನ್ನಲ್ಲಿ ತಾನೇ ಕ್ರೀಡಿಸುವನು. ಸ್ವರತನಾದ ಶ್ರೀಹರಿಗೆ **ಸರ್ವಸಾರಭೋಕ್ತ**ನೆಂದು ಹೆಸರು.

ದೈತ್ಯರಿಗೆ (ಕುಮತಿಗಳು) ಬಿಂಬಿನಾಗಿ, ಪ್ರೇರಣ ಮಾಡುವುದರಿಂದ ಅವನಿಗೆ **ಕುಬೇರನೆಂದು** ಹೆಸರು. (ಕು–ಕುಮತಿಗಳಾದ ದೈತ್ಯರು. ಬೇರ-ಪ್ರೇರಕ).

ಶ್ರೀಹರಿಯು ಪಾಪಜನ್ಯವಾದ ಫಲಗಳನ್ನು ದೇಹಗತತತ್ತ್ವ ದೈತ್ಯರಿಗೆ ಕೊಟ್ಟು, ಅವರ ದುಃಖವರ್ಧನೆ ಮಾಡುವನು.

ರಾಜನ ಆಜ್ಞಾಧಾರಕರಾದ ಸೇವಕರಿಗೆ, ರಾಜನು ಸುಖಪ್ರದನಾಗುವನು. ಅವನ ದ್ವೇಷಿಗಳಿಗೆ ದುಃಖಪ್ರದನಾಗುವನು. ಅಂತೆಯೇ, ಜಗದೀಶ್ವರನ ವ್ಯಾಪಾರಮಹಿಮಾವಿಶೇಷ. ॥೩೭॥

## ಪದ್ಯ–೩೮

**ಮೂಲ :–**

ಕ್ರೂರ ದೈತ್ಯರೊಳಿದ್ದು ತಾನೇ ।
ಪ್ರೇರಿಸುವ ಕಾರಣದಿ ಹರಿಗೆ ಕು ।
ಬೇರನೆಂಬರು ಎಲ್ಲರೊಳು ನಿರ್ಗತಗತಿಗೆ ನಿರುತ ॥
ಸೂರಿಗಮ್ಯಗೆ ಸೂರ್ಯನೆಂಬರು ।
ದೂರಶೋಕಗೆ ಶುಕ್ಲ ಲಿಂಗಶ ।
ರೀರವಿಲ್ಲದ ಕಾರಣದಲಿ ಅಕಾಯನೆನಿಸುವನು ॥ ॥೩೮॥

**ಅವತರಣಿಕೆ :-**

ಸರ್ವವ್ಯಾಪಾರಗಳಿಗೂ ಮುಖ್ಯಪ್ರವರ್ತಕನೂ, ಪ್ರೇರಕನೂ ಆದ ಶ್ರೀಹರಿಗೆ ಕುಬೇರ-ಸೂರ್ಯ-ಅಕಾಯ ಇತ್ಯಾದಿ ನಾಮಗಳಿವೆ. ಈ ನಾಮಗಳ ಶಬ್ದಾರ್ಥಗಳನ್ನು ವಿವರಿಸುತ್ತಾರೆ. ॥೩೮॥

**ಪ್ರತಿಪದಾರ್ಥ :-**

**ಕ್ರೂರ** = ಸ್ವರೂಪಗತವಾದ ಕ್ರೌರ್ಯ, ಭಗವದ್ವೇಷಾದಿಗಳುಳ್ಳ, **ದೈತ್ಯರೊಳಿದ್ದು** = ದೈತ್ಯರಲ್ಲಿ ವಿದ್ಯಮಾನನಾಗಿ, **ತಾನೇ** = ಸ್ವಯಂ ಬಿಂಬರೂಪದಿಂದ, **ಪ್ರೇರಿಸುವ ಕಾರಣದಿ** = ಆ ದೈತ್ಯರ ಸ್ವರೂಪ ಯೋಗ್ಯತಾನುಸಾರ, ಪ್ರೇರಿಸುವುದರಿಂದ, **ಹರಿಗೆ** = ದೈತ್ಯ ಜೀವಾಂತರ್ಗತನಾದ ಬಿಂಬರೂಪನಾದ ಶ್ರೀಪರಮಾತ್ಮನಿಗೆ, **ಕುಬೇರನೆಂಬರು** = ಕುಬೇರ ಎಂಬ ಹೆಸರಿನಿಂದ ಕರೆಯುತ್ತಾರೆ. **ಎಲ್ಲರೊಳು** = ಸಕಲದೈತ್ಯರಲ್ಲಿ, **ನಿರುತ** = ನಿರಂತರವಲ್ಲಿ, **ನಿರ್ಗತಗತಿಗೆ** = ಅಧೋಗತಿಯಾದ ನಿತ್ಯದುಃಖಭೋಗಸ್ಥಾನಗಳಾದ ಅಂಧಂತಮಸ್ಸಿಗೆ ಸೇರಿಸುವ ಉದ್ದೇಶ್ಯದಿಂದ, ಕುಬೇರನೆಂತ ನಾಮ, **ಸೂರಿಗಮ್ಯಗೆ** = ಜ್ಞಾನಿಗಳ ಧ್ಯಾನಕ್ಕೆ ವಿಷಯವಾಗಿ, ಅವರಿಗೆ ತನ್ನ ದರ್ಶನಭಾಗ್ಯವನ್ನು ನೀಡುವುದರಿಂದ, **ಸೂರ್ಯನೆಂಬರು** = ಜ್ಞಾನರೂಪಿಯಾದ ಸೂರ್ಯ-ಎಂದು ಕರೆಯುತ್ತಾರೆ. **ದೂರಶೋಕಗೆ** = ಸಕಲವಿಧವಾದ ದುಃಖಗಳಿಂದ ಅತ್ಯಂತ ದೂರನಾದ ಕಾರಣದಿಂದ, **ಶುಕ್ಲಲಿಂಗ ಶರೀರವಿಲ್ಲದ ಕಾರಣದಲಿ** = ಶುಕ್ಲಶೋಣಿತ ಸಂಬಂಧವಾದ ಜಡ ಪ್ರಕೃತ್ಯಾತ್ಮಕ ಸ್ಥೂಲಶರೀರವೇನು, ಪ್ರಕೃತ್ಯಾತ್ಮಕ ಅನಾದಿ ಲಿಂಗಶರೀರವೇನು, ಇದ್ಯಾವುದೂ ಇಲ್ಲದ ಕಾರಣದಿಂದ, **ಅಕಾಯನೆನಿಸುವನು** = ಅಕಾಯ ಎಂತ ನಾಮ. ಕಾಯ ಎಂದರೆ, ಶರೀರ. ಅಕಾಯ, ಎಂದರೆ ಶರೀರವಿಲ್ಲದವನು-ಎಂದರ್ಥವಲ್ಲ. ಪ್ರಕೃತ್ಯಾತ್ಮಕ ತ್ರಿಗುಣಗಳಿಂದ ದೂರವಾದ, ಅಪ್ರಾಕೃತ, ಅಪರಿಮಿತ ಜ್ಞಾನಾನಂದ ಪರಿಪೂರ್ಣದೇಹವುಳ್ಳವನೆಂದರ್ಥ. ॥೩೮॥

# ವ್ಯಾಖ್ಯಾನಗಳು

## ೧. ಶ್ರೀಸಂಕರ್ಷಣಒಡೆಯರ ವ್ಯಾಖ್ಯಾನ :-

ಪೂರ್ವಶ್ಲೋಕದಲ್ಲಿ ಉಕ್ತವಾದ ಕುಬೇರಶಬ್ದಾಗಳಿಗೆ ವಿವರವನ್ನು ಹೇಳತಾರೆ.

ಸ್ವರೂಪಸ್ವಭಾವದಲ್ಲಿ ಭಗವದ್ದ್ವೇಷದಿಂದ ಯುಕ್ತರಾದ ಅತಿಕ್ರೂರರಾದ ದೈತ್ಯರಲ್ಲಿ ಬಿಂಬನಾಗಿದ್ದು, ಸ್ವರೂಪದಲ್ಲಿ ತತ್ತ್ವದೇವತಾರೂಪಗಳಿಂದ ಸ್ವರೂಪಯೋಗ್ಯತಾನುಸಾರ ಜೀವನ ಸ್ವರೂಪದಲ್ಲೇನು, ಅದನ್ನನುಸರಿಸಿ, ಬಾಹ್ಯಸ್ಥೂಲದಲ್ಲೇನು ಪ್ರೇರಣೆಮಾಡೋ ಕಾರಣದಿಂದ ದೈತ್ಯಜೀವಾಂತರ್ಗತನಾದ ಬಿಂಬನಾದ ಶ್ರೀಹರಿಗೆ ಹೆಸರು ಏನೆಂದರೆ, **ಕುಬೇರ** ಎಂತ ಹೇಳತಾರೆ. **ಕುಬಿ- ಆಚ್ಛಾದನೇ-ಇತಿ ಧಾತೋಃ ಧನದಾನೇನ ದಾರಿದ್ರ್ಯಂ ಕುಂಬತಿ ಆಚ್ಛಾದಯತಿ ಇತಿ-ಕುಬೇರಃ.** ಯಾವತ್ತೂ-ದೈತ್ಯರೊಳು ಕುಬೇರನಾಮದಿಂದ ಇದ್ದು, ನಿರಂತರದಲ್ಲಿ ಇಂಥಾ ಕ್ರೂರ ದೈತ್ಯರ ಅಧೋಗತಿಯಾದ ನಿತ್ಯಅಂಧತಮಃಲೋಕ ಸೇರಿಸೋ ಉದ್ದಿಶ್ಯ, ಸ್ವರೂಪಾನುಗುಣ್ಯವಾಗಿ ಸ್ಥೂಲದೇಹದಿಂದ ಸಾಧನಮಾಡಿಸತಾನೆ. ಭಗವದ್ಭಕ್ತರಾದ ಜ್ಞಾನಿಗಳಾದವರಿಗೆ ಅಂತರ್ಗತನಾದ ಪರಮಾತ್ಮನು, ಅವರವರಿಗೆ ಪ್ರತ್ಯಕ್ಷನಾಗಿ ದರ್ಶನ ಕೊಡತಾನಾದ ಕಡಿಯಿಂದ, ಇಂಥಾ ಜ್ಞಾನರೂಪೀಪರಮಾತ್ಮನ್ನ, **ಸೂರ್ಕಸ್ಯ ಸೂರಿಗಮ್ಯತ್ವಾತ್ ಪ್ರಜಾಪತ್ಯಃ ಪ್ರಜಾಪತೇಃ**- ಎಂತ ಅಂಬೋವರಾಗತಾರೆ. ಸೂರ್ಯ, ಸ್ವರೂಪ ಬಾಹ್ಯ ಈ ಎರಡರಲ್ಲಿ ಸ್ವರೂಪಾನುಸಾರ ಪೂರ್ವೋಕ್ತ ಪ್ರಕಾರ ಸತ್ಸಾಧನಾ ಮಾಡಿಸೋ ನಿಮಿತ್ತ ಪ್ರೇರಣಾದಿಗಳ ಮಾಡತಾರೆ- ಊರ್ಧ್ವಗತಿಯಾದ ವೈಕುಂಠಲೋಕ ಪ್ರವೇಶಕ್ಕಾಗಿ ಎಂತ ಅರ್ಥ. ದುಃಖದೂರನಾದ ಪರಮಾತ್ಮಗೆ- ಎಂದರೆ,

ಜೀವಾಂತರ್ಗತನಾದ ಕಾಲಕ್ಕೂ, ಜೀವರ ಯಾತನಾದಿಗಳು ಬಿಂಬಗೆ ಇಲ್ಲದ ಕಾರಣ ದೂರಶೋಕ-ಎಂತ ಕರೆಸಿದ. ಇಂಥಾ ಪರಮಾತ್ಮಗೆ ಜೀವರೋಪಾದಿಯಲ್ಲಿ.

**ಶುಕ್ರಂ ತಚ್ಛೋಕರಾಹಿತ್ಯಾತ್ ಅವ್ರಣಂ ನಿತ್ಯಪೂರ್ಣತಃ ।**
**ಪಾವನತ್ವಾತ್ ಸದಾ ಶುದ್ಧಂ ಅಕಾಯಂ ಲಿಂಗವರ್ಜನಾತ್ ॥**

ಇತಿ **ಈಶಾವಾಸ್ಯಭಾಷ್ಯೋಕ್ತ** ರೀತ್ಯಾ,ಶುಕ್ಲಶೋಣಿತ ಜಡಪ್ರಕೃತ್ಯಾತ್ಮಕ ಸ್ಥೂಲಶರೀರವೇನು, ಇದರ ಒಳಗೆ ಜೀವರೋಪಾದಿಯಲ್ಲಿ ಪ್ರಕೃತ್ಯಾತ್ಮಕ ಅನಾದಿಲಿಂಗ ಶರೀರವೇನು, ಇಂಥಾ ಶರೀರಗಳು ಇಲ್ಲದ ಕಾರಣದಿಂದ **ಅಕಾಯನೆನಿಸುವನು**-ಎಂದರೆ,ಪೂರ್ವೋಕ್ತ ಶರೀರಗಳು ಇಲ್ಲ ಎಂತ ಅರ್ಥ-ಆದರೆ, ಈ ಪರಮಾತ್ಮಗೆ ಶರೀರ ಇರೋದಾಗಿ ಆದೆ. ಎಂಥಾ ಶರೀರ ಎಂದರೆ,ಆನಂದ ಜ್ಞಾನದೇಹವುಳ್ಳವನು– ಎಂತಲೂ, ಈ ಶರೀರ ಅಚ್ಛೇದ್ಯ ಅಭೇದ್ಯ– ಎಂತಲೂ ಎನಿಸೋವನಾಗತಾನೆ. ಕುಬೇರಾದಿ ನಾಮಗಳು ಪರಮಾತ್ಮನ ನಾಮಗಳೆಂತಲೇ ತಾತ್ಪರ್ಯ. ॥೩೮॥

## ೨. ಭಾವಪ್ರಕಾಶಿಕೆ :-

ಕ್ರೂರರಾದ ದೈತ್ಯರಲ್ಲಿದ್ದು, ಪಾಪಗಳನ್ನು ಮಾಡಲು ಪ್ರೇರಿಸುವುದರಿಂದ "ಕುಮತೇರೀರಣಾತ್ **ಕುಬೇರಃ**" ಎಂಬ ನಿರ್ವಚನದಿಂದ ಹರಿಗೆ **ಕುಬೇರನೆಂದು** ಹೆಸರು. "ಸೂರಿಗಮ್ಯತ್ವಾತ್ ಸೂರ್ಯಃ" ಜ್ಞಾನಿಗಮ್ಯನಾದುದರಿಂದ **ಸೂರ್ಯನೆಂದು** ಹೆಸರು. "ಶುಕ್ಲಂತಚ್ಛೋಕರಾಹಿತ್ಯಾತ್"-ಎಂಬ ಪ್ರಮಾಣದಿಂದ, ಶ್ಲೋಕರಹಿತನಾದುದರಿಂದ ಶುಕ್ಲನೆಂದು ಹೆಸರು. "ಅಕಾಯೋ ಲಿಂಗವರ್ಜನಾತ್"–ಎಂಬ ಪ್ರಮಾಣದಿಂದ ಲಿಂಗಶರೀರವಿಲ್ಲದ ಕಾರಣ **ಅಕಾಯನೆನ್ನುವರು**. ಈಶಾವಾಸ್ಯೋಪನಿಷದ್ಭಾಷ್ಯದ ಆಧಾರದ ಮೇಲೆ ದಾಸಾರ್ಯರು ಈ ನಿರ್ವಚನವನ್ನು ಮಾಡಿರುವರೆಂದು ತಿಳಿಯಬೇಕು. ॥೩೮॥

## ೩. ಭಾವದರ್ಪಣ :–

। ಕುಬೇರ । ದುಷ್ಟರಿಗೆ ಪ್ರೇರಿಸತಕ್ಕ ಭಗವದ್ರೂಪಕ್ಕೆ **ಕುಬೇರನೆಂದು** ನಾಮ. "ಕುಮತೇರೀರಣಾತ್ಸರ್ವಸಾವೃತೇಃ ಸ ಕುಬೇರಕಃ " । ಇತಿ **ವಿಷ್ಣು ರಹಸ್ಯೋಕ್ತೇಃ** । ಸೂರ್ಯ ಇತಿ । "ಸೂರ್ಯಸ್ಸ ಸೂರಿಗಮ್ಯತ್ವಾತ್ ಪ್ರಾಜಾಪತ್ಯಃ ಪ್ರಜಾಪತೇರಿತಿ" । ಶುಕ್ಲ । ಶುಕ್ಲಂತಚ್ಛೋಕರಾಹಿತ್ಯಾದ **ವರ್ಣಂ ನಿತ್ಯ ಪೂರ್ಣತಃ** । ಪಾಪನತ್ವಾತ್ಸದಾ ಶುದ್ಧಮಕಾಯಂ ಲಿಂಗವರ್ಜನಾ ದಿತಿ" ಈಶಾವಾಸ್ಯ ಭಾಷ್ಯೋಕ್ತೇಃ ॥೩೮॥

## ೪. ಶ್ರೀವ್ಯಾಸದಾಸ ಸಿದ್ಧಾಂತ ಕೌಮುದೀ :–

ಉಕ್ತ ಶಬ್ದಂ ಹಕಾ ನಿರ್ವಷ್ಯನ್ ಅನ್ಯಾನಪಿ ನಿರ್ವಕ್ತಿ "ಕ್ರೂರ" ಇತಿ. ॥

ವಿಷ್ಣುರಹಸ್ಯೇಚ – "ಕುಮತೇರೀರಣಾತ್ ಸರ್ವಸಂವೃತ್ತೇಃ ಸ ಕುಬೇರಕಃ ॥ ದುರ್ಜ್ಞೇಯತ್ವಾತ್ ನಿಋತಿಃ ॥ ಸೂರಿಭಿಃ ಜ್ಞೇಯ ಮೂರ್ತಿತ್ವಾತ್ ಸೂರ್ಯಃ ॥ ಇತಿ ॥ ಕುಭ್ಃ ಕುತ್ಸಿತಾನ್ ಈರಯತಿ ಪ್ರೇರಯತಿ ಇತಿ ವೃತ್ತಿಃ ಸೂಚಿತಾ ॥ "ರತಿಃ" – ಗತಿಃ ಯಃ ಜ್ಞೇಯಃ ಶುಕ್ರಂ ಶೋಕರಾಹಿತ್ಯಾತ್ ॥ ಅಕಾಯಂ ಲಿಂಗವರ್ಜನಾತ್ ॥ ಇತ್ಯುಕ್ತಮಾಹ— "ದೂರ" ಇತಿ. ॥೩೮॥

## ಕನ್ನಡಾರ್ಥ

ಹಿಂದಿನ "ಕುಬೇರ" ಶಬ್ದದ ಅರ್ಥವನ್ನೂ ಇನ್ನೂ ಬೇರೆ ಕೆಲವು ಶಬ್ದಗಳ ವ್ಯುತ್ಪತ್ತಿಯನ್ನೂ ಈ ಪದ್ಯದಿಂದ ಸೂಚಿಸುತ್ತಾರೆ. **ವಿಷ್ಣು ರಹಸ್ಯದಲ್ಲಿ**– ಕುಮತಿಯನ್ನು ಪ್ರೇರಿಸುವುದರಿಂದ ಸರ್ವಸಂಸಾರವನ್ನು

ಹಾಕುವುದರಿಂದ "ಕುಬೇರನು" ತಿಳಿಯಲು ದುಃಸಾಧ್ಯವಾದುದರಿಂದ ನಿಋುತಿಃ " ಸೂರಿ (ಜ್ಞಾನಿಗಳಿಂದ) ತಿಳಿಯಲ್ಪಡುವ ಮೂರ್ತಿಯುಳ್ಳವನಾದುದರಿಂದ "ಸೂರ್ಯನ" ಹೀಗೆ ನಿರೂಪಿಸಲಾಗಿದೆ. ಇದರಿಂದ "ಕುಬ್"— ಕುತ್ಸಿತ ಕುಮತಿಗಳನ್ನು "ಈರಯತಿ" ಪ್ರೇರಿಸುವನು- ಎಂಬ "ಕುಬೇರ" ಶಬ್ದದ ಅವಯವಾರ್ಥವನ್ನು ಸೂಚಿಸಿರುತ್ತಾರೆ. ನಿರ್ಗತವಾದ ರತಿ ಗತೀ (ಜ್ಞೇಯ) ಉಳ್ಳವನು. ಶೋಕವಿಲ್ಲದಿರುವುದರಿಂದ "ಶುಕ್ರ" ಲಿಂಗದೇಹ ರಹಿತನಾದುದರಿಂದ "ಅಕಾಯ" ಹೀಗೆ ವ್ಯುತ್ಪತ್ತಿಯನ್ನು "ದೂರ" ಶೋಕ ಪದದಿಂದ ತೋರಿಸುತ್ತಾರೆ. ॥೩೮॥

**೫. ಶ್ರೀ ಗುರುಹೃದಯ ಪ್ರಕಾಶಿಕೆ :–**

ಕ್ರೂರದೈತ್ಯರೊಳಿದ್ದು ತಾನೇ ಪ್ರೇರಿಸುವುದರಿಂದ, ಕುಪ್‌ಕುತ್ಸಿಕ್ರಾ ಈರಯತೇ ಪ್ರೇರಯತೀತಿ-ಎಂಬ ವ್ಯುತ್ಪತ್ತಿಯಿಂದ ಶ್ರೀಹರಿಗೆ **ಕುಬೇರನೆಂದು** ಹೆಸರುಂಟು. ಎಲ್ಲರೊಳು ನಿರ್ಗತಗತಿಗೆ ನಿರುತ–ಎಂದರೆ ಸರ್ವರಲ್ಲೂ ಬಿಟ್ಟುಹೋಗದೆ ನಿರಂತರದಲ್ಲಿಯೂ ಇರುವನು. ಸೂರಿಗವ್ಯನೆಂಬ ಜ್ಞಾನಿಗಳಿಂದ ಹೊಂದಲ್ಪಡುವನಾದ್ದರಿಂದ **ಸೂರ್ಯನೆಂದು** ಹೇಳುವರು. ಶೋಕರಹಿತನಾದ್ದರಿಂದ **ಶುಕ್ರನೆಂತಲೂ,** ಲಿಂಗಶರೀರವೆಂಬ ಸ್ಥೂಲಸೂಕ್ಷ್ಮಪ್ರಾಕೃತದೇಹವಿಲ್ಲದ ಆನಂದಮೂರ್ತಿಗೆ **ಅಕಾಯ,** ಶರೀರರಹಿತನು ಎಂಬ ಹೆಸರು. ॥೩೮॥

## ಸರ್ವವ್ಯಾಖ್ಯಾನಸಾರಸಂಗ್ರಹ

ಸ್ವರೂಪದಲ್ಲಿ ಅತ್ಯಂತ ಕ್ರೌರ್ಯವನ್ನು ಹೊಂದಿರುವುದರಿಂದ, ಕ್ರೂರರೆನಿಸುವರು. ಕ್ರೌರ್ಯ ಮತ್ತು ಭಗವದ್ವೇಷಗಳೇ ಅವರ ಸ್ವರೂಪಭೂತ ಲಕ್ಷಣಗಳು. ಅಂತಹ ಕ್ರೂರ ಸ್ವಭಾವವುಳ್ಳ ದೈತ್ಯರಲ್ಲಿ ಬಿಂಬನಾಗಿದ್ದು, ಅವರನ್ನು ಪ್ರೇರಿಸುವುದರಿಂದ, ಶ್ರೀಪರಮಾತ್ಮನಿಗೆ ಕುಬೇರನೆಂದು ಹೆಸರು.

**ಕುಬಿ ಆಚ್ಛಾದನೇ–ಇತಿ ಧಾತೋಃ ಧನ ದಾನೇನ ಕುಂಬತಿ ಆಚ್ಛಾದಯತಿ–ಇತಿ ಕುಬೇರಃ**-ಎಂತ ಪ್ರಮಾಣ ವಚನ ರೀತ್ಯಾ.

ಪ್ರತಿಬಿಂಬಭೂತರಾದ ಜೀವರನ್ನು ಎಂದೆಂದಿಗೂ ಆನಂದ ನಿತ್ಯಾವಿಯೋಗಿಯಾದ ಬಿಂಬನ ವ್ಯಾಪಾರವನ್ನು **ನಿರುತ** ಎಂಬ ಶಬ್ದಪ್ರಯೋಗದಿಂದ ಪ್ರತಿಪಾದಿಸಿದ್ದಾರೆ.

ನಿರ್ಗತ, ಎಂದರೆ ಪುನಃ ಎಂದೆಂದಿಗೂ ಹಿಂದಕ್ಕೆ ಬರಲಾರದ, ಗತಿ, ಎಂದರೆ ಲೋಕ, ಅಂದರೆ ನಿತ್ಯವಾದ ಗತಿ ಪ್ರಾಪ್ತಿಯನ್ನು ಹೊಂದಿರುವುದರಿಂದ **ನಿರ್ಗತಗತಿ** ಎಂತ ನಾಮ. ಎಲ್ಲರೊಳು–ಎಂಬ ಶಬ್ದದಿಂದ, ಮುಕ್ತಯೋಗ್ಯರಿಗೆ ಶಾಶ್ವತವಾದ ವೈಕುಂಠಾದಿ ಮುಕ್ತಲೋಕಗಳು, ನಿತ್ಯಸಂಸಾರಿಗಳಿಗೆ ನಿತ್ಯಬದ್ಧವಾದ ಸಾಂತಾನಿಕಲೋಕಗಳು, ಕ್ರೂರದೈತ್ಯರಿಗೆ ನಿತ್ಯದುಃಖರೂಪವಾದ ಅಂಧತಮಸ್ಸು– ಹೀಗೆ ಗತಿಪ್ರಾಪ್ತಿಯನ್ನು ತ್ರಿವಿಧಜೀವರಿಗೆ ಅವರವರ ಯೋಗ್ಯತಾನುಸಾರ ಕೊಡುವನು–ಎಂದರ್ಥ. **ನಪುನರಾವರ್ತತೇ**-ಎಂಬ ಶಾಶ್ವತ ಗತಿ.

ಜ್ಞಾನಿಗಳಾದವರ ಧ್ಯಾನಕ್ಕೆ ಶ್ರೀಹರಿಯು ಮುಖ್ಯವಿಷಯನು, ಅವರ ಧ್ಯಾನಕ್ಕೆ ಗೋಚರನಾಗಿ, ತನ್ನ ದರ್ಶನಭಾಗ್ಯವನ್ನು ಕರುಣಿಸುವನು. ಇದರಿಂದ **ಸೂರಿಗಮ್ಯನು.** ಈ ಕಾರಣದದಿಂದ ಅಪರೋಕ್ಷವನ್ನು ಕರುಣಿಸುವ ಅಧೋಕ್ಷಜನಿಗೆ **ಸೂರ್ಯ** ಎಂದು ಹೆಸರು.

ನಿರ್ದೋಷಿಯಾದ ಶ್ರೀಹರಿಯು **ಶೋಕದೂರನು.** ದುಃಖಾದಿ ಕ್ಲೇಶಗಳು ಯಾವುವೂ ನಿತ್ಯಾನಂದಪೂರ್ಣನಿಗಿಲ್ಲ. ಶುಕ್ಲ ಶೋಣಿತ ಸಂಬಂಧವಾದ ಪ್ರಕೃತ್ಯಾತ್ಮಕವಾದ ಸ್ಥೂಲಶರೀರ ಶ್ರೀಪರಮಾತ್ಮನಿಗಿಲ್ಲ. ಇದರಿಂದ ಜನನ ಮರಣ ವಿದೂರನು. ಜೀವರಿಗೆ ಇರುವಂತೆ ತ್ರಿಗುಣಾತ್ಮಕವಾದ ಮೂಲಪ್ರಕೃತಿಸಾಂಕೇತವಾದ ಅನಾದಿಲಿಂಗದೇಹವು ಅವನಿಗಿಲ್ಲ.

ಸದಾ ಆನಂದಪೂರ್ಣನು. ಅಪ್ರಾಕೃತವಾದ ಜ್ಞಾನಾನಂದಮಯವಾದ ಶರೀರವುಳ್ಳವನು. ಇದರಿಂದ **ಅಕಾಯ** ನಾಮಕನು. ॥೩೮॥

## ಪದ್ಯ-೩೯

**ಮೂಲ:–**

**ಪೇಳಲೊಶವಲ್ಲವು ಮಹಾಪಾ ।**
**ಪಾಳಿಗಳ ಒಂದೇ ಕ್ಷಣದಿ ನಿ ।**
**ರ್ಮೂಲಗೈಸಲಿಬೇಕು ಎಂಬುವಗೊಂದೆ ಹರಿನಾಮ ॥**
**ನಾಲಿಗೆಯೊಳುಳ್ಳವಗೆ ಪರಮುಕ್ತ ।**
**ಪಾಳು ಕೃಷ್ಣನು ಕೈಪಿಡಿದು ತ ।**
**ನ್ನಾಲಯದೊಳಿಟ್ಟನುದಿನದಲಾನಂದ ಪಡಿಸುವನು ॥ ॥೩೯॥**

**ಅವತರಣಿಕೆ :–**

ಸರ್ವಪಾಪ ಪರಿಹಾರಕವಾದ ಶ್ರೀಹರಿಯ ನಾಮದ ಮಹಿಮೆಯನ್ನು ತಿಳಿಸುತ್ತಾರೆ. ॥೩೯॥

**ಪ್ರತಿಪದಾರ್ಥ :–**

**ಪೇಳಲು** = ಇಷ್ಟೇ ಎಂದು ವಿವರಿಸುವುದಕ್ಕೆ, **ವಶವಲ್ಲವು** = ಯಾರಿಗೂ ಸಾಧ್ಯವೇ ಇಲ್ಲ, **ಮಹಾಪಾಪಾಳಿಗಳ** = ಭಕ್ತರು ಮಾಡುವ

ಮಹತ್ತರವಾದ ಪಾಪಸಮೂಹಗಳನ್ನು, **ಒಂದೇಕ್ಷಣದಿ** = ಕ್ಷಣ ಮಾತ್ರದಲ್ಲಿ, **ನಿರ್ಮೂಲಗೈಸಲಿಬೇಕು** = ಬೇರುಸಹಿತವಾಗಿ ಪರಿಹಾರ ಮಾಡಬೇಕು, **ಎಂಬುವಗೆ** = ಎನತಕ್ಕ ಅಧಿಕಾರಿಗೆ, **ಒಂದೆ ಹರಿನಾಮ** = ಬಿಂಬರೂಪಿಯಾದ ಹರಿಯ ನಾಮವೊಂದಕ್ಕೇ ಆ ಶಕ್ತಿಯಿರುವುದು, **ನಾಲಿಗೆಯೊಳು** = ಅಂತಹ ಹರಿನಾಮವನ್ನು ಜಿಹ್ವೆಯಲ್ಲಿ, **ಉಳ್ಳವಗೆ** ಹೊಂದಿರುವವನಿಗೆ, **ಪರಮ ಕೃಪಾಳು** = ಅತ್ಯಂತ ದಯಾಮಯನಾದ, **ಕೃಷ್ಣನು** = ಕೃಷ್ಣನಾಮಕನಾದ ಶ್ರೀಪರಮಾತ್ಮನು, **ಕೈಪಿಡಿದು** = ತನ್ನ ಕೈಯಿಂದ ಹಿಡಿದು, ಉದ್ಧರಿಸಿ, **ತನ್ನಾಲಯದೊಳಿಟ್ಟು** = ಸ್ವಮಂದಿರವಾದ ವೈಕುಂಠಾದಿ ಲೋಕಗಳಲ್ಲಿಟ್ಟು, **ಅನುದಿನದಲಿ** = ನಿತ್ಯವೂ, **ಆನಂದ ಪಡಿಸುವನು** = ಅವರವರ ಸ್ವರೂಪಾನಂದವನ್ನು ಅಭಿವ್ಯಕ್ತಿಗೊಳಿಸುವನು. ॥೩೯॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣಒಡೆಯರ ವ್ಯಾಖ್ಯಾನ

ಶ್ರೀಹರಿನಾಮೋಚ್ಚಾರಣೆ ಮಾಡುವವರಿಗೆ ಶ್ರೀಪರಮಾತ್ಮ ಮೋಕ್ಷ ಕೊಡತಾನೆ-ಎಂತ ಹೇಳತಾರೆ.

ಈ ಪೂರ್ವೋಕ್ತ ಪರಮಾತ್ಮನ ಮಹಾತ್ಮ್ಯೆ ಇಷ್ಟು ಎಂತಲೂ, ಅಂಥಾ ಮಹಿಮಾ ಹೇಳೋದಕ್ಕೆ ರಮಾಬ್ರಹ್ಮಾದಿಗಳಿಗೇ ವಶವಿಲ್ಲ ಎಂತಲೂ, ಜ್ಞಾತಾಜ್ಞಾತವಾಗಿ ಸ್ಥೂಲದೇಹದಿಂದ ಬಿಂಬಕ್ರಿಯಾದ್ವಾರಾ, ಭಗವದ್ಭಕ್ತರು ಮಾಡಿದ ಶ್ರೇಷ್ಠವಾದ ಪಾಪಪಂಕ್ತಾಸಮೂಹಗಳನ್ನು ಮೂಲಭೂತವಾದ ಬೇರುಸಾಂಕೇತವಾದ ಲಿಂಗದೇಹ ಸಹಿತ, ಮೂಲಸಹಿತವಾಗಿ ನಾಶಮಾಡಬೇಕು– ಎನತಕ್ಕ ಅಧಿಕಾರಿಗೆ ಒಂದಾದಂಥ ದೇಹಾಂತರ್ಗತ ಜೀವಾಂತರ್ಗತನಾದಂಥಾ ಅಸದೃಶನಾದ ಗುಣಪೂರ್ಣನಾದ ಬಿಂಬರೂಪೀ ಪರಮಾತ್ಮನಾದ

ಶ್ರೀಹರಿಯು ವಾಸನಾರೂಪ ಹೃದಯಾಕಾಶದಲ್ಲಿ ಮಾಡಿಕೊಂಡು, ಧ್ಯಾನೋಪಾಸನಾದಿ ಪೂಜಾದಿಗಳು ಮಾಡತಾ, ಈ ಮೂರ್ತಿಯು ಹೃದಯಾಕಾಶದಲ್ಲಿ ನೋಡಿದಂತೆ ಸರ್ವತ್ರ ಪಾಸನಾದಿಂದ ನೋಡತಾ, ಬಾಹ್ಯಾಂತರದಲ್ಲಿ ಏಕಚಿತ್ತನಾಗಿ ಈ ರೂಪವೇ ಕಣ್ಣಿನಿಂದ ನೋಡತಾ, ಅಧಿಕಾರಿ ಧ್ಯಾನ ಮಾಡತಕ್ಕ ಪರಮಾತ್ಮನ ಬಿಂಬ, ನಾಮವನ್ನ ಮಾಹಾತ್ಮ್ಯಜ್ಞಾನಪೂರ್ವಕ ಸದೃಢಸ್ನೇಹದಿಂದ ಜಿಹ್ವೆಯಲ್ಲಿ ಉಚ್ಚಾರಣಾ ಸದಾ ಇರತಕ್ಕ ಅಧಿಕಾರಿಗೆ, ಉತ್ತಮಾಧಿಕಾರಿಗಳಾದ ಬ್ರಹ್ಮಾದಿ ದೇವತೆಗಳಲ್ಲಿ, ನೀಚಾಧಿಕಾರಿಗಳಾದ ತೃಣಾದಿ ಮುಕ್ತಿಯೋಗ್ಯ ಜೀವರಲ್ಲಿ ಅವರವರ ಯೋಗ್ಯತಾನುಸಾರ ಅನುಗ್ರಹ ಮಾಡತಕ್ಕ ಕೃಷ್ಣರೂಪೀ ಪರಮಾತ್ಮನು, ಪೂರ್ವೋಕ್ತ ಅಧಿಕಾರಿ ಸಂಸಾರ ಸಮುದ್ರದಲ್ಲಿ ಬಿದ್ದು, ಮುಣಗತಾ ಇದ್ದವನ ಹಸ್ತವನ್ನ ಹಿಡಿದು, ಒಂದೇ ಒಂದು ಕ್ಷಣದಲ್ಲಿ ತನ್ನ ಅಪರೋಕ್ಷ ಕೊಟ್ಟು, ಪಾಪರೂಪವಾದ ಸಂಚಿತ ಕರ್ಮವನ್ನ ತನ್ನ ವೀಕ್ಷಣರೂಪವಾದ ಕಿಡಿಗಳಿಂದ ಭಸ್ಮಮಾಡಿ, ಪಾಪರೂಪವಾದ ಆಗಾಮಿ ಎಂಬ ಅಂಧಕಾರವನ್ನ ತನ್ನ ನೇತ್ರಪ್ರಕಾಶದಿಂದ ಲೇಪವಾಗದಂತೆ ದೂರಮಾಡಿ, ಪ್ರಾರಬ್ಧಭೋಗವನ್ನ ಅಂತಃಕರಣದಿಂದ ಕೆಲವು ಭಾಗ ಉಪಮರ್ದನ ಮಾಡಿ, ಸಂಸಾರಸಮುದ್ರ ಅಂತಗಾಣಿಸಿ, ಅಂತ್ಯದಲ್ಲಿ ಲಿಂಗಭಂಗ ಐದಿಸಿ, ತನ್ನ ಮನಿಗಳಾದ ವೈಕುಂಠಾದಿ ಲೋಕಗಳಲ್ಲಿ ಪ್ರವೇಶ ಮಾಡಿಸಿ, ಪ್ರತಿದಿನದಲ್ಲೂ ಅವರವರ ಸ್ವರೂಪಾನಂದ ಪಡಿಸೋವನಾಗ ತಾನೆ.

**ವಿಶೇಷಾರ್ಥ** :– ಅನುದಿನ– ಎಂಬುದು ವೈಕುಂಠದಲ್ಲಿ ಸೂರ್ಯ–ಚಂದ್ರಾದಿಗಳಿಂದ ದಿನ ಸಾಂಕೇತವಲ್ಲ. (ಅರವತ್ತು ಘಳಿಗೀಗೆ ಒಂದು ದಿನ ಎಂತ ಸಾಂಕೇತ, ಹಾಂಗಾದರೂ ಸರಿಯೆ). ಬ್ರಹ್ಮನ ನೂರುವರ್ಷ ನಾರಾಯಣದೇವರಿಗೆ ಒಂದು ಹಗಲು ಸಾಂಕೇತ. ಹಾಂಗೇ ನೂರು ವರುಷ ಪ್ರಳಯಕಾಲ ರಾತ್ರೀ ಸಾಂಕೇತ. ಇದು ಸೃಷ್ಟಿವಿವಕ್ಷಾ. ಶ್ರೀಪರಮಾತ್ಮಗೆ ಆದಿ ಮಧ್ಯಾಂತಗಳು ಇಲ್ಲದ ಕಡಿಯಿಂದ ಕಾಲ ಎಂಬುದು ಔಪಚಾರಿಕವು. ॥೩೯॥

೨. **ಭಾವಪ್ರಕಾಶಿಕೆ :-**

ಇವನು ಇಷ್ಟು ಪಾಪಗಳನ್ನು ಮಾಡಿರುವನೆಂದು ಹೇಳಲು ಕೂಡ ಸಾಧ್ಯವಲ್ಲದಷ್ಟು ಪಾಪಗಳನ್ನು ಮಾಡಿದ್ದರೂ, ಆ ಎಲ್ಲಾ ಪಾಪಗಳೂ ಭಸ್ಮವಾಗಬೇಕೆಂದು ಅಪೇಕ್ಷೆಯಿಂದ ಪಶ್ಚಾತ್ತಾಪವುಳ್ಳವನಾಗಿ, ಭಗವನ್ನಾಮವನ್ನು ಬಾಯಿಂದ ಉಚ್ಚರಿಸಿದರೆ, ತಕ್ಷಣದಲ್ಲಿ ಎಲ್ಲಾ ಪಾಪಗಳೂ ಸುಟ್ಟು ಹೋಗುವುವು. **ಭಾಗವತ ಷಷ್ಟಸ್ಕಂಧದಲ್ಲಿ** "ಸ್ತೇನಃ ಸುರಾಪೋಮಿತ್ರ ಧ್ರುಕ್ ಬ್ರಹ್ಮಹಾ ಗುರುತಲ್ಪಕಃ ॥ ಸ್ತ್ರೀರಾಜ ಪಿತೃಗೋಹಂತಾ ಯೇ ಚ ಪಾತಕಿನೋ ಪರೇ ॥ ಸರ್ವೇಶಾಮಪ್ಯಘವತಾಮಿದಮೇವ ಸುನಿಷ್ಕೃತಂ" ಎಂದು ಹೇಳಿರುವರು. ಬ್ರಹ್ಮಹತ್ಯೆ- ಮೊದಲಾದ ಪಂಚಮಹಾಪಾತಕಗಳು, ಇನ್ನೂ ಇತರವಾದ ಪಿತೃಹತ್ಯೆ-ಮೊದಲಾದ ಎಲ್ಲಾ ಪಾಪಗಳಿಗೂ ನಾರಾಯಣಸ್ಮರಣೆಯೇ ಪ್ರಾಯಶ್ಚಿತ್ತವೆಂದು ತಾತ್ಪರ್ಯ. ಆದ್ದರಿಂದ ಯಾವನೂ ಸರ್ವದಾ ಭಗವನ್ನಾಮೋಚ್ಚಾರಣೆಯನ್ನು ಮಾಡುತ್ತಿರುವನೋ, ಅವನನ್ನು ಕೃಪಾಳುವಾದ ಶ್ರೀಪರಮಾತ್ಮನು ಕೈಪಿಡಿದು, ತನ್ನ ಲೋಕದಲ್ಲಿ ಮುಕ್ತಸ್ಥಾನದಲ್ಲಿ ಇಟ್ಟು, ಸರ್ವದಾ ಶಾಶ್ವತವಾದ ಸುಖವನ್ನು ಕೊಡುವನು. ॥೩೯॥

೩. **ಭಾವದರ್ಪಣ :-**

ಪೇಳಲೊಶವಲ್ಲಾ. ॥೩೯॥

೪. **ಶ್ರೀ ವ್ಯಾಸದಾಸ ಸಿದ್ಧಾಂತ ಕೌಮುದೀ :-**

"ಯಜ್ಜಿಹ್ವಾಗ್ರೇ ವರ್ತತೇ ತಾನು ತ್ಯುಭ್ಯಮ್"-ಇತ್ಯುಕ್ತಂ ಬ್ರೂತೇ "ಪೇಳಲೊಶವಲ್ಲವು"-ಇತಿ. ॥೩೯॥

## ಕನ್ನಡಾರ್ಥ

"ನಿನ್ನ ಜಿಹ್ವಾಗ್ರದಲ್ಲಿ ಹರಿಯ ನಾಮವು ನಲಿಯುವುದರಿಂದ ಯಾವ ಪಾಪದ ಭಯವೂ ನಿನಗಿಲ್ಲ"– ವೆಂದು ಮುಂತಾಗಿ ಹೇಳಿದ ವಿಷಯವನ್ನು "ಪೇಳಲೊಶವಲ್ಲವು"–ಈ ಪದ್ಯದಿಂದ ನಿರೂಪಿಸುತ್ತಾರೆ. ॥೩೯॥

**೫. ಗುರುಹೃದಯಪ್ರಕಾಶಿಕೆ :–**

ಹೇಳುವುದಕ್ಕೂ ಅಶಕ್ಯವಾದ ಮಹಾಪಾಪ ಸಮೂಹಗಳನ್ನು ಒಂದು ಕ್ಷಣದಲ್ಲಿ ನಿರ್ಮೂಲಮಾಡಿ ಪರಿಹರಿಸಬೇಕೆಂಬ ದೃಢಭಕ್ತನಿಗೆ ಒಂದೇ ಶ್ರೀಹರಿ ನಾಮವು ನಾಲಿಗೆಯಲ್ಲಿ ಭಕ್ತಿಪೂರ್ವಕ ಇದ್ದರೆ, ಪರಮಕೃಪಾಳು ಕೃಷ್ಣನು ಕೈ ಹಿಡಿದು ಅವನನ್ನು ತನ್ನ ಆಲಯವೆಂಬ ವೈಕುಂಠದಲ್ಲಿಟ್ಟು, ಸದಾ ಸಂತೋಷಪಡಿಸುವನು.

**ಹರಿರ್ಹರತಿ ಹರಿದ್ಯಾತಿ ದೆಸ್ಯೋವಾಗ್ಯಜೇನ ವಾ ವದೇತ್ ।**
**ಸೋಽಪಿ ಸದ್ಗತಿ ಮಾಪ್ನೋತಿ ಗತಿಂ ಸುಕೃತಿನೋ ಯಥಾ ॥**

–ಎಂಬರ್ಥ ವಿವರಿಸಿತು. ॥೩೯॥

# ಸರ್ವವ್ಯಾಖ್ಯಾನಸಾರಸಂಗ್ರಹ

ಸಚ್ಚೇತನರು ಅಸುರಾವೇಶದಿಂದಾಗಲೀ, ಅಜ್ಞಾನದ ದೆಶೆಯಿಂದ ಲಾಗಲೀ, ಶಾಪನಿಮಿತ್ತವಾಗಿ ಆಗಲೀ, ಮಾಡುವ ಮಹತ್ತರವಾದ ಸಕಲ ಪಾಪರಾಶಿಗಳ ಪರಿಹಾರಕ್ಕೆ ಏಕೈಕ ಶ್ರೀಹರಿನಾಮಸ್ಮರಣೆ. ಹರಿನಾಮ ಸಂಕೀರ್ತನೆಯಿಂದ ಹೋಗದ ಪಾಪಗಳಿಲ್ಲ. ಪಾಪಸಮೂಹಗಳನ್ನು ರೂಢ ಮೂಲವಾಗಿ, ಅಂದರೆ ಬೇರು ಸಹಿತ ಪರಿಹಾರಮಾಡತಕ್ಕ ಮಹಾಸಾಮ

ರ್ಥ್ಯವುಳ್ಳ ಶ್ರೀಹರಿನಾಮದ ಮಹಿಮೆಯನ್ನು ವಿವರಿಸಲು ಅಥವಾ ಚಿಂತಿಸಲೂ ಕೂಡ ಯಾರಿಂದಲೂ ಸಾಧ್ಯವಿಲ್ಲ, ಅಂದರೆ, ಅದರ ಮಹಾಮಹಿಮೆ ಹೇಳಲೊಶವಲ್ಲ.

ಒಂದೇ ಕ್ಷಣದಲ್ಲಿ ಸಜ್ಜನರ ಸರ್ವಪಾಪಪರಿಹಾರಕವಾದ ಹರಿನಾಮವನ್ನು ತನ್ನ ನಾಲಿಗೆಯಿಂದ ಸದಾ ಉಚ್ಚರಿಸುತ್ತಿರುವ ಭಗವದ್ಭಕ್ತರ ಕೈ ಪಿಡಿದು, ಅವರನ್ನು ಪವಿತ್ರೀಕರಿಸಿ, ಉದ್ಧರಿಸುವನು ಪರಮದಯಾಮಯನಾದ ಶ್ರೀಪರಮಾತ್ಮನು. !

ಕೃಪಾಳುವಾದ ಶ್ರೀಕೃಷ್ಣರೂಪೀಶ್ರೀಪರಮಾತ್ಮನು, ಹರಿನಾಮಸಂಕೀರ್ತನೆಯನ್ನು ದೃಢವಾದ ಭಕ್ತಿಯಿಂದ ಮಾಡುತ್ತಿರುವ ನಿಜಭಕ್ತರ ಪಾಪಸಮೂಹಗಳನ್ನು ತನ್ನ ಕೃಪಾಕಟಾಕ್ಷವೀಕ್ಷಣದಿಂದ ಭಸ್ಮಮಾಡಿ, ಲಿಂಗಭಂಗದ್ವಾರಾ, ಅವರ ಕರ್ಮವಿಮೋಚನೆಯನ್ನು ಮಾಡುವನು.

ವೈಕುಂಠ, ಶ್ವೇತದೀಪ, ಅನಂತಾಸನಾದಿ ಮುಕ್ತಿಧಾಮಗಳೆಂದನಿಪ ನಿಜಮಂದಿರಗಳಲ್ಲಿ ಅವರನ್ನು ಇಟ್ಟು, ಸರ್ವಕಾಲಗಳಲ್ಲಿ ಅವರವರ ಸ್ವರೂಪಗತಆನಂದದ ಆವಿರ್ಭಾವರೂಪವಾದ ನಿತ್ಯಾನಂದವೆಂಬ ಮೋಕ್ಷಸಂಪತ್ತನ್ನು ಕರುಣಿಸುವನು. ॥೩೯॥

# ಪದ್ಯ-೪೦

ಮೂಲ :-

ರೋಗಿಯೌಷಧ ಪಥ್ಯದಿಂದ ನಿ ।
ರೋಗಿಯೆನಿಸುವ ತೆರದಿ ಶ್ರೀಮ ।
ದ್ಭಾಗವತ ಸುಶ್ರವಣಗೈದು ಭವಾಖ್ಯ ರೋಗವನು ॥
ನೀಗಿ ಸರ್ವಾದ್ಯಖಿಳವಿಷಯ ನಿ ।
ಯೋಗಿಸು ದಶೇಂದ್ರಿಯವನಿಲನೊಳು ।
ಶ್ರೀಗುರು ಜಗನ್ನಾಥವಿಠ್ಠಲ ಪ್ರೀತನಾಗುವನು ॥ ॥೪೦॥

ಅವತರಣಿಕೆ :-

ಸಂಸಾರವೆಂಬ ಮಹಾರೋಗಪರಿಹಾರಕ್ಕೆ ಅತ್ಯುತ್ತಮವಾದ ಔಷಧವನ್ನು ತಿಳಿಸುತ್ತಾ- ಸಂಧಿಯನ್ನು ಉಪಸಂಹಾರ ಮಾಡುತ್ತಾರೆ. ॥೪೦॥

ಪ್ರತಿಪದಾರ್ಥ :-

**ರೋಗಿಯು** = ರೋಗಗ್ರಸ್ತನಾಗಿರುವವನು, **ಔಷಧ** = ರೋಗ ಪರಿಹಾರಕವಾದ ಉಚಿತವಾದ ಔಷಧ ಸೇವನೆಯಿಂದಲೂ, **ಪಥ್ಯದಿಂದ** = ಅದಕ್ಕನುಗುಣವಾದ ವೈದ್ಯರ ಸಲಹೆಯಂತೆ ಸಹಕಾರಿಯಾದ ಪಥ್ಯದಿಂದಲೂ, **ನಿರೋಗಿಯೆನಿಸುವ ತೆರದಿ** = ರೋಗರಹಿತನಾಗಿ, ಆರೋಗ್ಯಭಾಗ್ಯವನ್ನು ಹೊಂದುವೋಪಾದಿಯಲ್ಲಿ, **ಶ್ರೀಮದ್ಭಾಗವತ** = ಶ್ರೇಷ್ಠವಾದ ಶ್ರೀಮದ್ಭಾಗವತಪುರಾಣವನ್ನು, **ಸುಶ್ರವಣಗೈದು** = ಸಮೀಚೀನರಾದ ಗುರುಗಳ ದ್ವಾರಾ, ಭಕ್ತಿಪೂರ್ವಕವಾಗಿ ಶ್ರವಣಮಾಡಿ, **ಭವಾಖ್ಯ**

**ರೋಗವನು** = ಸಂಸಾರಕ್ಕೆ ಮೂಲವಾದ ಕರ್ಮಬಂಧವನ್ನು, **ನೀಗಿ** = ಕಳೆದುಕೊಂಡು, **ಸರ್ವ** = ಸಮಸ್ತವಾದ, **ಆದಿ ಅಖಿಳವಿಷಯ** = ಇಂದ್ರಿಯಜನಿತವಿಷಯಗಳನ್ನು, **ದಶೇಂದ್ರಿಯವ** = ಪಂಚಕರ್ಮೇಂದ್ರಿಯಗಳು–ಇವೇ ಹತ್ತು ಇಂದ್ರಿಯಗಳನ್ನು (ಮನಸ್ಸೂ ಸಹ ಗ್ರಾಹ್ಯ), **ಅನಿಲನೊಳು** = ಶ್ರೀ ಭಾರತೀರಮಣಮುಖ್ಯಪ್ರಾಣಾಂತರ್ಗತಬಿಂಬರೂಪೀ ಶ್ರೀಹರಿಯಲ್ಲಿ, **ನಿಯೋಗಿಸು** = ಸಮರ್ಪಣೆಮಾಡು, **ಶ್ರೀಗುರು** = ರಮಾ, ಬ್ರಹ್ಮ, ವಾಯುಗಳಿಗೆ (ಶ್ರೀ–ಶಬ್ದವು ರಮಾ, ಹಾಗೂ ಬ್ರಹ್ಮ. ವಾಯುಗಳಿಗೂ ಅನ್ವಯಿಸುವುದು) ಗುರುವಾದ, **ಜಗನ್ನಾಥವಿಠ್ಠಲ** = ಚರಾಚರಾತ್ಮಕವಾದ ಜಗತ್ತಿಗೆ ಪ್ರಭುವಾದ ಶ್ರೀಪರಮಾತ್ಮನು, **ಪ್ರೀತನಾಗುವನು** = ಸಂತುಷ್ಟನಾಗಿ, ನಿನಗೆ ಪರಮಾನುಗ್ರಹ ಮಾಡುವನು. ॥೪೦॥

## ವ್ಯಾಖ್ಯಾನಗಳು

### ೧. ಶ್ರೀ ಸಂಕರ್ಷಣಒಡೆಯರ ವ್ಯಾಖ್ಯಾನ :–

ಸಂಸಾರಾಖ್ಯರೋಗ ಪರಿಹಾರಕ್ಕೆ ಔಷಧ ಹೇಳತಾರೆ.

ಜ್ವರಾದಿ ರೋಗದಿಂದ ಯುಕ್ತನಾದ ಪುರುಷನು ರೋಗಗಳನ್ನು ಪರಿಹರಿಸತಕ್ಕ ರೋಗಾನುಗುಣ್ಯವಾದ ಔಷಧ ಸೇವನದಿಂದಲೂ, ಔಷಧವನ್ನು ಮುರಿಯತಕ್ಕ, ರೋಗವನ್ನ ಅಭಿವೃದ್ಧಿ ಮಾಡತಕ್ಕ ಭೋಜ್ಯ ದ್ರವ್ಯಗಳ ತ್ಯಾಗಮಾಡಿ ಔಷಧ, ಪಥ್ಯ ಈ ಎರಡರಿಂದ ನಿರೋಗಿಸುವನು, ಎಂದರೆ, ರೋಗರಹಿತನಾಗಿ ದಾರ್ಢ್ಯನಾಗಿ ಇರೋವನಾಗತಾನೆ. ಇದರೋಪಾದಿಯಲ್ಲಿ– ಸರ್ವಪ್ರಾಣಿಗಳಿಗೆ ಅಹಂ ಮಮತಾ, ಆಶಾ ಎಂಬ ರೋಗ ಪ್ರಾಪ್ತಿಯಾಗಿ ಅದೆ. ಇದರಿಂದ ನಾನಾ ದುಃಖಗಳ ಭೋಗಮಾಡತಾ ಇದ್ದಾರೆ– ಈ ರೋಗಪರಿಹಾರಕ್ಕೆ ಔಷಧ ದಾವವೆಂದರೆ, ಪೂಜ್ಯವಾದ ಶ್ರೇಷ್ಟವಾದ

**ಭಾಗವತ ಪುರಾಣವನ್ನ** –ಈ ಭಾಗವತಾಖ್ಯ ಔಷಧವನ್ನ–ವೈದ್ಯಗೆ ಸದೃಶರಾದ ಸಮೀಚೀನರಾದ ಗುರುಗಳಿಂದ ಚಂದಾಗಿ ಶ್ರವಣರೂಪದಿಂದ ಪಾನ ಮಾಡಿ, ಔಷಧಕ್ಕೆ ಅನುಕೂಲವಾದ ಪಥ್ಯವೆಂಬೋದೇ ಭಾಗವತದಲ್ಲಿ ಹೇಳಿದ ಪ್ರಕಾರ ಅನುಷ್ಠಾನ ಮಾಡಿ, ಸಂಸಾರಕ್ಕೆ ಕಾರಣವಾದ ಅಹಂ ಮಮತಾ, ಆಶಾ ಎನತಕ್ಕ ರೋಗವನ್ನ ಕಳಕೊಂಡು, ಸಮಸ್ತವಾದ ಇಂದ್ರಿಯಜನಿತವಿಷಯಗಳ, ದಶೇಂದ್ರಿಯವನ್ನೂ ಮನಸ್ಸನ್ನೂ ಸಮಸ್ತವಾದ ಚರಾಚರ ಪ್ರಪಂಚಕ್ಕೆ, ಉತ್ತಮ – ತಾರತಮ್ಯದಲ್ಲಿ ಆದಿಭೂತನಾದವ ಇವನ ಮ್ಯಾಲೆ ಉತ್ತಮರು ಇಲ್ಲದವನಾದ– ಶ್ರೀಭಾರತೀರಮಣ ಮುಖ್ಯಪ್ರಾಣಾಂತರ್ಗತ ಶ್ರೀನಾರಾಯಣದೇವರಿಗೆ ಸಮರ್ಪಣ ಮಾಡೊವನಾಗು. ಲಕ್ಷ್ಮೀದೇವೇರಿಗೆ ಗುರುಭೂತನಾದ, ಚರಾಚರಜಗತ್ತಿಗೆ ಸ್ವಾಮಿಯಾದ ಪಾಪಪರಿಹಾರಕನಾದ ಶ್ರೀಪರಮಾತ್ಮ ಸಂತುಷ್ಟನಾಗಿ ಸಂರಕ್ಷಣ ಮಾಡತಾನೆ-ಎಂತ ತಾತ್ಪರ್ಯ. ॥೪೦॥

೨. **ಭಾವಪ್ರಕಾಶಿಕೆ :–**

ರೋಗದಿಂದ ಕಷ್ಟ ಪಡುತ್ತಿರುವವನು ಹೇಗೆ ಔಷಧ ಪಥ್ಯದಿಂದ ರೋಗವನ್ನು ಕಳೆದುಕೊಳ್ಳುವನೋ, ಹಾಗೆ ಸಂಸಾರ ರೋಗವನ್ನು ಕಳೆದುಕೊಳ್ಳುವುದಕ್ಕೆ ಔಷಧವು ಭಾಗವತ ಶ್ರವಣ. ಅದನ್ನು ಚೆನ್ನಾಗಿ ಮಾಡಿ ಸಂಸಾರ ರೋಗವನ್ನು ಕಳೆದುಕೊಳ್ಳಬೇಕು. ಜ್ಞಾನೇಂದ್ರಿಯಗಳಿಗೆ ವಿಷಯಭೂತವಾದ ಶಬ್ದ ಸ್ಪರ್ಶಾದಿಗಳಿಂದಲೂ, ಕೈ ಕಾಲು ಮೊದಲಾದ ಕರ್ಮೇಂದ್ರಿಯಗಳಿಂದಲೂ, ಮಾಡುವ ಕರ್ಮಗಳನ್ನು ಶ್ರೀಭಾರತೀರಮಣ ಮುಖ್ಯಪ್ರಾಣಾಂತರ್ಗತ ಪರಮಾತ್ಮನಿಗರ್ಪಿಸಲು ಶ್ರೀಜಗನ್ನಾಥಪಿತಲನು ಸುಪ್ರೀತನಾಗುವನು. ॥೪೦॥

### ೩. ಭಾವದರ್ಪಣ :-

ಸಚ್ಛಾಸ್ತ್ರ ಮತ್ತು ಶ್ರೀಭಾಗವತ ಶ್ರವಣದಿಂದಲೇ ಸಂಸಾರಾಖ್ಯರೋಗ ಪರಿಹಾರ ಮಾಡಿಕೊಳ್ಳಿರಿ– ಎಂದು ಹೇಳುತ್ತಾರೆ. । ರೋಗಿ । ಪಂಚಾಶ ದ್ವರ್ಣಗಳು– ಶಬ್ದಗಳು. ಇದರ ಕಾರಣ ಕಾರ್ಯಾದಿ ವಿಷಯಗಳು ಶ್ರೀ ವಾಯ್ವಂತರ್ಗತ ಶ್ರೀಪರಮಾತ್ಮಗೆ ಅರ್ಪಣ ಮಾಡಲು, ಸುಪ್ರೀತನಾಗುವ ನೆಂಬ ತಾತ್ಪರ್ಯ. ॥೪೦॥

### ೪. ಶ್ರೀ ವ್ಯಾಸದಾಸ ಸಿದ್ಧಾಂತ ಕೌಮುದೀ :-

"ಶ್ರುತಿಸ್ಮೃತಿ ಪುರಾಣೋಕ್ತೇಷ್ವಾಯುರ್ವೇದೋ ನಿದರ್ಶನಮ್ ॥ ಅಪಥ್ಯಾತ್ ಜಾಯತೇ ರೋಗಃ ಪಥ್ಯಾದೌಷಧ ಸೇವನಾತ್ ॥ ರೋಗ ನಾಶ ಸ್ಫುಟೋದೃಷ್ಟಃ ರಸಾಯನ ನಿಷೇವಣಾತ್ ॥ ಜಾಯತೇ ವಪುಷಃ ದಾರ್ಢ್ಯಂ ಯಥಾ ದೇಹಂ ಯಥಾ ವಯಃ ॥ ತಥಾ ಯಥಾ ಪ್ರಕೃತಿಕಂ ಜೀವಾನಾಂ ಜಾಯತೇ ಫಲಮ್ ॥ "–ಇತ್ಯುಕ್ತಮಾಹ –"ರೋಗ" ಇತಿ. ॥

ಮರುತ್ಯೇವ ಯತಃ ಚೇಷ್ಟಾ ಸರ್ವಾಂ ತಾಂ ಹರಯೇಽರ್ಪಯೇತ್॥ ತಸ್ಮಾತ್ ಪುತ್ರಾಯ ದಾನೇ ಪಿತೃ ಪ್ರೀತಿವತ್ ಪ್ರೀಣಾತಿ ವಿಠ್ಠಲಃ॥ ॥೪೦॥

## ಕನ್ನಡಾರ್ಥ

ಶ್ರುತಿ ಸ್ಮೃತಿ ಪುರಾಣಗಳಲ್ಲಿ ಹೇಳಿದ ವಿಷಯಗಳಿಗೆ ಆಯುರ್ವೇದವು ನಿದರ್ಶನವಾಗಿರುತ್ತದೆ. ಅಪಥ್ಯದಿಂದ ರೋಗವು ಉಂಟಾಗುತ್ತದೆ. ಪಥ್ಯದಿಂದ, ಔಷಧದ ಸೇವನೆಯಿಂದ ರೋಗನಾಶವಾಗುವುದು ಸ್ಪಷ್ಟವೇ ತೋರುತ್ತದೆ. ರಸಾಯನಗಳನ್ನು ಸೇವಿಸುವುದರಿಂದ, ದೇಹಕ್ಕೆ ಪುಷ್ಟಿಯು ಆಗುವುದು. ಇವು ಅವರವರ ದೇಹ,ವಯಸ್ಸು, ಪ್ರಕೃತಿಗಳಿಗನುರೂಪವಾಗಿ ಆಗುತ್ತದೆ. ಅದರಂತೆ, ಪ್ರಕೃತ ಜೀವರಿಗೆ ಫಲವಾಗುತ್ತದೆ. ವಾಯು

ದೇವರ ಆಶ್ರಯದಲ್ಲಿಯೇ ಎಲ್ಲ ಚೇಷ್ಟೆ (ವ್ಯಾಪಾರ)ಗಳಾಗುವುದರಿಂದ ಅವುಗಳನ್ನೆಲ್ಲ ತದಂತರ್ಗತನಾದ ಶ್ರೀಹರಿಯಲ್ಲಿ ಸಮರ್ಪಿಸಬೇಕು. ಅದ ರಿಂದ ಮಗನಿಗೆ ಕೊಟ್ಟದಾನದಿಂದ ತಂದೆಯು ತೃಪ್ತನಾಗುವಂತೆ, ವಿಠಲನು ಪ್ರೀತನಾಗುತ್ತಾನೆ. ॥೪೦॥

**೫. ಶ್ರೀ ಗುರುಹೃದಯ ಪ್ರಕಾಶಿಕೆ :-**

**ನಾಮ್ನಾ ಮಹಾಘೌಘ ಹಾನಿಸ್ತೇನ ದೇಹ ಹೃದಃ ಶುಚಿಃ ।**

ಎಂಬ ರೀತ್ಯಾ, ನಾಮಸ್ಮರಣೆಯಿಂದ ದೇಹವನ್ನು ಶುದ್ಧಿಹೊಂದಿ, ರೋಗಿ ಯಾದವನು, ಔಷಧ ಪಥ್ಯಗಳಿಂದ ಆರೋಗ್ಯ ಹೊಂದುವಂತೆ ಶ್ರೀಮದ್ಭಾಗ ವತಾದಿ ಸಚ್ಛಾಸ್ತ್ರಶ್ರವಣಾದಿಗಳನ್ನು ಮಾಡಿ ತದುಕ್ತಾಚರಣೆ ಎಂಬ ಪಥ್ಯ ವನ್ನು ಮಾಡಿ, ಭವಾಖ್ಯವೆಂಬ ಜನನಾದಿರೂಪ ಸಂಸೃತಿರೋಗವನ್ನು ಕಳೆದುಕೊಂಡು, ಶಬ್ದಾದಿ ಸಮಸ್ತವಿಷಯಗಳನ್ನು ನಿಯೋಗಿಸು-ಎಂದರೆ, ಸರ್ವವನ್ನೂ, ದಶೇಂದ್ರಿಯವನನಿಲನೊಳೆಂಬ ಸರ್ವೇಂದ್ರಿಯಗತ ಶ್ರೀಪ್ರಾಣ ದೇವರಲ್ಲಿರುವ ದೇವರಿಗೆ ಒಪ್ಪಿಸು, ಹೀಗಿದ್ದವಗೆ ಶ್ರೀಗುರುಜಗನ್ನಾಥ ವಿಠಲನೆಂಬ ಅಜ್ಞಜನೋದ್ಧಾರಕ ಸ್ವಾಮಿಯು ಸುಪ್ರೀತನಾಗುವನು. ॥೪೦॥

## ಸರ್ವವ್ಯಾಖ್ಯಾನಸಾರಸಂಗ್ರಹ

ರೋಗದಿಂದ ನರಳುತ್ತಿರುವವನು ಆ ರೋಗದ ಪರಿಹಾರಕ್ಕಾಗಿ ವೈದ್ಯರ ಸಲಹೆಯಂತೆ ಔಷಧವನ್ನು ಸೇವಿಸುವನು. ತದನುಗುಣವಾದ ಪಥ್ಯ ಮಾಡುವನು. ಪಥ್ಯದಿಂದ ರೋಗ ನಿವಾರಣೆಯ ಜೊತೆಗೆ ದೇಹಾ ರೋಗ್ಯವೂ ಲಭಿಸುವುದು.

ಅಂತೆಯೇ, ಜನನ ಮರಣಾಖ್ಯವಾದ ಸಂಸಾರವು ಜೀವರಿಗೆ ರೋಗ ಸದೃಶವಾಗಿರುವುದು. ಇಂತಹ ಭವರೋಗವೆಂಬ ಉಲ್ಬಣವಾದ

ರೋಗಕ್ಕೆ ಏಕೈಕಪರಿಹಾರರೂಪವಾದ ಔಷಧವೆಂದರೆ, ಶ್ರೀಹರಿಯ ಮಹಾ ಮಹಿಮೆಗಳನ್ನು ತಿಳಿಸುವ **ಶ್ರೀಮದ್ಭಾಗವತವೆಂಬ** ಪುರಾಣವು. ಭವಾಖ್ಯ ರೋಗವನ್ನು ರೂಢಮೂಲವಾಗಿ ಪರಿಹರಿಸುವ ಶ್ರೀಮದ್ಭಾಗವತನನ್ನು ಉತ್ತಮಗುರುಗಳ ದ್ವಾರಾ, ಶ್ರದ್ಧಾಭಕ್ತಿಗಳಿಂದ ಶ್ರವಣ ಮಾಡ ಬೇಕೆಂದು ಹೇಳುತ್ತಾರೆ.

ಶ್ರೀಮದ್ಭಾಗವತದ ಸುಶ್ರವಣಕಾರ್ಯವೇ ಭವವೆಂಬ ಮಹಾ ರೋಗಕ್ಕೆ ಅತ್ಯುತ್ತಮಔಷಧದಸ್ವರೂಪವು. ಭಾಗವತದಲ್ಲಿ ಹೇಳಿರುವಂತೆ ಸತ್ಕರ್ಮಾಚರಣೆಯೇ, ಶ್ರೀವಿಷ್ಣುಪ್ರೇರಣೆಯೂ, ಶ್ರೀವಿಷ್ಣುಪ್ರೀತ್ಯ ರ್ಥವಾಗಿ ಮಾಡುವ ಸಕಲಕ್ರಿಯಗಳೇ ಪಥ್ಯಗಳು.

ಪಂಚಜ್ಞಾನೇಂದ್ರಿಯಗಳು, ಪಂಚಕರ್ಮೇಂದ್ರಿಯಗಳು– ಇವು ದಶೇಂದ್ರಿಯಗಳು. ಇವುಗಳನ್ನು ನಿಯಂತ್ರಿಸುವ ಮನಸ್ಸೆಂಬ ಏಕಾ ದಶೇಂದ್ರಿಯವೂ ಸಹ ಗ್ರಾಹ್ಯ. ವಿಷಯಗಳೇ ಇಂದ್ರಿಯಗಳಿಗೆ ಮುಖ್ಯ ವಿಷಯಗಳಾಗಿದ್ದು, ದೇಹೇಂದ್ರಿಯಗತ ಇಂದ್ರಿಯಗಳ ದ್ವಾರಾ ವಿಷಯ ಸನ್ನಿಕರ್ಷದಿಂದ ನಡೆಯುತ್ತಿರುವ ಸಕಲಕರ್ಮಗಳನ್ನೂ ಭಾರತೀರಮಣ ಮುಖ್ಯಪ್ರಾಣಾಂತರ್ಗತಬಿಂಬರೂಪೀ ಶ್ರೀಹರಿಗೆ ಸಮರ್ಪಿಸಬೇಕೆಂದು ತಿಳಿಸುತ್ತಾರೆ.

"ಶ್ರೀ"– ಎಂದರೆ ಸತ್ತ್ವಗುಣಾಭಿಮಾನಿಯಾದ ಮಂಗಳ ಸ್ವರೂಪಳೂ, ಶುಭಪ್ರದಳೂ ಆದ ಶ್ರೀಲಕ್ಷ್ಮೀದೇವಿ. "ಶ್ರೀ" – ಶಬ್ದವು ಬ್ರಹ್ಮದೇವರು ಮತ್ತು ಶ್ರೀವಾಯುದೇವರನ್ನೂ ಪ್ರತಿಪಾದಿಸುವುದು.

**ಶ್ರೀಗುರು** – ಎಂದರೆ ರಮಾ ಬ್ರಹ್ಮಾದಿಗಳಿಗೆ ಗುರುಸ್ವರೂಪನಾದ ಶ್ರೀಹರಿ ಎಂದರ್ಥ. ಚರಾಚರಾತ್ಮಕವಾದ ಈ ಬ್ರಹ್ಮಾಂಡಕ್ಕೆ ಪ್ರಭುವಾಗಿರುವುದರಿಂದ ಶ್ರೀಹರಿಯು **ಜಗನ್ನಾಥವಿಠ್ಠಲನು.** ಪೂಜ್ಯರಾದ ಶ್ರೀಮಜ್ಜಗನ್ನಾಥದಾಸರಾಯರ ಆರಾಧ್ಯದೈವನೂ, ಅಂಕಿತನಾಮಕನೂ ಆದ **ಶ್ರೀಜಗನ್ನಾಥವಿಠ್ಠಲನು** ಅಂತಹ ಪರಮಭಗವದ್ಭಕ್ತರಿಗೆ ಪ್ರೀತನಾಗಿ ಅನುಗ್ರಹಿಸುವನು– ಎಂದು ಆ ದಯಾಮಯನ ಮಹಾಮಹಿಮೆಯನ್ನು ತಿಳಿಸುತ್ತಾ, ಪ್ರಸಕ್ತಸಂಧಿಯಾದ **ಸರ್ವಸ್ವಾತಂತ್ರ್ಯಸಂಧಿ– ಎಂಬ ೧೮ ನೆಯ ಸಂಧಿಯನ್ನು ಉಪಸಂಹಾರ ಮಾಡುತ್ತಾರೆ ||** ಇತಿ. **ಪ್ರಸಕ್ತ ಸಂಧಿಯ ಸರ್ವವ್ಯಾಖ್ಯಾನಸಾರ ಸಂಗ್ರಹವು ಪರಿಸಮಾಪ್ತಿಯಾಯಿತು.** ||

|| **ಶ್ರೀಮಧ್ವೇಶ ಶ್ರೀಕೃಷ್ಣಾರ್ಪಣಮಸ್ತು** ||